# ಮಂಗಳೂರು ವಿಶ್ವವಿದ್ಯಾನಿಲಯ

**ದೂರ ಶಿಕ್ಷಣ ಕೇಂದ್ರ, ಮಂಗಳಗಂಗೋತ್ರಿ - 574 199, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ**

# ಕೋರ್ಸ್ 8 :

# ಶಾಲಾ ವಿಷಯಗಳ ಬೋಧನಾ ವಿಧಾನ–II(a)

## ಸಮಾಜ ವಿಜ್ಞಾನ

## (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)

## ಬ್ಲಾಕ್ಸ್ 3 & 4

## (ಭಾಗ–2)

## ಬಿ.ಎಡ್. ಪದವಿ ಕಾರ್ಯಕ್ರಮ

**(ಮುಕ್ತ ಮತ್ತು ದೂರ ಕಲಿಕೆ)**

## ದ್ವಿತೀಯ ವರ್ಷ ಬಿ.ಎಡ್.

**ಪ್ರಕಾಶಕರು**

**ಮಂಗಳೂರು ವಿಶ್ವವಿದ್ಯಾನಿಲಯ**

**ಮಂಗಳಗಂಗೋತ್ರಿ - 574 199**

**Social Science :** Self learning Material for B.Ed. Degree Programme (Open and Distance Learning) of Second Year Prepared by Ms. Jyothi P. and Ms. Janaki, translated by Prof. B.M. Chandrashekar, Published by The Registrar, Mangalore University, Mangalagangothri - 574 199, Karnataka.

**Year 2019-20**

**Developed by:**
**The Director**
Centre for Distance Education,
Mangalore University,
Mangalagangothri - 574 199,
Dakshina Kannada District, Karnataka.

**Course Co-ordinator**
**Dr. Chidananda A.L.**
B.Ed.(ODL) Programme,
Centre for Distance Education,
Mangalore University, Mangalagangothri - 574 199,
Dakshina Kannada District, Karnataka.

© The Registrar, Mangalore University

| | | |
|---|---|---|
| **ಸಮಾಜ ವಿಜ್ಞಾನ (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)** | : | **ದ್ವಿತೀಯ ವರ್ಷದ ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಅಧ್ಯಯನ ಸಾಮಗ್ರಿ** |
| **ರಚನಕಾರರು** | : | ಶ್ರೀಮತಿ. ಜ್ಯೋತಿ ಪಿ. ಮತ್ತು ಶ್ರೀಮತಿ. ಜಾನಕಿ ಎ. |
| **ಅನುವಾದಕರು** | : | ಪ್ರೊ. ಬಿ.ಎಂ. ಚಂದ್ರಶೇಖರ್ |
| **ಪ್ರಕಾಶಕರು** | : | **ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ - 574 199, ಕರ್ನಾಟಕ** |
| **ವರ್ಷ** | : | 2019–20 |
| **© ಹಕ್ಕುಗಳು** | : | **ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ** |
| **ಸಿದ್ಧಪಡಿಸಿದವರು** | : | **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ** |
| **ಕೋರ್ಸ್ ಸಂಯೋಜಕರು** | : | **ಡಾ. ಚಿದಾನಂದ ಎ.ಎಲ್.** ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ |

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

# ಕೋರ್ಸ್ 8

# ಶಾಲಾ ವಿಷಯಗಳ ಬೋಧನಾ ವಿಧಾನ–II(a)

# ಸಮಾಜ ವಿಜ್ಞಾನ

## (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)

## ಬ್ಲಾಕ್ಸ್ 3 & 4

## (ಭಾಗ–2)


**ಕುಲಸಚಿವರು** **ಪ್ರಕಾಶಕರು**
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199



**ಶ್ರೀಮತಿ ಜ್ಯೋತಿ ಪಿ. : ಬ್ಲಾಕ್ - 3** **ಕೋರ್ಸ್ ಲೇಖಕರು**

**ಶ್ರೀಮತಿ ಜಾನಕಿ ಎ. : ಬ್ಲಾಕ್ – 4**

**ಪ್ರೊ ಬಿ.ಎಂ. ಚಂದ್ರಶೇಖರ್ : ಬ್ಲಾಕ್ಸ್ - 3 & 4** **ಕೋರ್ಸ್ ಅನುವಾದಕರು**

**ಪ್ರೊ. ಬಿ.ಎನ್. ಮಂಜುನಾಥಯ್ಯ : ಬ್ಲಾಕ್ - 3 & 4** **ಕೋರ್ಸ್ ಪರಿಶೀಲಕರು**
ನಿವೃತ್ತ ಪ್ರಾಧ್ಯಾಪಕರು (ನಿವೃತ್ತ)
ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು – 570 006

**ಡಾ. ಚಿದಾನಂದ ಎ.ಎಲ್.** **ಸಂಪಾದನ ಸಹಾಯಕರು**

# ವಿಷಯ ಸೂಚಿ

**ಕೋರ್ಸಿನ ಪಕ್ಷಿನೋಟ**

**ಬ್ಲಾಕ್ 3: ಸಮಾಜ ವಿಜ್ಞಾನಗಳ ಪಠ್ಯಕ್ರಮ ಮತ್ತು ಬೋಧನೆ**

ಘಟಕ–1: ಪಠ್ಯಕ್ರಮ ವಿಕಸನ ಪ್ರಕ್ರಿಯೆ: ತತ್ವಗಳು ಮತ್ತು ಉಪಕ್ರಮಗಳು

ಘಟಕ–2: ಸಮಾಜ ವಿಜ್ಞಾನಗಳ ಪಠ್ಯವಸ್ತುವಿನ ಅಧ್ಯಯನ – ಮಾಧ್ಯಮಿಕ ಹಂತದ ಶಿಕ್ಷಣದ ರಾಜ್ಯ ಬೋರ್ಡ್ ಮತ್ತು ಸಿಬಿಎಸ್ಇ ಸಮಾಜ ವಿಜ್ಞಾನ ಪಠ್ಯಕ್ರಮದ ಗುರಿಗಳು ಹಾಗೂ ಉದ್ದೇಶಗಳು, ವಿಷಯವಸ್ತು ಸಂಘಟನೆ ಮತ್ತು ಪ್ರಸ್ತುತಿ

ಘಟಕ–3: ಇತಿಹಾಸ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

ಘಟಕ–4: ಭೂಗೋಳ ವಿಜ್ಞಾನದ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

ಘಟಕ–5: ಅರ್ಥಶಾಸ್ತ್ರ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

ಘಟಕ–6: ರಾಜ್ಯಶಾಸ್ತ್ರ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

**ಬ್ಲಾಕ್ 4 : ಸಮಾಜ ವಿಜ್ಞಾನಗಳ ಪಠ್ಯಪುಸ್ತಕ ಮತ್ತು ಸಮಾಜ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಾಪನ**

ಘಟಕ–1: ಸಮಾಜ ವಿಜ್ಞಾನದ ಪಠ್ಯಪುಸ್ತಕದ ಗುಣಲಕ್ಷಣಗಳು

ಘಟಕ–2: ಸಮಾಜ ವಿಜ್ಞಾನದಲ್ಲಿ ಪಠ್ಯಪುಸ್ತಕಗಳ ಪುನರ್ವಿಮರ್ಶೆ: ಮಾನದಂಡಗಳು ಮತ್ತು ಕ್ರಮ ವಿಧಾನಗಳು

ಘಟಕ–3: ಸಮಾಜ ವಿಜ್ಞಾನಗಳಲ್ಲಿ ಪಠ್ಯಪುಸ್ತಕಗಳ ವಿಶ್ಲೇಷಣೆ

ಘಟಕ–4: ಸಮಾಜ ವಿಜ್ಞಾನ ಸಾಧನಾ ಮಾಪನಕ್ಕಾಗಿ ಉಪಕರಣಗಳು

ಘಟಕ–5: ಸಮಾಜ ವಿಜ್ಞಾನಗಳಲ್ಲಿ ನಿರಂತರ ಮತ್ತು ವ್ಯಾಪಕ ಮಾಪನ

ಘಟಕ–6: ಸಮಾಜ ವಿಜ್ಞಾನದಲ್ಲಿ ಸಂತುಲಿತ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವಿಕೆ

# ಕೋರ್ಸಿನ ಪಕ್ಷಿನೋಟ

ಆತ್ಮೀಯ ವಿದ್ಯಾರ್ಥಿಗಳೇ,

ನೀವು ಮೊದಲ ವರ್ಷದಲ್ಲಿ ಈಗಾಗಲೇ ಕೋರ್ಸ್–5ರ ಅಡಿಯಲ್ಲಿ ಸಮಾಜ ವಿಜ್ಞಾನದ ಸ್ವರೂಪ, ಲಕ್ಷಣಗಳು ಇವುಗಳನ್ನು ಕಲಿಯುವುದರ ಮೂಲಕ ಈ ವಿಷಯದ ಕುರಿತಾಗಿ ಸಾಕಷ್ಟು ಆಳವಾದ ಅರಿವನ್ನು ಪಡೆದುಕೊಂಡಿರುವಿರಿ. ಈಗ ಈ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಅಗತ್ಯವಾದ ಬೋಧನಾತ್ಮಕ ಆಧಾರಗಳನ್ನು ಅರಿತುಕೊಳ್ಳುವುದು ಅಗತ್ಯ. ಈ ಅರಿವು ವಿಷಯಜ್ಞಾನವಾಗಲೀ ಅಥವಾ ಈ ಜ್ಞಾನಶಿಸ್ತಿಗೆ ಸಂಬಂಧಿಸಿದ ಅರಿವಾಗಲೀ ಅಲ್ಲ. ಇದು ಕಲಿಕಾರ್ಥಿ, ವಿಷಯ ಮತ್ತು ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಶಿಸ್ತೀಯ ವಿಷಯದ ಕುರಿತು ಅರಿವು ಮೂಡಿಸಲು ರೂಢಿಸಿಕೊಳ್ಳಬೇಕಾದ ಬೋಧನಾ ವಿಧಾನವನ್ನು ಕುರಿತಜ್ಞಾನ ಎಂದು ಹೇಳಬಹುದು. ಇದು ಪ್ರಮುಖವಾಗಿ ವಿಮರ್ಶಾತ್ಮಕ ಬೋಧನಾ ವಿಧಾನವನ್ನು ಅಪೇಕ್ಷಿಸುತ್ತದೆ. ಅಂದರೆ, ನಾವು ಅಳವಡಿಸಿಕೊಳ್ಳುವ ಯಾವುದೇ ಬೋಧನಾ ವಿಧಾನವೂ ಎಲ್ಲ ಮಕ್ಕಳಿಗೂ ಸಮಾನತೆ ಮತ್ತು ನ್ಯಾಯ ಇವುಗಳಿಗೆ ಅನುಗುಣವಾಗಿ ಅರಿವನ್ನು ಮುಟ್ಟಿಸಲು ನಾವು ಅನ್ವಯಿಸಿಕೊಳ್ಳಬೇಕಾದ ಪ್ರಕ್ರಿಯೆ. ಅಧ್ಯಾಪಕರು ಅನುಸರಿಸುವ ಬೋಧನಾ ವಿಧಾನವು ಎಲ್ಲ ಮಕ್ಕಳಿಗೂ ಈ ವಿಷಯವನ್ನು ಕುರಿತ ಅರಿವು ಗರಿಷ್ಠ ಮಟ್ಟದಲ್ಲಿ ಮೂಡಲು ಅನುವು ಮಾಡಿಕೊಡಬೇಕು.

ಈ ಕೋರ್ಸು ಪ್ರಮುಖವಾಗಿ ಸಮಾಜವಿಜ್ಞಾನಗಳ ಸ್ವರೂಪ, ಅವುಗಳನ್ನು ಬೋಧಿಸುವ ಉದ್ದೇಶಗಳು ಮತ್ತು ಸಮಾಜವಿಜ್ಞಾನದ ಮತ್ತು ಸಮಾಜವಿಜ್ಞಾನ ಬೋಧನೆಯ ಸಂಪನ್ಮೂಲಗಳನ್ನು ಕುರಿತುಚರ್ಚಿಸುತ್ತದೆ. ಜೊತೆಗೆ ಸಮಾಜವಿಜ್ಞಾನದ ಪಠ್ಯಕ್ರಮ, ಬೋಧನಾ ವಿಧಾನಗಳು ಮತ್ತುಕಲಿಕಾರ್ಥಿ ಮತ್ತೂಉತ್ತಮವಾಗಿಕಲಿಯಲು ಪೂರಕವಾಗುವ ಮಾಪನ ಕ್ರಮಗಳನ್ನು ಕುರಿತು ವಿಶ್ಲೇಷಿಸುತ್ತದೆ.

ಮೊದಲನೆಯ ಬ್ಲಾಕ್‌ನಲ್ಲಿ ಸಮಾಜ ವಿಜ್ಞಾನಗಳ ಸ್ವರೂಪ, ಶಾಲಾ ಪಠ್ಯಕ್ರಮದಲ್ಲಿ ಅದರ ಔಚಿತ್ಯ ಮತ್ತು ಸಮಾಜ ವಿಜ್ಞಾನಗಳ ವಿಷಯಗಳನ್ನು ಅರಿತುಕೊಳ್ಳಲು ಸಹಾಯಕವಾಗುವ ಆಧಾರಗಳನ್ನು ಕುರಿತು ಚರ್ಚಿಸಲಾಗಿದೆ.

ಸಮಾಜ ವಿಜ್ಞಾನಗಳ ಬೋಧನೆಯ ಪ್ರಮುಖ ಉದ್ದೇಶಗಳನ್ನು ಎರಡನೇ ಬ್ಲಾಕ್‌ನಲ್ಲಿ ವಿಶ್ಲೇಷಿಸಲಾಗಿದೆ. ಸಮಾಜ ವಿಜ್ಞಾನದ ಶಾಖೆಗಳಾದ ಇತಿಹಾಸ, ಭೂಗೋಳ, ಅರ್ಥಶಾಸ್ತ್ರ, ರಾಜನೀತಿ ಶಾಸ್ತ್ರ ಇವುಗಳನ್ನು ಬೋಧಿಸುವ ವಿವಿಧ ಉದ್ದೇಶಗಳು ಇಲ್ಲಿ ಚರ್ಚಿತವಾಗಿವೆ. ಸಮಾಜ ವಿಜ್ಞಾನವನ್ನು ಬೋಧಿಸಲು ಅಗತ್ಯವಾದ ಸಂಪನ್ಮೂಲಗಳು ಮತ್ತು ಬೋಧನಾ ಕಲಿಕಾ ಉಪಕರಣಗಳನ್ನು ಕುರಿತಾದ ವಿಶ್ಲೇಷಣೆಯೂ ಇಲ್ಲಿದೆ.

ಮೂರನೆಯ ಬ್ಲಾಕ್‌ನಲ್ಲಿ ಸಮಾಜ ವಿಜ್ಞಾನಗಳ ಪಠ್ಯಕ್ರಮ ಮತ್ತು ಬೋಧನಾ ಉಪಕ್ರಮಗಳನ್ನು ಕುರಿತು ಗಮನಿಸಲಾಗಿದೆ. ಪಠ್ಯಕ್ರಮವನ್ನು ರೂಪಿಸುವ ಪ್ರಕ್ರಿಯೆಗಳು, ಸಮಾಜ ವಿಜ್ಞಾನದ ಪಠ್ಯವಸ್ತು ಇವು ಈ ಬ್ಲಾಕ್‌ನಲ್ಲಿ ಪ್ರಮುಖವಾಗಿ ಚರ್ಚಿತವಾಗಿವೆ. ಇತಿಹಾಸ, ಭೂಗೋಳ, ಅರ್ಥಶಾಸ್ತ್ರ ಮತ್ತು ರಾಜನೀತಿ ಶಾಸ್ತ್ರಗಳನ್ನು ಬೋಧಿಸುವ ವಿಧಾನಗಳನ್ನು ಕುರಿತ ವಿಶ್ಲೇಷಣೆ ಇಲ್ಲಿದೆ.

ಪಠ್ಯಪುಸ್ತಕದ ಲಕ್ಷಣಗಳು ಮತ್ತು ಸಮಾಜ ವಿಜ್ಞಾನದ ಕಲಿಕೆಯನ್ನು ಕುರಿತ ಮಾಪನ ಪ್ರಕ್ರಿಯೆ ನಾಲ್ಕನೇ ಬ್ಲಾಕ್‌ನ ಪ್ರಮುಖ ವಿಷಯವಾಗಿದೆ. ಸಮಾಜ ವಿಜ್ಞಾನದ ಪಠ್ಯಪುಸ್ತಕವನ್ನು ವಿಮರ್ಶೆ ಮಾಡುವ ಕ್ರಮವನ್ನು ಅಗತ್ಯ ವಿವರಣೆಯೊಂದಿಗೆ ಚರ್ಚಿಸಲಾಗಿದೆ. ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಅಳವಡಿಸಿಕೊಳ್ಳಬೇಕಾದ ಮಾಪನ ಪ್ರಕ್ರಿಯೆಗಳನ್ನೂ ಸಂತುಲಿತ

ಪ್ರಶ್ನೆಪತ್ರಿಕೆಯನ್ನು ತಯಾರಿಸಿಕೊಳ್ಳುವ ಕ್ರಮವನ್ನೂ ಇದೇ ಬ್ಲಾಕ್‌ನಲ್ಲಿ ವಿಶ್ಲೇಷಿಸಲಾಗಿದೆ. ಮಾಪನದ ಪ್ರಮುಖ ಅಂಶವಾದ, ಇಂದಿನ ಪ್ರಮುಖ ಕಾಳಜಿಯಾದ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಸಮಾಜ ವಿಜ್ಞಾನ ವಿಷಯದಲ್ಲಿ ಅಳವಡಿಸಿಕೊಳ್ಳುವ ಕುರಿತಾದ ಚರ್ಚೆಯೂ ಇಲ್ಲಿದೆ.

ಈ ಕೋರ್ಸ್‌ನಲ್ಲಿ ವಿವರಿಸಲಾಗಿರುವ ಬೋಧನಾ ಪ್ರಕ್ರಿಯೆಗಳು ಸಾಮಾನ್ಯ ಸನ್ನಿವೇಶಗಳಿಗೆ ಅನುಗುಣವಾದವುಗಳು. ಪ್ರತಿ ಅಧ್ಯಾಪಕರೂ ಅವರ ತರಗತಿಯ ಕಲಿಕಾರ್ಥಿಗಳ ಸ್ವರೂಪ, ಕೌಟುಂಬಿಕ ಹಿನ್ನೆಲೆ, ಸಾಮರ್ಥ್ಯಗಳು, ಸಾಮಾಜಿಕ ಸನ್ನಿವೇಶ ಇವುಗಳಿಗನುಗುಣವಾಗಿ ಬೋಧನಾ ವಿಧಾನದಲ್ಲಿ, ಕ್ರಮದಲ್ಲಿ ಅಗತ್ಯವಾದ ಬದಲಾವಣೆಗಳನ್ನು ಮಾಡಿಕೊಂಡು ಬೋಧಿಸಬೇಕು. ಮಾಪನ ಪ್ರಕ್ರಿಯೆಯೂ ಆಯಾ ಸನ್ನಿವೇಶಗಳಿಗನುಗುಣವಾಗಿ ಅರ್ಥವತ್ತಾಗಿರಬೇಕು. ಉದ್ದೇಶಿತ ಗುರಿಗಳನ್ನು ಸಾಧಿಸಲು ಪೂರಕವಾಗಬೇಕು. ಇದು ಈಗಾಗಲೇ ವಿವರಿಸಿರುವ ಬೋಧನಾ ಕಲಿಕಾ ಪ್ರಕ್ರಿಯೆಗಳಲ್ಲಿ, ಮಾಪನ ವಿಧಾನಗಳಲ್ಲಿ ಬದಲಾವಣೆಗಳನ್ನು ಅಥವಾ ಪಲ್ಲಟಗಳನ್ನು ಬಯಸಬಹುದು. ಒಟ್ಟಿನಲ್ಲಿ ಎಲ್ಲ ಮಕ್ಕಳಿಗೂ ಉದ್ದೇಶಿತ ಅರಿವು ಮೂಡಿಸುವಲ್ಲಿ ನಮ್ಮ ಬೋಧನಾ ಪ್ರಕ್ರಿಯೆಗಳು ಸಾರ್ಥಕವಾಗಬೇಕು ಎಂಬುದು ಪ್ರಮುಖ ಕಾಳಜಿ.

## ಬ್ಲಾಕ್ 3 : ಸಮಾಜ ವಿಜ್ಞಾನಗಳ ಪಠ್ಯಕ್ರಮ ಮತ್ತು ಬೋಧನೆ

### ಘಟಕ 1 : ಪಠ್ಯಕ್ರಮ ವಿಕಸನ ಪ್ರಕ್ರಿಯೆ: ತತ್ವಗಳು ಮತ್ತು ಉಪಕ್ರಮಗಳು

**ಘಟಕದ ರಚನೆ**


3.1.1. ಕಲಿಕಾ ಉದ್ದೇಶಗಳು
3.1.2. ಪೀಠಿಕೆ
3.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
3.1.3.1. ಪಠ್ಯಕ್ರಮದ ಪರಿಕಲ್ಪನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.1.3.2. ಪಠ್ಯಕ್ರಮ ವಿಕಾಸದ ತತ್ವಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
3.1.3.3. ಪಠ್ಯಕ್ರಮ ವಿಕಾಸದ ಉಪಕ್ರಮಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3
3.1.4. ಸಾರಾಂಶಿಸೋಣ
3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1, 2 ಮತ್ತು 3
3.1.6. ಘಟಕಾಂತ್ಯ ಅಭ್ಯಾಸಗಳು
3.1.7. ಪರಾಮರ್ಶನ ಸೂಚಿ


**3.1.1. ಕಲಿಕಾ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪಠ್ಯಕ್ರಮದ ಪರಿಕಲ್ಪನೆಯನ್ನು ವಿಶದೀಕರಿಸುವರು;
- ಪಠ್ಯಕ್ರಮದ ನಿರ್ಮಾಣದ ತತ್ವಗಳನ್ನು ನಿರೂಪಿಸುವರು;
- ಪಠ್ಯಕ್ರಮ ವಿಕಸನದ ವಿವಿಧ ಉಪಕ್ರಮಗಳನ್ನು ಚರ್ಚಿಸುವರು; ಮತ್ತು
- ಪಠ್ಯಕ್ರಮ ವಿಕಸನದ ವಿಭಿನ್ನ ಉಪಕ್ರಮಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸುವರು ಹಾಗೂ ಈ ಉಪಕ್ರಮಗಳ ಅನುಕೂಲತೆಗಳನ್ನು ಮತ್ತು ಅನಾನುಕೂಲತೆಗಳನ್ನು ಸ್ಪಷ್ಟಪಡಿಸುವರು.

**3.1.2. ಪೀಠಿಕೆ**

ಯಾವುದೇ ಶಿಕ್ಷಣ ವ್ಯವಸ್ಥೆ ಬಹುಮುಖಿಯಾದುದು ಎಂಬ ವಿಷಯ ನಿಮಗೆ ಈಗಾಗಲೇ ಸ್ಪಷ್ಟವಾಗಿದೆ. ಪಠ್ಯಕ್ರಮ ಅಂಥ ಒಂದು ಪ್ರಧಾನ ಮುಖವಾಗಿದೆ. ಆದ್ದರಿಂದ, ಪಠ್ಯಕ್ರಮ ಪರಿಕಲ್ಪನೆ ಮತ್ತು ಅದರ ನಿರ್ಮಾಣದ ವಿವಿಧ ಉಪಕ್ರಮಗಳ ಬಗೆಗಿನ ಸೂಕ್ತ ಅರಿವು ಇರಬೇಕಾಗುತ್ತದೆ. ಸೂಕ್ತ ಪಠ್ಯಕ್ರಮ ನಿರ್ಮಾಣದಲ್ಲಿ ಒಳಗೊಳ್ಳುವ ತತ್ವಗಳು ಆ ಪ್ರಕ್ರಿಯೆಯಲ್ಲಿ ತೊಡಗಿರುವ ಎಲ್ಲರಿಗೂ ಸವಾಲಿನಿಂದ ಕೂಡಿದ ಕಾರ್ಯವಾಗಿದೆ. "ಜ್ಞಾನ ಮತ್ತು ಪಠ್ಯಕ್ರಮ" ಎಂಬ ಕೋರ್ಸಿನಡಿ ಕಲಿತಿರುವ ಅಂಶಗಳನ್ನು ನೆನಪಿಸಿಕೊಳ್ಳಿ. ನಾವು ಈಗಾಗಲೇ ಅಧ್ಯಯನ ಮಾಡಿರುವ ಆ ಘಟಕವು ಪಠ್ಯಕ್ರಮದ ಕೆಲವು ಸಾಮಾನ್ಯ ಅಂಶಗಳ ಬಗ್ಗೆ ಗಮನ ಕೇಂದ್ರೀಕರಿಸಿದರೆ, ಪ್ರಸ್ತುತ ಈ ಘಟಕ ಪ್ರಮುಖವಾಗಿ ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದ ಪಠ್ಯಕ್ರಮದತ್ತ ಗಮನ ಕೇಂದ್ರೀಕರಿಸುತ್ತದೆ. ಬೋಧನಾಶಾಸ್ತ್ರದ ದೃಷ್ಟಿಯಿಂದ ನೋಡುತ್ತಿರುವುದರಿಂದ ಈ ಘಟಕ ಇನ್ನೂ ಹೆಚ್ಚಿನ ಪ್ರಾಮುಖ್ಯ ಪಡೆದುಕೊಳ್ಳುತ್ತದೆ. ಕಲಿಕಾರ್ಥಿಗಳು ಮತ್ತು ಪಠ್ಯವಿಷಯ ವಸ್ತುಗಳೆರಡನ್ನೂ ಅರ್ಥ ಮಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ. ಪಠ್ಯಕ್ರಮ ವಿಕಸನ ಮತ್ತು ಸಂಘಟನೆಗಳ ಉಪಕ್ರಮಗಳು ಬೋಧಕರು ಬೋಧನೆಯನ್ನು ಯೋಗ್ಯ ರೀತಿಯಲ್ಲಿ ಯೋಜಿಸಲು ಮಾರ್ಗದರ್ಶನ ಮಾಡುತ್ತದೆ.

### 3.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

ಈ ಘಟಕದ ಅಧ್ಯಯನವು ಪಠ್ಯಕ್ರಮದ ಮೂರು ಪ್ರಮುಖ ಮುಖಗಳನ್ನು ಒಳಗೊಳ್ಳುತ್ತದೆ. ಅವೆಂದರೆ, ಪಠ್ಯಕ್ರಮದ ಪರಿಕಲ್ಪನೆ, ಪಠ್ಯಕ್ರಮದ ತತ್ವಗಳು ಹಾಗೂ ಪಠ್ಯಕ್ರಮ ನಿರ್ಮಾಣದ ಉಪಕ್ರಮಗಳು.

### 3.1.3.1. ಪಠ್ಯಕ್ರಮದ ಪರಿಕಲ್ಪನೆ

ಇಂಗ್ಲಿಷ್‌ನ ಪದವಾದ 'ಕರಿಕ್ಯುಲಂ' (ಪಠ್ಯಕ್ರಮ) ಲ್ಯಾಟಿನ್ ಭಾಷೆಯ 'ಕ್ಯೂರೆರೆ'(Currere) ಎಂಬುದರಿಂದ ಬಂದಿದೆ. 'ಕ್ಯೂರೆರೆ' ಎಂದರೆ 'ಓದುವುದು' ಎಂದರ್ಥ. ಅಂತೆಯೇ, 'ಕರಿಕ್ಯುಲಂ' ಎಂಬ ಪದ ಒಂದು ನಿಶ್ಚಿತ 'ಗುರಿ' ಅಥವಾ 'ಗಂತವ್ಯ'ವನ್ನು ತಲುಪಲು ಓಡಬೇಕಾದ 'ಪಥ' ಅಥವಾ 'ಮಾರ್ಗ'ವನ್ನು ಸೂಚಿಸುತ್ತದೆ. ನಾವೀಗ ಪಠ್ಯಕ್ರಮದ ಕೆಲವು ವ್ಯಾಖ್ಯೆಗಳನ್ನು ನೋಡೋಣ.

ಗುಡ್(1959): "ಶಾಲೆಯು, ಸ್ನಾತಕರಾಗಲು ಅಥವಾ ಪ್ರಮಾಣಪತ್ರ ಕೊಡಲು ಅಥವಾ ವೃತ್ತಿಪರ ಇಲ್ಲವೇ ಔದ್ಯೋಗಿಕ ಕ್ಷೇತ್ರಕ್ಕೆ ಪ್ರವೇಶ ಒದಗಿಸಲು ವಿದ್ಯಾರ್ಥಿಗಳನ್ನು ಅರ್ಹತೆಯುಳ್ಳವರನ್ನಾಗಿಸಲು ಮಾಡುವ ಪಠ್ಯವಸ್ತುವಿನ ಅಥವಾ ಬೋಧನೆಯ ನಿರ್ದಿಷ್ಟ ಸಾಮಗ್ರಿಯ ಸಾಮಾನ್ಯ ಯೋಜನೆಗೆ ಪಠ್ಯಕ್ರಮ ಎನ್ನುತ್ತಾರೆ".

ಫೋಳೆ(1959): "ಕಲಿಕಾರ್ಥಿಯು ಶಾಲೆಯ ಮಾರ್ಗದರ್ಶನದಲ್ಲಿ ಪಡೆದುಕೊಳ್ಳುವ ಎಲ್ಲ ಅನುಭವಗಳೇ ಪಠ್ಯಕ್ರಮ ಎನಿಸಿಕೊಳ್ಳುತ್ತದೆ."

ಪೇನೆ: "ಶಾಲೆಯು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಉದ್ದೇಶಕ್ಕಾಗಿ ಮತ್ತು ಅವರಲ್ಲಿ ವರ್ತನಾತ್ಮಕ ಪರಿವರ್ತನೆಗಳನ್ನು ತರಲು ಆಯ್ಕೆ ಮಾಡಬಹುದಾದ ಹಾಗೂ ಪ್ರಜ್ಞಾಪೂರ್ವಕವಾಗಿ ಸಂಘಟಿಸಬಹುದಾದ ಸಮಸ್ತ ಸನ್ನಿವೇಶಗಳು ಪಠ್ಯಕ್ರಮ ಎನಿಸಿಕೊಳ್ಳುತ್ತದೆ".

ಕೆರ್ರ್ ಪಠ್ಯಕ್ರಮವನ್ನು ಹೀಗೆ ವ್ಯಾಖ್ಯಾನಿಸುತ್ತಾನೆ– "ಶಾಲೆಯು ಶಾಲೆಯ ಒಳಗೆ ಅಥವಾ ಹೊರಗೆ ಯೋಜಿಸಿ ಮಾರ್ಗದರ್ಶನ ಮಾಡುವ ಸಮಸ್ತ ಕಲಿಕೆಯು, ಅದು ಸಮೂಹದಲ್ಲೇ ಆಗಲಿ ಅಥವಾ ವೈಯಕ್ತಿಕವಾಗಿಯೇ ಆಗಲಿ, ಪಠ್ಯಕ್ರಮ ಎನಿಸಿಕೊಳ್ಳುತ್ತದೆ".

ಬಾಸ್ಲವಾಸ್ಕಿ ಹೀಗೆ ಹೇಳುತ್ತಾರೆ– "ಶಾಲಾ ಜೀವನದ ನಿರ್ದಿಷ್ಟ ಅವಧಿಗಳಲ್ಲಿ ಏನನ್ನು ಸ್ವಾಂಗೀಕರಿಸಿಕೊಳ್ಳಬೇಕು ಎಂಬುದರ ಬಗ್ಗೆ ಸಮುದಾಯಗಳು, ಶೈಕ್ಷಣಿಕ ವೃತ್ತಿಪರರು ಮತ್ತು ಸರ್ಕಾರಗಳ ನಡುವೆ ಜರುಗುವ ಒಪ್ಪಂದವೇ ಪಠ್ಯಕ್ರಮ".

ಮೇಲಿನ ವ್ಯಾಖ್ಯಾನಗಳ ವಿಶ್ಲೇಷಣೆಯ ಆಧಾರದ ಮೇಲೆ ಪಠ್ಯಕ್ರಮವು ಈ ಕೆಳಗಿನವುಗಳನ್ನು ಒಳಗೊಳ್ಳುತ್ತದೆಯಲ್ಲದೆ ಅವುಗಳಿಗೆ ಸಂಬಂಧಿಸಿದಂತೆ ನೆರವಾಗುತ್ತವೆ.

- ಇದು ಕೋರ್ಸುಗಳ ಅಂತರ್ವಸ್ತು (ಪಠ್ಯವಸ್ತು, ಸಿಲಬಸ್) ಮತ್ತು ಅಳವಡಿಸಿಕೊಂಡ ವಿಧಾನಗಳ (ಕಾರ್ಯತಂತ್ರ)ನ್ನು ಒಳಗೊಳ್ಳುತ್ತದೆ.
- ಇದಲ್ಲದೆ ಪಠ್ಯಕ್ರಮವು "ಏಕೆ, ಏನನ್ನು, ಯಾವಾಗ, ಎಲ್ಲಿ, ಹೇಗೆ ಮತ್ತು ಯಾರೊಂದಿಗೆ ಕಲಿಯಬೇಕು" ಎನ್ನುವುದನ್ನು ವ್ಯಾಖ್ಯಾನಿಸುತ್ತದೆ. ಉದಾಹರಣೆಗೆ, ಇದು ನಾವು ಭೂಗೋಳ ಶಾಸ್ತ್ರವನ್ನು ಏಕೆ ಅಧ್ಯಯನ ಮಾಡಬೇಕು ಎಂದು ನಮಗೆ ಹೇಳುತ್ತದೆ; ಯಾವ ವಿಶ್ವಸಮರದ ಬಗ್ಗೆ ನಾವು ಅವಶ್ಯವಾಗಿ ತಿಳಿಯಬೇಕು; ಯಾವ ತರಗತಿಯಲ್ಲಿ ಅದರ ಬಗ್ಗೆ ಕಲಿಯಬೇಕು; ಕಲಿಯಲು ನಾವು ಯಾವ ಸಾಮಗ್ರಿಗಳನ್ನು ಅಂದರೆ ನಕ್ಷೆಗಳು, ಬರೆಯುವ ಮತ್ತು ಓದುವ ಕೌಶಲ್ಯಗಳು, ಘಟನಾವಳಿಗಳ ಕಾಲಕ್ರಮ ಸೂಚಿ, ದೇಶ ವಿಚಾರ ಕೋಶ (ಗೆಝೆಟಿಯರ್) ಇತ್ಯಾದಿ ಉಪಯೋಗಿಸಬೇಕು, ಇತ್ಯಾದಿಗಳನ್ನು ತಿಳಿಸುತ್ತದೆ.

- ವಿದ್ಯಾರ್ಥಿಗಳು ಶಾಲಾಶಿಕ್ಷಣದಿಂದ ಕಲಿಯಬೇಕು ಎಂದು ನಿರೀಕ್ಷಿಸಲಾಗುವ ಕೌಶಲ್ಯಗಳು, ಕಾರ್ಯಕ್ಷಮತೆ, ಅಭಿವೃತ್ತಿಗಳು ಮತ್ತು ಮೌಲ್ಯಗಳ ಬಗೆಗಿನ ಸ್ಥೂಲ ವಿವರಣೆಯನ್ನು ಇದು ಒದಗಿಸುತ್ತದೆ. ಉದಾಹರಣೆಗೆ, ಸಮಾನತೆ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ ಇತ್ಯಾದಿ ಜೀವನ ಮೌಲ್ಯಗಳ ಬಗ್ಗೆ ತಿಳಿದುಕೊಳ್ಳುವಂತೆ ನಮಗೆ ಹೇಳುತ್ತದೆ.
- ಇದು ವಿದ್ಯಾರ್ಥಿಗಳ ಇಚ್ಛಿತ ಫಲಿತಗಳ ಹೇಳಿಕೆಗಳನ್ನು, ಸಾಮಗ್ರಿಗಳ ವಿವರಣೆಯನ್ನು ಮತ್ತು ಫಲಿತಗಳನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಉಪಯೋಗಿಸುವ ಯೋಜಿತ ಅನುಕ್ರಮವನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ಯಾವುದರ ಮೌಲ್ಯವನ್ನು ಗ್ರಹಿಸಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಹಾಗೂ ಯಾವ ಸನ್ನಿವೇಶಗಳಲ್ಲಿ ಅದನ್ನು ಪ್ರಯೋಗಿಸಬೇಕು ಎಂಬುವುಗಳ ಬಗ್ಗೆ ಹೇಳುತ್ತದೆ.
- ಶಾಲೆಯು ಒದಗಿಸುವ ಸಂಪೂರ್ಣ ಕಲಿಕಾ ಅನುಭವ ಇದಾಗಿದೆ.
- ಒಂದು ನಿರ್ದಿಷ್ಟ ಕಲಿಕಾ ಪರಿಸರದಲ್ಲಿನ ಅಧ್ಯಯನ ಕೋರ್ಸುಗಳ ಸಮಷ್ಟಿ ಇದಾಗಿದೆ.

ಮೇಲಿನ ವ್ಯಾಖ್ಯಾನಗಳಿಂದ ನಾವು ಹೀಗೆ ತೀರ್ಮಾನಿಸಬಹುದಾಗಿದೆ:
ಪಠ್ಯಕ್ರಮ= ಪಠ್ಯವಿಷಯವಸ್ತು / ವಿಷಯ ವಸ್ತು + ಶಾಲಾ ಸಂಬಂಧಿ ಚಟುವಟಿಕೆಗಳ ಮೂಲಕದ ಅನುಭವಗಳು + ಶಾಲೆಯಲ್ಲಿನ ಅಂತರ್ವ್ಯಕ್ತಿ ಸಂಪರ್ಕದಿಂದ ಉಂಟಾಗುವ ಅನುಭವಗಳು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**
ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಪೇನೆ ಪಠ್ಯಕ್ರಮವನ್ನು ಹೇಗೆ ವ್ಯಾಖ್ಯಾನಿಸುತ್ತಾನೆ/
2. ಪಠ್ಯಕ್ರಮದ ಪ್ರಮುಖ ಅಂತರ್ವಸ್ತುವನ್ನು ಪಟ್ಟಿ ಮಾಡಿ.
3. ಪಠ್ಯಕ್ರಮದ ಲಾಭಗಳು ಯಾವುವು?

**3.1.3.2. ಪಠ್ಯಕ್ರಮ ವಿಕಾಸದ ತತ್ವಗಳು**

ಸಮಾಜ ವಿಜ್ಞಾನದ ಪಠ್ಯಕ್ರಮವು ಸಮಾಜ ವಿಜ್ಞಾನ ಬೋಧನೆಯ ನಿರ್ದಿಷ್ಟ ಗುರಿಗಳನ್ನು ಮತ್ತು ಉದ್ದೇಶಗಳನ್ನು ಈಡೇರಿಸಲು ಮಾರ್ಗಗಳನ್ನು ಸೂಚಿಸುತ್ತದೆ. ಇಚ್ಛಿತ ರೀತಿಯಲ್ಲಿ ಇದು ತನ್ನ ಪಾತ್ರ ವಹಿಸಬೇಕಾದರೆ, ಪಠ್ಯಕ್ರಮ ನಿರ್ಮಾಣ ಮತ್ತು ವಿಕಾಸಕ್ಕೆ ಸೂಕ್ತ ಪರಿಗಣನೆ ನೀಡಬೇಕಾಗುತ್ತದೆ. ಈ ಕೆಳಗಿನ ತತ್ವಗಳು ಈ ದಿಕ್ಕಿನಲ್ಲಿ ಸಹಾಯಕವಾಗುತ್ತದೆ:

**ಎ) ಶಿಶುಕೇಂದ್ರಿತ ತತ್ವ**

ಪಠ್ಯಕ್ರಮವು ಶಿಶುಕೇಂದ್ರಿತವಾಗಿರಬೇಕು. ಯೋಜಿತ ಪಠ್ಯವಿಷಯವಸ್ತು, ಚಟುವಟಿಕೆಗಳು ಮತ್ತು ಅನುಭವಗಳು ವಿದ್ಯಾರ್ಥಿಗಳ ವಯೋಮಾನ ಮತ್ತು ಮಾನಸಿಕ ಮಟ್ಟಕ್ಕೆ ತಕ್ಕುದಾಗಿರಬೇಕಲ್ಲದೆ, ಅದಕ್ಕನುಗುಣವಾದ ಚಟುವಟಿಕೆಗಳಿಂದ ಕೂಡಿರಬೇಕು. ಜೊತೆಗೆ ವಿದ್ಯಾರ್ಥಿಗಳ ವಿವಿಧ ರೀತಿಯ ಆಸಕ್ತಿಗಳು, ಅಭಿರುಚಿಗಳು ಮತ್ತು ಒಲವುಗಳಿಗೆ ಸಂಬಂಧಿಸಿದಂತಿರಬೇಕು. ಪಠ್ಯಕ್ರಮವು ಮಕ್ಕಳ ವಿಕಾಸ ಮತ್ತು ಹಿತಕ್ಕಾಗಿ ಇದೆ ಎಂಬ ಅಂಶವನ್ನು ಗಮನದಲ್ಲಿಡಬೇಕು. ಅಂದರೆ, ಪಠ್ಯಕ್ರಮ ಯೋಜನೆ ವಿದ್ಯಾರ್ಥಿಯನ್ನು ಮನಸ್ಸಿನಲ್ಲಿರಿಸಿಕೊಂಡು ಮೊದಲಾಗುವುದೇ ಹೊರತು ಶಾಲೆಯ ನೀತಿ ಅಥವಾ ಪಠ್ಯಕ್ರಮ ಕಲಾಕೃತಿ ಎಂದಲ್ಲ. ಇದು ಶಿಶುಕೇಂದ್ರಿತ ಬೋಧನೆಯನ್ನು ಪ್ರೋತ್ಸಾಹಿಸುತ್ತದೆ. ವಿದ್ಯಾರ್ಥಿಗಳ ಬಗ್ಗೆ ಮತ್ತು ಅವರ ಅವಶ್ಯಕತೆಗಳ ಬಗ್ಗೆ ಎಲ್ಲಕ್ಕಿಂತಲೂ ಮಿಗಿಲಾದ 'ಅರಿವು' ಇರುವ ಬೋಧನೆಯತ್ತ ಗಮನ ಕೇಂದ್ರೀಕರಿಸುತ್ತದೆ. ಇದು ವಿದ್ಯಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯ ಕೇಂದ್ರದಲ್ಲಿರಿಸುತ್ತದೆ.

ಶಿಕ್ಷಣ ವ್ಯವಸ್ಥೆಯು ಆಧುನಿಕ ಚಿಂತನೆಗಳಿಗನುಗುಣವಾಗಿರಬೇಕಾದರೆ ಪಠ್ಯಕ್ರಮವು ಶಿಶುಕೇಂದ್ರಿತವಾಗಿರಬೇಕು. ಇದು ಶಿಶುವಿನ ಅಗತ್ಯಗಳು, ಆಸಕ್ತಿಗಳು, ಸಾಮರ್ಥ್ಯಗಳು, ಯೋಗ್ಯತೆ, ವಯೋಮಾನದ ಮಟ್ಟ ಮತ್ತು ಪರಿಸ್ಥಿತಿಗಳು– ಇವೆಲ್ಲವನ್ನೂ ಆಧರಿಸಿರಬೇಕು. ವಾಸ್ತವವಾಗಿ ಪಠ್ಯಕ್ರಮವು ಮಗುವು ಜೀವನದಲ್ಲಿ ತನ್ನನ್ನು ತಾನು ಸಮರ್ಪಕವಾಗಿ ಹೊಂದಿಸಿಕೊಂಡು ಹೋಗಲು ಸಮರ್ಥವನ್ನಾಗಿ ಮಾಡಲು ಸಾಧ್ಯವಾಗುವಂತೆ ಅದರ ವಿಕಾಸವನ್ನು ಉಂಟುಮಾಡುವ ಉದ್ದೇಶವನ್ನಿರಿಸಿಕೊಂಡಿರುತ್ತದೆ.

ಇದರಲ್ಲಿ ಈ ಕೆಳಗಿನ ವಿಚಾರಗಳು ಒಳಗೊಂಡಿರುತ್ತವೆ.

1. ಅರ್ಥೈಸುವಿಕೆಯನ್ನು ನೀವು ಹೇಗೆ ಪ್ರೋತ್ಸಾಹಿಸುವಿರಿ, ಅಳೆಯುವಿರಿ ಮತ್ತು ಅನ್ವಯಿಸುವಿರಿ ಎಂಬುದರ ಬಗ್ಗೆ ಸ್ಪಷ್ಟತೆ.
2. ವಿದ್ಯಾರ್ಥಿಗಳಿಗಾಗಿ 'ಹೇಗೆ ಚಿಂತಿಸುವುದು' ಎಂಬುದರ ಮಾದರಿ ರೂಪಿಸುವುದು.
3. ತಿಳಿದುಕೊಳ್ಳುವುದಕ್ಕೆ ಯಾವುದು ಯೋಗ್ಯ ಎಂದು ಗುರುತಿಸಿಕೊಳ್ಳಲು ವಿದ್ಯಾಥಿಗಳಿಗೆ ನೆರವಾಗುವುದು.
4. ತಿಳಿವಿನ ಸಾಕ್ಷ್ಯಗಳಾವುವು ಎಂಬುದನ್ನು ಸ್ಪಷ್ಟಪಡಿಸುವುದು. ಅಂದರೆ ಯಾವ ಸನ್ನಿವೇಶವು 'ಮಗು ಕಲಿತಿದೆ' ಎಂಬುದನ್ನು ಸ್ಥಿರಪಡಿಸುತ್ತದೆ ಎಂಬುದನ್ನು ತಿಳಿಸಿಹೇಳುವುದು.
5. ತಿಳಿಯುವ ಅಗತ್ಯದ ಸುತ್ತ ಪಠ್ಯಕ್ರಮ ಮತ್ತು ಬೋಧನೆಯನ್ನು ಸೃಷ್ಟಿಸುವುದು.
6. ರೂಬ್ರಿಕ್ ಅಥವಾ ಮಾಪನ ಮಾರ್ಗದರ್ಶಿ (ಸ್ಕೋರಿಂಗ್ ಗೈಡ್)ಯನ್ನು ಸಿದ್ಧಪಡಿಸಲು ವಿದ್ಯಾರ್ಥಿಗಳಿಗೆ ಸಹಯೋಗ ನೀಡುವುದು.
7. ಪ್ರಾಯೋಜನೆಯೊಂದರ ಉದ್ದೇಶವನ್ನು ಆಯ್ಕೆ ಮಾಡಲು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ನೀಡುವುದು.
8. ತಮ್ಮ ಅಪೂರ್ವವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ವ್ಯಕ್ತಿಪಡಿಸುವ ವಿದ್ಯಾರ್ಥಿಗಳು, ಪೋಷಕರು ಮತ್ತು ಸಮುದಾಯದ ಸದಸ್ಯರೊಂದಿಗೆ ಭೇಟಿ ಮಾಡಿ, ಬಳಿಕ ಪಠ್ಯಕ್ರಮದಿಂದ 'ಕಲಿಕಾ ಪ್ರಮಾಣಕ'ಗಳನ್ನು (ಪವರ್ ಸ್ಟಾಂಡರ್ಡ್ಸ್)ಆಯ್ಕೆ ಮಾಡುವುದು.

**ಬಿ) ಚಟುವಟಿಕೆ ಕೇಂದ್ರಿತ ತತ್ವ**

ಪಠ್ಯಕ್ರಮವು ವಿದ್ಯಾರ್ಥಿಗಳ ಬಹುಮುಖಿ ಚಟುವಟಿಕೆಯ ಸುತ್ತ ನಿರ್ಮಾಣಗೊಂಡಿರಬೇಕು. ಇದು ಮಕ್ಕಳ ಸಾಮಾನ್ಯ ಆಸಕ್ತಿಗಳು ಮತ್ತು ಬೆಳವಣಿಗೆಯ ಹಂತಗಳಿಗೆ ಅನುಗುಣವಾದ ಚಟುವಟಿಕೆಗಳನ್ನು ಒದಗಿಸಿಬೇಕು. ಇದು ರಚನಾತ್ಮಕ, ಸೃಜನಾತ್ಮಕ ಮತ್ತು ಪ್ರಾಯೋಜನಾ ಚಟುವಟಿಕೆಗಳನ್ನು ಒದಗಿಸಬೇಕು. ಸಣ್ಣ ಮಕ್ಕಳಿಗೆ ಆಟದ ಚಟುವಟಿಕೆಗಳನ್ನು ಸಹ ಒದಗಿಸಬೇಕು. ಉದ್ದೇಶಪೂರ್ವಕವಾಗಿ ಚಟುವಟಿಕೆಗಳನ್ನು ತರಗತಿಯ ಒಳಗೆ ಮತ್ತು ಹೊರಗೆ – ಎರಡೂ ಕಡೆಗಳಲ್ಲಿ ಒದಗಿಸಬೇಕು. ಅಪೇಕ್ಷಿತ ಅನುಭವಗಳನ್ನು ಚಟುವಟಿಕೆಗಳ ಒಂದು ಜಾಲದಿಂದ ಒದಗಿಸಲು ಸಾಧ್ಯವಿದ್ದು ತತ್ಪರಿಣಾಮವಾಗಿ ಮಕ್ಕಳಲ್ಲಿ ಅಪೇಕ್ಷಿತ ವರ್ತನಾತ್ಮಕ ಬದಲಾವಣೆಗಳನ್ನು ತರಬಹುದಾಗಿದೆ.

**ಸಿ) ಪರಿರಕ್ಷಣೆ (ಕನ್ಸರ್ವೇಷನ್)ಯ ತತ್ವ**

ಶಿಕ್ಷಣದ ಮುಖ್ಯ ಕಾರ್ಯೋದ್ದೇಶಗಳಲ್ಲಿ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಅದನ್ನು ಪ್ರಚಾರ ಮಾಡುವುದು ಒಂದಾಗಿದೆ. ಇದು ಮಾನವನ ಪ್ರಗತಿಗೆ ಅತ್ಯವಶ್ಯ. ಸಂಪ್ರದಾಯಗಳು, ಆಚಾರ ವಿಚಾರಗಳು, ಅಭಿವೃತ್ತಿಗಳು, ಕೌಶಲ್ಯಗಳು, ಮೌಲ್ಯಗಳು ಮತ್ತು ಜ್ಞಾನ– ಇವಿಷ್ಟು ಸಂಸ್ಕೃತಿಯಲ್ಲಿ ಒಳಗೊಳ್ಳುತ್ತವೆ. ಪಠ್ಯಕ್ರಮ ನಿರ್ಮಾಣ ಮಾಡುವವರು ಸಂಸ್ಕೃತಿಯ ಅಂಶಗಳನ್ನು ಅವುಗಳ ಶೈಕ್ಷಣಿಕ ಮೌಲ್ಯ ಮತ್ತು ವಿದ್ಯಾರ್ಥಿಗಳ ಬೆಳವಣಿಗೆ ಹಂತಗಳನ್ನು ಗಮನದಲ್ಲಿರಿಸಿ ಸೂಕ್ತವಾಗಿ ಆಯ್ಕೆ ಮಾಡಬೇಕು. ವಿಷಯಗಳ, ಚಟುವಟಿಕೆಗಳ ಮತ್ತು ಅನುಭವಗಳ ಆಯ್ಕೆಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಪ್ರಚಾರ ಮಾಡುವಿಕೆಯ ಪರಿಗಣನೆ ಮಾರ್ಗದರ್ಶಿಯಾಗಿರಬೇಕು. ಈ ತತ್ವವು ಮೌಲ್ಯಗಳಿಗೆ, ಸಾಮಾಜಿಕ ನ್ಯಾಯಕ್ಕೆ ಮತ್ತು ರಾಷ್ಟ್ರೀಯ ಅಸ್ಮಿತೆಗೆ ಇರುವ ಬದ್ಧತೆಗೆ ಪರಿಪುಷ್ಠಿಯಾಗಿ ತೆರೆದುಕೊಳ್ಳುತ್ತದೆ.

**ಡಿ) ಸೃಜನಾತ್ಮಕತೆಯ ತತ್ವ**

ಸಂಸ್ಕೃತಿಯ ಪರಿರಕ್ಷಣೆ ಸಮಾಜವನ್ನು ಉಳಿಸಿ ಬೆಳೆಸುವುದಕ್ಕೆ ಸಹಾಯಕವಾಗುತ್ತದೆ. ಸಂಸ್ಕೃತಿಯನ್ನು ಕೇವಲ ಮುಂದಕ್ಕೆ ರವಾನಿಸುವದಷ್ಟೇ ಅಲ್ಲದೆ ಅದನ್ನು ಸಮೃದ್ಧಗೊಳಿಸಬೆಕು. ಸಮಾಜಕ್ಕೆ ಕೊಡುಗೆ ನೀಡುವ

ಸದಸ್ಯನನ್ನಾಗಿ ಮಾಡಲು ಶಿಶುವಿನ ಸೃಜನಾತ್ಮಕ ಶಕ್ತಿಗಳನ್ನು ಪಠ್ಯಕ್ರಮವು ವಿಕಸನಗೊಳಿಸಬೇಕು. ರೇಮಾಂಟ್ ಹೀಗೆ ಹೇಳುತ್ತಾನೆ– "ಪ್ರಸ್ತುತದ ಮತ್ತು ಭವಿಷ್ಯದ ಅಗತ್ಯಗಳಿಗೆ ಪಠ್ಯಕ್ರಮವು ಸೂಕ್ತವಾಗಿರಬೇಕಾದರೆ ಖಂಡಿತವಾಗಿಯೂ ಅದರಲ್ಲಿ ಸೃಜನಾತ್ಮಕ ವಿಷಯಗಳಿರಬೇಕು". ಪಠ್ಯಕ್ರಮ ನಿರ್ಮಾಣವು ವಿದ್ಯಾರ್ಥಿಗಳ ಸೃಜನಾತ್ಮಕ ಸಾಮರ್ಥ್ಯಗಳ ವಿಕಾಸವನ್ನು ಗಮನದಲ್ಲಿರಿಸಬೇಕು. ಒದಗಿಸಲಾದ ಅನುಭವಗಳು ವಿದ್ಯಾರ್ಥಿಗಳನ್ನು ರಚನಾತ್ಮಕ ಸಾಮರ್ಥವುಳ್ಳವರೂ ಸೃಜನಶೀಲರೂ ಆಗಲು ಸಮರ್ಥರನ್ನಾಗಿಸಬೇಕು. ವಿಷಯವಸ್ತು ಸಂಬಂಧಿತ ಚಟುವಟಿಕೆಗಳು ವಿದ್ಯಾರ್ಥಿಗಳ ಸೃಜನಾತ್ಮಕ ಸಾಮರ್ಥ್ಯವನ್ನು ಗುರುತಿಸಿ, ಮುನ್ನಡೆಸಿ ಬೆಳೆಸುವ ರೀತಿಯಲ್ಲಿರಬೇಕು.

**ಇ) ವೈಶಾಲ್ಯತೆ ಮತ್ತು ವ್ಯಾಪಕತೆ:**

ವಿದ್ಯಾರ್ಥಿಗಳು ಮಾನವನ ಚಿಂತನೆ ಮತ್ತು ಚಟುವಟಿಕೆಗಳ ಪ್ರಪಂಚವನ್ನು ಗ್ರಹಿಸಲು ಸಮರ್ಥರನ್ನಾಗಿಸುವಷ್ಟು ಪಠ್ಯಕ್ರಮವು ವ್ಯಾಪಕವಾಗಿರುಬೇಕು. ಸ್ಥಳೀಯವಾದುದರಿಂದ ಆರಂಭಗೊಂಡು ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಗತಿಗಳವರೆಗೆ ಮುಂದುವರೆಯಬೇಕು.

**ಎಫ್) ನಮ್ಯತೆಯ ತತ್ವ**

ನಮ್ಮ ಈ ಯುಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಬೆಳವಣಿಗೆಗಳು ಶೀಘ್ರಗತಿಯಲ್ಲಿ ಜರುಗುತ್ತಿವೆ. ತತ್ಪರಿಣಾಮವಾಗಿ, ಸಮಾಜದ ಅಗತ್ಯಗಳು ಬದಲಾಗುತ್ತಿವೆ. ಪಠ್ಯಕ್ರಮದ ವಿಷಯವಸ್ತು ಸರ್ವಕಾಲಗಳಲ್ಲಿಯೂ ಒಂದೇ ಆಗಿರಲು ಸಾಧ್ಯವಿಲ್ಲ. ಅದು ಶಿಕ್ಷಣ ಮತ್ತು ಮನೋವಿಜ್ಞಾನದ ಕ್ಷೇತ್ರಗಳಲ್ಲಿನ ಇತ್ತೀಚಿನ ಬೆಳವಣಿಗೆಯನ್ನು ಪ್ರತಿಬಿಂಬಿಸಬೇಕು. ವ್ಯಕ್ತಿಗತವಾದ ಭಿನ್ನತೆಗಳು ಮತ್ತು ಸ್ಥಳೀಯ ಅಗತ್ಯಗಳನ್ನು ಪರಿಗಣನೆಗೆ ತೆಗೆದುಕೊಂಡು ವೈವಿಧ್ಯತೆ ಮತ್ತು ನಮ್ಯತೆಗಳು ಪಠ್ಯಕ್ರಮದ ಜೊತೆಯಲ್ಲಿ ಕೂಡಿಕೊಂಡಿರಬೇಕು. ಬದಲಾಗುತ್ತಿರುವ ಕಾಲ ಮತ್ತು ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನದಲ್ಲಿರಿಸಿ, ಹೊಸ ವಿಷಯಗಳನ್ನು ಮತ್ತು ಚಟುವಟಿಕೆಗಳನ್ನು ಅಂತರ್ಗತಗೊಳಿಸಲು ಸಾಧ್ಯವಾಗುವ ರೀತಿಯಲ್ಲಿ ಪಠ್ಯಕ್ರಮವು ನಮ್ಯವೂ ಸಮಗ್ರವೂ ಆಗಿರಬೇಕು.

**ಜಿ) ಕೋರ್ಸಿನ ಸ್ವರೂಪ ಮತ್ತು ಉದ್ದೇಶಗಳ ತತ್ವ**

ಕೋರ್ಸಿನ ಅವಧಿ, ಸ್ವರೂಪ ಮತ್ತು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮವನ್ನು ವಿಕಾಸಗೊಳಿಸಬೇಕು.

**ಎಚ್) ಏಕೀಕರಣ ಮತ್ತು ಅನ್ಯೋನ್ಯಾಶ್ರಯದ ತತ್ವ:**

ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಮತ್ತು ಚಟುವಟಿಕೆಗಳ ಮೂಲಕ ಆಯ್ಕೆ ಮಾಡಿದ ಅನುಭವಗಳನ್ನು ಒದಗಿಸಬೇಕು. ಇವೆಲ್ಲವೂ ಸಮರ್ಪಕವಾಗಿ ಏಕೀಕೃತಗೊಂಡಿರಬೇಕು. ವಿವಿಧ ವಿಷಯಗಳು ಮತ್ತು ಚಟುವಟಿಕೆಗಳು ಶಿಕ್ಷಣದ ಗುರಿಯನ್ನು ಸಾಧಿಸುವ ಏಕಮೇವ ಅಂತಿಮ ಉದ್ದೇಶವನ್ನು ಈಡೇರಿಸುವಂತಿರಬೇಕು. ಚಟುವಟಿಕೆಗಳು, ಪಠ್ಯವಿಷಯಗಳು ಪೃಥಕ್ಕರಿಸಿದಂತೆ ಇರಬಾರದು. ಬದಲಾಗಿ ಅವು ಶಿಶುವನ್ನು ಸಮಗ್ರವಾಗಿ ವಿಕಾಸಗೊಳಿಸುವಂತೆ ಅನ್ಯೋನ್ಯ ಸಂಬಂಧವುಳ್ಳವೂ ಸಮರ್ಪಕವಾಗಿ ಏಕೀಕೃತಗೊಂಡವೂ ಆಗಿರಬೇಕು. ಪಠ್ಯಕ್ರಮವನ್ನು ಹಲವಾರು ಪ್ರತ್ಯೇಕ ವಿಷಯಗಳನ್ನಾಗಿ ವಿಭಜಿಸಬಾರದು. ಪಠ್ಯಕ್ರಮದಲ್ಲಿ ಒಳಗೊಂಡು ವಿಷಯಗಳು ಪರಸ್ಪರ ಸಂಬಂಧ ಉಳ್ಳವಾಗಿರಬೇಕು. ಪಠ್ಯವಿಷಯವನ್ನು, ಚಟುವಟಿಕೆಗಳನ್ನು ಜೀವನದೊಂದಿಗೆ ಸಂಬಂಧಿಸಿ ಬೋಧಿಸಬೇಕು.

**ಐ) ಸಮುದಾಯ ಕೇಂದ್ರಿತ ತತ್ವ**

ಭವಿಷ್ಯದ ಯುವಪೀಳಿಗೆಯ ನಿರ್ಮಾಣದಲ್ಲಿ ಸಮುದಾಯ ಬಹಳಷ್ಟು ಕೊಡುಗೆ ನೀಡುವುದೆಂಬ ಸಂಗತಿ ಸುವಿದಿತ. ವ್ಯಕ್ತಿಯನ್ನು ಸಮುದಾಯಕ್ಕೆ ಉಪಯುಕ್ತನಾಗಿ ಆ ನಿಟ್ಟಿನಲ್ಲಿ ಯಶಸ್ವಿಯನ್ನಾಗಿ ಮಾಡುವುದು ಶಿಕ್ಷಣದ ಉದ್ದೇಶವಾಗಿದೆ. ಪಠ್ಯಕ್ರಮವು ಸಮುದಾಯದ ಅಗತ್ಯಗಳಿಗೆ, ಆವಶ್ಯಕತೆಗಳಿಗೆ, ಆಸೆ ಆಕಾಂಕ್ಷೆಗಳಿಗೆ, ಆಸಕ್ತಿಗಳಿಗೆ ಮತ್ತು ಮೌಲ್ಯಗಳಿಗೆ ಸಂಬಂಧಿಸಿದಂತಿರಬೇಕು.

**ಜೆ) ವೈವಿಧ್ಯತೆಯ ತತ್ವ**

ವಿದ್ಯಾರ್ಥಿಗಳು ಅವರವರ ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ವಿಷಯಗಳನ್ನು ಆಯ್ಕೆ ಮಾಡಲು ಮತ್ತು ಚಟುವಟಿಕೆಗಲ್ಲಿ ಭಾಗವಹಿಸಲು ಸಮರ್ಥರಾಗುವ ರೀತಿಯಲ್ಲಿ ವಿವಿಧ ವರ್ಗದ ವಿದ್ಯಾರ್ಥಿಗಳ ಅಗತ್ಯಗಳನ್ನು ಹೊಂದಿಸಿಕೊಳ್ಳಲು ಆಗುವಂತೆ ಪಠ್ಯಕ್ರಮವು ವಿಶಾಲ ಆಧಾರವನ್ನು ಹೊಂದಿರಬೇಕು. ವಿದ್ಯಾರ್ಥಿಗಳ ಅಗತ್ಯಗಳು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತವೆ. ಉದಾಹರಣೆಗೆ, ಗ್ರಾಮೀಣ ಪ್ರದೇಶದ, ನಗರ ಪ್ರದೇಶದ ಮತ್ತು ಬೆಟ್ಟಗುಡ್ಡಗಳ ಪ್ರದೇಶದ ವಿದ್ಯಾರ್ಥಿಗಳಿಗೆ, ಬೇರೆ ಬೇರೆ ಅಗತ್ಯಗಳಿರುತ್ತವೆ. ಬಾಲಕ ಮತ್ತು ಬಾಲಕಿಯರ ಅಗತ್ಯಗಳು ಭಿನ್ನವಾಗಿರುತ್ತವೆ. ಆದ್ದರಿಂದ, ಈ ಪರಿಗಣನೆಗಳು ಪಠ್ಯಕ್ರಮದಲ್ಲಿ ಪ್ರತಿಬಿಂಬಿತವಾಗಿರಬೇಕು.

**ಕೆ) ಪ್ರಗತಿಪರತೆಯ ತತ್ವ**

ಶಿಕ್ಷಣವಿರುವುದು ಶಿಶುವನ್ನು ಯಶಸ್ವಿ ಸಾಮಾಜಿಕ ಜೀವನ ನಡೆಸಲು ಸಮರ್ಥರನ್ನಾಗಿ ಮಾಡಲು. ಆದ್ದರಿಂದ, ಪಠ್ಯಕ್ರಮವು ಶಿಶುವಿನ ಸದ್ಯದ ಅಗತ್ಯಗಳನ್ನು ಪೂರೈಸುವುದಷ್ಟಕ್ಕೆ ಮಾತ್ರ ಸೀಮಿತವಾಗಬಾರದು. ಅದರ ಮುಂದಿನ ಜೀವನದ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ನಂತರದ ಜೀವನದಲ್ಲಿ ಪರಿಣಾಮಕಾರಿ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಬೇಕಾದ ಸಾಮರ್ಥ್ಯಗಳನ್ನು ಮತ್ತು ಶಕ್ತಿಯನ್ನು ಶಿಶುವಿನಲ್ಲಿ ಬೆಳಸುವಂತಹ ಜ್ಞಾನ, ಕೌಶಲ್ಯಗಳು, ಅನುಭವಗಳು ಮತ್ತು ಪ್ರಭಾವಗಳನ್ನು ಸಹ ಪಠ್ಯಕ್ರಮವು ಅಂತರ್ಗತಗೊಳಿಸಿಕೊಂಡಿರಬೇಕು.

**ಎಲ್) ಸಮತೋಲನದ ತತ್ವ**

ವಿಷಯ ಮತ್ತು ಚಟುವಟಿಕೆಗಳು, ಪ್ರತ್ಯಕ್ಷ ಮತ್ತು ಪರೋಕ್ಷ ಅನುಭವಗಳು, ಶೈಕ್ಷಣಿಕ ಮತ್ತು ಔದ್ಯೋಗಿಕ ಶಿಕ್ಷಣ, ಕಡ್ಡಾಯ ಮತ್ತು ಐಚ್ಛಿಕ ವಿಷಯಗಳು, ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ, ಶಿಕ್ಷಣದ ವ್ಯಕ್ತಿಗತ ಮತ್ತು ಸಾಮಾಜಿಕ ಗುರಿಗಳು– ಇವೆಲ್ಲದರ ನಡುವೆ ಪಠ್ಯಕ್ರಮವು ಸಮತೋಲನವನ್ನು ಕಾಪಾಡಿಕೊಳ್ಳಬೇಕು.

**ಎಫ಼್) ಉಪಯುಕ್ತತೆಯ ತತ್ವ**

ಪಠ್ಯಕ್ರಮವು ಉಪಯುಕ್ತವಾಗಿರಬೇಕೆ ವಿನಃ ಆಲಂಕಾರಿಕವಾಗಿರಬಾರದು. ಸಾಂಪ್ರದಾಯಿಕವಾಗಿ ಸ್ಥಾನ ಪಡೆಯುವ ವಿಷಯಗಳನ್ನು ಮಾತ್ರ ಪಠ್ಯಕ್ರಮ ಒಳಗೊಂಡಿರಬಾರದು. ಪಠ್ಯಕ್ರಮವು ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಉಪಯುಕ್ತತೆಯನ್ನು ಹೊಂದಿರಬೇಕು. ಆದ್ದರಿಂದ, ಪಠ್ಯಕ್ರಮದಲ್ಲಿ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣಕ್ಕೆ ಅವಕಾಶವಿರಬೇಕು.

ಪಠ್ಯಕ್ರಮ ನಿರ್ಮಾಣದ ಸಮಯದಲ್ಲಿ ವಿವಿಧ ತತ್ವಗಳನ್ನು ಗಮನದಲ್ಲಿರಸಬೇಕೆಂಬುದು ನಿಜವಾದರೂ ನಿರ್ದಿಷ್ಟ ಪಠ್ಯಕ್ರಮ ನಿರ್ಮಾಣದ ಸಂದರ್ಭಕ್ಕೆ ಅನ್ವಯವಾಗುವಂತಹ ಸಂದರ್ಭೋಚಿತ ತತ್ವಗಳನ್ನು ಆಯ್ಕೆ ಮಾಡುವುದು ಅಷ್ಟೇ ಮುಖ್ಯ. ವಿವಿಧ ಪ್ರಾದೇಶಿಕ ಮತ್ತು ರಾಷ್ಟ್ರೀಯ ಪರಿಸ್ಥಿತಿಗಳನ್ನು ಸಹ ಪರಿಗಣಿಸಬೇಕು. ವಾಸ್ತವವಾಗಿ, ಶಿಕ್ಷಣದ ಗುರಿಗಳನ್ನು ಈಡೇರಿಸುವಲ್ಲಿ ಸಹಾಯಕವಾಗುವ ಎಲ್ಲ ಅನುಭವಗಳನ್ನೂ ಯೋಗ್ಯ ರೀತಿಯಲ್ಲಿ ಪರಿಗಣಿಸಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸಮಾಜ ವಿಜ್ಞಾನ ಪಠ್ಯಕ್ರಮ ವಿನ್ಯಾಸದಲ್ಲಿ ಪರಿರಕ್ಷಣೆಯ ತತ್ವವನ್ನು ಪರಿಗಣಿಸುವುದರ ಅನುಕೂಲತೆಗಳೇನು?
2. ಸಮಾಜ ವಿಜ್ಞಾನ ಪಠ್ಯಕ್ರಮ ವಿನ್ಯಾಸದಲ್ಲಿ ಸಮುದಾಯವನ್ನು ನಾವೇಕೆ ಪರಿಗಣಿಸಬೇಕು?
3. ಸಮತೋಲನದ ತತ್ವ ಎಂದರೇನು?

### 3.1.3.3. ಪಠ್ಯಕ್ರಮ ವಿಕಾಸದ ಉಪಕ್ರಮಗಳು

**ಎ) ಕಾಲಾನುಕ್ರಮ ಉಪಕ್ರಮ ಅಥವಾ ಆವರ್ತಕ ಉಪಕ್ರಮ (Chronological Approach or Periodic Approach)**

ಕಾಲಾನುಕ್ರಮ ಉಪಕ್ರಮ ಎಂದರೆ ಒಟ್ಟಾರೆ ಕೋರ್ಸ್‌ನ್ನು ಅವಧಿ ಎಂದು ಕರೆಯಲಾಗುವ ಕೆಲವು ನಿಶ್ಚಿತ ಹಂತಗಳನ್ನಾಗಿ ಜೋಡಿಸುವಿಕೆ ಎಂಬ ಅರ್ಥ ಬರುತ್ತದೆ. ಅವಧಿಗಳನ್ನು ಕಾಲಾನುಕ್ರಮವಾಗಿ ಬೋಧಿಸಲಾಗುತ್ತದೆ. ಉದಾಹರಣೆಗೆ, ಭಾರತೀಯ ಇತಿಹಾಸವನ್ನು ಪ್ರಾಚೀನ, ಮಧ್ಯ, ಮೊಘಲ್, ಬ್ರಿಟಿಷ್ ಮತ್ತು ಸ್ವಾತಂತ್ರ್ಯೋತ್ತರ ಯುಗಗಳಾಗಿ ವಿಭಾಜಿಸಲಾಗುತ್ತದೆ. ಇಂಗ್ಲೆಂಡಿನ ಇತಿಹಾಸವನ್ನು ಸಾಧಾರಣವಾಗಿ ಆಂಗ್ಲೊ ಸಾಕ್ಸ ನ್, ನಾರ್ಮನ್, ಟ್ಯುಡರ್ ಮತ್ತು ಆಧುನಿಕ ಯುಗಗಳಾಗಿ ವಿಭಜಿಸಲಾಗುತ್ತದೆ.

ಸಿ.ಪಿ. ಹಿಲ್‌ನ ಮಾತುಗಳಲ್ಲಿ ಹೇಳುವುದಾದರೆ, 'ಕಾಲಾನುಕ್ರಮ ವಿಧಾನವು ಗೊಂದಲವನ್ನು ನಿವಾರಿಸುತ್ತದೆ. ಏಕೆಂದರೆ, ಗತಕಾಲದ ಕಥನದ ಅನುಕ್ರಮದಲ್ಲಿರುವ ನಿರಂತರ ಅಂಶಗಳ ಪೂರ್ಣ ಅನುಕೂಲತೆಯನ್ನು ಈ ವಿಧಾನ ಬಳಸಿಕೊಳ್ಳುತ್ತದೆ. ಮಕ್ಕಳಲ್ಲಿ ಕಾಲಾನುಕ್ರಮನದ ದೃಷ್ಟಿಕೋನವನ್ನು ರೂಢಿಸುತ್ತದೆ.

ಕಾಲಾನುಕ್ರಮ ಉಪಕ್ರಮದ ಕೆಲವು ಅನುಕೂಲತೆಗಳು ಹೀಗಿವೆ:

- ಕಾಲಾನುಕ್ರಮ ಉಪಕ್ರಮ ದೇಶವೊಂದರ ಇತಿಹಾಸದ ಸಹಜ ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುತ್ತದೆ.
- ವಿದ್ಯಾರ್ಥಿಗಳಿಗೆ ಇತಿಹಾಸದಲ್ಲಿನ ಕಾಲದ ಅಂಶದ ಬಗ್ಗೆ ಸ್ಪಷ್ಟ ಕಲ್ಪನೆ ಹೊಂದಲು ಸುಲಭವೆನಿಸುತ್ತದೆ. ಏಕೆಂದರೆ, ಅವರನ್ನು ಶತಮಾನದಿಂದ ಶತಮಾನಕ್ಕೆ ಮತ್ತು ವರ್ಷದಿಂದ ವರ್ಷಕ್ಕೆ ಮಾರ್ಗದರ್ಶನ ಮಾಡುತ್ತಾ ಮುಂದೆ ಕೊಂಡೊಯ್ಯುತ್ತದೆ.
- ಕಾಲಾನುಕ್ರಮ ನಿರೂಪಣೆ ವಿಷಯದ ಆಳವಾದ ಅಧ್ಯಯನಕ್ಕೆ ಅವಕಾಶ ಮಾಡುವುದರಿಂದ ಆಸಕ್ತಿಕರ ವಿವರಗಳನ್ನು ಕಲಿಯಲು ಸಹಾಯವಾಗುತ್ತದೆ.
- ಕಾಲಾನುಕ್ರಮ ಉಪಕ್ರಮದ ಅಳವಡಿಕೆಯಿಂದ ಪ್ರತಿಯೊಂದು ತರಗತಿಯಲ್ಲಿಯೂ ಹೊಸ ವಿಷಯವನ್ನು ಪ್ರಸ್ತುತಪಡಿಸಲು ಸಾಧ್ಯವಾಗುವುದರ ಜೊತೆಗೆ ವಿದ್ಯಾರ್ಥಿಗಳು ಕಲಿಕಾಂಶಗಳ ವಿವರಗಳನ್ನು ಪುನರಾವರ್ತಿಸುವ ಅಗತ್ಯವಿಲ್ಲ.

**ಬಿ) ಘಟಕ ಉಪಕ್ರಮ(Unit Approach)**

ಘಟಕ ಉಪಕ್ರಮವು ಕಲಿಕೆಯ ಗೆಸ್ಟಾಲ್ಟ್–ಆರ್ಗ್ಯಾನಿಸ್ಟಿಕ್ ಫೀಲ್ಡ್ ಸಿದ್ಧಾಂತವನ್ನು ಅವಲಂಬಿಸಿದ್ದು ಕಲಿಕೆಯ ಸಮಗ್ರತಾ ದೃಷ್ಟಿಗೆ ಒತ್ತು ನೀಡುತ್ತದೆ.

ಬಾಸ್ಸಿಂಗ್‌ನ ಪ್ರಕಾರ, "ಒಂದು ಘಟಕವು ವಿದ್ಯಾರ್ಥಿಗಳ ಉದ್ದೇಶಗಳನ್ನು ಈಡೇರಿಸುವ ರೀತಿಯಲ್ಲಿ ಮತ್ತು ಸೂಕ್ತ ವರ್ತನಾತ್ಮಕ ಬದಲಾವಣೆಗಳನ್ನು ತರುವಂತಹ ರೀತಿಯಲ್ಲಿ ವಿಕಾಸಗೊಳಿಸಿದ ಸಂಬಂಧಿತ ಮತ್ತು ಅರ್ಥಪೂರ್ಣ ಚಟುವಟಿಕೆಗಳ ವ್ಯಾಪಕ ಪರಿಗಣನೆಗಳನ್ನು ಒಳಗೊಂಡಿರುತ್ತದೆ.

ಶಿಕ್ಷಣದ ನಿಘಂಟು ಘಟಕವನ್ನು ಹೀಗೆ ವ್ಯಾಖ್ಯಾನಿಸುತ್ತದೆ "ಒಂದು ಪ್ರಮುಖ ಸಮಸ್ಯೆ ಅಥವಾ ಉದ್ದೇಶದ ಸುತ್ತ ವೈವಿಧ್ಯಮಯ ಚಟುವಟಿಕೆಗಳ, ಅನುಭವಗಳ ಮತ್ತು ಕಲಿಕೆಯ ವಿಧಗಳ ಸಂಘಟನೆ ಇದಾಗಿದ್ದು, ಇದನ್ನು ಶಿಕ್ಷಕರೊಬ್ಬರ ನಾಯಕತ್ವದಲ್ಲಿ ವಿದ್ಯಾರ್ಥಿಗಳ ಗುಂಪು ಸಹಕಾರದಿಂದ ಒಡಗೂಡಿ ವಿಕಾಸಗೊಳಿಸುತ್ತದೆ. ಇದಕ್ಕೆ ಯೋಜನೆಗಳ ಜಾರಿಗೊಳಿಸುವಿಕೆ ಮತ್ತು ಫಲಿತಾಂಶಗಳ ಮೌಲ್ಯಮಾಪನಗಳು ಬೇಕಾಗುತ್ತವೆ. ಕ್ವಿಲೆನ್ ಮತ್ತು ಹನ್ನಾ ಅವರ ಪ್ರಕಾರ "ಒಂದು ಸಾಮಾನ್ಯ ತತ್ವ, ಪ್ರಕ್ರಿಯೆ, ಸಂಸ್ಕೃತಿ ಅಥವಾ ಜೀವನ ಕ್ಷೇತ್ರದ ಸುತ್ತ ಸಂಘಟಿಸಿದ ಮತ್ತು ಮಹತ್ವಪೂರ್ಣ ಫಲಿತಗಳ ಈಡೇರಿಕೆಯತ್ತ ನಿರ್ದೇಶಿತಗೊಂಡು, ತತ್ಪರಿಣಾಮವಾಗಿ ಕಲಿಕಾ ಅನುಭವಗಳ ಏಕತೆಯನ್ನು ಒದಗಿಸುವ ಸಾಮಗ್ರಿಗೆ ಒಂದು ಘಟಕ ಎನ್ನುವರು"

ಸಮಾಜ ವಿಜ್ಞಾನದ ಪಠ್ಯಕ್ರಮದ ಸಮರ್ಪಕ ಸಂಘಟನೆಗಾಗಿ ನಾವು ಘಟಕ ಉಪಕ್ರಮವನ್ನು ಕೂಡ ಅಳವಡಿಸಿಕೊಳ್ಳಬಹುದು. ಹಾಗೆ ಮಾಡುವಾಗ ಶಾಲಾಶಿಕ್ಷಣದ ಒಂದು ನಿರ್ದಿಷ್ಟ ಹಂತದಲ್ಲಿನ (ಪ್ರಾಥಮಿಕ ಅಥವಾ ಮಾಧ್ಯಮಿಕ) ಸಮಾಜ ಅಧ್ಯಯನಕ್ಕೆ ಮೀಸಲೆಂದು ಆಯ್ಕೆ ಮಾಡಿದ ವಿಷಯ ವಸ್ತುಗಳನ್ನು ಮತ್ತು ಕಲಿಕಾ ಅನುಭವಗಳನ್ನು ಸೂಕ್ತವೂ ಅರ್ಥಪೂರ್ಣವೂ ಆಗುವ ರೀತಿಯಲ್ಲಿ ಘಟಕದಲ್ಲಿ ಸೇರಿಸಬೇಕು. ನಂತರ, ಯಾವುದೇ ಗ್ರೇಡಿನ ಅಥವಾ ತರಗತಿಯ ಪಠ್ಯಕ್ರಮದಲ್ಲಿ ವಿದ್ಯಾರ್ಥಿಗಳ ವಯೋಮಾನ ಮತ್ತು ಮಾನಸಿಕ ಮಟ್ಟಕ್ಕೆ ತಕ್ಕಂತಿರುವ ಆಯಾ ಘಟಕಗಳನ್ನು ಸೇರಿಸಬೇಕು.

ಈ ರೀತಿಯಲ್ಲಿ ಶಾಲಾಶಿಕ್ಷಣದ ನಿರ್ದಿಷ್ಟ ಹಂತದಲ್ಲಿನ ಸಮಾಜ ವಿಜ್ಞಾನದ ಅಧ್ಯಯನಕ್ಕೆಂದು ಆಯ್ಕೆ ಮಾಡಿದ ವಿಷಯ ಸಾಮಗ್ರಿ ಮತ್ತು ಕಲಿಕಾ ಅನುಭವಗಳನ್ನು ಘಟಕಗಳ ಸರಣಿಯಾಗಿ ವಿಭಜಿಸಲಾಗುತ್ತದೆ. ಪ್ರತಿಯೊಂದು ಘಟಕವನ್ನು ವಿದ್ಯಾರ್ಥಿಗಳ ಸಾಮಾಜಿಕ ಪರಿಸರ, ಅವರ ಅನುಭವಗಳು, ಸಾಮಾಜಿಕ ಸಮಸ್ಯೆಗಳು, ಸಾಮಾಜಿಕ ಸಂಬಂಧಗಳು ಹಾಗೂ ವ್ಯಕ್ತಿಗತ ಮತ್ತು ಸಾಮಾಜಿಕ ಅಗತ್ಯಗಳಿಗೆ ಸಂಬಂಧಿಸಿದ ಪ್ರಧಾನ ವಿಷಯದ ಸುತ್ತ ವಿಕಾಸಗೊಳಿಸಲಾಗುತ್ತದೆ.

ತದನಂತರ ಈ ಘಟಕಗಳನ್ನು ವಿದ್ಯಾರ್ಥಿಗಳ ಅಗತ್ಯಗಳು, ಆಸಕ್ತಿಗಳು, ಮಾನಸಿಕ ಹಂತ ಮತ್ತು ಶೈಕ್ಷಣಿಕ ಮಟ್ಟಕ್ಕೆ ತಕ್ಕಂತೆ ಆಯಾ ಹಂತಗಳಿಗೆ ಸೇರಿದ ವಿವಿಧ ಗ್ರೇಡುಗಳಿಗೆ ಅಥವಾ ತರಗತಿಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಉದಾ: ಸಾರಿಗೆ, ಸಂಪರ್ಕ, ಮಾಧ್ಯಮ, ನಮ್ಮ ಸೌರವ್ಯೂಹ, ಭೂಮಿಯ ಮೇಲಿನ ಜೀವ, ಪರಿಸರ ಮಾಲಿನ್ಯ ಮತ್ತು ನಮ್ಮ ಆರೋಗ್ಯ, ನಾವು ಸೇವಿಸುವ ಆಹಾರ, ನಾವು ಉಸಿರಾಡುವ ಗಾಳಿ, ರಾಷ್ಟ್ರೀಯ ಏಕತೆ, ನಮ್ಮ ನ್ಯಾಯ ವ್ಯವಸ್ಥೆ, ನಮ್ಮ ಸಮುದಾಯ, ನಮ್ಮ ಸುತ್ತವಿರುವ ಹವಾಮಾನ, ನಮ್ಮ ಅರಣ್ಯ ಸಂಪತ್ತು, ನಮ್ಮ ರಾಷ್ಟ್ರೀಯ ಪರಂಪರೆ, ನಮ್ಮ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆ, ನಮ್ಮ ಭೂಮಿ, ರಾಷ್ಟ್ರೀಯ ಭದ್ರತೆ, ನಾವು ಮತ್ತು ನಮ್ಮ ನೆರೆಹೊರೆಯ ದೇಶಗಳು, ವಿಶ್ವ ಮತ್ತು ಜಾಗತೀಕರಣ.

ಘಟಕ ಅಧ್ಯಯನದ ಮಾದರಿ ಗ್ರಹಿಕೆಗೆ ಅನುರೂಪವೂ ಬಹುಶಿಸ್ತೀಯವೂ ಆಸಕ್ತಿ–ನಿರ್ದೇಶಿತವೂ ಆದ ಶಿಕ್ಷಣದ ಒಂದು ಉಪಕ್ರಮವಾಗಿದೆ. ಬೋಧನೆಯ ಒಂದು ಉಪಕರಣವಾಗಿ ವಿಷಯಾತ್ಮಕ ಘಟಕವು (ಥಿಮಾಟಿಕ್ ಯುನಿಟ್) ಹಲವು ದಿನಗಳು, ವಾರಗಳು ಅಥವಾ ತಿಂಗಳುಗಳ ಆಳವಾದ ಅಧ್ಯಯನವನ್ನು ಪ್ರೋತ್ಸಾಹಿಸುತ್ತದೆ. ಸಾಂಪ್ರದಾಯಿಕ ಶಿಕ್ಷಣ ಮಾದರಿಯಲ್ಲಿ ವಿಷಯಗಳನ್ನು ಬೇರೆ ಬೇರೆಯಾಗಿ ಅಧ್ಯಯನ ಮಾಡಲಾಗುತ್ತದೆ. ಘಟಕ ಅಧ್ಯಯನವು ಹಲವು ಶೈಕ್ಷಣಿಕ ಪಠ್ಯವಿಷಯಗಳನ್ನು ಒಂದು ಸಾಮಾನ್ಯ ವಿಷಯಾತ್ಮಕ ಸೂತ್ರದಲ್ಲಿ ಪೋಣಿಸುತ್ತದೆ.

ಘಟಕ ಅಧ್ಯಯನದಲ್ಲಿ ಸಾಮಾನ್ಯವಾಗಿ ವಿವಿಧ ಕಲಿಕಾ ಚಟುವಟಿಕೆಗಳು ಒಳಗೊಂಡಿರುತ್ತವೆಯಲ್ಲದೆ, ಹಲವು ವಿಧದ ಸಂಪನ್ಮೂಲಗಳೂ ಸೇರಿರುತ್ತವೆ. ವ್ಯಕ್ತಿಗತ ಅಗತ್ಯಗಳನ್ನು ಪೂರೈಸುವುದರೊಂದಿಗೆ ವಿದ್ಯಾರ್ಥಿಗಳ ವೈವಿಧ್ಯಮಯ ಸಮೂಹವು ಒಟ್ಟಿಗೆ ಸೇರಿ ಕಲಿಯಲು ಇದು ಅವಕಾಶ ಮಾಡುತ್ತದೆ. ಪ್ರತ್ಯೇಕ ವಿದ್ಯಾರ್ಥಿಯ ವಯಸ್ಸು, ಸಾಮರ್ಥ್ಯಗಳು, ಕಲಿಕಾ ಶೈಲಿ, ಮತ್ತು ವಿಕಾಸದ ಹಂತಗಳನ್ನು ಸವಾಲಿನಿಂದ ಒಡಗೂಡಿದ, ವ್ಯಕ್ತೀಕರಿಸಿದ ನಿಯೋಜಿತ ಕಾರ್ಯಗಳಿಂದ ಹೊಂದಿಸಿಕೊಳ್ಳಲು ಇಲ್ಲಿ ಸಾಧ್ಯವಿದೆ.

ಘಟಕ ಉಪಕ್ರಮದ ಅನುಕೂಲತೆಗಳು ಈ ಕೆಳಗಿನಂತಿವೆ:

- ಪರಿಕಲ್ಪನೆಗಳು ಮತ್ತು ಕಲಿಕಾ ಪ್ರಕ್ರಿಯೆಗಳ ನಡುವೆ ಇರುವ ಮಹತ್ವಪೂರ್ಣ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಶಿಶುವಿಗೆ ಇದು ಸುಲಭ ಮಾಡುತ್ತದೆ.
- ಘಟಕ ಚಟುವಟಿಕೆಗಳು ಮತ್ತು ಅವುಗಳ ಅಂತರ್‌ಸಂಬಂಧ ಶಾಲಾ ಕಾರ್ಯವನ್ನು ಹೆಚ್ಚು ಅರ್ಥ ಪೂರ್ಣವನ್ನಾಗಿಸುತ್ತವೆ.
- ಘಟಕ ಅಧ್ಯಯನ ಉಪಕ್ರಮವು ಜ್ಞಾನ ಮತ್ತು ತಿಳುವಳಿಕೆಯನ್ನು ನಿರ್ಮಿಸಲು ಸಾಧ್ಯವಾಗಬಲ್ಲ ಹೆಚ್ಚು ಸ್ವಾಭಾವಿಕವಾದ ಸಂರಚನೆಯನ್ನು ಒದಗಿಸುತ್ತದೆ.

- ಸಂಬಂಧರಹಿತ ವಾಸ್ತವಾಂಶಗಳನ್ನು ಪ್ರಸ್ತುತಪಡಿಸುವುದಕ್ಕೆ ಬದಲಾಗಿ ಮಕ್ಕಳು ವಿಷಯವನ್ನು ಸಮಗ್ರವಾಗಿ ನೋಡಲು ನೆರವಾಗುತ್ತದೆ.
- ಕುತೂಹಲ, ಸ್ವತಂತ್ರ ಚಿಂತನೆ ಮತ್ತು ಜೀವನದ ಉದ್ದಕ್ಕೂ ಕಲಿಯುವ ಒಲವುಗಳನ್ನು ಇದು ಪೋಷಿಸುತ್ತದೆ.
- ಘಟಕ ಅಧ್ಯಯನ ಕಾಲದ ಪರ್ಯಂತ ವಿಷಯವನ್ನು ಪುನಃ ಪುರ್ನ ಗಣನೆಗೆ ತೆಗೆದುಕೊಂಡು ಪುನರ್ಬಲನಗೊಳಿಸಲಾಗುತ್ತದೆ.
- ಈ ಉಪಕ್ರಮ ಹೆಚ್ಚು ಪರಿಣಾಮಕಾರಿ ಕಲಿಕೆಯಾಗಿದ್ದು ಸುಧಾರಿತ ಗ್ರಹಿಕೆಯ ಮೂಲಕ ಹೆಚ್ಚು ಕಾಲ ನೆನೆಪಿನಲ್ಲಿಡಲು ಅವಕಾಶಮಾಡಿಕೊಡುತ್ತದೆ.

**ಸಿ) ಏಕಕೇಂದ್ರಕ ಉಪಕ್ರಮ ಅಥವಾ ಸುರುಳಿ ಉಪಕ್ರಮ(Concentric Approach)**

ವಿಷಯಗಳನ್ನು ಮಕ್ಕಳು ಮೊದಲನೆಯ ಸಲಕ್ಕೆ 'ಇಡಿ'ಯಾಗಿ ಅರ್ಥ ಮಾಡಿಕೊಂಡು ನಂತರ ಕ್ರಮೇಣ ಅವುಗಳನ್ನು ವಿಶ್ಲೇಷಿಸುವುದನ್ನು ಕಲಿಯುತ್ತಾರೆಂಬ ಮನೋವೈಜ್ಞಾನಿಕ ತತ್ವವನ್ನು ಇದು ಆಧರಿಸಿದೆ. ಸಮಾಜ ವಿಜ್ಞಾನಗಳ ವಿಷಯವಸ್ತುವಿನ ಕ್ಲಿಷ್ಟತೆ ಪ್ರತಿಯೊಂದು ಹಂತದಲ್ಲಿಯೂ ಹೆಚ್ಚುತ್ತಾ ಹೋಗುತ್ತದೆಯಾದರೂ ವಿಕಾಸಶೀಲವೂ ಆದ, ಬೆಳೆಯುತ್ತಿರುವ ಮಗು ಪ್ರತಿ ಹೊಸ ವಿಷಯವನ್ನು ಅರ್ಥಮಾಡಿಕೊಳ್ಳಲು ಸಿದ್ಧವಾಗಿರುವಂತೆ ತೋರುತ್ತದೆ. ಮೊದಲನೆಯ ವರ್ಷದಲ್ಲಿ ಇಡೀ ವಿಷಯ ವಸ್ತುವಿನ ಪುನರ್ ವಿಮರ್ಶೆ ಬಹಳ ಸ್ಥೂಲವಾಗಿರುತ್ತದೆ. ಪ್ರತಿ ಮುಂದಿನ ವರ್ಷಗಳಲ್ಲಿ ಹೆಚ್ಚಿನ ವಿವರಗಳಿಗೆ ಅವಕಾಶ ಮಾಡಿರಲಾಗುತ್ತದೆ. ಕಲಿಕಾ ಅನುಕ್ರಮ ಸರಳದಿಂದ ಹೆಚ್ಚಿನ ವಿವರಗಳೊಂದಿಗೆ ಮುಂದುವರೆಯುತ್ತದೆ.

ಏಕಕೇಂದ್ರಕ ವೃತ್ತಗಳು ವಿಸ್ತಾರವಾಗುತ್ತಾ ವಿಶಾಲವಾಗುತ್ತಾ ಹೋಗುವ ಹಾಗೆ, ಜ್ಞಾನದ ವಿಸ್ತಾರವೂ ಆಗುವುದೆಂದು ಇದರರ್ಥವಾಗುತ್ತದೆ. ಇದು ವಿಷಯ ವಸ್ತುವಿನ ಸಂಘಟನೆಯ ಒಂದು ವ್ಯವಸ್ಥೆ. ಈ ವಿಧಾನದಲ್ಲಿ ಪಠ್ಯವಿಷಯವಸ್ತು ಹಲವು ವರ್ಷಗಳ ಪರ್ಯಂತ ವ್ಯಾಪಿಸಿರುತ್ತದೆ. ಪ್ರಥಮ ಹಂತದಲ್ಲಿ ವಿಷಯವಸ್ತುವಿನ ಸಮಗ್ರ ನಿರೂಪಣೆ ಸಾಧ್ಯವಿಲ್ಲ ಎಂಬ ನಿಯಮವನ್ನು ಇದು ಆಧರಿಸಿದೆ. ಪ್ರಾರಂಭದಲ್ಲಿ ವಿಷಯದ ಸರಳ ಪ್ರಸ್ತುತಿಯನ್ನು ಒದಗಿಸಿ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಜ್ಞಾನವನ್ನು ಬೋಧಿಸಲಾಗುತ್ತದೆ. ಈ ರೀತಿ ಒಂದು ಮೂಲಭಾಗದಿಂದ ಅಥವಾ ಕೇಂದ್ರದಿಂದ ಪ್ರಾರಂಭಿಸಿ, ಜ್ಞಾನವೆಂಬ ವೃತ್ತವು ವರ್ಷದಿಂದ ವರ್ಷಕ್ಕೆ ವಿಸ್ತಾರವಾಗುತ್ತಾ ಹೋಗುವ ಕಾರಣದಿಂದ ಇದಕ್ಕೆ ಏಕಕೇಂದ್ರಕ ವಿಧಾನವೆಂಬ ಹೆಸರು ಬಂದಿದೆ.

ಈ ಉಪಕ್ರಮದಲ್ಲಿ, ವಿಷಯವನ್ನು ಅನೇಕ ಭಾಗಗಳಾಗಿ ವಿಂಗಡಿಸಿ, ನಂತರ ಬೇರೆ ಬೇರೆ ತರಗತಿಗಳಿಗೆ ಹಂಚಿಕೆ ಮಾಡಲಾಗುತ್ತದೆ. ಆಯಾ ಭಾಗದ ಕ್ಲಿಷ್ಟತೆ ಮತ್ತು ಆಯಾ ವಯೋಮಾನದ ಗುಂಪಿನ ಗ್ರಹಿಕೆಯ ಶಕ್ತಿ ಇವುಗಳು ಕೋರ್ಸಿನ ನಿರ್ದಿಷ್ಟ ಭಾಗವನ್ನು ಒಂದು ನಿರ್ದಿಷ್ಟ ತರಗತಿಗೆ ಹಂಚುವುದಕ್ಕೆ ಮಾನದಂಡವಾಗಿದೆ. ಹೀಗೆ, ಇಲ್ಲಿ ವರ್ಷದಿಂದ ವರ್ಷಕ್ಕೆ ಆಗುವ ಬೋಧನೆಯ ಪರಿಗಣನೆಯಿದೆ. ಆದರೂ ಇದರ ಪ್ರಭಾವವನ್ನು ದಿನದಿನದ ಬೋಧನೆಯ ಮೇಲೂ ಆಗುವಂತೆ ಬಳಸಿಕೊಳ್ಳಬಹುದು. ಇವತ್ತು ಕೊಡಲಾಗುತ್ತಿರುವ ಜ್ಞಾನ ನಿನ್ನೆ ಕೊಟ್ಟ ಜ್ಞಾನವನ್ನು ಆಧರಿಸಿದ್ದು, ಮುಂದಿನ ದಿನದ ಬೋಧನೆಗೆ ಮಾರ್ಗದರ್ಶಿಯಂತಿರಬೇಕು.

ಏಕಕೇಂದ್ರಕ ಉಪಕ್ರಮದ ಅನುಕೂಲತೆಗಳು ಈ ಕೆಳಗಿನಂತಿವೆ:

- ಇದು 'ಸರಳದಿಂದ ಸಂಕೀರ್ಣಕ್ಕೆ', 'ಇಡಿಯಿಂದ ಬಿಡಿಗೆ' ಮುಂದುವರೆಯುತ್ತದೆ.
- ಇದು ಆಸಕ್ತಿಯನ್ನು ಮೂಡಿಸುವುದರಿಂದ ಪುನರಾವರ್ತನೆಗೆ ಸುಲಭ
- ಸರಳತರ ಮಾರ್ಗವನ್ನು ಅನುಸರಿಸುತ್ತದೆ.
- ಇದು ಇಡೀ ವಿಷಯವಸ್ತುವನ್ನು ಆದ್ಯಂತವಾಗಿ ವ್ಯಾಪಿಸುತ್ತದೆ.
- ಇದು ಮಗುವಿನ ಮಾನಸಿಕ ಬೆಳವಣಿಗೆಯನ್ನು ಪರಿಗಣಿಸುತ್ತದೆ.

- ಪಠ್ಯವಿಷಯ ವಸ್ತುವಿನ ಈ ವಿಧಾನವು ನಿರ್ದಿಷ್ಟ ತರಗತಿಯೊಂದರಲ್ಲಿ ಒಂದು ವಿಷಯವನ್ನು ತೆಗೆದುಕೊಂಡು ಅದರ ಎಲ್ಲ ಮುಖಗಳನ್ನು ಬೋಧಿಸಲು ಕೈಗೊಳ್ಳುವ ಪ್ರಯತ್ನಕ್ಕಿಂತ ನಿಶ್ಚಯವಾಗಿಯೂ ಉತ್ತಮವಾಗಿದೆ.
- ಕೋರ್ಸಿನಿಂದ ನಿಜವಾದ ಮೌಲ್ಯ ಉಳ್ಳದ್ದಾಗಿರುವಂಥ ಚೌಕಟ್ಟನ್ನು ಇದು ಒದಗಿಸುತ್ತದೆ.
- ಒಂದೇ ಶಿಕ್ಷಕರು ಬೋಧನೆಯನ್ನು ಮಾಡುತ್ತಿದ್ದರೆ, ಈ ವಿಧಾನ ಅತ್ಯಂತ ಯಶಸ್ವಿಯಾಗುತ್ತದೆ. ಏಕೆಂದರೆ, ಶಿಕ್ಷಕ ಬೋಧನೆಯಲ್ಲಿ ನಿರಂತರತೆಯನ್ನು ಕಾಪಾಡಿಕೊಂಡು ಅರಿವು ವಿಸ್ತರಿಸುವ ವೃತ್ತವನ್ನು ಏಕಕೇಂದ್ರಕವಾಗಿ ಇಟ್ಟುಕೊಳ್ಳಬಹುದು.
- ಹಿಂದಿನ ತರಗತಿಯಲ್ಲಿ ಈಗಾಗಲೇ ಮುಗಿಸಿರುವುದನ್ನು ಪುನರವಲೋಕಿಸಲು ಇದು ಅವಕಾಶ ಒದಗಿಸುತ್ತದೆ ಹಾಗೂ ಹೊಸ ಕಾರ್ಯವನ್ನು ಕೈಗೆತ್ತಿಕೊಳ್ಳಲು ನೆರವಾಗುತ್ತದೆ.
- ಕಲಿಕಾರ್ಥಿಯ ಗ್ರಹಣಶಕ್ತಿಗೆ ಅನುಸಾರವಾಗಿ ವಿಷಯ ಭಾಗವನ್ನು ಪೂರೈಸಲು ಶಿಕ್ಷಕರನ್ನು ಸಮರ್ಥರನ್ನಾಗಿಸುತ್ತದೆ.
- ಬೋಧನೆ ನೀರಸವಾಗಲು ಇದು ಬಿಡುವುದಿಲ್ಲ. ಏಕೆಂದರೆ, ಪ್ರತಿವರ್ಷವೂ ವಿಷಯದ ಮೂಲಕ ಆಸಕ್ತಿ ಮೂಡಿಸುವಂತೆ ಮಾಡಲು ಸಾಧ್ಯವಿದೆ. ಪ್ರತಿವರ್ಷವೂ ಬಿಡಿಸಲು ಹೊಸ ಸಮಸ್ಯೆಗಳು, ಪರಿಹರಿಸಲು ಹೊಸ ಕ್ಲಿಷ್ಟತೆಗಳು ಇರುತ್ತವೆ.

ಈ ಉಪಕ್ರಮದ ಮಿತಿಗಳು:

- ಪ್ರಸ್ತುತಿಯಲ್ಲಿ ಹೊಸತನ ಇಲ್ಲದೇ ಹೋಗಬಹುದು. ಇಡೀ ಕೋರ್ಸನ್ನು ಒಂದಕ್ಕಿಂತ ಹೆಚ್ಚು ಬಾರಿ ಅಧ್ಯಯನ ಮಾಡುವುದರಿಂದ ಮಕ್ಕಳಲ್ಲಿ ನೀರಸತೆ ಉಂಟಾಗಬಹುದು.
- ಈ ಉಪಕ್ರಮದ ಸಾಫಲ್ಯಕ್ಕೆ ಸಮರ್ಥ ಶಿಕ್ಷಕರು ಅವಶ್ಯಕ. ಶಿಕ್ಷಕ ಮಹತ್ವಾಕಾಂಕ್ಷಿಯಾಗಿ ಪರಿಚಯಾತ್ಮಕ ವರ್ಷದಲ್ಲಿಯೇ ಸಾಧ್ಯವಿರುವ ಎಲ್ಲ ಆಸಕ್ತಿಕರ ಉದಾಹರಣೆಗಳನ್ನು ಹೇಳಿ ಮುಗಿಸಿಬಿಟ್ಟರೆ ವಿಷಯವು ತನ್ನ ತಾಜಾತನವನ್ನು, ರುಚಿಯನ್ನು ಕಳೆದುಕೊಂಡು ಮುಂದಿನ ವರ್ಷಗಳಲ್ಲಿ ವಿಷಯದಲ್ಲಿ ಆಸಕ್ತಿ ಮೂಡಿಸಲು ಏನೂ ಉಳಿಯದಂತಾಗುತ್ತದೆ.
- ವಿಷಯ ಸಣ್ಣದಾಗಿದ್ದರೆ ಅಥವಾ ತುಂಬಾ ದೀರ್ಘವಾಗಿದ್ದರೆ ಈ ವಿಧಾನ ಉಪಯುಕ್ತವಲ್ಲ ಎಂದು ಕಂಡುಬಂದಿದೆ. ತುಂಬ ದೀರ್ಘವಾಗಿರುವ ವಿಷಯಭಾಗ ಪಠ್ಯವಿಷಯವನ್ನು ನೀರಸ ಮಾಡುತ್ತದೆ. ತುಂಬಾ ಸಣ್ಣದಾದ ವಿಷಯ ಭಾಗ ವಿದ್ಯಾರ್ಥಿಯ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವಂತೆ ಅಚ್ಚೊತ್ತಲು ವಿಫಲವಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸಮಾಜ ವಿಜ್ಞಾನದ ಅನುಕ್ರಮ ಉಪಕ್ರಮದ ಯಾವುದಾದರೂ ಎರಡು ಅನುಕೂಲತೆಗಳನ್ನು ಉಲ್ಲೇಖಿಸಿ.
2. ಘಟಕ ಉಪಕ್ರಮದ ಆಧಾರವೇನು?
3. ಏಕಕೇಂದ್ರಕ ಉಪಕ್ರಮದ ಯಾವುದಾದರೂ ಎರಡು ಕೊರತೆಗಳನ್ನು ಪಟ್ಟಿಮಾಡಿ.

### 3.1.4. ಸಾರಾಂಶಿಸೋಣ

- "ಕರಿಕ್ಯುಲಂ" (ಪಠ್ಯಕ್ರಮ) ಎಂಬ ಪದ ಲ್ಯಾಟಿನ್ ಭಾಷೆಯ ಪದವಾದ "ಕ್ಯೂರೆರೆ" (Currere) ಎಂಬುದರಿಂದ ಬಂದಿದೆ.
- ಶಾಲೆ ಒದಗಿಸುವ ಎಲ್ಲ ಅನುಭವಗಳನ್ನು ಪಠ್ಯಕ್ರಮ ಒಳಗೊಳ್ಳುತ್ತದೆ.
- ಪಠ್ಯಕ್ರಮ ವಿಕಾಸಗೊಳಿಸುವಾಗ ಕೆಲವು ನಿಯಮಗಳನ್ನು ಗಮನದಲ್ಲಿರಿಸಬೇಕು.

- ತರ್ಕಾಧಾರಿತವೂ ವೈಜ್ಞಾನಿಕವೂ ಆದ ಕೆಲವು ಉಪಕ್ರಮಗಳನ್ನು ಪರಿಗಣಿಸಿ ಪಠ್ಯಕ್ರಮವನ್ನು ಸಂಘಟಿಸಬೇಕು.
- ಅನುಕ್ರಮ ಉಪಕ್ರಮದಲ್ಲಿ ವಿಷಯಗಳನ್ನು ಕಾಲಾನುಕ್ರಮವಾಗಿ ಸಂಘಟಿಸಲಾಗುತ್ತದೆ.
- ಘಟಕ ಉಪಕ್ರಮದಲ್ಲಿ ವಿಷಯವಸ್ತುವನ್ನು ಅರ್ಥಪೂರ್ಣ ಘಟಕಗಳಾಗಿ ಸಂಘಟಿಸಲಾಗುತ್ತದೆ.
- ಏಕಕೇಂದ್ರಕ ಉಪಕ್ರಮದಲ್ಲಿ ವಿಷಯವಸ್ತುವನ್ನು ಪ್ರತಿ ಹಂತದಲ್ಲಿಯೂ ವಿಸ್ತರಿಸುತ್ತಾ ಹೋಗಲಾಗುತ್ತದೆ.

### 3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಉತ್ತರಗಳಿಗಾಗಿ ಈ ಸ್ವಯಂಕಲಿಕಾ ಸಾಮಗ್ರಿಯ 3.1.3.1 ಭಾಗವನ್ನು ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಉತ್ತರಗಳಿಗಾಗಿ ಈ ಸ್ವಯಂಕಲಿಕಾ ಸಾಮಗ್ರಿಯ 3.1.3.2 ಭಾಗವನ್ನು ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**
ಉತ್ತರಗಳಿಗಾಗಿ ಈ ಸ್ವಯಂಕಲಿಕಾ ಸಾಮಗ್ರಿಯ 3.1.3.3 ಭಾಗವನ್ನು ನೋಡಿ.

### 3.1.6. ಘಟಕಾಂತ್ಯ ಅಭ್ಯಾಸಗಳು

1. ಪಠ್ಯಕ್ರಮದ ಪರಿಕಲ್ಪನೆಯನ್ನು ವಿವರಿಸಿ.
2. ಪಠ್ಯಕ್ರಮ ವಿಕಾಸದ ತತ್ವಗಳನ್ನು ವಿವರಿಸಿ.
3. ಪಠ್ಯಕ್ರಮ ವಿಕಾಸದ ಉಪಕ್ರಮಗಳು ಯಾವುವು?

### 3.1.7. ಪರಾಮರ್ಶನ ಸೂಚಿ


1. Teaching of Social Studies, S.K Mangal &Uma Mangal, PHI Learning Private Limited, New Delhi, 2001.
2. Teaching of Social Studies, J C Aggarwal, Vikas Publishing House, New Delhi, 2008.
3. Modern Teaching of Civics/ Political Science, M.H. Syed, Anmol Publications, New Delhi, 2004.
4. Methods of Teaching Civics, J.P Kumar & D.B. Rao, Discovery Publishing House, New Delhi, 2004.
5. Teaching of Economics, Amita Yadav, Anmol Publications, New Delhi, 2004.
6. Teaching of History, S.K Kochhar, Sterling Publishers, New Delhi, 2003.
7. Teaching of History and Civics, Timmareddy, VidyanidhiPrakashana, Gadag, 2000.

# ಬ್ಲಾಕ್ 3 : ಸಮಾಜ ವಿಜ್ಞಾನಗಳ ಪಠ್ಯಕ್ರಮ ಮತ್ತು ಬೋಧನೆ

## ಘಟಕ 2 : ಸಮಾಜ ವಿಜ್ಞಾನಗಳ ಪಠ್ಯವಸ್ತುವಿನ ಅಧ್ಯಯನ – ಮಾಧ್ಯಮಿಕ ಹಂತದ ಶಿಕ್ಷಣದ ರಾಜ್ಯ ಬೋರ್ಡ್ ಮತ್ತು ಸಿಬಿಎಸ್‌ಇ ಸಮಾಜ ವಿಜ್ಞಾನ ಪಠ್ಯಕ್ರಮದ ಗುರಿಗಳು ಹಾಗೂ ಉದ್ದೇಶಗಳು, ವಿಷಯವಸ್ತು ಸಂಘಟನೆ ಮತ್ತು ಪ್ರಸ್ತುತಿ

**ಘಟಕದ ರಚನೆ**


3.2.1. ಕಲಿಕಾ ಉದ್ದೇಶಗಳು

3.2.2. ಪೀಠಿಕೆ

3.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.2.3.1. ಮಾಧ್ಯಮಿಕ ಹಂತದ ಕರ್ನಾಟಕ ಬೋರ್ಡ್‌ನ ಸಮಾಜ ವಿಜ್ಞಾನ ಪಾಠಸೂಚಿ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

3.2.3.2. ಮಾಧ್ಯಮಿಕ ಹಂತದ ಸಿಬಿಎಸ್‌ಇ ಸಮಾಜ ವಿಜ್ಞಾನ ಪಠ್ಯವಸ್ತು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.2.3.3. ಕರ್ನಾಟಕ ರಾಜ್ಯ ಬೋರ್ಡ್ ಮತ್ತು ಸಿಬಿಎಸ್‌ಇ ಮಾಧ್ಯಮಿಕ ಹಂತದ ಸಮಾಜ ವಿಜ್ಞಾನ ಪಾಠಸೂಚಿಯ ಸಂಘಟನೆ ಮತ್ತು ಪ್ರಸ್ತುತಿ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

3.2.4. ಸಾರಾಂಶಿಸೋಣ

3.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

3.2.6. ಘಟಕಾಂತ್ಯ ಅಭ್ಯಾಸಗಳು

3.2.7. ಪರಾಮರ್ಶನ ಸೂಚಿ


### 3.2.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಸಮಾಜ ವಿಜ್ಞಾನ ಪಾಠಸೂಚಿಯ ಅಧ್ಯಯನದ ಗುರಿ ಮತ್ತು ಉದ್ದೇಶಗಳನ್ನು ವಿವರಿಸುವರು;
- ಕರ್ನಾಟಕ ರಾಜ್ಯ ಬೋರ್ಡ್‌ನ ಪಠ್ಯಕ್ರಮದ ಗುರಿ ಮತ್ತು ಉದ್ದೇಶಗಳನ್ನು ವಿವರಿಸುವರು;
- ಕರ್ನಾಟಕ ರಾಜ್ಯ ಬೋರ್ಡ್‌ನ ಸಮಾಜ ವಿಜ್ಞಾನದ ಪಠ್ಯಕ್ರಮದ ಸಂರಚನೆಯನ್ನು ವಿಶ್ಲೇಷಿಸುವರು;
- ಸಿಬಿಎಸ್‌ಇ ಸಮಾಜ ವಿಜ್ಞಾನ ಪಠ್ಯಕ್ರಮದ ಗುರಿ ಮತ್ತು ಉದ್ದೇಶಗಳನ್ನು ವಿವರಿಸುವರು; ಮತ್ತು
- ಸಿಬಿಎಸ್‌ಇನ ಸಮಾಜ ವಿಜ್ಞಾನ ಪಠ್ಯಕ್ರಮದ ಸಂರಚನೆಯನ್ನು ವಿವರಿಸುವರು.

### 3.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

ಕೋರ್ಸ್ ಒಂದರ ಪಠ್ಯವಿಷಯದಲ್ಲಿ ಬೋಧಿಸಿ ಮುಗಿಸಬೇಕಾದ ಎಲ್ಲ ಅಥವಾ ವಿಷಯವಸ್ತುವನ್ನು ಒಳಗೊಂಡಿರುವ ದಾಖಲೆಗೆ ಪಠ್ಯವಸ್ತು(ಸಿಲಬಸ್) ಎನ್ನುತ್ತಾರೆ. ನಿಶ್ಚಯಿಸಿದ ಗುರಿ ಸಾಧನೆಗೆಂದು ಒದಗಿಸಲಾಗುವ ಕಲಿಕಾ ಅನುಭಗಳ ಒಟ್ಟು ಮೊತ್ತವೇ ಪಠ್ಯಕ್ರಮ (ಕರಿಕ್ಯುಲಂ); ಪಠ್ಯಸೂಚಿ ಎಂಬುದರ ಇಂಗ್ಲಿಷ್ ಪದವಾದ ಸಿಲಬಸ್ ಎಂಬುದು ಗ್ರೀಕ್ ಭಾಷೆಯ ಪದವಾದರೆ, ಪಠ್ಯಕ್ರಮ ಎಂಬುದರ ಸಮಾನಾರ್ಥಕ ಇಂಗ್ಲಿಷ್ ಪದವಾದ **'ಕರಿಕ್ಯುಲಂ'** ಎಂಬುದು ಲ್ಯಾಟಿನ ಮೂಲದ ಪದವಾಗಿದೆ. ಪಠ್ಯವಸ್ತುವನ್ನು ಒಂದು ನಿರ್ದಿಷ್ಟ ವಿಷಯಕ್ಕೆ ಮಾಡಿದರೆ ಪಠ್ಯಕ್ರಮವನ್ನು ಸಾಮಾನ್ಯವಾಗಿ ಒಂದು ಕೋರ್ಸಿಗೆ ಮಾಡಲಾಗುತ್ತದೆ. ಪಠ್ಯವಸ್ತು ವಿವರಣಾತ್ಮಕವಾದರೆ (ಡಿಸ್‌ಕ್ರಿಪ್ಟಿವ್) ಪಠ್ಯಕ್ರಮ ವಿಧಾಯಕ (ಪ್ರಿಸ್‌ಕ್ರಿಪ್ಟಿವ್) ರೂಪದ್ದಾಗಿದೆ. ಪಠ್ಯವಸ್ತು ಕಿರಿದು, ಪಠ್ಯಕ್ರಮ ವ್ಯಾಪಕ. ಪಠ್ಯವಸ್ತುವನ್ನು ತಜ್ಞ ಸದಸ್ಯರಗಳನ್ನು ಒಳಗೊಂಡ ಬೋರ್ಡ್ ಸಿದ್ಧಪಡಿಸಿದರೆ ಆಡಳಿತಗಾರರು ವಿಶೇಷ ತಜ್ಞರೊಂದಿಗೆ ಸೇರಿ ಪಠ್ಯಕ್ರಮವನ್ನು ನಿರ್ಧರಿಸುತ್ತಾರೆ. ಪಠ್ಯವಸ್ತುವನ್ನು ಒಂದೆರಡು ವರ್ಷಗಳಿಗೆ ಒಮ್ಮೆ ತಯಾರಿಸಿದರೆ ಪಠ್ಯಕ್ರಮವನ್ನು ದೀರ್ಘಕಾಲಾವಧಿಗೆ ಸಿದ್ಧಪಡಿಸಲಾಗುತ್ತದೆ.

ಪಠ್ಯವಿಷಯ ಸಂಬಂಧಿ ಗುರಿಗಳನ್ನು ತಲುಪಲು ಬೋಧಿಸಿ ಮುಗಿಸಲೇಬೇಕಾದ ವಿಷಯ ಅಥವಾ ಘಟಕಗಳನ್ನು ಅಂತರ್ಗತಗೊಳಿಸಿಕೊಂಡಿರುವ ದಾಖಲೆಗೆ ಪಠ್ಯವಸ್ತು ಎನ್ನುತ್ತಾರೆ. ಇದು ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಒಂದು ಮಾರ್ಗದರ್ಶಿ. ಇದು ವಿಷಯದ ವ್ಯಾಪ್ತಿ ಏನು ಎಂದ ತಿಳಿಯಲು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ. ಉದ್ದೇಶಗಳು, ಸಾಮಾನ್ಯ ಸೂಚನೆಗಳು, ನಿಯೋಜಿತ ಕಾರ್ಯಗಳು ಪ್ರಾಯೋಜನೆಗಳು ಮತ್ತು ಮೂಲ್ಯಾಂಕನ ವಿವರಗಳು– ಇವೆಲ್ಲವನ್ನೂ ಪಠ್ಯಸೂಚಿ ಒಳಗೊಳ್ಳುತ್ತದೆ.

ನಾವೀಗ ಎರಡು ಏಜೆನ್ಸಿಗಳ ಸಮಾಜ ವಿಜ್ಞಾನದ ಪಠ್ಯಸೂಚಿಯನ್ನು ಅರ್ಥಮಾಡಿಕೊಳ್ಳೋಣ – ಕರ್ನಾಟಕ ರಾಜ್ಯ ಬೋರ್ಡ್(Karnataka State Board) ಮತ್ತು ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (Central Board of Secondary Education)

### 3.2.3.1. ಮಾಧ್ಯಮಿಕ ಹಂತದ ಕರ್ನಾಟಕ ಬೋರ್ಡ್‌ನ ಸಮಾಜ ವಿಜ್ಞಾನ ಪಾಠಸೂಚಿ

ದಿ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಆಂಡ್ ಟ್ರೈನಿಂಗ್ (ಎನ್‌ಸಿಇಆರ್‌ಟಿ) ಸಂಸ್ಥೆ ಸಮಾಜ ವಿಜ್ಞಾನಗಳ ಅಳವಡಿಕೆಯ ಅಗತ್ಯದ ಕುರಿತು ಹೀಗೆ ಸ್ಥೂಲ ವಿವರಣೆ ನೀಡಿದೆ– "ಕಲಿಕಾರ್ಥಿಯು ಸುಜ್ಞಾತ ಮತ್ತು ಜವಾಬ್ದಾರಿ ಪೌರನಾಗಿ ಬೆಳೆಯುವುದನ್ನು ಸುಗಮವಾಗಿಸಲು ಸಮಾಜ ವಿಜ್ಞಾನಗಳನ್ನು ಸಾಮಾನ್ಯ ಶಿಕ್ಷಣದ ಒಂದು ಅಂಗವಾಗಿ ಅಧ್ಯಯನ ಮಾಡುವುದು ಬಹಳ ಮುಖ್ಯ. ಇದು ಕಾಲ, ದೇಶಗಳಿಗೆ ಸಂಬಂಧಿಸಿದಂತೆ ಕಲಿಕಾರ್ಥಿಯು ತನ್ನ ದೂರದ ಮತ್ತು ಹತ್ತಿರದ ಭೌತಿಕ ಮತ್ತು ಸಾಮಾಜಿಕ ಪರಿಸರವನ್ನು ಅರ್ಥ ಮಾಡಿಕೊಳ್ಳುವಿಕೆಯನ್ನು ಬೆಳೆಸುವ ಗುರಿಯನ್ನು ಹೊಂದಿರಬೇಕು. ಅಲ್ಲದೆ, ಭಾರತದ ಮತ್ತು ವಿಶ್ವದ ವಿವಿಧ ಸಾಂಸ್ಕೃತಿಕ ಪರಂಪರೆಗಳ ಮೌಲ್ಯಗ್ರಹಿಕೆ ಮಾಡಿಸುವ ಗುರಿಯನ್ನು ಹೊಂದಿರಬೇಕು".

ಪೂರ್ವ ಸಿದ್ಧತಾ ರೂಪದ ಕೋರ್ಸ್‌ನ ಸಮಾಜ ವಿಜ್ಞಾನ ಪಠ್ಯಕ್ರಮವು ಕಾಲ, ದೇಶ ಸಾಮಾಜಿಕ ಸಾಮರಸ್ಯವನ್ನು ಮತ್ತು ಪ್ರಗತಿಯನ್ನು ಸ್ಥಾಪಿಸುವ ರಾಜನೈತಿಕ ಮತ್ತು ಆರ್ಥಿಕ ಸಂಕಲ್ಪದ ಸಂದರ್ಭದಲ್ಲಿ ಸಮುದಾಯ ಜೀವನದ ವಿಕಾಸವನ್ನು ಕುರಿತ ತಿಳುವಳಿಕೆಯನ್ನು ಕೊಡುವ ಮತ್ತು ತೀರ್ಮಾನಿಸುವಿಕೆಯಲ್ಲಿ ತರ್ಕಾಧಾರಿತ ಚಿಂತನೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಸಮುದಾಯದೊಂದಿಗಿನ ಮತ್ತು ಪರಿಸರದೊಂದಿಗಿನ ಸಮತೋಲನದ ಅನ್ಯೋನ್ಯ ಕ್ರಿಯೆಯ ಮುಖಾಂತರ ರಾಷ್ಟ್ರೀಯ ಮತ್ತು ಜಾಗತಿಕ ಕ್ಷೇಮಕ್ಕೋಸ್ಕರ ಇದನ್ನು ಕೈಗೊಳ್ಳಲಾಗುತ್ತದೆ.

ಸಮಾಜ ವಿಜ್ಞಾನವು ಈ ಕೆಳಗಿನ ಸಾಮಾನ್ಯ ಗುರಿಗಳು ಮತ್ತು ಉದ್ದೇಶಗಳನ್ನು ಸಾಧಿಸುವ ಲಕ್ಷ್ಯವನ್ನಿಟ್ಟುಕೊಳ್ಳಬೇಕು.

1. ವಿದ್ಯಾರ್ಥಿಗಳು ತಮ್ಮ ಸಾಮಾಜಿಕ ಮತು ಸಾಂಸ್ಕೃತಿಕ ಪರಿಸರವನ್ನು ವ್ಯವಸ್ಥಿತವಾಗಿ ಅನ್ವೇಷಿಸಿ ಅವಲೋಕಿಸುವಂತೆ ಅವರನ್ನು ಪ್ರೋತ್ಸಾಹಿಸುವ ಗುರಿಯನ್ನಿಟ್ಟುಕೊಳ್ಳಬೇಕು.
2. ವಿದ್ಯಾರ್ಥಿಗಳಿಗೆ ಅವರ ಸುತ್ತ ಇರುವ ಸಮುದಾಯದ ವಿಕಾಸವನ್ನು ಅರಿತುಕೊಳ್ಳಲು ಇದು ನೆರವಾಗಬೇಕು.
3. ವಿದ್ಯಾರ್ಥಿಗಳು ಅವರು ಜೀವಿಸುತ್ತಿರುವ ಪರಿಸರದಲ್ಲಿ ಕಾಣಬರುವ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದ ವಾಸ್ತವಾಂಶಗಳನ್ನು ಹುಡುಕಿ ಸಂಗ್ರಹಿಸುವ ಕ್ರಿಯೆಯಲ್ಲಿ ಇದು ತೊಡಗಿಸಬೇಕು. ಪಠ್ಯವಸ್ತುವು ಅವರ ದೈನಂದಿನ ಜೀವನದಲ್ಲಿ ಎದುರಾಗುವ ವಿಭಿನ್ನ ವಾಸ್ತವ ಸಂಗತಿಯ ಬಗ್ಗೆ ವಸ್ತುನಿಷ್ಠ ತೀರ್ಮಾನ ತೆಗೆದುಕೊಳ್ಳಲು ಒಂದು ಆಧಾರದಂತಿರಬೇಕು.
4. ಯುವ ವಿದ್ಯಾರ್ಥಿಗಳಿಗೆ ಅವರ ಕಲಿಕಾ ಪ್ರಕ್ರಿಯೆಯ ಭಾಗವಾಗಿ ಸಮೂಹ ಕಾರ್ಯಕ್ಕೆ ಅನೇಕ ಅವಕಾಶಗಳನ್ನು ಒದಗಿಸುವ ಗುರಿಯನ್ನು ಪಠ್ಯವಸ್ತುವು ಹೊಂದಿರಬೇಕು. ಅವರ ಸಮಸ್ಯೆಗಳನ್ನು ಚರ್ಚಿಸಿ ಒಟ್ಟುಗೂಡಿ ಪರಿಹರಿಸುವಿಕೆ, ವಿವಿಧ ಪ್ರಾಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಇತ್ಯಾದಿ ಚಟುವಟಿಕೆಗಳು ಅವರಲ್ಲಿ ಸಹಕಾರ, ಶಿಸ್ತು ಮತ್ತು ಸ್ವನಿಯಂತ್ರಣಗಳನ್ನು ಅಭ್ಯಾಸ ಮಾಡಿಸುವಂತಿರಬೇಕು.

5. ಇದು ಸತ್ಯ ಮತ್ತು ಸಾಮಾಜಿಕ ನ್ಯಾಯದಲ್ಲಿ ತೀವ್ರಾಸಕ್ತಿ ಬೆಳೆಸುವ ಗುರಿ ಹೊಂದಿರಬೇಕು. ವಿದ್ಯಾರ್ಥಿಗಳು ಪ್ರತಿಯೊಬ್ಬ ವ್ಯಕ್ತಿ, ಅವನ ಅಭಿಪ್ರಾಯಗಳು, ಮೌಲ್ಯ ಮತ್ತು ಕೊಡುಗೆಗಳಿಗೆ ಗೌರವವನ್ನು ಬೆಳೆಸಬೇಕು.
6. ಪಠ್ಯವಸ್ತುವು ಮಕ್ಕಳಲ್ಲಿ ಪ್ರಜಾಸತ್ತಾತ್ಮಕ ಸಮಾಜದಲ್ಲಿ ಅವರ ಹಕ್ಕುಬಾಧ್ಯತೆಗಳ ಬಗ್ಗೆ ಜಾಗೃತಿ ಮೂಡಿಸಿ, ಜವಾಬ್ದಾರಿಗಳನ್ನು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಬೇಕು.
7. ಪಠ್ಯವಸ್ತುವು ಅಂತರ್‌ಸಮೂಹ ಮತ್ತು ಅಂತರ್‌ಕೋಮುಗಳ ನಡುವೆ ಒಮ್ಮನಸ್ಸು ಮತ್ತು ಸಾಮರಸ್ಯದ ಮನೋಭಾವವನ್ನು ಬೆಳೆಸಬೇಕು. ನಮ್ಮ ಸಂಸ್ಕೃತಿಯ ಏಕತೆಯ ಮೌಲ್ಯಗ್ರಹಣ ಇದರಲ್ಲಿ ಒಳಗೊಳ್ಳಬೇಕು.
8. ಪ್ರತಿಯೊಂದು ಮಗುವಿನಲ್ಲಿಯೂ ನಿಜವಾದ ದೇಶಪ್ರೇಮದ ಮನೋಭಾವವನ್ನು ಇದು ಪೋಷಿಸಬೇಕು.
9. ಇಂದಿನ ನಾಗರೀಕತೆಯ ಪ್ರಗತಿಗೆ ನೆರವಾಗಿರುವ ವಿವಿಧ ಸಂಸ್ಕೃತಿಗಳ, ಗುಂಪುಗಳ ಕೊಡುಗೆಯ ಮೌಲ್ಯಗ್ರಹಣವನ್ನು ಮಾಡುವತ್ತ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವಂತಿರಬೇಕು.

**ಕರ್ನಾಟಕ ರಾಜ್ಯ ಬೋರ್ಡ್‌ನ ಮಾಧ್ಯಮಿಕ ಹಂತದ ಸಮಾಜ ವಿಜ್ಞಾನದ ಪಠ್ಯಸೂಚಿ**

**8ನೇ ತರಗತಿ**

**1. ಇತಿಹಾಸ**

1. ಮೂಲಾಧಾರಗಳು 2. ಭೌಗೋಳಿಕ ಗುಣಲಕ್ಷಣಗಳು ಮತ್ತು ಇತಿಹಾಸ–ಪೂರ್ವ ಭಾರತ 3. ಭಾರತದ ಪುರಾತನ ಸಂಸ್ಕೃತಿಗಳು 4. ವಿಶ್ವದ ಪುರಾತನ ಸಂಸ್ಕೃತಿಗಳು 5. ಗ್ರೀಕ್, ರೋಮನ್ ಮತ್ತು ಅಮೆರಿಕನ್ ಸಂಸ್ಕೃತಿಗಳು 6. ಹೊಸ ಧರ್ಮಗಳ ಉಗಮ 7.ಮೌರ್ಯರು ಮತ್ತು ಕುಶಾನರು 8 ಗುಪ್ತರು ಮತ್ತು ವರ್ಧನರು 9. ದಕ್ಷಿಣ ಭಾರತ–ಶಾತವಾಹನರು, ಕದಂಬರು ಮತ್ತು ಗಂಗರು 10. ಬಾದಾಮಿಯ ಚಾಲುಕ್ಯರು ಮತ್ತು ಕಂಚಿಯ ಪಲ್ಲವರು 11. ಮಾನ್ಯಖೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರು 12. ತಂಜಾವೂರಿನ ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು.

**2. ರಾಜ್ಯಶಾಸ್ತ್ರ**

1. ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಧಾನ್ಯತೆ 2. ಪೌರ ಮತ್ತು ಪೌರತ್ವ 3. ಪ್ರಜಾಪ್ರಭುತ್ವ 4. ಸ್ಥಳೀಯ ಸ್ವಯಂ ಆಡಳಿತ

**3. ಸಮಾಜ ಶಾಸ್ತ್ರ**

1. ಮಾನವ ಮತ್ತು ಸಮಾಜ 2. ಮಾನವ ಮತ್ತು ಸಂಸ್ಕೃತಿ 3. ದಿನನಿತ್ಯದ ಜೀವನದಲ್ಲಿ ಸಮಾಜಶಾಸ್ತ್ರ 4. ಸಮಾಜದ ವಿಧಗಳು

**4. ಭೂಗೋಳ ವಿಜ್ಞಾನ**

1. ಭೂಮಿ–ನಾವು ಜೀವಿಸುತ್ತಿರುವ ಗ್ರಹ 2. ಭೂವಲಯ 3.ವಾತಾವರಣ 4. ಜಲಗೋಳ 5. ಜೀವಗೋಳ

**5. ಅರ್ಥಶಾಸ್ತ್ರ:**

1. ಅರ್ಥಶಾಸ್ತ್ರದ ಅರ್ಥ ಮತ್ತು ಪ್ರಾಧಾನ್ಯತೆ 2. ಪ್ರಾಕೃತಿಕ ಸಂಪನ್ಮೂಲಗಳು 3. ಮಾನವ ಸಂಪನ್ಮೂಲಗಳು 4. ಬಡತನ ಮತ್ತು ಹಸಿವು

6. **ವಾಣಿಜ್ಯ ಶಾಸ್ತ್ರ:**

1. ವಾಣಿಜ್ಯದ ವಿಕಾಸ ಮತ್ತು ಬೆಳವಣಿಗೆ 2) ವ್ಯಾಪಾರ ಮತ್ತು ಪ್ರಾಧಾನ್ಯತೆ 3. ವಿವಿಧ ರೂಪಗಳ ವ್ಯಾಪಾರ ಸಂಸ್ಥೆಗಳ ಉದಯ 4. ದೊಡ್ಡ ಪ್ರಮಾಣದ ವ್ಯಾಪಾರ ಸಂಸ್ಥೆಗಳು

**9 ನೇ ತರಗತಿ.**

1. ಕ್ರೈಸ್ತಧರ್ಮ ಮತ್ತು ಇಸ್ಲಾಂ ಧರ್ಮ 2. ಮಧ್ಯಯುಗದ ಯುರೋಪು 3. ಕ್ರಿ.ಶ.9 ರಿಂದ 14ನೇ ಶತಮಾನದ ಭಾರತ 4. ಭಾರತದ ಧಾರ್ಮಿಕ ಸುಧಾರಕರು 5. ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯ 6. ಮೊಘಲರು ಮತ್ತು ಮರಾಠರು 7. ಭಕ್ತಿಪಂಥ 8. ಆಧುನಿಕ ಯುರೋಪು 9. ರಾಷ್ಟ್ರರಾಜ್ಯ (ನೇಷನ್ ಸ್ಟೇಟ್)

**ರಾಜ್ಯಶಾಸ್ತ್ರ**

1. ನಮ್ಮ ಸಂವಿಧಾನ 2. ಕೇಂದ್ರಸರ್ಕಾರ 3. ರಾಜ್ಯಸರ್ಕಾರ 4. ರಾಷ್ಟ್ರದ ರಕ್ಷಣೆ 5. ರಾಷ್ಟ್ರೀಯ ಏಕತೆ

**ಸಮಾಜ ಶಾಸ್ತ್ರ**

1. ಕುಟುಂಬ 2. ಸಾಮಾಜೀಕರಣ ಮತ್ತು ಕುಟುಂಬ ಸಂಬಂಧ 3. ನಗರಗಳು ಮತ್ತು ಇತರ ಸಮುದಾಯಗಳು

**ಭೂಗೋಳ ಶಾಸ್ತ್ರ** 1. ನಮ್ಮ ರಾಜ್ಯ– ಕರ್ನಾಟಕ 2. ಪ್ರಕೃತಿ ಭೂಗೋಳೀಯ ವಿಭಾಗಗಳು 3. ಕರ್ನಾಟಕದ ಹವಾಮಾನ, ಮಣ್ಣು, ಪ್ರಾಕೃತಿಕ ಸಸ್ಯವರ್ಗ ಮತ್ತು ಪ್ರಾಣಿಗಳು 4. ಕರ್ನಾಟಕದ ಜಲ ಸಂಪನ್ಮೂಲಗಳು 5. ಕರ್ನಾಟಕದ ಭೂಸಂಪನ್ಮೂಲಗಳು 6. ಕರ್ನಾಟಕದ ಖನಿಜ ಸಂಪನ್ಮೂಲಗಳು

**ಅರ್ಥಶಾಸ್ತ್ರ**

1. ಸಾರಿಗೆ 2. ಕರ್ನಾಟಕದ ಉದ್ಯಮಗಳು 3. ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು 4. ಕರ್ನಾಟಕದ ಜನಸಂಖ್ಯೆ 5. ಕನಾಟಕದ ಆರ್ಥಿಕ ಸಂರಚನೆ 6. ಭಾರತೀಯ ಅರ್ಥವ್ಯವಸ್ಥೆಯ ವಲಯಗಳು

**ವಾಣಿಜ್ಯ ಅಧ್ಯಯನ**

1. ವ್ಯಾಪಾರ ನಿರ್ವಹಣೆ 2. ಹಣಕಾಸು ನಿರ್ವಹಣೆ 3. ವ್ಯಾಪರೋದ್ಯಮ ನಿರ್ವಹಣೆ 4. ವ್ಯಾಪಾರದಲ್ಲಿ ಕರಣಿಕ ಶಾಸ್ತ್ರ (ಅಕೌಂಟಿಂಗ್)

**10ನೇ ತರಗತಿ**

**ಇತಿಹಾಸ:** 1. ಭಾರತದಲ್ಲಿ ಐರೋಪ್ಯರ ಆಗಮನ 2. ವಸಾಹತುಶಾಹಿ ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು 3. ಜನಪದ ಇತಿಹಾಸ 4. ಆಂಗ್ಲ ಆಳ್ವಿಕೆಯ ಸ್ಥಾಪನೆ ಮತ್ತು ಅದರ ಪರಿಣಾಮಗಳು 5. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು 6. ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ (ಕ್ರಿ.ಶ. 1857) 7. ಭಾರತದಲ್ಲಿ ಆಂಗ್ಲರ ಆಳ್ವಿಕೆಯ ಪರಿಣಾಮಗಳು 8. ಸ್ವಾತಂತ್ರ್ಯಾ ನಂತರದ ಭಾರತ 9. 20 ನೇ ಶತಮಾನದ ರಾಜನೈತಿಕ ಆಯಾಮ

**ರಾಜ್ಯಶಾಸ್ತ್ರ:** 1. ಭಾರತದ ಸಮಸ್ಯೆಗಳು ಮತ್ತು ಪರಿಹಾರಗಳು 2. ಭಾರತದ ವಿದೇಶಾಂಗ ನೀತಿ 3. ಇತರ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ 4. ವಿಶ್ವದ ಸಮಸ್ಯೆಗಳು ಮತ್ತು ಭಾರತದ ಪಾತ್ರ 5. ವಿಶ್ವಮಟ್ಟದ ಸಂಸ್ಥೆಗಳು

**ಸಮಾಜ ಶಾಸ್ತ್ರ:** 1. ಸಾಮಾಜಿಕ ಸ್ತರೀಕರಣ 2. ಕೆಲಸ ಮತ್ತು ಆರ್ಥಿಕ ಜೀವನ 3. ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆ 4. ಸಾಮಾಜಿಕ ಸಮಸ್ಯೆಗಳು

**ಭೂಗೋಳ ಶಾಸ್ತ್ರ:** 1. ಭಾರತ – ನಮ್ಮ ಮಾತೃಭೂಮಿ 2. ಭಾರತದ ಭೌತಿಕ ಲಕ್ಷಣಗಳು 3. ಭಾರತದ ಮಳೆ ಮಾರುತ (ಮಾನ್ಸೂನ್) ಋತುಮಾನಗಳು ಮತ್ತು ಅವುಗಳ ಲಕ್ಷಣಗಳು 4. ಭಾರತದ ಮಣ್ಣು ವಿಧಗಳು 5. ಭಾರತದ ಅರಣ್ಯಗಳು 6. ಜಲ ಸಂಪನ್ಮೂಲಗಳು 7. ಭೂಮಿಯ ಬಳಕೆ ಮತ್ತು ಕೃಷಿ 8. ಖನಿಜ ಮತ್ತು ಶಕ್ತಿ

ಸಂಪನ್ಮೂಲಗಳು 9. ಭಾರತದಲ್ಲಿ ಸಾರಿಗೆ ವ್ಯವಸ್ಥೆ 10 ಭಾರತದ ಪ್ರಮುಖ ಉದ್ಯಮಗಳು 11 ಸಂಪರ್ಕ 12. ಪ್ರಕೃತಿ ವಿಕೋಪಗಳು 13. ಭಾರತದ ಜನಸಂಖ್ಯೆ

**ಅರ್ಥಶಾಸ್ತ್ರ:** 1. ವಿಕಾಸ 2. ಅರ್ಥವ್ಯವಸ್ಥೆ ಮತ್ತು ಸರ್ಕಾರ 3. ಗ್ರಾಮೀಣ ಅರ್ಥವ್ಯವಸ್ಥೆಯ ವಿಕಾಸ 4. ಸಾರ್ವಜನಿಕ ಹಣಕಾಸು ಮತ್ತು ಬಜೆಟ್

**ವ್ಯಾಪಾರೋದ್ಯಮ ಅಧ್ಯಯನ:** 1. ಬ್ಯಾಂಕ್‌ನ ವ್ಯವಹಾರಗಳು 2. ವಿಮೆ 3. ಉದ್ಯಮಶೀಲತೆ 4. ವ್ಯಾಪಾರದಲ್ಲಿ ಜಾಗತೀಕರಣ

**ಹೆಚ್ಚುವರಿ ವಿಷಯಗಳು:** 1. ಸಂಸ್ಕೃತಿ ಮತ್ತು ಸಮಾಜ 2. ಪ್ರಜಾಪ್ರಭುತ್ವ 3. ಕೇಂದ್ರಸರ್ಕಾರ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಪಠ್ಯಸೂಚಿ ಮತ್ತು ಪಠ್ಯಕ್ರಮ –ಇವೆರಡರ ವ್ಯತ್ಯಾಸವನ್ನು ತಿಳಿಸಿ.
2. ಕರ್ನಾಟಕ ರಾಜ್ಯದ 8,9 ಮತ್ತು 10 ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಸೂಚಿಯ ವಿಷಯವಸ್ತುವನ್ನು ಸಾರಾಂಶೀಕರಿಸಿ.

**3.2.3.2. ಮಾಧ್ಯಮಿಕ ಹಂತದ ಸಿಬಿಎಸ್‌ಇ ಸಮಾಜ ವಿಜ್ಞಾನ ಪಠ್ಯವಸ್ತು**

ಸಮಾಜ ವಿಜ್ಞಾನವು ಶಾಲಾಶಿಕ್ಷಣದ ಮಾಧ್ಯಮಿಕ ಹಂತದವರೆಗೂ ಕಡ್ಡಾಯವಾದ ಪಠ್ಯವಿಷಯವಾಗಿದೆ. ಇದು ಸಾಮಾನ್ಯ ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ. ಕಾರಣ, ಪರಿಸರವನ್ನು ಸಮಗ್ರವಾಗಿ ಅರಿತುಕೊಳ್ಳಲು ಮತ್ತು ವಿಶಾಲ ಪರಿಪ್ರೇಕ್ಷ್ಯವನ್ನು ಹಾಗೂ ಇಂದ್ರಿಯಾನುಭವ ಆಧಾರಿತ, ತರ್ಕಾಧಾರಿತ ಮತ್ತು ಮಾನವಹಿತ ನಿಷ್ಠೆಯ ಮನೋದೃಷ್ಟಿಯನ್ನು ಬೆಳೆಸಿಕೊಳ್ಳಲು ಇದು ಕಲಿಕಾರ್ಥಿಗಳಿಗೆ ನೆರವಾಗುತ್ತದೆ. ಈ ಸಂಗತಿ ಬಹಳ ನಿರ್ಣಾಯಕ ಮಹತ್ವವುಳ್ಳದ್ದಾಗಿದೆ. ಏಕೆಂದರೆ, ಇದು ಅವರು ಬಹುಶ್ರುತ ಮತ್ತು ಜವಾಬ್ದಾರಿಯುತ ಪೌರರಾಗಿ ಬೆಳೆಯಲು ಮತ್ತು ಪ್ರಗತಿಯ ಪ್ರಕ್ರಿಯೆಯಲ್ಲಿ, ರಾಷ್ಟ್ರ ನಿರ್ಮಾಣದಲ್ಲೂ ಭಾಗವಹಿಸಿ ಪರಿಣಾಮಕಾರಿ ಕೊಡುಗೆ ನೀಡಲು ಸಮರ್ಥರನ್ನಾಗಿಸಬಲ್ಲ ಅಗತ್ಯ ಗುಣಗಳನ್ನು, ಕೌಶಲ್ಯಗಳನ್ನು ಹೊಂದಲು ಸಹಾಯ ಮಾಡುತ್ತದೆ.

**ಉದ್ದೇಶಗಳು**

ಪಠ್ಯಸೂಚಿಯ ಪ್ರಮುಖ ಉದ್ದೇಶಗಳು ಹೀಗಿವೆ:

- ಕಾಲದೇಶಗಳ ಪರಿಭಾಷೆಯಲ್ಲಿ ಮಾನವ ಸಮಾಜಗಳ ವಿಕಸನಗೊಳ್ಳುತ್ತಾ ಹೋಗಿರುವ ಬದಲಾವಣೆ ಮತ್ತು ಬೆಳವಣಿಗೆಯ ಪ್ರಕ್ರಿಯೆಗಳ ತಿಳುವಳಿಕೆಯನ್ನು ಮೂಡಿಸುವುದು
- ಬದಲಾವಣೆಯ ಪ್ರಕ್ರಿಯೆ ನಿರಂತರವೆಂದೂ ಯಾವುದೇ ವಿದ್ಯಮಾನ ಅಥವಾ ಘಟನೆ ಅಥವಾ ಸಂಗತಿಯನ್ನು ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲವೆಂದೂ, ಅದನ್ನು ಕಾಲದೇಶಗಳ ಸಂದರ್ಭದಲ್ಲಿ ನೋಡಬೇಕೆಂದೂ ಕಲಿಕಾರ್ಥಿಗಳು ತಿಳಿದುಕೊಳ್ಳುವಂತೆ ಮಾಡುವುದು
- ಐತಿಹಾಸಿಕ ಪರಿಪ್ರೇಕ್ಷ್ಯದೊಂದಿಗೆ ಸಮಕಾಲೀನ ಭಾರತ, ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯ ವಿಕಾಸದ ಗುರಿಗಳು ಮತ್ತು ರಾಜ್ಯನೀತಿಗಳ ಮೂಲಭೂತ ಚೌಕಟ್ಟು ಮತ್ತು ವಿಶ್ವದ ವಿಕಾಸಕ್ಕೆ ಸಮರ್ಪಕ ಸಂಬಂಧವುಳ್ಳ ಬದಲಾವಣೆಯ ಪ್ರಕ್ರಿಯೆ– ಇವೆಲ್ಲದರ ಅರಿವನ್ನು ಮೂಡಿಸುವುದು
- ಭಾರತದ ಸ್ವಾತಂತ್ರ್ಯ ಸಂಗ್ರಾಮ, ಇದು ಪ್ರತಿನಿಧಿಸಿದ ಮೌಲ್ಯಗಳು ಮತ್ತು ಆದರ್ಶಗಳ ಬಗೆಗಿನ ಜ್ಞಾನ ಮತ್ತು ತಿಳುವಳಿಕೆಯನ್ನು ಗಾಢವಾಗಿಸುವುದು, ದೇಶದ ಎಲ್ಲ ವರ್ಗ ಮತ್ತು ಪ್ರದೇಶಗಳಿಗೆ ಸೇರಿದ ವ್ಯಕ್ತಿಗಳು ಕೊಟ್ಟ ಕೊಡುಗೆಗಳ ಮೌಲ್ಯಗ್ರಹಣ ಶಕ್ತಿಯನ್ನು ಬೆಳೆಸುವುದು.
- ಭಾರತೀಯ ಸಂವಿಧಾನದಲ್ಲಿ ಪ್ರತಿಷ್ಠಾಪಿತವಾಗಿರುವ ಮೌಲ್ಯಗಳನ್ನು ಅರ್ಥ ಮಾಡಿಕೊಂಡು ಮಾನ್ಯತೆ ಕೊಡುವಲ್ಲಿ ಕಲಿಕಾರ್ಥಿಗಳಿಗೆ ನೆರವಾಗುವುದು ಮತ್ತು ಪ್ರಜಾಸತ್ತಾತ್ಮಕ ಸಮಾಜದ ಪ್ರಭಾವಿ ಪೌರರಾಗಿ ಅವರ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅವರನ್ನು ಸಜ್ಜುಗೊಳಿಸುವುದು.

- ನಮ್ಮ ದೇಶದ ನೆಲದಲ್ಲಿ ಜನರಲ್ಲಿರುವ ವೈವಿಧ್ಯತೆಯ ಮತ್ತು ಅದರ ಹಿಂದಿರುವ ಏಕತೆಯ ಅರ್ಥ ಮಾಡಿಕೊಂಡು ಮೌಲ್ಯಗ್ರಹಣೆ ಮಾಡುವಲ್ಲಿ ಕಲಿಕಾರ್ಥಿಗೆ ನೆರವಾಗುವುದು
- ಭಾರತದ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಶೀಮಂತಿಕೆ ಮತ್ತು ವೈವಿಧ್ಯತೆಗಳ ಮೌಲ್ಯಗ್ರಹಣೆ ಮಾಡುವುದಕ್ಕೆ ಮತ್ತು ಅದನ್ನು ರಕ್ಷಿಸುವುದಕ್ಕೆ ಕಲಿಕಾರ್ಥಿಗಳಿಗೆ ನೆರವಾಗುವುದು.
- ಸಮಕಾಲೀನ ಭಾರತದ ರಾಜನೈತಿಕ, ಪರಿಸರಾತ್ಮಕ, ಆರ್ಥಿಕ ಮತ್ತು ಸಾಮಾಜಿಕ ವಿವದಾಂಶಗಳನ್ನು ಮತ್ತು ಸವಾಲುಗಳನ್ನು ವಿಕಾಸದ ಪ್ರಕ್ರಿಯೆಯ ಭಾಗವಾಗಿ ಅರ್ಥ ಮಾಡಿಕೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು
- ವ್ಯಕ್ತಿಗಳಾಗಿ ಮತ್ತು ಸಮೂಹಗಳಾಗಿ ಸಮಕಾಲೀನ ಸಮಾಜದ ಸವಾಲುಗಳನ್ನು ಎದುರಿಸಲು ಬೇಕಾದ ಜ್ಞಾನ, ಕೌಶಲ್ಯಗಳು ಮತ್ತು ಅರಿವನ್ನು ಸಂಪಾದಿಸಲು ವಿದ್ಯಾರ್ಥಿಗಳಿಗೆ ನೆರವಾಗುವುದು, ಆತ್ಮ ವಿಶ್ವಾಸದ ಮತ್ತು ಆತಂಕ ಮುಕ್ತ ಜೀವನವನ್ನು ಸಾಗಿಸುವ ಕಲೆಯನ್ನು ಕಲಿಯಲು ಸಮುದಾಯದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ನೆರವಾಗುವುದು.
- ಅನ್ವೇಷಣಾತ್ಮಕ ಮನೋಭಾವವನ್ನು ಪ್ರೋತ್ಸಾಹಿಸುವುದರ ಮೂಲಕ, ದತ್ತಾಂಶ ಮತ್ತು ಮಾಹಿತಿಯನ್ನು , ಅಭಿಪ್ರಾಯಗಳನ್ನು, ವ್ಯಾಖ್ಯಾನಗಳನ್ನು ವಿಶ್ಲೇಷಿಸಿ ಮೌಲ್ಯಮಾಪನ ಮಾಡುವಲ್ಲಿ ತರ್ಕಾಧಾರಿತ ಮತ್ತು ವಸ್ತುನಿಷ್ಠ ಉಪಕ್ರಮವನ್ನು ಅನುಸರಿಸುವಂತೆ ಮಾಡುವ ಮೂಲಕ ವೈಜ್ಞಾನಿಕ ಮನೋದೃಷ್ಟಿಯನ್ನು ಬೆಳೆಸುವುದು.
- ವಿಮರ್ಶಾತ್ಮಕ ಚಿಂತನೆ, ದೃಶ್ಯ ಮತ್ತು ಮೌಖಿಕ ರೂಪಗಳಲ್ಲಿ ಪರಿಣಾಮಕಾರಿಯಾಗಿ ಸಂವಹನ ಮಾಡುವುದು, ಇತರರೊಂದಿಗೆ ಸಹಕರಿಸುವುದು, ಮತ್ತೊಬ್ಬರ ಸಮಸ್ಯೆಗಳನ್ನು ನಿವಾರಿಸಲು ಮೊದಲ ಹೆಜ್ಜೆ ಇರಿಸಿ ನಾಯಕತ್ವ ವಹಿಸುವುದು ಇವೇ ಮುಂತಾದ ಶೈಕ್ಷಣಿಕ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವುದು.
- ವ್ಯಕ್ತಿಯನ್ನು ಮಾನವಹಿತ ನಿಷ್ಠನಾಗಿ ಮಾಡಬಲ್ಲ ಮತ್ತು ಸಾಮಾಜಿಕವಾಗಿ ಪ್ರಭಾವಪೂರ್ಣನನ್ನಾಗಿ ಮಾಡಲಬಲ್ಲ ವೈಯಕ್ತಿಕ, ಸಾಮಾಜಿಕ, ನೈತಿಕ, ರಾಷ್ಟ್ರೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಸುತ್ತಲಿರುವ ಗುಣಗಳನ್ನು ಬೆಳೆಸುವುದು.

**9ನೇ ತರಗತಿ**
**ಸಮಾಜ ವಿಜ್ಞಾನ ಪಠ್ಯಸೂಚಿ/ಕೋರ್ಸ್ ಸಂರಚನೆ**
**ಸೈದ್ಧಾಂತಿಕ ವಿಷಯ (ಥಿಯರಿ ಪೇಪರ್)**

**9ನೇ ತರಗತಿ (2020–21)**

I. ಭಾರತ ಮತ್ತು ಸಮಕಾಲೀನ ಜಗತ್ತು II. ಸಮಕಾಲೀನ ಭಾರತ III. ಪ್ರಜಾಸತ್ತಾತ್ಮಕ ರಾಜನೀತಿ IV. ಅರ್ಥಶಾಸ್ತ್ರ

**ಕೋರ್ಸಿನ ವಿಷಯವಸ್ತು**

| ವಿಷಯಗಳು | ಕಲಿಕೆಯ ಉದ್ದೇಶಗಳು |
|---|---|
| ಘಟಕ 1: ಭಾರತ ಮತ್ತು ಸಮಕಾಲೀನ ವಿಶ್ವ– 1 | |
| ಭಾಗ 1: ವಿದ್ಯಮಾನಗಳು ಮತ್ತು ಪ್ರಕ್ರಿಯೆಗಳು (ಎಲ್ಲ ಮೂರು ವಿಷಯಗಳು ಕಡ್ಡಾಯ) | ಈ ಘಟಕದ ಪ್ರತಿಯೊಂದು ವಿಷಯದಲ್ಲಿಯೂ ವಿದ್ಯಾರ್ಥಿಗಳು ಪ್ರತ್ಯೇಕ ವಿಚಾರ ಧಾರೆಗಳು, ಭಾಷಣಗಳ ಉದ್ಧೃತ ಭಾಗಗಳು, ರಾಜಕೀಯ ಘೋಷಣೆಗಳು ಹಾಗು ವ್ಯಂಗ್ಯಚಿತ್ರ, ಪಡಿಯಚ್ಚು ಕೆತ್ತನೆ, ಪೋಸ್ಟರುಗಳ ರಾಜಕೀಯ– ಇವುಗಳೊಂದಿಗೆ ವಿದ್ಯಾರ್ಥಿಗಳು ಪರಿಚಿತರಾಗುತ್ತಾರೆ. ಇಂತಹ ವಿವಿಧ ಐತಿಹಾಸಿಕ ಸಾಕ್ಷ್ಯಾಧಾರಗಳನ್ನು ಅರ್ಥೈಸುವುದು ಹೇಗೆ ಎಂಬುದನ್ನು ವಿದ್ಯಾರ್ಥಿಗಳು ಕಲಿಯುತ್ತಾರೆ. |

| | |
|---|---|
| 2: ಫ್ರೆಂಚ್‌ಕ್ರಾಂತಿ<br>– ಫ್ರಾನ್ಸ್‌ನ ಸಮಾಜ– ಹದಿನೆಂಟನೆ ಶತಮಾನದ ಅಂತ್ಯಭಾಗದಲ್ಲಿ ಕ್ರಾಂತಿಯ ಸ್ಫೋಟ<br>– ಫ್ರಾನ್ಸ್‌ನಲ್ಲಿ ಏಕಚಕ್ರಾಧಿಪತ್ಯದ ರದ್ದತಿ ಮತ್ತು ಗಣರಾಜ್ಯ ಸ್ಥಾಪನೆ<br>– ಮಹಿಳೆಯರಿಗೆ ಸಂಬಂಧಿಸಿದೆ ಕ್ರಾಂತಿಯೂ ಸಂಭವಿಸಿತೇ?<br>– ಜೀತ ಪದ್ಧತಿಯ ರದ್ದತಿ<br>– ಕ್ರಾಂತಿ ಮತ್ತು ದೈನಂದಿನ ಜೀವನ | ಇದರಲ್ಲಿ ಭಾಗಿಯಾಗಿದ್ದ ವ್ಯಕ್ತಿಗಳ ಹೆಸರುಗಳು, ಕ್ರಾಂತಿಗೆ ಸ್ಫೂರ್ತಿನೀಡಿದ ವಿಭಿನ್ನ ರೀತಿಯ ವಿಚಾರಧಾರೆಗಳು, ಇದನ್ನು ರೂಪಿಸಿದ ವ್ಯಾಪಕವಾದ ಶಕ್ತಿಗಳು– ಇವುಗಳ ಪರಿಚಯ.<br>ಕ್ರಾಂತಿಯ ಇತಿಹಾಸವನ್ನು ತಿಳಿಯಲು ಲಿಖಿತ ಮೌಖಿಕ ಮತ್ತು ದೃಶ್ಯ ಸಾಮಗ್ರಿಗಳ ಬಳಕೆಯ ಬಗ್ಗೆ ಅರಿಯುವುದು. |
| 2 ಯುರೋಪು ಮತ್ತು ರಷ್ಯಾ ಕ್ರಾಂತಿಗಳಲ್ಲಿ ಸಮಾಜವಾದ<br>– ಸಾಮಾಜಿಕ ಬದಲಾವಣೆಯ ಯುಗ<br>– ರಷ್ಯಾಕ್ರಾಂತಿ<br>– ಪೆಟ್ರೊಗ್ರಾಡ್ ಫೆಬ್ರವರಿ ಕ್ರಾಂತಿ<br>– ಅಕ್ಟೋಬರ್ ಬಳಿಕ ಏನು ಬದಲಾವಣೆಯಾಯಿತು?<br>– ರಷ್ಯಾ ಕ್ರಾಂತಿಯ ಜಾಗತಿಕ ಪರಿಣಾಮ ಮತ್ತು ಯುಎಸ್‌ಎಸ್‌ಆರ್ | ರಷ್ಯಾಕ್ರಾಂತಿಯ ಅಧ್ಯಯನದ ಮೂಲಕ ಸಮಾಜವಾದದ ಇತಿಹಾಸವನ್ನು ಅನ್ವೇಷಿಸುವರು.<br>–ಕ್ರಾಂತಿಗೆ ಸ್ಫೂರ್ತಿ ಒದಗಿಸಿದ ವಿವಿಧ ತೆರನ ವಿಚಾರಗಳ ಪರಿಚಯ. |
| 3 ನಾಜ಼ೀವಾದ ಮತ್ತು ಹಿಟ್ಲರನ ಉಗಮ<br>– ವೀಮರ್ ರಿಪಬ್ಲಿಕ್ ಉದಯ<br>– ಹಿಟ್ಲರ್ ಅಧಿಕಾರಕ್ಕೆ ಏರುವಿಕೆ<br>– ನಾಜ಼ೀವಾದದ ಪ್ರಪಂಚದ ದೃಷ್ಟಿ<br>– ಸಾಮಾನ್ಯ ಜನ ಮತ್ತು ಮಾನವತೆಯ ಎದುರು ಅಪರಾಧ | ಆಧುನಿಕ ಪ್ರಪಂಚದ ರಾಜಕೀಯವನ್ನು ರೂಪಿಸುವುದರಲ್ಲಿ ನಿರ್ಣಾಯಕ ಮಹತ್ವದ ಬಗ್ಗೆ ಚರ್ಚಿಸುವರು.<br>– ನಾಜ಼ೀ ನಾಯಕರ ಭಾಷಣಗಳು ಮತ್ತು ಬರಹಗಳನ್ನು ಪರಿಚಯ ಮಾಡಿಕೊಳ್ಳುವರು. |
| ಭಾಗ 2: ಜೀವನೋಪಾಯ ಆರ್ಥಿಕತೆ ಮತ್ತು ಸಮಾಜಗಳು. ಈ ಕೆಳಗಿನವುಗಳಲ್ಲಿ ಯಾವುದಾದರೊಂದು<br><br>4 ಅರಣ್ಯ ಸಮುದಾಯ ಮತ್ತು ವಸಾಹತುಶಾಹಿ<br>– ಅರಣ್ಯ ನಾಶ ಎಂದರೇನು?<br>– ವಾಣಿಜ್ಯ ಕಾಡು ಪ್ರದೇಶಗಳ ಉಗಮ<br>– ಅರಣ್ಯದಲ್ಲಿ ದಂಗೆ<br>– ಜಾವಾದಲ್ಲಿ ಅರಣ್ಯ ಪರಿವರ್ತನೆಗಳು | ನಿರ್ದಿಷ್ಟ ದಂಗೆಗಳ ಅಧ್ಯಯನದ ಮೂಲಕ ಅರಣ್ಯ ಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಲೋಕದ ಬಗ್ಗೆ ಚರ್ಚಿಸುವರು.<br>ಬುಡಕಟ್ಟು ಜನಾಂಗಗಳ ದಂಗೆಗಳನ್ನು ಅನ್ವೇಷಿಸಲು ಬಾಯಿ ಮಾತಿನಿಂದ ಬಂದ ಸಂಪ್ರದಾಯಗಳನ್ನುಹೇಗೆ ಉಪಯೋಗಿಸಬಹುದೆಂದು ತಿಳಿಯುವರು. |
| 5 ಆಧುನಿಕ ಪ್ರಪಂಚದಲ್ಲಿ ಪಶುಗಾಹಿಗಳು<br>– ಪಶುಗಾಹಿ ಅಲೆಮಾರಿಗಳು ಮತ್ತು ಅವರ ಸಂಚಾರ<br>– ವಸಾಹತುಶಾಹಿ ಆಳ್ವಿಕೆ ಮತ್ತು ಪಶುಗಾಹಿ ಜೀವನ<br>– ಆಫ್ರಿಕಾದಲ್ಲಿ ಪಶುಗಾಹಿತನ | –ಪಶುಗಾಹಿ ಸಮಾಜಗಳಲ್ಲಿ ವಿವಿಧ ಸ್ಥಳಗಳಲ್ಲಿ ವಿಧ ವಿಧದ ಬೆಳವಣಿಗೆಯ ನಮೂನೆಗಳ ಪ್ರಮುಖಾಂಶಗಳನ್ನು ಕಲಿಯುವರು.<br>– ವಸಾಹತುಶಾಹಿಯು ಅರಣ್ಯ ಸಮಾಜಗಳ ಮೇಲೆ ಬೀರಿದ ಪ್ರಭಾವವನ್ನು ಮತ್ತು ವೈಜ್ಞಾನಿಕ ಮರಕಾಡುಗಳ ನಿಹಿತಾರ್ಥಗಳನ್ನು ವಿಶ್ಲೇಷಿಸುವರು.<br>–ಆಧುನಿಕ ಪ್ರಪಂಚದಲ್ಲಿ ಕೃಷಿಭೂಮಿಗೆ ಸಂಬಂಧಿಸಿದ |

| | |
|---|---|
| | ಪರಿವರ್ತನೆಗಳನ್ನು ತರಬಲ್ಲ ವಿವಿಧ ಪ್ರಕ್ರಿಯೆಗಳನ್ನು ತೋರಿಸುವರು.<br>–ಆಧುನಿಕ ರಾಷ್ಟ್ರಗಳು, ಸರಹದ್ದುಗಳನ್ನು ಗುರುತಿಸುವಿಕೆ, ಒಂದೇ ಕಡೆ ನೆಲೆಸುವ ಪ್ರಕಿಯೆ, ಹುಲ್ಲುಗಾವಲುಗಳು ಕಡಿಮೆಯಾಗುವಿಕೆ ಮತ್ತು ಮಾರುಕಟ್ಟೆಗಳ ವಿಸ್ತರಣೆ– ಇವುಗಳು ಆಧುನಿಕ ಪ್ರಪಂಚದಲ್ಲಿ ಪಶುಗಾಹಿತನದ ಮೇಲೆ ಬೀರುವ ಪ್ರಭಾವಗಳನ್ನು ವಿಶ್ಲೇಷಿಸುವರು. |

| **ಘಟಕ 2 : ಸಮಕಾಲೀನ ಭಾರತ – 1** | |
|---|---|
| **ವಿಷಯ** | **ಕಲಿಕೆಯ ಉದ್ದೇಶಗಳು** |
| 1. ಭಾರತ<br>– ಗಾತ್ರ ಮತ್ತು ನಿರ್ದಿಷ್ಟ ಸ್ಥಳ<br>– ಭಾರತ ಮತ್ತು ವಿಶ್ವ<br>– ಭಾರತದ ನೆರೆ ಹೊರೆ | ಭಾರತದ ಉಪಖಂಡದಲ್ಲಿ ಭಾರತದ ಸ್ಥಳವನ್ನು ಗುರುತಿಸುವರು. |
| 2. ಭಾರತದ ಭೌತಿಕ ಲಕ್ಷಣಗಳು<br>– ಪ್ರಮುಖ ಪ್ರಕೃತಿ ಭೌಗೋಳಿಕ ವಿಭಾಗಗಳು | –ಪ್ರಮುಖ ಭೂರೂಪದ ಲಕ್ಷಣಗಳನ್ನು ಮತ್ತು ಅದರ ಆಧಾರ ಭೂತ ಭೂವೈಜ್ಞಾನಿಕ ಸಂರಚನೆ ಹಾಗೂ ವಿವಿಧ ಶಿಲೆಗಳು, ಖನಿಜಗಳೊಂದಿಗೆ ಅವುಗಳ ಸಂಬಂಧ ಮತ್ತು ಮಣ್ಣಿನ ವಿಧಗಳ ಸ್ವರೂಪಗಳನ್ನು ತಿಳಿದುಕೊಳ್ಳುವರು. |
| 3. ನಾಲೆ ವ್ಯವಸ್ಥೆ<br>– ಪ್ರಮುಖ ನದಿಗಳು ಮತ್ತು ಉಪನದಿಗಳು<br>– ಸರೋವರಗಳು<br>– ಆರ್ಥಿಕತೆಯಲ್ಲಿ ನದಿಗಳ ಪಾತ್ರ<br>– ನದಿಗಳ ಮಾಲಿನ್ಯ | –ದೇಶದ ನದಿವ್ಯವಸ್ಥೆಗಳನ್ನು ಗುರುತಿಸುವರು ಮತ್ತು ಮಾನವ ಸಮಾಜದಲ್ಲಿ ನದಿಗಳ ಪಾತ್ರವನ್ನು ವಿವರಿಸುವರು. |
| 4. ಹವಾಮಾನ<br>– ಪರಿಕಲ್ಪನೆ<br>– ಹವಾಮಾನ ಸಂಬಂಧಿ ನಿಯಂತ್ರಣಗಳು<br>– ಭಾರತೀಯ ಉಪಖಂಡದಲ್ಲಿ ಭಾರತದ ಸ್ಥಳವನ್ನು ಗುರುತಿಸಿವರು.<br>– ದೇಶದ ನದಿವ್ಯವಸ್ಥೆಗಳನ್ನು ಗುರುತಿಸಿ ಮತ್ತು ಮಾನವ ಸಮಾಜದಲ್ಲಿ ನದಿಗಳ ಪಾತ್ರವನ್ನು ವಿವರಿಸುವರು.<br>– ಹವಾಮಾನವನ್ನು ಪ್ರಭಾವಿಸುವ ಬೇರೆ ಬೇರೆ ಕಾರಕಾಂಶಗಳನ್ನು ಗುರುತಿಸಿ ಮತ್ತು ನಮ್ಮ ದೇಶದ ಹವಾಮಾನ ಏರುಪೇರುಗಳನ್ನು ವಿವರಿಸುವರು. | ಹವಾಮಾನವನ್ನು ಪ್ರಭಾವಿಸುವ ವಿವಿಧ ಕಾರಕಾಂಶಗಳನ್ನು ಗುರುತಿಸುವುದು ಮತ್ತು ನಮ್ಮ ದೇಶದ ಹವಾಮಾನದ ಬದಲಾವಣೆ ಮತ್ತು ಜನಜೀವನದ ಮೇಲೆ ಅದರ ಪರಿಣಾಮ.<br>–ಮಾನ್ಸೂನ್‌ನ ಪ್ರಾಧಾನ್ಯತೆ ಮತ್ತು ಐಕ್ಯತೆಯಲ್ಲಿ ಅದರ ಪಾತ್ರ. |
| 5.ಹವಾಮಾನವನ್ನು ಪ್ರಭಾವಿಸುವ ಕಾರಕಾಂಶಗಳು<br>– ಭಾರತದ ಮಾನ್‌ಸೂನ್<br>– ಮಳೆಸುರಿತದ ವಿತರಣೆ<br>– ಐಕ್ಯತೆಯ ಬಂಧದ ರೂಪದಲಿ ಮಾನ್ಸೂನ್ (ಮಳೆಮಾರುತ) | ವಿವಿಧ ಸಸ್ಯ ಮತ್ತು ಪ್ರಾಣಿವರ್ಗದ ಸ್ವರೂಪ ಮತ್ತು ಅವುಗಳ ವಿತರಣೆಯನ್ನು ವಿವರಿಸುವರು.<br>–ನಮ್ಮ ದೇಶದ ಜೀವವೈವಿಧ್ಯತೆಯನ್ನು ರಕ್ಷಿಸುವುದರ ಅಗತ್ಯದ ಬಗ್ಗೆ ಕಾಳಜಿಯನ್ನು ಮೂಡಿಸಿಕೊಳ್ಳುವರು. |

| | |
|---|---|
| 6. ಪ್ರಾಕೃತಿಕ ಸಸ್ಯವರ್ಗ ಮತ್ತು ಸಸ್ಯ ಜೀವನ<br>– ಸಸ್ಯವರ್ಗ ವನ್ನು ಪ್ರಭಾವಿಸುವ ಕಾರಕಾಂಶಗಳು<br>– ಸಸ್ಯವರ್ಗದ ವಿಧಗಳು<br>– ಸಂರಕ್ಷಣೆ, ಜನಸಂಖ್ಯೆ<br>– ಗಾತ್ರ<br>– ವಿತರಣೆ<br>– ಜನಸಂಖ್ಯಾ ಹೆಚ್ಚಳ ಮತ್ತು ಜನಸಂಖ್ಯೆ ಬದಲಾವಣೆಯ ಪ್ರಕ್ರಿಯೆ | ಜನಸಂಖ್ಯೆಯ ಅಸಮಾನ ವಿತರಣೆಯ ಸ್ವರೂಪವನ್ನು ವಿಶ್ಲೇಷಿಸಿ ಮತ್ತು ದೊಡ್ಡ ಗಾತ್ರದ ನಮ್ಮ ದೇಶದ ಜನಸಂಖ್ಯೆಯ ಬಗ್ಗೆ ಕಾಳಜಿ ತೋರುವರು.<br>–ಜನರ ವಿವಿಧ ಕಸುಬುಗಳನ್ನು ಗುರುತಿಸುವರು ಮತ್ತು ಜನಸಂಖ್ಯೆ ಬದಲಾವಣೆಯ ಬೇರೆ ಬೇರೆ ಕಾರಕಾಂಶಗಳನ್ನು ವಿವರಿಸುವರು.<br>–ರಾಷ್ಟ್ರೀಯ ಜನಸಂಖ್ಯಾ ನೀತಿಯ ವಿಭಿನ್ನ ಆಯಾಮಗಳನ್ನು ವಿವರಿಸುವರು ಮತ್ತು ಕಾಳಜಿಯ ಕೊರತೆ ಅನುಭವಿಸುತ್ತಿರುವ ಪ್ರೌಢ ಸಮೂಹದ ಅಗತ್ಯಗಳನ್ನು ಅರಿತುಕೊಳ್ಳುವರು. |

| **ಘಟಕ 3 : ಪ್ರಜಾಸತ್ತಾತ್ಮಕ ರಾಜನೀತಿ – 1** | |
|---|---|
| **ವಿಷಯಗಳು** | **ಕಲಿಕಾ ಉದ್ದೇಶಗಳು** |
| 1. ಪ್ರಜಾಪ್ರಭುತ್ವ ಎಂದರೇನು? ಪ್ರಜಾಪ್ರಭುತ್ವ ಏಕೆ ಬೇಕು?<br>–ಪ್ರಜಾಪ್ರಭುತ್ವ ಎಂದರೇನು?<br>–ಪ್ರಜಾಪ್ರಭುತ್ವದ ಲಕ್ಷಣಗಳು<br>–ಪ್ರಜಾಪ್ರಭುತ್ವ ಏಕೆ ಬೇಕು?<br>–ಪ್ರಜಾಪ್ರಭುತ್ವದ ವಿಶಾಲ ಅರ್ಥ | ಪ್ರಜಾಪ್ರಭುತ್ವವನ್ನು ವ್ಯಾಖ್ಯಾನಿಸುವ ಪರಿಕಲ್ಪನಾತ್ಮಕ ಕೌಶಲ್ಯಗಳನ್ನು ಬೆಳೆಸಿಕೊಳ್ಳುವರು<br>–ಬೇರೆ ಬೇರೆ ಐತಿಹಾಸಿಕ ಪ್ರಕ್ರಿಯೆಗಳು ಮತ್ತು ಶಕ್ತಿಗಳು ಪ್ರಜಾಪ್ರಭುತ್ವಕ್ಕೆ ಪ್ರೋತ್ಸಾಹ ನೀಡಿವೆ ಎಂದು ಅರ್ಥ ಮಾಡಿಕೊಳ್ಳುವರು.<br>–ಸಾಮಾನ್ಯ ಪೂರ್ವಾಗ್ರಹಗಳ ವಿರುದ್ಧ ಪ್ರಜಾಪ್ರಭುತ್ವದ ಪರ ಪರಿಣಾಮಕಾರಿ ವಾದವನ್ನು ಮಂಡಿಸುವರು.<br>–ಭಾರತದಲ್ಲಿ ಪ್ರಜಾಪ್ರಭುತ್ವದ ಆಯ್ಕೆ ಮತ್ತು ಸ್ವರೂಪದ ಹಿಂದಿರುವ ಐತಿಹಾಸಿಕ ಪರಿಜ್ಞಾನವನ್ನು ಬೆಳೆಸಿಕೊಳ್ಳುವರು. |
| 2. ಸಂವಿಧಾನಾತ್ಮಕ ವಿನ್ಯಾಸ<br>– ದಕ್ಷಿಣ ಆಫ್ರಿಕಾದಲ್ಲಿ ಪ್ರಜಾಸತ್ತಾತ್ಮಕ ಸಂವಿಧಾನ<br>–ನಮಗೆ ಸಂವಿಧಾನ ಏಕೆ ಬೇಕು?<br>–ಸಂವಿಧಾನದ ನಿರ್ಮಾಣ<br>–ಭಾರತೀಯ ಸಂವಿಧಾನದ ಮಾರ್ಗದರ್ಶಿ ಮೌಲ್ಯಗಳು | ಸಂವಿಧಾನ ನಿರ್ಮಾಣ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವರು.<br>–ಸಂವಿಧಾನಕ್ಕೆ ಗೌರವ ತೋರುವುದನ್ನು, ಸಾಂವಿಧಾನಿಕ ಮೌಲ್ಯಗಳನ್ನು ಪ್ರಶಂಸಿಸುವುದನ್ನು ಕಲಿಯುವರು.<br>–ಸಂವಿಧಾನ ಒಂದು ಗತಿಶೀಲ ಮತ್ತು ಜೀವಂತ ದಾಖಲೆ ಎಂದು ಗುರುತಿಸುವರು. |
| 3. ಚುನಾಯಕರಿಂದ ಕೂಡಿದ ರಾಜನೀತಿ<br>–ಚುನಾವಣೆ ಏಕೆ ಬೇಕು?<br>–ನಮ್ಮ ಚುನಾವಣಾ ವ್ಯವಸ್ಥೆ ಹೇಗಿದೆ?<br>–ಭಾರತದಲ್ಲಿ ಚುನಾವಣೆಗಳು ಪ್ರಜಾಸತ್ತಾತ್ಮಕವಾಗಿರುವುದು ಹೇಗೆ? | ಸ್ಪರ್ಧಾತ್ಮಕ ಪಕ್ಷ ರಾಜಕೀಯದ ಮೂಲಕ ಪ್ರತಿನಿಧಿತ್ವದ ಪ್ರಜಾಪ್ರಭುತ್ವವನ್ನು ಅರ್ಥ ಮಾಡಿಕೊಳ್ಳುವುದು.<br>–ಭಾರತದ ಚುನಾವಣಾ ವ್ಯವಸ್ಥೆಯ ಪರಿಚಯ.<br>–ಇಂದಿನ ಭಾರತೀಯ ಚುನಾವಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದಕ್ಕೆ ಕಾರಣವೇನು ಎಂದು ಹೇಳುವರು.<br>–ಚುನಾವಣಾ ರಾಜಕೀಯದಲ್ಲಿ ಪ್ರಜೆಗಳ ಹೆಚ್ಚಿನ ಸಹಭಾಗಿತ್ವದ ಮೌಲ್ಯವೇನೆಂದು ಮನಗಾಣುವರು.<br>–ಚುನಾವಣಾ ಆಯೋಗದ ಮಹತ್ವವನ್ನು ಗುರುತಿಸುವರು. |
| 4. ಸಂಸ್ಥೆಗಳ ಕಾರ್ಯ ವಿಧಾನ<br>– ಪ್ರಮುಖ ರಾಜ್ಯನೀತಿಗಳನ್ನು ತೀರ್ಮಾನಿಸುವುದು ಹೇಗೆ? | ಕೇಂದ್ರ ಸರ್ಕಾರದ ಸಂರಚನೆಗಳ ಪಕ್ಷಿನೋಟ<br>–ಸಂಸತ್ತಿನ ಪಾತ್ರ ಮತ್ತು ಅದರ ಕಾರ್ಯ ವಿಧಾನಗಳು.<br>–ರಾಜನೈತಿಕ ಮತ್ತು ಸ್ಥಿರ ಕಾರ್ಯಾಂಗ, ಅಧಿಕಾರಿಗಳ |

| | |
|---|---|
| –ಸಂಸತ್ತು<br>–ರಾಜನೈತಿಕ ಕಾರ್ಯಾಂಗ<br>–ನ್ಯಾಯಾಂಗ | ನಡುವೆ ಹಾಗೂ ಕಾರ್ಯಗಳ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸುವರು.<br>–ಶಾಸಕಾಂಗಕ್ಕೆ ಕಾರ್ಯಂಗದ ಜವಾಬುದಾರಿಯುಳ್ಳ ಸಂಸತ್ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವರು.<br>–ಭಾರತೀಯ ನ್ಯಾಯಾಂಗದ ಕಾರ್ಯವಿಧಾನವನ್ನು ಅರಿಯುವರು. |
| 5. ಪ್ರಜಾಸತ್ತಾತ್ಮಕ ಹಕ್ಕುಗಳು<br>–ಹಕ್ಕುಗಳಿಲ್ಲದೆ ಜೀವನ<br>–ಭಾರತೀಯ ಸಂವಿಧಾನದಲ್ಲಿ ಹಕ್ಕುಗಳು<br>–ವಿಸ್ತರಿಸುತ್ತಿರುವ ಹಕ್ಕುಗಳ ವ್ಯಾಪ್ತಿ | –ಒಬ್ಬರ ಜೀವನದಲ್ಲಿ ಹಕ್ಕುಗಳ ಅಗತ್ಯವನ್ನು ಗುರುತಿಸುವರು.<br>–ಪ್ರಜಾಸತ್ತಾತ್ಮಕ ವ್ಯವಸ್ಥೆ/ಸರ್ಕಾರದಲ್ಲಿ ಹಕ್ಕುಗಳ ಲಭ್ಯತೆಯ ಬಗ್ಗೆ ಅರಿತುಕೊಳ್ಳುವರು.<br>–ಭಾರತೀಯ ಸಂವಿಧಾನವು ತನ್ನ ಪ್ರಜೆಗಳಿಗೆ ಕೊಟ್ಟಿರುವ ಮೂಲಭೂತ ಹಕ್ಕುಗಳನ್ನು ಗುರುತಿಸಿ ಅವುಗಳನ್ನು ಅರ್ಥಮಾಡಿಕೊಳ್ಳುವರು.<br>–ಹಕ್ಕುಗಳ ರಕ್ಷಣೆಯ ಪ್ರಕ್ರಿಯೆಯ ಬಗ್ಗೆ ಅರಿವು ಮೂಡಿಸಿಕೊಳ್ಳುವರು. |

| **ಘಟಕ 4:** | |
|---|---|
| **ವಿಷಯ** | **ಉದ್ದೇಶಗಳು** |
| 1. ಪಾಲಂಪುರ್ ಎಂಬ ಹಳ್ಳಿಯ ಕಥೆ<br>– ಪಕ್ಷಿನೋಟ<br>–ಉತ್ಪಾದನೆಯ ಸಂಘಟನೆ<br>–ಪಾಲಂಪುರದಲ್ಲಿ ಕೃಷಿ<br>–ಪಾಲಂಪುರದಲ್ಲಿ ಕೃಷಿಯೇತರ ಚಟುವಟಿಕೆಗಳು | –ಹಳ್ಳಿಯೊಂದರ ಕಲ್ಪಿತ ಕಥೆಯ ಮೂಲಕ ಮೂಲಭೂತ ಅರ್ಥನೀತಿಯ ಪರಿಕಲ್ಪನೆಗಳ ಪರಿಚಯ ಮಾಡಿಕೊಳ್ಳುವರು. |
| 2. ಸಂಪನ್ಮೂಲಗಳಾಗಿ ಜನರು<br>–ಪಕ್ಷಿನೋಟ<br>–ಪುರುಷ ಮತ್ತು ಮಹಿಳೆಯರಿಂದ ಆ[illegible]<br>ಚಟುವಟಿಕೆಗಳು<br>–ಜನಸಂಖ್ಯೆಯ ಗುಣಮಟ್ಟ<br>–ನಿರುದ್ಯೋಗ | –ಜನಸಾಂಖ್ಯಿಕ ಪರಿಕಲ್ಪನೆಗಳನ್ನು ಅರಿಯುವರು.<br>–ಜನಸಂಖ್ಯೆ ಆಸ್ತಿಯೂ ಆಗಬಹುದು ಅಥವಾ ಜವಾಬ್ದಾರಿಯೂ ಆಗಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳುವರು. |
| 3. ಸವಾಲಾಗಿ ಬಡತನ<br>– ಬಡತನದ ಎರಡು ಮಾದರಿ ಉದಾಹರಣೆಗಳು<br>–ಸಮಾಜ ವಿಜ್ಞಾನಿಗಳು ಕಂಡಂತೆ ಬಡತನ<br>–ಬಡತನದ ಅಂದಾಜು<br>–ದುರ್ಬಲ ಸಮೂಹಗಳು<br>–ಅಂತರ್‌ರಾಜ್ಯ ವ್ಯತ್ಯಾಸಗಳು<br>–ಜಾಗತಿಕ ಬಡತನದ ಚಿತ್ರಣ<br>–ಬಡತನಕ್ಕೆ ಕಾರಣಗಳು<br>–ಬಡತನ ನಿವಾರಕ ಕ್ರಮಗಳು<br>–ಮುಂದಿನ ಸವಾಲುಗಳು | ಬಡತನ ಒಂದು ಸವಾಲು ಎಂದು ಅರ್ಥಮಾಡಿಕೊಳ್ಳುವರು.<br>– ದುರ್ಬಲ ಸಮೂಹಗಳನ್ನು ಮತ್ತು ಅಂತರ ರಾಜ್ಯ ವ್ಯತ್ಯಾಸಗಳನ್ನು ಗುರುತಿಸುವರು.<br>–ಬಡತನ ನಿವಾರಣೆಗೆ ಸರ್ಕಾರದ ಕ್ರಮಗಳ ಬೆಲೆ ಏನೆಂದು ಗ್ರಹಿಸುವರು. |
| 4. ಭಾರತದಲ್ಲಿ ಆಹಾರ ಭದ್ರತೆ<br>– ಪಕ್ಷಿನೋಟ<br>–ಆಹಾರ ಭದ್ರತೆ ಎಂದರೇನು | –ಆಹಾರ ಅಭದ್ರತೆಯ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವರು. |

| | |
|---|---|
| –ಆಹಾರ ಭದ್ರತೆ ಏಕೆ ಇರಬೇಕು?<br>–ಯಾವ ಆಹಾರಗಳು ಅಭದ್ರ | |

**10ನೇ ತರಗತಿ**

1. ಭಾರತ ಮತ್ತು ಸಮಕಾಲೀಣ ಜಗತ್ತು
2. ಸಮಕಾಲೀನ ಭಾರತ
3. ಪ್ರಜಾಸತ್ತಾತ್ಮಕ ರಾಜನೀತಿ
4. ಆರ್ಥಿಕ ವಿಕಾಸವನ್ನು ಅರ್ಥ ಮಾಡಿಕೊಳ್ಳುವಿಕೆ

| **ಘಟಕ 1 : ಭಾರತ ಮತ್ತು ಸಮಕಾಲೀನ ಜಗತ್ತು – 2** | |
|---|---|
| **ವಿಷಯ** | **ಕಲಿಕಾ ಉದ್ದೇಶಗಳು** |
| ಭಾಗ 1: ಘಟನಾವಳಿಗಳು ಮತ್ತು ಪ್ರಕ್ರಿಯೆಗಳು<br>1. ಯುರೋಪಿನಲ್ಲಿ ರಾಷ್ಟ್ರೀಯತೆಯ ಉದಯ<br>– ಫ್ರಾನ್ಸ್‌ನ ಕ್ರಾಂತಿ ಮತ್ತು ರಾಷ್ಟ್ರದ ಪರಿಕಲ್ಪನೆ<br>–ಯುರೋಪಿನಲ್ಲಿ ರಾಷ್ಟ್ರವಾದದ ಉಗಮ<br><br>ಕ್ರಾಂತಿ ಯುಗ: 1830–1848<br>–ಜರ್ಮನಿ ಮತ್ತು ಇಟಲಿ ದೇಶಗಳ ಉದಯ<br>–ರಾಷ್ಟ್ರವೆಂಬ ಪರಿಕಲ್ಪನೆ<br>–ರಾಷ್ಟ್ರವಾದ ಮತ್ತು ಸಾಮ್ರಾಜ್ಯಶಾಹಿ | 1830ರ ನಂತರದಲ್ಲಿ ಯುರೋಪಿನಲ್ಲಿ ರಾಷ್ಟ್ರರಾಜ್ಯಗಳ ರೂಪಣೆಯೊಂದಿಗೆ ಬೆಳೆದ ರಾಷ್ಟ್ರವಾದದ ಸ್ವರೂಪಗಳನ್ನು ಗುರುತಿಸಿ ಅರ್ಥ ಮಾಡಿಕೊಳ್ಳಲು ಕಲಿಕಾರ್ಥಿಗಳು ಸಮರ್ಥರಾಗುವರು.<br>–ಯುರೋಪಿನ ರಾಷ್ಟ್ರವಾದ ಮತ್ತು ವಸಾಹತು ಶಾಹಿ ವಿರುದ್ಧದ ರಾಷ್ಟ್ರವಾದ – ಇವೆರಡರ ನಡುವಣ ಸಂಬಂಧ ಮತ್ತು ವ್ಯತ್ಯಾಸಗಳನ್ನು ಸ್ಪಷ್ಟಪಡಿಸುವರು.<br>–ರಾಷ್ಟ್ರವಾದ ಪರಿಕಲ್ಪನೆ ಉದಯವಾದ ರೀತಿ ಮತ್ತು ಅದು ಯುರೋಪಿನಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿ ರಾಷ್ಟ್ರರಾಜ್ಯಗಳ ರೂಪಣೆಗೆ ಕಾರಣವಾದ ಬಗೆಯನ್ನು ಅರ್ಥ ಮಾಡಿಕೊಳ್ಳುವರು. |
| 2. ಭಾರತದಲ್ಲಿ ರಾಷ್ಟ್ರವಾದ<br>– ಪ್ರಥಮ ವಿಶ್ವ ಸಮರ ,ಖಿಲಾಫ಼ತ್ ಮತ್ತು ಸಹಕಾರ ಆಂದೋಳನ<br>–ಆಂದೋಳನದ ಒಳಗೆ ಭಿನ್ನ ಭಿನ್ನ ಅಭಿಪ್ರಾಯಗಳು<br>–ಭಾರತದಲ್ಲಿ ಸತ್ಯಾಗ್ರಹ (ಅಸಹಕಾರ ಚಳುವಳಿ)<br>–ಸಮಷ್ಟಿ ಸಂಬಂಧದ ಮನೋಭಾವ | ಅಸಹಕಾರ ಆಂದೋಳನ ಮತ್ತು ಸತ್ಯಾಗ್ರಹಗಳ ಕೇಸ್ ಅಧ್ಯಯನದ ಮುಖಾಂರ ಭಾರತೀಯ ರಾಷ್ಟ್ರವಾದದ ಲಕ್ಷಣಗಳನ್ನು ಗುರುತಿಸುವರು.<br>–ಆ ಕಾಲದ ವಿವಿಧ ಸಾಮಾಜಿಕ ಆಂದೋಳನಗಳ ಸ್ವರೂಪವನ್ನು ವಿಶ್ಲೇಷಿಸುವರು.<br>–ವಿಭಿನ್ನ ರಾಜಕೀಯ ಗುಂಪುಗಳ ಮತ್ತು ವ್ಯಕ್ತಿಗಳ ಬರಹ ಮತ್ತು ಆದರ್ಶಗಳ ಪರಿಚಯ ಮಾಡಿಕೊಳ್ಳುವುದು ಮತ್ತು ಅಖಿಲ ಭಾರತಕ್ಕೆ ಸೇರಿದವರೆಂಬ ಭಾವನೆಯನ್ನು ಪ್ರೋತ್ಸಾಹಿಸುವ ವಿಚಾರಗಳನ್ನು ಅರಿತುಕೊಳ್ಳುವರು. |
| ಭಾಗ 2: ಜೀವನೋಪಾಯಗಳು, ಆರ್ಥಿಕತೆ ಮತ್ತು ಸಮಾಜಗಳು: ಈ ಕೆಳಗಿನವುಗಳಲ್ಲಿ ಯಾವುದಾದರೊಂದು:<br>1. ಜಾಗತಿಕ ಪ್ರಪಂಚದ ಉದಯ<br>– ಆಧುನಿಕ ಪೂರ್ವ ಪ್ರಪಂಚ<br>–ಹತ್ತೊಂಭತ್ತನೇ ಶತಮಾನ (1815–1914)<br>–ಅಂತರ ಸಮರ ಆರ್ಥಿಕತೆ<br>–ಜಾಗತಿಕ ಆರ್ಥಿಕ ವ್ಯವಸ್ಥೆಯ ಪುನರ್ನಿರ್ಮಾಣ: ಸಮರೋತ್ತರ ಯುಗ | ಜಾಗತೀಕರಣಕ್ಕೆ ದೀರ್ಘ ಇತಿಹಾಸವಿದೆ ಎಂದು ತೋರಿಸುವರು ಮತ್ತು ಆ ಪ್ರಕ್ರಿಯೆಯಲ್ಲಿ ಆದ ಪಲ್ಲಟಗಳನ್ನು ಗುರುತಿಸುವರು.<br>– ಸ್ಥಳೀಯ ಅರ್ಥ ವ್ಯವಸ್ಥೆಯ ಮೇಲೆ ಜಾಗತೀಕರಣದ ನಿಹಿತಾರ್ಥಗಳನ್ನು ವಿಶ್ಲೇಷಿಸುವರು.<br>–ಬೇರೆ ಬೇರೆ ಸಾಮಾಜಿಕ ಸಮೂಹಗಳು ಜಾಗತೀಕರಣದ ಪರಿಣಾಮವನ್ನು ಹೇಗೆ ಅನುಭವಿಸುತ್ತಿವೆ ಎಂದು ವಿಶ್ಲೇಷಿಸುವರು. |

| | |
|---|---|
| 2. ಔದ್ಯೋಗೀಕರಣದ ಯುಗ<br>–ಔದ್ಯೋಗೀಕರಣಕ್ಕೆ ಮುಂಚೆ<br>–ಕೈಕೂಲಿ ಮತ್ತು ಉಗಿ ಶಕ್ತಿ<br>–ವಸಾಹತುಗಳಲ್ಲಿ ಔದ್ಯೋಗೀಕರಣ<br>–ಕಾರ್ಖಾನೆಗಳ ಉಗಮ<br>–ಉದ್ಯಮಗಳ ಬೆಳವಣಿಗೆಯ ವೈಶಿಷ್ಟ್ಯ<br>–ಸರಕುಗಳ ಮಾರಾಟ | ಕೈಗಾರಿಕಾ ಹಂತಕ್ಕೆ ಮುಂಚಿನ ಕಾಲ ಮತ್ತು ಪ್ರಾರಂಭಿಕ ಕೈಗಾರಿಕಾ ವ್ಯವಸ್ಥೆ.<br>–ಕೈಗಾರಿಕೀಕರಣದ ಪ್ರಕ್ರಿಯೆಯ ಮತ್ತು ಕಾರ್ಮಿಕ ವರ್ಗದ ಮೇಲೆ ಅದರ ಪರಿಣಾಮ.<br>–ವಸ್ತ್ರೋದ್ಯಮಕ್ಕೆ ಸಂಬಂಧಿಸಿದಂತೆ ವಸಾಹತುಗಳಲ್ಲಿ ಕೈಗಾರಿಕೀಕರಣವನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ನೆರವಾಗುವುದು. |
| ಭಾಗ 3: ದೈನಂದಿನ ಜೀವನ, ಸಂಸ್ಕೃತಿ ಮತ್ತು ರಾಜಕೀಯ<br>1. ಮುದ್ರಣ ಸಂಸ್ಕೃತಿ ಮತ್ತು ಆಧುನಿಕ ಪ್ರಪಂಚ<br>– ಮೊದಲ ಮುದ್ರಿತ ಪುಸ್ತಕಗಳು<br>– ಯುರೋಪಿಗೆ ಮುದ್ರಣ ಕಲೆಯ ಆಗಮನ<br>–ಮುದ್ರಣ ಕ್ರಾಂತಿ ಮತ್ತು ಅದರ ಪ್ರಭಾವ<br>–ಓದುವ ಹುಚ್ಚು<br>–ಹತ್ತೊಂಭತ್ತನೇ ಶತಮಾನ<br>–ಭಾರತ ಮತ್ತು ಮುದ್ರಣ ಪ್ರಪಂಚ<br>–ಧಾರ್ಮಿಕ ಸುಧಾರಣೆ ಮತ್ತು ಸಾರ್ವಜನಿಕ ಸಂವಾದಗಳು<br>–ಪ್ರಕಟಣೆಯ ಹೊಸ ರೂಪಗಳು<br>–ಮುದ್ರಣ ಮತ್ತು ಸೆನ್ಸರ್ | ಮುದ್ರಣ ಸಂಸ್ಕೃತಿ ಮತ್ತು ವಿಚಾರಗಳ ಪ್ರಚಾರ– ಇವೆರಡರ ನಡುವಣ ಇರುವ ಕೊಂಡಿಯನ್ನು ಗುರುತಿಸುವರು.<br>–ಚಿತ್ರಗಳು, ವ್ಯಂಗ್ಯಚಿತ್ರಗಳು, ಪ್ರಚಾರ ಸಾಹಿತ್ಯದ ಉದ್ಧೃತ ಭಾಗಗಳು ಮತ್ತು ಹಿಂದಿನ ಪ್ರಮುಖ ಘಟನೆ ಮತ್ತು ವಿವಾದಾಂಶಗಳ ಪರಿಚಯ ಮಾಡಿಕೊಳ್ಳುವರು.<br>–ಬರವಣಿಗೆಯ ರೂಪಗಳು ನಿರ್ದಿಷ್ಟ ಇತಿಹಾಸವನ್ನು ಹೊಂದಿವೆ ಎಂದೂ ಸಮಾಜದೊಳಗಿನ ಐತಿಹಾಸಿಕ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತವೆಯಲ್ಲದೆ, ಬದಲಾವಣೆಯ ಶಕ್ತಿಗಳಿಗೆ ರೂಪ ಕೊಡುತ್ತವೆಯೆಂದೂ ಅರ್ಥ ಮಾಡಿಕೊಳ್ಳುವರು. |

| **ಘಟಕ 2 : ಸಮಕಾಲೀನ ಭಾರತ – 2** | |
|---|---|
| **ವಿಷಯ** | **ಕಲಿಕಾ ಉದ್ದೇಶಗಳು** |
| 1. ಸಂಪನ್ಮೂಲಗಳು ಮತ್ತು ಅಭಿವೃದ್ಧಿ<br>–ಸಂಪನ್ಮೂಲಗಳ ವಿಧಗಳು<br>–ಸಂಪನ್ಮೂಲಗಳ ಅಭಿವೃದ್ಧಿ<br>–ಭಾರತದಲ್ಲಿ ಸಂಪನ್ಮೂಲಗಳ ಯೋಜನೆ<br>–ಭೂ ಸಂಪನ್ಮೂಲಗಳು<br>–ಭೂಮಿಯ ಬಳಕೆ<br>–ಭಾರತದಲ್ಲಿ ಭೂ ಬಳಕೆಯ ತರ್ಕಬದ್ಧ ವ್ಯವಸ್ಥೆ<br>–ಭೂಸವಕಳಿ ಮತ್ತು ಸಂರಕ್ಷಣಾ ಕ್ರಮಗಳು<br>–ಸಂಪನ್ಮೂಲ ರೂಪದಲ್ಲಿ ಮಣ್ಣು<br>–ಮಣ್ಣಿನ ವರ್ಗೀಕರಣ<br>– ಮಣ್ಣಿನ ಸವಕಳಿ ಮತ್ತು ಮಣ್ಣಿನ ಸಂರಕ್ಷಣೆ | ಸಂಪನ್ಮೂಲಗಳ ಮೌಲ್ಯವನ್ನು ಮತ್ತು ಅವುಗಳ ವಿವೇಚನಾಯುತ ಬಳಕೆ ಹಾಗೂ ಸಂರಕ್ಷಣೆಯ ಅಗತ್ಯವನ್ನು ಮನಗಾಣುವರು. |

| | |
|---|---|
| 2. ಅರಣ್ಯ ಮತ್ತು ವನ್ಯಜೀವನ<br>– ಜೀವ ವೈವಿಧ್ಯ<br>–ಭಾರತದಲ್ಲಿ ಸಸ್ಯ ಮತ್ತು ಪ್ರಾಣಿವರ್ಗ<br>– ಮಾಯವಾಗುತ್ತಿರುವ ಅರಣ್ಯಗಳು<br>– ಏಷ್ಯಾದ ಚಿರತೆ: ಅವೆಲ್ಲಿ ಹೋದವು?<br>–ಹಿಮಾಲಯದ 'ಯೂ' ಮರವು ಅಪಾಯದಲ್ಲಿ<br>–ಭಾರತದಲ್ಲಿ ಅರಣ್ಯ ಮತ್ತು ವನ್ಯ ಜೀವನದ ಸಂರಕ್ಷಣೆ<br>– ಪ್ರಾಜೆಕ್ಟ್ ಟೈಗರ್<br>–ಅರಣ್ಯಗಳ ಮತ್ತು ವನ್ಯಜೀವನ ಸಂಪನ್ಮೂಲಗಳ ವಿಧಗಳು ಮತ್ತು ಹಂಚಿಕೆ<br>–ಸಮುದಾಯ ಮತ್ತು ಸಂರಕ್ಷಣೆ | ಭಾರತದಲ್ಲಿನ ಸಸ್ಯ ಮತ್ತು ಪ್ರಾಣಿವರ್ಗಗಳಿಗೆ ಸಂಬಂಧಿಸಿದಂತೆ ಜೀವವೈವಿಧ್ಯದ ಪ್ರಾಧಾನ್ಯತೆಯನ್ನು ಅರಿಯುವರು.<br>ಅರಣ್ಯ ಮತ್ತು ವನ್ಯಜೀವನದ ಸಂರಕ್ಷಣೆಯ ಪಾಮುಖ್ಯತೆಯನ್ನು ವಿಶ್ಲೇಷಿಸುವರು. |
| 3. ಜಲ ಸಂಪನ್ಮೂಲಗಳು<br>– ಜಲದ ಅಭಾವ ಮತ್ತು ಜಲ ಸಂರಕ್ಷಣೆ ಹಾಗೂ ನಿರ್ವಹಣೆಯ ಅಗತ್ಯ<br>–ಬಹು ಉದ್ದೇಶ ನದಿ ಯೋಜನೆಗಳು ಮತ್ತು ಏಕೀಕೃತ ಜಲ ಸಂಪನ್ಮೂಲ ನಿರ್ವಹಣೆ<br>–ಮಳೆ ನೀರು ಕೊಯ್ಲು | ನೀರು ಒಂದು ಪ್ರಮುಖ ಸಂಪನ್ಮೂಲವಾಗಿದೆ ಎಂದು ಅರಿತುಕೊಳ್ಳುವರು ಹಾಗೂ ಅದರ ವಿವೇಕಯುತ ಬಳಕೆ ಮತ್ತು ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಿಕೊಳ್ಳುವರು. |
| 4. ಕೃಷಿ<br>–ಕೃಷಿಯ ವಿಧಗಳು<br>–ಬಿತ್ತನೆಯ ಮಾದರಿಗಳು<br>–ಪ್ರಮುಖ ಬೆಳೆಗಳು<br>–ತಾಂತ್ರಿಕ ಮತ್ತು ಸಾಂಸ್ಥಿಕ ಸುಧಾರಣೆಗಳು<br>–ಕೃಷಿಯ ಮೇಲೆ ಜಾಗತೀಕರಣದ ಪರಿಣಾಮ | ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ವಿವರಿಸುವರು.<br>ವಿವಿಧ ರೀತಿಯ ಕೃಷಿಯನ್ನು ಗುರುತಿಸುವರು ಮತ್ತು ವಿವಿಧ ಕೃಷಿ ವಿಧಾನಗಳನ್ನು ಚರ್ಚಿಸುವರು, ಮುಖ್ಯ ಬೆಳೆಗಳ ಪ್ರಾದೇಶಿಕ ವಿತರಣೆಯನ್ನು ವಿವರಿಸುವರು ಮತ್ತು ಮಳೆ ಸುರಿತದ ದಿಕ್ಕುದೆಶೆ ಹಾಗೂ ಬಿತ್ತನೆ ಮಾದರಿಗಳ ನಡುವಣ ಸಂಬಂಧ;ಸ್ವಾತಂತ್ರ್ಯಾ ನಂತರ ಸರ್ಕಾರ ಸಾಂಸ್ಥಿಕ ಸುಧಾರಣೆಗೆಂದು ಕೈಗೊಂಡ ರಾಜ್ಯನೀತಿಗಳನ್ನು ವಿವರಿಸುವರು. |
| 5. ಖನಿಜಗಳು ಮತ್ತು ಶಕ್ತಿ ಸಂಪನ್ಮೂಲಗಳು<br>– ಖನಿಜ ಎಂದರೇನು?<br>–ಖನಿಜಗಳ ಲಭ್ಯತೆಯ ರೀತಿ<br>–ಕಬ್ಬಿಣ ಮತ್ತು ಕಬ್ಬಿಣೇತರ ಖನಿಜಗಳು<br>– ಅಲೋಹ ಖನಿಜಗಳು<br>–ಶಿಲಾರೂಪದ ಖನಿಜಗಳು<br>–ಖನಿಜಗಳ ಸಂರಕ್ಷಣೆ<br>– ಶಕ್ತಿ ಸಂಪನ್ಮೂಲಗಳು ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ರಕ್ಷಣೆ | ವಿವಿಧ ರೀತಿಯ ಖನಿಜಗಳು ಮತ್ತು ಶಕ್ತಿ ಸಂಪನ್ಮೂಲಗಳನ್ನು ಮತ್ತು ಅವು ಸಿಗುವ ಸ್ಥಳಗಳನ್ನು ಗುರುತಿಸುವರು.<br>–ಅವುಗಳ ವಿವೇಚನಾಯುಕ್ತ ಬಳಕೆಯ ಅಗತ್ಯವನ್ನು ಮನಗಾಣವರು. |
| 6. ತಯಾರಿಕೆಯ ಉದ್ಯಮಗಳು<br>–ತಯಾರಿಕೆಯ ಪ್ರಾಧಾನ್ಯತೆ<br>–ರಾಷ್ಟ್ರದ ಅರ್ಥವ್ಯವಸ್ಥೆಗೆ ಉದ್ಯಮಗಳ ಕೊಡುಗೆ<br>–ಉದ್ಯಮಗಳ ಸ್ಥಳ<br>–ಉದ್ಯಮಗಳ ವರ್ಗೀಕರಣ<br>–ಪ್ರಾದೇಶಿಕ ವಿತರಣೆ<br>–ಕೈಗಾರಿಕಾ ಮಾಲಿನ್ಯ ಮತ್ತು ಪರಿಸರದ ನಾಶ | ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಉದ್ಯಮಗಳ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸಿಕೊಳ್ಳುವರು ಮತ್ತು ಕೆಲವು ಪ್ರದೇಶಗಳಲ್ಲಿ ಮಾತ್ರ ಕೈಗಾರಿಕೆಗಳ ಸಾಂದ್ರೀಕರಣದಿಂದ ಆದ ಪ್ರಾದೇಶಿಕ ಅಸಮಾನತೆಯನ್ನು ಮನಗಾಣುವರು.<br>ಯೋಜನಾಬದ್ಧ ಕೈಗಾರಿಕಾ ಬೆಳವಣಿಗೆಯ ಅಗತ್ಯದ ಬಗ್ಗೆ ಚರ್ಚಿಸುವರು ಮತ್ತು ಇವುಗಳ ಅಭಿವೃದ್ಧಿಯಲ್ಲಿ |

| | |
|---|---|
| –ಪರಿಸರ ನಾಶದ ನಿಯಂತ್ರಣ | ಸರ್ಕಾರದ ಪಾತ್ರದ ಬಗ್ಗೆ ಚರ್ಚಿಸುವುದು. |
| 7. ರಾಷ್ಟ್ರದ ಆರ್ಥಿಕತೆಯ ಜೀವನ ರೇಖೆಗಳು<br>–ಸಾರಿಗೆ– ರಸ್ತೆ ಮಾರ್ಗ, ರೈಲು ಮಾರ್ಗ, ಪೈಪ್ ಲೈನುಗಳು, ಜಲಮಾರ್ಗ, ವಾಯುಮಾರ್ಗ<br>–ಸಂಪರ್ಕ<br>–ಅಂತರರಾಷ್ಟ್ರೀಯ ವ್ಯಾಪಾರ<br>–ಪ್ರವಾಸೋದ್ಯಮ ಒಂದು ವ್ಯಾಪಾರದ ರೂಪದಲ್ಲಿ | ಸತತವೂ ಚಿಕ್ಕದಾಗುತ್ತಾ ಬರುತ್ತಿರುವ ಪ್ರಪಂಚದಲ್ಲಿ ಸಾರಿಗೆ ಮತ್ತು ಸಂಪರ್ಕದ ಪ್ರಾಮುಖ್ಯತೆಯನ್ನು ವಿವರಿಸುವರು. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ವ್ಯಾಪಾರ ಮತ್ತು ಪ್ರವಾಸೋದ್ಯಮದ ಪಾತ್ರವನ್ನು ಅರ್ಥ ಮಾಡಿಕೊಳ್ಳುವರು. |

| **ಘಟಕ 3 : ಪ್ರಜಾಸತ್ತಾತ್ಮಕ ರಾಜನೀತಿ – 2** | |
|---|---|
| **ವಿಷಯಗಳು** | **ಕಲಿಕಾ ಉದ್ದೇಶಗಳು** |
| 1. ಅಧಿಕಾರದ ಹಂಚಿಕೆ<br>– ಬೆಲ್ಜಿಯಂ ಮತ್ತು ಶ್ರೀಲಂಕಾದ ಕೇಸ್ ಅಧ್ಯಯನಗಳು<br>–ಅಧಿಕಾರ ಹಂಚಿಕೆ ಏಕೆ ಅಪೇಕ್ಷಣೀಯ?<br>–ಅಧಿಕಾರದ ಹಂಚಿಕೆಯ ಸ್ವರೂಪಗಳು | ಪ್ರಜಾಪ್ರಭುತ್ವದಲ್ಲಿ ಅಧಿಕಾರ ಹಂಚಿಕೆಯ ಪ್ರಾಧಾನ್ಯತೆಯ ಬಗ್ಗೆ ಪರಿಚಯ ಮಾಡಿಕೊಳ್ಳುವರು.<br>ಪ್ರಾದೇಶಿಕ ಮತ್ತು ಸಾಮಾಜಿಕ ಅಧಿಕಾರ ಹಂಚಿಕೆಯ ವಿಧಾನಗಳನ್ನು ಅರಿತುಕೊಳ್ಳುವರು. |
| 2. ಸಂಯುಕ್ತ ರಾಷ್ಟ್ರವಾದ<br>–ಸಂಯುಕ್ತ ರಾಷ್ಟ್ರವಾದ ಎಂದರೇನ?<br>–ಭಾರತವನ್ನು ಸಂಯುಕ್ತ ರಾಷ್ಟ್ರವನ್ನಾಗಿ ಮಾಡಿರುವುದು ಯಾವುದು?<br>–ಸಂಯುಕ್ತ ರಾಷ್ಟ್ರವಾದವನ್ನು ಹೇಗೆ ಆಚರಣೆಗೆ ತರಲಾಗುತ್ತದೆ?<br>–ಭಾರತದಲ್ಲಿ ವಿಕೇಂದ್ರೀಕರಣ | ಸಂಯುಕ್ತ ರಾಷ್ಟ್ರೀಯ ಒದಗಣೆ ಮತ್ತು ಸಂಸ್ಥೆಗಳನ್ನು ವಿಶ್ಲೇಷಿಸುವರು.<br>ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಿಕೇಂದ್ರೀಕರಣವನ್ನು ವಿವರಿಸಿರುವರು. |
| 3. ಪ್ರಜಾಪ್ರಭುತ್ವ ಮತ್ತು ವಿವಿಧತೆ<br>– ಮೆಕ್ಸಿಕೊನ ಕೇಸ್ ಅಧ್ಯಯನ<br>–ವ್ಯತ್ಯಾಸಗಳು, ಸಮಾನತೆಗಳು ಮತ್ತು ವಿಭಾಗಗಳು<br>–ಸಾಮಾಜಿಕ ವಿಭಾಗಗಳ ರಾಜಕೀಯ | ಭಾರತೀಯ ಸನ್ನಿವೇಶದಲ್ಲಿ ಸಾಮಾಜಿಕ ವಿಭಾಗಗಳ ಮತ್ತು ರಾಜಕೀಯ ಸ್ಪರ್ಧೆಗಳ ನಡುವಣ ಸಂಬಂಧವನ್ನು ವಿಶ್ಲೇಷಿಸುವರು. |
| 4. ಲಿಂಗ,ಧರ್ಮ ಮತ್ತು ಜಾತಿ<br>–ಲಿಂಗ ಮತ್ತು ರಾಜಕೀಯ<br>–ಧರ್ಮ, ಕೋಮುವಾದ ಮತ್ತು ರಾಜಕೀಯ<br>–ಜಾತಿ ಮತ್ತು ರಾಜಕೀಯ | ಭಾರತೀಯ ಪ್ರಜಾಪ್ರಭುತ್ವಕ್ಕೆ ಕೋಮುವಾದದಿಂದ ಉಂಟಾಗುವ ಸವಾಲುಗಳನ್ನು ಗುರುತಿಸಿ ವಿಶ್ಲೇಷಿಸುವರು.<br>ರಾಜಕೀಯದಲ್ಲಿ ಪ್ರಾಬಲ್ಯವನ್ನು ಕೊಡುವ ಮತ್ತು ಪ್ರಾಬಲ್ಯವನ್ನು ಇಲ್ಲವಾಗಿಸುವ ಜಾತಿ ಮತ್ತು ಜನಾಂಗೀಯತೆಯ ಪರಿಣಾಮವನ್ನು ಗುರುತಿಸುವರು<br>–ರಾಜಕೀಯದಲ್ಲಿ ಲಿಂಗ ದೃಷ್ಟಿಕೋನವೆಂದರೇನು ಎಂಬುದನ್ನು ಗುರುತಿಸಿಕೊಳ್ಳುವರು. |
| 5. ಜನಪ್ರಿಯ ಸಂಘರ್ಷ ಮತ್ತು ಆಂದೋಳನಗಳು<br>–ನೇಪಾಳ ಮತ್ತು ಬೊಲಿವಿಯಾದಲ್ಲಿ ಜನಪ್ರಿಯ ಸಂಘರ್ಷಗಳು<br>–ಕಾರ್ಯಾಚರಣೆಗೆ ಸಿದ್ಧಗೊಳಿಸುವಿಕೆ ಮತ್ತು ಸಂಘಟನೆ<br>–ಒತ್ತಡ ಸಮೂಹಗಳು ಮತ್ತು ಆಂದೋಳನಗಳು | ಪ್ರಜಾಪ್ರಭುತ್ವದ ವಿಸ್ತರಣೆಯಲ್ಲಿ ಜನರ ಸಂಘರ್ಷದ ಪ್ರಮುಖ ಪಾತ್ರವನ್ನು ಮನಗಾಣುವರು. |

| | |
|---|---|
| 6. ರಾಜಕೀಯ ಪಕ್ಷಗಳು<br>– ರಾಜಕೀಯ ಪಕ್ಷಗಳು ನಮಗೆ ಏಕೆ ಬೇಕು?<br>–ಎಷ್ಟು ಪಕ್ಷಗಳಿರಬೇಕು?<br>–ರಾಷ್ಟ್ರಮಟ್ಟದ ರಾಜಕೀಯ ಪಕ್ಷಗಳು<br>–ರಾಜ್ಯ ಮಟ್ಟದ ಪಕ್ಷಗಳು<br>–ರಾಜಕೀಯ ಪಕ್ಷಗಳಿಗೆ ಸವಾಲುಗಳು<br>–ಪಕ್ಷಗಳಲ್ಲಿ ಸುಧಾರಣೆಗಳನ್ನು ತರುವುದು ಹೇಗೆ? | ಪ್ರಜಾಪ್ರಭುತ್ವದಲ್ಲಿನ ಪಕ್ಷ ವ್ಯವಸ್ಥೆಯನ್ನು ವಿಶ್ಲೇಷಿಸುವರು. ಪ್ರಮುಖ ರಾಜಕೀಯ ಪಕ್ಷಗಳ, ಅವು ಎದುರಿಸುತ್ತಿರುವ ಸವಾಲುಗಳನ್ನು, ದೇಶದಲ್ಲಿನ ಸುಧಾರಣೆಗಳನ್ನು ಪರಿಚಯ ಮಾಡಿಕೊಳ್ಳುವರು. |
| 7. ಪ್ರಜಾಪ್ರಭುತ್ವದ ಫಲಿತಗಳು<br>–ಪ್ರಜಾಪ್ರಭುತ್ವದ ಫಲಿತಗಳನ್ನು ನಾವು ಹೇಗೆ ಮೌಲ್ಯಮಾಪನ ಮಾಡುತ್ತೇವೆ?<br>–ಜವಾಬುದಾರಿ ಸ್ಪಂದನಶೀಲ ಮತ್ತು ನ್ಯಾಯಸಮ್ಮತ ಸರ್ಕಾರ<br>–ಆರ್ಥಿಕ ಅಭಿವೃದ್ಧಿ ಮತ್ತು ವಿಕಾಸ<br>–ಅಸಮಾನತೆ ಮತ್ತು ಬಡತನವನ್ನು ಕಡಿಮೆ ಮಾಡುವಿಕೆ<br>–ಸಾಮಾಜಿಕ ವೈವಿಧ್ಯತೆಯನ್ನು ಹೊಂದಿಸಿಕೊಳ್ಳುವಿಕೆ<br>–ಪ್ರಜೆಗಳ ಗೌರವ ಮತ್ತು ಸ್ವಾತಂತ್ರ್ಯ | ಪರ್ಯಾಯ ಆಡಳಿತ ರೂಪಗಳಿಗೆ ಹೋಲಿಕೆ ಮಾಡುತ್ತಾ ಪ್ರಜಾಪ್ರಭುತ್ವಗಳ ಕಾರ್ಯವಿಧಾನವನ್ನು ಮೌಲ್ಯಮಾಪನ ಮಾಡುವರು.<br>ಭಾರತದಲ್ಲಿ ಈಗಲೂ ಪ್ರಜಾಪ್ರಭುತ್ವ ಮುಂದುವರೆಯುತ್ತಿರುವುದಕ್ಕೆ ಕಾರಣಗಳನ್ನು ಗುರುತಿಸುವರು.<br>ಭಾರತೀಯ ಪ್ರಜಾಪ್ರಭುತ್ವದ ಬಲಾಬಲಗಳು ಮೂಲಗಳ ನಡುವಣ ವ್ಯತಾಸವನ್ನು ತೋರಿಸುವರು. |
| 8. ಪ್ರಜಾಪ್ರಭುತ್ವಕ್ಕೆ ಸವಾಲುಗಳು<br>–ಸವಾಲುಗಳ ಬಗ್ಗೆ ಚಿಂತನೆ<br>–ರಾಜಕೀಯ ಸುಧಾರಣೆಗಳ ಚಿಂತನೆ<br>–ಪ್ರಜಾಪ್ರಭುತ್ವವನ್ನು ಪುನರ್ವ್ಯಾಖ್ಯಾನಿಸುವುದು | ಪ್ರಜಾಪ್ರಭುತ್ವವನ್ನು ಮತ್ತಷ್ಟು ಆಳವಾಗಿಸಲು ಸಾಧ್ಯವಾಗಬಲ್ಲ ವಿಭಿನ್ನ ಕ್ರಮಗಳ ಬಗ್ಗೆ ಪರ್ಯಾಲೋಚಿಸುವರು.<br>–ಸಕ್ರಿಯ ಮತ್ತು ಸಹಭಾಗಿತ್ವದ ಪೌರತ್ವವನ್ನ ಪ್ರೋತ್ಸಾಹಿಸುವರು. |

| **ಘಟಕ 4 : ಆರ್ಥಿಕ ಅಭಿವೃದ್ಧಿಯನ್ನು ಅರ್ಥ ಮಾಡಿಕೊಳ್ಳುವಿಕೆ** | |
|---|---|
| **ವಿಷಯಗಳು** | **ಉದ್ದೇಶಗಳು** |
| 1. ಅಭಿವೃದ್ಧಿ<br>–ಅಭಿವೃದ್ಧಿ ಏನು ಆಶ್ವಾಸನೆಗಳನ್ನು ಕೊಡುತ್ತದೆ?–ಬೇರೆ ಬೇರೆ ವ್ಯಕ್ತಿಗಳ ಭಿನ್ನ ಭಿನ್ನ ಗುರಿಗಳು<br>–ಆದಾಯ ಮತ್ತು ಇತರ ಗುರಿಗಳು<br>–ರಾಷ್ಟ್ರೀಯ ವಿಕಾಸ<br>–ಭಿನ್ನ ಭಿನ್ನ ರಾಷ್ಟ್ರಗಳನ್ನು ಹೇಗೆ ಹೋಲಿಸಿ ನೋಡಬಹುದು?<br>–ಆದಾಯ ಮತ್ತು ಇತರ ಮಾನದಂಡಗಳು<br>–ಸಾರ್ವಜನಿಕ ಸೌಲಭ್ಯಗಳು<br>–ಅಭಿವೃದ್ಧಿಯ ಉಳಿದು ಬೆಳೆಯುವಿಕೆ | ಸ್ಥೂಲ ಆರ್ಥಿಕತೆಯ ಪರಿಕಲ್ಪನೆಗಳ ಪರಿಚಯ ಮಾಡಿಕೊಳ್ಳುವರು.<br>ಆದಾಯಕ್ಕಿಂತ ಮಿಗಿಲಾಗಿ ಆದಾಯದಲ್ಲಿ ಹೆಚ್ಚಳ, ಆರೋಗ್ಯ ಮತ್ತು ಶಿಕ್ಷಣದಲ್ಲಿ ಸುಧಾರಣೆಗಳು, ಇತ್ಯಾದಿಗಳನ್ನು ಒಳಗೊಂಡಂತಹ ಒಟ್ಟಾರೆ ಮಾನವ ಅಭಿವೃದ್ಧಿಯ ಹಿಂದಿರುವ ತರ್ಕಾಧಾರವನ್ನು ಮನಗಾಣುವುದು.<br>ಜೀವನದ ಗುಣಾತ್ಮಕತೆ ಮತ್ತು ಉಳಿದು ಬೆಳೆಯುವ ವಿಕಾಸದ ಕುರಿತಾಗಿ ತಿಳಿಯುವರು. |
| 2. ಭಾರತೀಯ ಅರ್ಥವ್ಯವಸ್ಥೆಯ ವಲಯಗಳು<br>–ಆರ್ಥಿಕ ಚಟುವಟಿಕೆಯ ವಲಯಗಳು<br>–ಮೂರು ವಲಯಗಳ ಹೋಲಿಕೆ<br>–ಭಾರತದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ವಲಯಗಳು | ಉದ್ಯೋಗ ಸೃಷ್ಟಿಸುವ ಮುಖ್ಯ ವಲಯಗಳನ್ನು ಗುರುತಿಸುವರು.<br>ಅರ್ಥವ್ಯವಸ್ಥೆಯ ವಿಭಿನ್ನ ವಲಯಗಳಲ್ಲಿ ಸರ್ಕಾರದ ಬಂಡವಾಳ ಹೂಡಿಕೆಗೆ ಕಾರಣವನ್ನು ವಿಶದೀಕರಿಸುವರು. |

| | |
|---|---|
| –ಸಂಘಟಿತ ಮತ್ತು ಅಸಂಘಟಿತ ಎಂಬುದಾಗಿ ವಲಯಗಳ ವಿಭಜನೆ<br>–ಸ್ವಾಮಿತ್ವವನ್ನು ಆಧರಿಸಿ ವಲಯಗಳ ವಿಭಜನೆ:ಸಾರ್ವಜನಿಕ ಮತ್ತು ಖಾಸಗಿ ವಲಯಗಳು | |
| 3. ಹಣ ಮತ್ತು ಸಾಲ<br>–ವಿನಿಮಯದ ಮಾಧ್ಯಮದಂತೆ ಹಣ<br>–ಹಣದ ಆಧುನಿಕ ರೂಪಗಳು<br>–ಬ್ಯಾಂಕುಗಳಲ್ಲಿ ಸಾಲದ ಚಟುವಟಿಕೆಗಳು<br>–ಎರಡು ವಿಭಿನ್ನ ಸಾಲದ ಸನ್ನಿವೇಶಗಳು<br>–ಸಾಲದ ಕರಾರುಗಳು<br>–ಭಾರತದಲ್ಲಿ ಔಪಚಾರಿಕ ವಲಯಕ್ಕೆ ಸಾಲ<br>–ಬಡವರಿಗೆ ಸ್ವಸಹಾಯ ಸಮೂಹಗಳು | ಹಣವನ್ನು ಒಂದು ಆರ್ಥಿಕ ಪರಿಕಲ್ಪನೆಯಾಗಿ ಅರ್ಥಮಾಡಿಕೊಳ್ಳುವರು.<br>–ದಿನನಿತ್ಯದ ಜೀವನದ ದೃಷ್ಟಿಯಿಂದ ಹಣಕಾಸು ಸಂಸ್ಥೆಗಳ ಪಾತ್ರದ ಬಗ್ಗೆ ಅರಿತುಕೊಳ್ಳುವರು. |
| 4. ಜಾಗತೀಕರಣ ಮತ್ತು ಭಾರತದ ಆರ್ಥಿಕತೆ<br>–ವಿವಿಧ ದೇಶಗಳಲ್ಲಿ ಉತ್ಪಾದನೆ<br>–ದೇಶದೇಶಗಳಲ್ಲಿನ ಉತ್ಪಾದನೆಗಳ ನಡುವೆ ಸಂಪರ್ಕ ಕಲ್ಪಿಸುವುದು<br>–ವಿದೇಶ ವಾಣಿಜ್ಯ ಮತ್ತು ಮಾರುಕಟ್ಟೆಗಳ ಏಕೀಕರಣ<br>–ಜಾಗತೀಕರಣ ಎಂದರೇನು?<br>–ಜಾಗತೀಕರಣವನ್ನು ಸಾಧ್ಯವಾಗಿಸಿರುವ ಕಾರಕಾಂಶಗಳು<br>–ವಿಶ್ವವಾಣಿಜ್ಯ ಸಂಸ್ಥೆ<br>–ಭಾರತದ ಮೇಲೆ ಜಾಗತೀಕರಣದ ಪರಿಣಾಮ<br>–ನ್ಯಾಯಸಮ್ಮತ ಜಾಗತೀಕರಣಕ್ಕೆ ಹೋರಾಟ | ಜಾಗತಿಕ ಆರ್ಥಿಕ ವಿದ್ಯಮಾನದ ಕಾರ್ಯವಿಧಾನವನ್ನು ವಿವರಿಸುವರು. |
| 5. ಗ್ರಾಹಕರ ಹಕ್ಕು | ಗ್ರಾಹಕನಾಗಿ ತನ್ನ ಹಕ್ಕು ಬಾಧ್ಯತೆಗಳ ಪರಿಚಯ ಮಾಡಿಕೊಳ್ಳುವರು; ಮತ್ತು ಮಾರುಕಟ್ಟೆಯಲ್ಲಿ ಶೋಷಣೆಯಿಂದ ರಕ್ಷಣೆ ಪಡೆಯಲು ಲಭ್ಯವಿರುವ ಕಾನೂನು ಕ್ರಮಗಳನ್ನು ಪರಿಚಯಿಸಿಕೊಳ್ಳುವರು. |

**ಚಟುವಟಿಕೆ**

8ನೇ ತರಗತಿಯ ಸಿಬಿಎಸ್‌ಇ ಪಠ್ಯಸೂಚಿಯನ್ನು ಇಂಟರ್‌ನೆಟ್‌ನಿಂದ ಡೌನ್‌ಲೋಡ್ ಮಾಡಿ ಅದರ ಲಕ್ಷಣಗಳನ್ನು ವಿಶ್ಲೇಷಿಸಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

9 ಮತ್ತು 10ನೇ ತರಗತಿಯ ಕರ್ನಾಟಕ ರಾಜ್ಯ ಬೋರ್ಡ್‌ನ ಮತ್ತು ಸಿಬಿಎಸ್‌ಇ ಸಮಾಜ ವಿಜ್ಞಾನ ಪಠ್ಯಸೂಚಿಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸಿ ಮತ್ತು ನಿಮ್ಮ ವೀಕ್ಷಣೆಗಳನ್ನು ದಾಖಲಿಸಿ.

### 3.2.3.2. ಕರ್ನಾಟಕ ರಾಜ್ಯ ಬೋರ್ಡ್ ಮತ್ತು ಸಿಬಿಎಸ್‌ಇ ಮಾಧ್ಯಮಿಕ ಹಂತದ ಸಮಾಜ ವಿಜ್ಞಾನ ಪಾಠಸೂಚಿಯ ಸಂಘಟನೆ ಮತ್ತು ಪ್ರಸ್ತುತಿ

ಶಾಲಾ ಶಿಕ್ಷಣದ ಮಾಧ್ಯಮಿಕ ಹಂತದವರೆಗೂ ಸಮಾಜ ವಿಜ್ಞಾನ ಒಂದು ಕಡ್ಡಾಯ ವಿಷಯವಾಗಿದೆ. ಇದು ಸಾಮಾನ್ಯ ಶಿಕ್ಷಣದ ಒಂದು ಅವಿಭಾಜ್ಯ ಅಂಗವಾಗಿದೆ. ಏಕೆಂದರೆ, ಇದು ಕಲಿಕಾರ್ಥಿಗಳು ಸುತ್ತಲ

ಪರಿಸರವನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಅವರಿಗೆ ನೆರವಾಗುತ್ತದೆಯಲ್ಲದೆ, ವಿಶಾಲ ದೃಷ್ಟಿಕೋನವನ್ನು ಅನುಭವಾತ್ಮಕ, ತರ್ಕಾಧಾರಿತ ಮತ್ತು ಮಾನವಹಿತ ಮನೋದೃಷ್ಟಿಯನ್ನು ಬೆಳಸಿಕೊಳ್ಳಲು ನೆರವಾಗುತ್ತದೆ. ಇದರ ಅಧ್ಯಯನ ಅತ್ಯಂತ ಮಹತ್ವವುಳ್ಳದ್ದು. ಏಕೆಂದರೆ, ಯುವ ಕಲಿಕಾರ್ಥಿಗಳು ಅವರು ಜೀವಿಸುವ ಸಮಾಜ ಮತ್ತು ಪ್ರಪಂಚದ ಬಗ್ಗೆ ತಿಳಿಯಲು ಮತ್ತು ಕಾಲದೇಶಗಳ ಸಂದರ್ಭದಲ್ಲಿ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮತ್ತು ಬದಲಾವಣೆಗಳನ್ನು ಕಾಣಲು ಹಾಗೂ ಇವುಗಳ ನಡುವಣ ಸಂಬಂಧವನ್ನು ಮನಗಾಣಲು ಇದರಿಂದ ಸಾಧ್ಯವಾಗುತ್ತದೆ. ಸಮಾಜ ವಿಜ್ಞಾನ ಪ್ರಾಥಮಿಕ (1ರಿಂದ 4 ನೇ ತರಗತಿ) ಮತ್ತು ಹಿರಿಯ ಪ್ರಾಥಮಿಕ ಶಾಲೆಯನ್ನು (6 ರಿಂದ 8) ಒಳಗೊಳ್ಳುವ ಎಲಿಮೆಂಟರಿ ಹಂತದಲ್ಲಿನ ಶಾಲಾ ಪಠ್ಯಕ್ರಮದ ಭಾಗವಾಗುತ್ತಲೇ ಬಂದಿದೆ. ಇದು ಮಹತ್ವಪೂರ್ಣವಾದ ವಿಷಯವೇ. ಏಕೆಂದರೆ, ಇದು ವಿದ್ಯಾರ್ಥಿಗಳು ತಿಳುವಳಿಕೆಯುಳ್ಳ ಜವಾಬ್ದಾರಿಯುತ ಪ್ರಜೆಗಳಾಗಲು ಮತ್ತು ರಾಷ್ಟ್ರದ ಪ್ರಗತಿ ಮತ್ತು ನಿರ್ಮಾಣದ ಪ್ರಕ್ರಿಯೆಯಲ್ಲಿ ಭಾಗವಹಿಸಿ ಪರಿಣಾಮಕಾರಿಯಾದ ಕೊಡುಗೆ ನೀಡಲು ಬೇಕಾದ ಅಗತ್ಯ ಗುಣಗಳನ್ನು ಮತ್ತು ಕೌಶಲ್ಯಗಳನ್ನು ಒದಗಿಸುತ್ತದೆ.

ಸಿಬಿಎಸ್ಇ ನ ಸಮಾಜವಿಜ್ಞಾನ ಪಠ್ಯಕ್ರಮವು ಮುಖ್ಯವಾಗಿ ಇತಿಹಾಸ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಿಂದ ವಿಷಯವಸ್ತುವನ್ನು ತೆಗೆದುಕೊಳ್ಳುತ್ತದೆ. ರಾಜ್ಯ ಬೋರ್ಡ್‌ನ ಪಠ್ಯವಸ್ತು, ವಾಣಿಜ್ಯ ಅಧ್ಯಯನವೆಂಬ ಹೆಚ್ಚುವರಿ ಪಠ್ಯವಿಷಯವನ್ನು ಒಳಗೊಂಡಿದೆ. ಸಮಾಜ ಶಾಸ್ತ್ರ ಮತ್ತು ವಾಣಿಜ್ಯದಿಂದಲೂ ಕೆಲವು ಅಂಶಗಳನ್ನು ತೆಗೆದುಕೊಳ್ಳಲಾಗಿದೆ. ಇವೆರಡೂ ಸೇರಿ ದೇಶಕಾಲಗಳ ಹಿನ್ನೆಲೆಯಲ್ಲಿ ಸಮಾಜದ ಒಂದು ವ್ಯಾಪಕ ನೋಟವನ್ನು ಒದಗಿಸುತ್ತದೆಯಲ್ಲದೆ, ಅವುಗಳ ಪರಸ್ಪರ ಸಂಬಂಧವನ್ನು ತೋರಿಸಿಕೊಡುತ್ತದೆ. ಕಲಿಕಾರ್ಥಿಗಳು ಸಮಾಜವನ್ನು ಬೇರೆ ಬೇರೆ ದೃಷ್ಟಿಕೋನದಿಂದ ಮತ್ತು ಸಮಗ್ರದೃಷ್ಟಿಯಿಂದ ಅರ್ಥ ಮಾಡಿಕೊಳ್ಳಲು ನೆರವಾಗಲು ಪ್ರತಿಯೊಂದು ವಿಷಯವೂ ಒಂದು ನಿರ್ದಿಷ್ಟ ಅನ್ವೇಷಣಾ ವಿಧಾನವನ್ನು ಹೊಂದಿದೆ.

- ಇತಿಹಾಸವು ಜನರ ಪ್ರಸ್ತುತದ ಸಾಮಾಜಿಕ, ರಾಜನೈತಿಕ, ಧಾರ್ಮಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವ ಗುರಿಯನ್ನು ಹೊಂದಿದೆ
- ಭೂಗೋಳ ಶಾಸ್ತ್ರವು ಮನುಕುಲಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಅಧ್ಯಯನ ಮಾಡುತ್ತದೆ. ಮಾನವ ಜೀವಿಸುವ ಪರಿಸರವು ಆತನ ಜೀವನವನ್ನು ಬಹುತೇಕ ರೂಪಿಸುತ್ತದೆ. ಭೂಗೋಳ ಶಾಸ್ತ್ರವು ಭೂಮಿ ಮತ್ತು ಮನುಷ್ಯನ ನಡುವೆ ಇರುವ ಸಂಬಂಧವನ್ನು ಅಧ್ಯಯನ ಮಾಡುತ್ತದೆ.
- ರಾಜ್ಯಶಾಸ್ತ್ರವು ದೇಶವೊಂದರ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳ, ಪ್ರಕ್ರಿಯೆಗಳ ಕಾರ್ಯ ಮತ್ತು ಗತಿಶೀಲತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸುವ ಗುರಿಯನ್ನು ಹೊಂದಿದೆ.
- ಅರ್ಥಶಾಸ್ತ್ರವು ಜನರು ಮತ್ತು ಸಮಾಜಗಳು ಸಂಪನ್ಮೂಲಗಳನ್ನು ಹೇಗೆ ಹಂಚಿಕೆ ಮಾಡುತ್ತಾರೆ ಎಂಬುದರ ಅಧ್ಯಯನವಾಗಿದೆ. ಜನರು ತಮಗೆ ಬೇಕಾದ ಮತ್ತು ಅಗತ್ಯವಾದ ವಸ್ತುಗಳನ್ನು ಪಡೆಯುತ್ತಾರೆ ಹಾಗೂ ಇವು ಹೇಗೆ ವಿತರಣೆಯಾಗುತ್ತದೆ ಎಂಬುದರ ಅಧ್ಯಯನ ಇದಾಗಿದೆ.

ಸಮಾಜ ಹೇಗೆ ರೂಪುಗೊಳ್ಳುತ್ತದೆ, ಕಾರ್ಯ ಮಾಡುತ್ತದೆ ಎಂಬ ಅರಿವಿನಿಂದ ಪ್ರಪಂಚದೊಡನೆ ಆರೋಗ್ಯಕರ ತೊಡಗಿಕೊಳ್ಳುವಿಕೆ ಉಂಟಾಗಬೇಕು ಎಂಬ ಸಂಗತಿಯನ್ನು ಮಕ್ಕಳು ಮತ್ತು ಯುವ ಜನಾಂಗವು ಅರ್ಥ ಮಾಡಿಕೊಳ್ಳಲು ನೆರವಾಗುವಂತಹ ನಿರಂತರ ಪ್ರಕ್ರಿಯೆತನ್ನು ನಡೆಸುವ ಉದ್ದೇಶವನ್ನು 1 ರಿಂದ 10 ನೇ ತರಗತಿಯವರೆಗಿನ ಸಮಾಜ ವಿಜ್ಞಾನದ ಪರಿಷ್ಕೃತ ಪಠ್ಯಸೂಚಿ ಹೊಂದಿದೆ. ಯಾವುದೇ ಚಟುವಟಿಕೆಗೆ ಆಧಾರಭೂತವಾಗಿರುವ ಗ್ರಹಣಶಕ್ತಿ ಕೌಶಲ್ಯಗಳನ್ನು ಸಮಾಜ ವಿಜ್ಞಾನವು ಕೊಡುತ್ತದೆ ಎಂಬ ದೃಷ್ಟಿ ಇದರಿಂದ ವಿಕಸನಗೊಳ್ಳುತ್ತದೆ ಎಂದ ನಿರೀಕ್ಷಿಸಲಾಗುತ್ತದೆ. ಅಲ್ಲದೆ, ಆಮೋದಕರವೂ ಕುತೂಹಲಕಾರಿಯೂ ಸವಾಲಿನಿಂದ ಕೂಡಿದ್ದೂ ಆಗಿರುವ ಸ್ವ–ಅರಿವು ಮತ್ತು ಈಡೇರಿಕೆಗಳಿಗೆ ಇದು ದಾರಿದೀಪವಾಗುತ್ತದೆ. ಸಮಾಜ ವಿಜ್ಞಾನವು ಪ್ರಪಂಚದ ವೈವಿಧ್ಯತೆಯನ್ನು ಮನಗಾಣುವ ಅಂತರ್ದೃಷ್ಟಿಯನ್ನು ಕೊಡಬಲ್ಲುದಲ್ಲದೆ ಅನೇಕ ಸಂಘರ್ಷಪೂರಿತ ವಿವಾದಾಂಶಗಳನ್ನು ಪರಿಹರಿಸುವುದಕ್ಕೆ ನೆರವಾಗಬಲ್ಲದು. ಭಾರತದ ಗತಕಾಲದ ಕುರಿತು, ಅಭಿವೃದ್ಧಿಗೊಳ್ಳುವ ದೇಶದ ಲಕ್ಷಣಗಳ ಕುರಿತು ಸ್ಪಷ್ಟವೂ ನಮ್ಯವೂ ಆದ ಅರಿವನ್ನು ಹೊಂದಬೇಕಾದರೆ ಮುಖ್ಯ ಸಾಮಾಜಿಕ

ಸಮಸ್ಯೆಗಳಿಗೆ ಸ್ಪಂದನಶೀಲರಾಗಿರುವುದು ಬಹಳ ಮುಖ್ಯ. ಪಠ್ಯಸೂಚಿಯು ಇಂತಹ ಸ್ಪಂದನಶೀಲತೆಯನ್ನು ಒದಗಿಸುತ್ತದೆ. ಹಾಗೂ ಇದು ಆಳವಾಗಿ ಬೇರೂರಲು ಸಾಧ್ಯವಾಗುವ ಸನ್ನಿವೇಶವನ್ನು ಒದಗಿಸುತ್ತದೆ. ವಿಶಾಲವಾಗಿ ವ್ಯಾಖ್ಯಾನಿಸಲಾಗುವ ಪ್ರಜಾಪ್ರಭುತ್ವ, ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳಂತಹ ಪರಿಕಲ್ಪನೆಗಳಿಂದ ಅನುಸರಿಸಬೇಕಾದ ಹಾದಿಯನ್ನು ಅದಕ್ಕೆ ಪೂರಕವಾದ ತಿಳುವಳಿಕೆಯನ್ನು ಪಠ್ಯಸೂಚಿ ಪ್ರೋತ್ಸಾಹಿಸುತ್ತದೆ. ಇದನ್ನು ಬುದ್ಧಿವಂತಿಕೆಯ ಸಂವಾದ ಮತ್ತು ಪರ್ಯಾಯ ಸಮರ್ಪಕ ಜ್ಞಾನದ ನೆರವಿನಿಂದ ಸಾಧಿಸಲಾಗುತ್ತದೆ.

ಮಾಧ್ಯಮಿಕ ಹಂತದಲ್ಲಿ, ಸಮಾಜ ವಿಜ್ಞಾನವು ಕಲಿಕಾರ್ಥಿ ಪರಿಸರವನ್ನು ಸಮಗ್ರವಾಗಿ ಅರ್ಥ ಮಾಡಕೊಳ್ಳಲು ಮತ್ತು ವಿಶಾಲ ಮನೋದೃಷ್ಟಿಯನ್ನು ಮತ್ತು ಅನುಭವಾತ್ಮಕ, ತರ್ಕಾಧಾರಿತ ಮತ್ತು ಮಾನವ ಹಿತದ ದೃಷ್ಟಿಯನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ. ಈ ಹಂತದಲ್ಲಿ ಯಾವ ಶಿಸ್ತುಗಳಿಂದ ಸಮಾಜ ವಿಜ್ಞಾನದ ದೃಷ್ಟಿಕೋನ ವಿಕಾಸಗೊಂಡಿದೆಯೋ, ಆ ಶಿಸ್ತುಗಳನ್ನು ಗಮನದಲ್ಲಿರಿಸಿ ನಿರ್ದಿಷ್ಟ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಒಂದು ಮಟ್ಟದವರೆಗೆ, ಹಿರಿಯ ಮಾಧ್ಯಮಿಕ ಬೋಧನೆಯ ಗಮನವು ಇತಿಹಾಸ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳ ಕಡೆಗೆ ಕೇಂದ್ರೀಕೃತವಾಗಿದ್ದು, ಇವು ಮಕ್ಕಳಲ್ಲಿ ಕಾಲಕ್ರಮೇಣ ಮಕ್ಕಳ ಮನಸ್ಸಿನಲ್ಲಿ ಅರ್ಥಪಡೆಯಬೇಕು ಎಂಬುದೇ ಉದ್ದೇಶವಾಗಿದೆ. ಇಂತಹ ಉದ್ದೇಶಗಳೊಂದಿಗೆ , ಪಠ್ಯವಸ್ತುವು ಮಾಹಿತಿಗಿಂತ ವಿಷಯ ಮತ್ತು ತೊಡಗಿಕೊಳ್ಳುವಿಕೆಗೆ ಹೆಚ್ಚಿನ ಗಮನ ಹರಿಸಿದೆ.

ಇಂತಹ ಉದ್ದೇಶವನ್ನಿಟ್ಟುಕೊಂಡು ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತವು ಅವುಗಳ ಕೋರ್ಸಿನ ವಿಷಯವಸ್ತು ಬೇರೆ ಬೇರೆ ಸ್ತರಗಳಲ್ಲಿ ಒಂದನ್ನೊಂದು ವ್ಯಾಪಿಸುವಂತೆ, ಅರಿಯುವಿಕೆಯನ್ನು ಬಲಪಡಿಸುವ ಹಾಗೂ ಸಹಜ ಕುತೂಹಲ ಮತ್ತು ಅನ್ವೇಷಣೆಯ ಸಾಮರ್ಥ್ಯಗಳು ಬೆಳದು ವಿಕಾಸಗೊಳ್ಳುವಂಥ ಅಡಿಪಾಯವನ್ನು ಒದಗಿಸುವ ರೀತಿಯಲ್ಲಿರುವಂತೆ ನೋಡಕೊಳ್ಳಲಾಗುತ್ತದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಆಶಯವನ್ನು ಅನುಸರಿಸಿ ಪಠ್ಯವಸ್ತುವೇ ಮಗುವು ವ್ಯಾಪಕತೆಯನ್ನು ಕಂಡುಕೊಳ್ಳುವ ರೀತಿಯಲ್ಲಿ ಪ್ರೋತ್ಸಾಹಿಸುವ ಪ್ರಾಯೋಜನಾ ಕಾರ್ಯಗಳನ್ನು ಒದಗಿಸುತ್ತದೆ. ಜೊತೆಗೆ, ಸಮಸ್ಯೆಗಳು ಬೇರೆ ಬೇರೆ ಹಂತದಲ್ಲಿ , ಪರಸ್ಪರ ಸಂಬಂಧವುಳ್ಳ ಸ್ತರಗಳಲ್ಲಿ ಇರುವುದನ್ನು ಕಂಡುಕೊಳ್ಳುವಂತೆಯೂ ಪ್ರೋತ್ಸಾಹಿಸುತ್ತವೆ ಎಂದು ನಿರೀಕ್ಷಿಸಲಾಗುತ್ತದೆ.

ಇಂತಹ ಚೌಕಟ್ಟಿನ ಒಳಗೆ 11 ಮತ್ತು 12 ನೇ ತರಗತಿಗಳಲ್ಲಿ ಶಿಸ್ತುಗಳೊಂದಿಗೆ ಆಳವಾದ ತೊಡಗಿಕೊಳ್ಳುವಿಕೆ ವಿಕಸನಗೊಳ್ಳುವುದು ಎಂದು ನಿರೀಕ್ಷಿಸಲಾಗುತ್ತದೆ. ಇದರಿಂದ ಯುವ ವಿದ್ಯಾರ್ಥಿಯು ಉನ್ನತ ಶಿಕ್ಷಣಕ್ಕೆ ಅಥವಾ ನಿರ್ದಿಷ್ಟ ಕೌಶಲ್ಯಗಳು ಅಗತ್ಯವಿರುವ ವಿಸ್ತೃತ ವ್ಯಾಪ್ತಿಯ ವೃತ್ತಿಗಳಿಗೆ ಸಿದ್ಧನಾಗಲು ಅನುಕೂಲವಾಗುತ್ತದೆ. ಉನ್ನತ ಶಿಕ್ಷಣದ ಕೆಲವು ಕಾಳಜಿಗಳನ್ನು ಗಮನದಲ್ಲಿರಿಸುತ್ತಾ ಈಗಿನ ಪಠ್ಯಕ್ರಮಗಳು ಮಾಹಿತಿಗಿಂತ ಅಡಿಪಾಯದತ್ತ ಗಮನವಿರಿಸಲೇ ಬೇಕು, ಗಮನವಿರಿಸುತ್ತಲೂ ಇದೆ. ಇದರಿಂದ ಪ್ರಮುಖ ವರ್ಗಗಳ ಅರಿವು ಮೂಡುತ್ತದೆಯಲ್ಲದೆ, ಶಿಸ್ತುಕ್ಷೇತ್ರಗಳ ವ್ಯಾಪಕ ಅರಿವು ಲಭ್ಯವಾಗುತ್ತದೆ.

ಸಮಾಜ ವಿಜ್ಞಾನ ಪಠ್ಯವಿಷಯವು ಕಲಿಕಾ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಸಾಮಾಜಿಕ ಅಭಿವೃತ್ತಿಗಳು, ದೇಶಪ್ರೇಮವನ್ನು ಬೆಳೆಸುವುದು, ಅಂತರರಾಷ್ಟ್ರೀಯತೆ, ಭ್ರಾತೃತ್ವ ಮತ್ತು ಸಮಾಜದ ಚಾಲಕ ಶಕ್ತಿಗಳ ತಿಳುವಳಿಕೆ, ಸಾಮಾಜಿಕ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿಗಳು ಮತ್ತು ಆಳ್ವಿಕೆಯ ಪ್ರಕ್ರಿಯೆಯ ಅರಿವು– ಇವೆಲ್ಲವುಗಳಿಗೆ ಇದು ನೆರವಾಗುತ್ತದೆ.

ಸಿಬಿಎಸ್ಇ ನ 3 ರಿಂದ 5 ನೇ ತರಗತಿಯವರೆಗಿನ ಸಮಾಜ ವಿಜ್ಞಾನದ ಪಠ್ಯಸೂಚಿಯು ಸಮಾಜ ವಿಜ್ಞಾನವನ್ನು ಒಂದು ಏಕೀಕೃತಗೊಂಡ ವಿಷಯದಂತೆ ಬೋಧಿಸುವುದಕ್ಕೆ ಗಮನ ಕೊಡುತ್ತದೆ. ಇದರ ವಿವಿಧ ಅಂಗಗಳ ನಡುವೆ ಇರುವ ಅಡ್ಡಕೊಂಡಿಗಳನ್ನು ಅರಿಯುವುದು ಮತ್ತು ಸಾಮಾಜಿಕ ಸ್ತರಗಳನ್ನು ಒಂದು ಏಕೀಕೃತ ರೀತಿಯಲ್ಲಿ ನೋಡುವುದು ಇದರಿಂದ ಸಾಧ್ಯವಾಗುತ್ತದೆ. ಆದಾಗ್ಯೂ, 6 ನೇ ತರಗತಿಯಿಂದ

ಮುಂದಕ್ಕೆ ಸಮಾಜ ವಿಜ್ಞಾನದ ಅಡಿಯಲ್ಲಿ ಪ್ರತ್ಯೇಕ ಅಂಗಗಳಾಗಿ ಪರಿಗಣಿಸಲ್ಪಡುವ ಇತಿಹಾಸ, ಭೂಗೋಳ ವಿಜ್ಞಾನ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಿಗೆ ಹೆಚ್ಚು ಒತ್ತನ್ನು ಕೊಡಲಾಗಿದೆ.

ಭಾರತದ ಗತಕಾಲದ ನಮ್ಯವಾದ ದೃಷ್ಟಿಕೋನವನ್ನು ಆ ಮೂಲಕ ದೇಶವು ಬೆಳೆದ ರೀತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಸಾಮಾಜಿಕ ಸಮಸ್ಯೆಗಳ ಕುರಿತಾಗಿ ಸೂಕ್ಷ್ಮ ಸಂವೇದನೆಯನ್ನು ಬೆಳೆಸಿಕೊಳ್ಳುವುದು ಅಗತ್ಯ. ಇಂತಹ ಸಂವೇದನಾಶೀಲತೆಯನ್ನು ಪ್ರೋತ್ಸಾಹಿಸಿ ಅದು ಮತ್ತಷ್ಟು ಆಳವಾಗಿ ಬೇರೂರಲು ಸಾಧ್ಯವಾಗುವಂತೆ ಒಂದು ವೇದಿಕೆಯನ್ನು ಒದಗಿಸುವ ಪ್ರಯತ್ನವನ್ನು ಪಠ್ಯವಸ್ತು ಮಾಡುತ್ತದೆ. ಜೊತೆಗೆ, ನಿರ್ದಿಷ್ಟ ಮಾಹಿತಿಯು ಪ್ರೋತ್ಸಾಹಿಸುವಷ್ಟೇ ಸಂವೇದನಾಶೀಲತೆ ಮತ್ತು ಕುತೂಹಲವನ್ನು ಉಂಟುಮಾಡುವ ವಿಧಾನಕ್ಕೂ ಗಮನಕೊಡಬೇಕು ಎಂದ ಒತ್ತಿ ಹೇಳುತ್ತದೆ.

**ರಾಜ್ಯದ ಪಠ್ಯಸೂಚಿಯಲ್ಲಿ**

6ನೇ ತರಗತಿಗೆ ಮುಂಚಿನ ತರಗತಿಗಳಿಗೆ ಪರಿಸರ ಅಧ್ಯಯನ ಬೋಧನೆಯ ಜೊತೆಗೆ ಸಮಾಜ ವಿಜ್ಞಾನವು ಶಾಲಾ ಪಠ್ಯಕ್ರಮದಲ್ಲಿ ಒಂದು ಭಾಗವಾಗುತ್ತಲೇ ಬಂದಿದೆ. ಪರಿಷ್ಕೃತ ಪರಿಸರ ಅಧ್ಯಯನ ಪಠ್ಯಸೂಚಿಯು 3 ರಿಂದ 5 ನೇತರಗತಿಯವರೆಗೆ ಮಕ್ಕಳ ಗಮನವನ್ನು ಸಮಾಜದ ಕಾಲ, ದೇಶದ ವಿಶಾಲ ಹಿನ್ನೆಲೆ ಮತ್ತು ಸಮಾಜದಲ್ಲಿ ಜೀವನ– ಇವುಗಳತ್ತ ಸೆಳೆಯುವ ಪ್ರಯತ್ನ ಮಾಡಿದೆ. ಜೊತೆಗೆ, ಇದನ್ನು ವಿದ್ಯಾರ್ಥಿ ತನ್ನ ಪರಿಸರವನ್ನು ಹೇಗೆ ಕಾಣುತ್ತಾನೆ, ಹೇಗೆ ಅರ್ಥ ಮಾಡಿಕೊಳ್ಳುತ್ತಾನೆ ಎಂಬುದರೊಂದಿಗೆ ಮಿಳಿತಗೊಳಿಸುತ್ತದೆ.

6 ರಿಂದ 10 ನೇ ತರಗತಿಯವರೆಗೆ ಈ ಪ್ರಕ್ರಿಯೆ ಮುಂದುವರೆಯುತ್ತದೆ. ಆದರೆ, ಸಮಾಜ ವಿಜ್ಞಾನದ ದೃಷ್ಟಿಕೋನಗಳು ಯಾವ ಶಿಸ್ತುಗಳ ಮೂಲಕ ವಿಕಾಸಗೊಂಡಿವೆಯೋ ಆ ಶಿಸ್ತುಗಳಿಗೆ ವಿಶೇಷ ಗಮನಕೊಟ್ಟು ನಿರ್ದಿಷ್ಟ ವಿಷಯಗಳಿಗೆ ಹೆಚ್ಚಿನ ಒತ್ತು ಕೊಡಲಾಗುತ್ತದೆ. ಒಂದು ಹಂತದವರೆಗೆ ಕಾಲೇಜುಮಟ್ಟದ ಬೋಧನೆಯ ಕೇಂದ್ರಗಮನವಾಗಿರುವ ಇತಿಹಾಸ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ವಿಷಯಗಳು ಈ ಬೋಧನೆಯ ವರ್ಷಗಳ ಉದ್ದಕ್ಕೂ ಮಗುವಿನ ಕಲ್ಪನಾಶಕ್ತಿಯಲ್ಲಿ ಸ್ಥಿರಗೊಳ್ಳುತ್ತವೆ. ಆದರೆ, ಅವುಗಳ ಎಲ್ಲೆಗಳು ಮುಕ್ತವಾಗಿದ್ದು ಚರ್ಚೆಗೆ ಅವಕಾಶವಿರುತ್ತದೆ ಮತ್ತು ಅವುಗಳ ಶಾಸ್ತ್ರೀಯತೆ ಸ್ಫುಟವಾಗಿ ಕಾಣುವಂತಿರುವುದಿಲ್ಲ. ಇಂತಹ ಉದ್ದೇಶಗಳೊಂದಿಗೆ ಪಠ್ಯವಸ್ತು ರೂಪಿಸುವವರು ಮಾಹಿತಿಗಿಂತ ಹೆಚ್ಚಾಗಿ ವಿಷಯ ಮತ್ತು ತೊಡಗಿಕೊಳ್ಳುವಿಕೆಗಳಿಗೆ ಹೆಚ್ಚು ಕಾಳಜಿ ವಹಿಸುತ್ತಾರೆ.

ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಈ ಕೆಳಗಿನ ಅಂಶಗಳಿಗೆ ಅವಕಾಶ ಮಾಡಲಾಗಿದೆ:

**ಐಕ್ಯ ಅಥವಾ ಸಮ್ಮಿಳನ (Fusion):** ಬೋಧನೆಯ ಉದ್ದೇಶಕ್ಕಾಗಿ ಹಲವಾರು ವಿಷಯ ಕ್ಷೇತ್ರ ವಸ್ತುವಿಷಯವನ್ನು ಸಂಘಟಿಸುವುದಕ್ಕೆ ಸಮ್ಮಿಳನ ಎನ್ನುವರು. ಅಂತಹ ಒಂದು ಸಂಘಟನೆ ಬೇರೆ ಬೇರೆ ವಿಷಯಗಳ ನಡುವೆ ಇರುವ ಸಾಂಪ್ರದಾಯಿಕ ಎಲ್ಲೆಗಳನ್ನು ಅಪೇಕ್ಷಿಸುತ್ತದೆ. ಬಹುಶಾಸ್ತ್ರೀಯ ಉಪಕ್ರಮದಲ್ಲಿ ಶಿಕ್ಷಕರು ಶಾಲಾ ಪಠ್ಯಕ್ರಮದಲ್ಲಿ ಕೌಶಲ್ಯಗಳನ್ನು, ಜ್ಞಾನವನ್ನು ಅಥವಾ ಅಭಿವ್ಯಕ್ತಿಗಳನ್ನೂ ಸಹ ಸಮ್ಮಿಳಿತಗೊಳಿಸುತ್ತಾರೆ. ಉದಾಹರಣೆಗೆ, ಈ ಸಮಾಜ ವಿಜ್ಞಾನ ಪಠ್ಯಸೂಚಿಯಲ್ಲಿ ಇತಿಹಾಸ, ಭೂಗೋಳ ವಿಜ್ಞಾನ ಮತ್ತು ಇತರ ವಿಷಯಗಳನ್ನು ಸಾಮಾನ್ಯವಾಗಿ ಐಕ್ಯಗೊಳಿಸಲಾಗುತ್ತದೆ.

**ಸಹಸಂಬಂಧ(Correlation):** ಪಠ್ಯಕ್ರಮದ ವಿಷಯವಸ್ತುವಿನ ವಿಘಟನೆಯನ್ನು ತಗ್ಗಿಸಲು ಭಿನ್ನ ಭಿನ್ನ ವಿಷಯಗಳ ನಡುವೆ ಕೊಂಡಿಯನ್ನು ಕಲ್ಪಿಸಲು ಅವಕಾಶ ಮಾಡುವುದಕ್ಕೆ ಸಹಸಂಬಂಧ ಎನ್ನುವರು. ವಿಶಾಲ ಕ್ಷೇತ್ರ ವಿನ್ಯಾಸದಂತೆಯೇ ಈ ಸಹಸಂಬಂಧ ವಿನ್ಯಾಸವು, ಏಕೀಕರಣಕ್ಕೆ ಗಮನ ಕೊಡುತ್ತದೆ ಎನ್ನುವ ಕಾರಣದಿಂದ ಸಮಾನವಾಗಿದೆ ಎನ್ನಬಹುದು. ಸಹಸಂಬಂಧ ಎಂದರೆ ಜ್ಞಾನದ ಸಾಮಾನ್ಯ ಕ್ಷೇತ್ರದಲ್ಲಿ ಸಂಯೋಜನೆಯನ್ನು ತರಲು ಸ್ವಲ್ಪಮಟ್ಟಿಗೆ ಪಠ್ಯಕ್ರಮದ ವಿಭಿನ್ನ ಭಾಗಗಳಲ್ಲಿ ಸಂಯೋಜನೆಯನ್ನು ತರಲು ವಿಷಯಗಳ ನಡುವೆ ಸಂಪರ್ಕ ಬಿಂದುಗಳು ಮತ್ತು ಸಂಬಂಧಗಳನ್ನು ಹುಡುಕಿ ಸಂಬಂಧ ಕಲ್ಪಿಸುವುದು. ಇದು ವಿಶೇಷವಾಗಿ ಹೈಸ್ಕೂಲ್ ಮಟ್ಟದಲ್ಲಿ ಒಂದು ವಿಷಯಕ್ಕೂ ಮತ್ತೊಂದು ವಿಷಯಕ್ಕೂ ಇರುವ ವ್ಯವಸ್ಥಿತ ಮತ್ತು

ನಿರಂತರ ಸಂಯೋಜನೆಯನ್ನ ಪರಿಗಣಿಸುತ್ತದೆ. ಜ್ಞಾನವು ಪ್ರತ್ಯೇಕಿತಗೊಂಡಿರುವುದಲ್ಲ. ಬದಲಾಗಿ, ಅದು ಸಮಗ್ರ ರೂಪದಲ್ಲಿರುತ್ತದೆ ಎಂದು ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಲು ಈ ಸಹಸಂಬಂಧ ನೆರವಾಗುವುದರಿಂದ ಇದು ಮುಖ್ಯವಾಗುತ್ತದೆ.

**ಸಮನ್ವಯ (Integration):** ಇಲ್ಲಿ ಕಲಿಕೆಯ ಕ್ಷೇತ್ರಗಳ ಒಳಗೆ ಮತ್ತು ಬೇರೆ ಬೇರೆ ಕಲಿಕೆಯ ಕ್ಷೇತ್ರಗಳ ನಡುವೆ ಕಲ್ಪಿಸುವ ವಿಶಾಲ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ. ಸಮಾಜ ವಿಜ್ಞಾನದ ಪಠ್ಯವಸ್ತು ಈ ಅಂಶಕ್ಕೆ ಅವಕಾಶ ಮಾಡಿದೆ.

ಪಠ್ಯಸೂಚಿಯಲ್ಲಿ ವಿವಿಧ ಉಪಕ್ರಮಗಳ ಮಿಶ್ರಣವನ್ನು ಅಂದರೆ, ಏಕಕೇಂದ್ರಕ, ವಿಷಯಾತ್ಮಕ ಮತ್ತು ಘಟಕ ಉಪಕ್ರಮಗಳನ್ನು ಬಳಸುವ ಪ್ರಯತ್ನ ಮಾಡಲಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**
ಸೆಕೆಂಡರಿ ಮಟ್ಟದಲ್ಲಿನ ಕರ್ನಾಟಕ ರಾಜ್ಯ ಬೋರ್ಡ್ ಮತ್ತು ಸಿಬಿಎಸ್ಇ ನ ಸಮಾಜ ವಿಜ್ಞಾನ ಪಠ್ಯಸೂಚಿಯಲ್ಲಿ ನೀವು ಮಾಡಿದ ವೀಕ್ಷಣೆಗಳನ್ನು ಪಟ್ಟಿಮಾಡಿ

### 3.2.4. ಸಾರಾಂಶಿಸೋಣ

- ಸಮಾಜ ವಿಜ್ಞಾನ ಪಠ್ಯಸೂಚಿಗೆ ಸಾಮಾನ್ಯವಾದ ಗುರಿ ಮತ್ತು ಉದ್ದೇಶಗಳಿವೆ.
- ಕರ್ನಾಟಕ ರಾಜ್ಯ ಬೋರ್ಡ್‌ನ ಸಮಾಜ ವಿಜ್ಞಾನ ಪಠ್ಯಸೂಚಿಯು ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ ಮತ್ತು ವಾಣಿಜ್ಯ ಅಧ್ಯಯನ ವಿಷಯಗಳನ್ನು ಒಳಗೊಳ್ಳುತ್ತದೆ.
- ಸಿಬಿಎಸ್ಇ ನ ಸಮಾಜ ವಿಜ್ಞಾನವು ತನ್ನ ಪಠ್ಯವಿಷಯ ವಸ್ತುವನ್ನು ಇತಿಹಾಸ, ರಾಜ್ಯಶಾಸ್ತ್ರ, ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಿಂದ ತೆಗೆದುಕೊಳ್ಳುತ್ತದೆ.
- ಎರಡೂ ಪ್ರಣಾಳಿಯಲ್ಲಿ ಉದ್ದೇಶಗಳನ್ನು ನಿಶ್ಚಿತಪಡಿಸಲಾಗಿದ್ದು, ಸೂಕ್ತ ವಿಷಯವಸ್ತುವನ್ನು ಗುರುತಿಸಲಾಗಿದೆ.
- ಇವೆರಡರಲ್ಲಿಯೂ ಬೋಧಿಸುವ ಸಹಸಂಬಂಧ ಮತ್ತು ಸಮನ್ವಯಕ್ಕೆ ಅವಕಾಶವಿದೆ.
- ಕರ್ನಾಟಕ ರಾಜ್ಯ ಬೋರ್ಡ್ ಮತ್ತು ಸಿಬಿಎಸ್ಇ ಸಮಾಜ ವಿಜ್ಞಾನ ಪಠ್ಯಸೂಚಿಯಲ್ಲಿ ಕೆಲವು ವ್ಯತ್ಯಾಸಗಳಿವೆ.

### 3.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತರಗಳು – 1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಸ್ವಯಂ ಕಲಿಕಾ ಸಾಮಗ್ರಿಯ ಭಾಗ 3.2.3.1 ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಸ್ವಯಂ ಕಲಿಕಾ ಸಾಮಗ್ರಿಯ ಭಾಗ 3.2.3.2 ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**
ನಿಮ್ಮ ಶಾಲೆಯ  ಇತರ ಸಮಾಜ ವಿಜ್ಞಾನ ಶಿಕ್ಷಕರೊಂದಿಗೆ ನಿಮ್ಮ ವೀಕ್ಷಣೆಯನ್ನು ಹಂಚಿಕೊಳ್ಳಿ ಮತ್ತು ಅವರ ಹಿಮ್ಮಾಹಿತಿ ಪಡೆಯಿರಿ. ಅವರ ವೀಕ್ಷಣೆಗಳನ್ನೂ ದಾಖಲಿಸಿ.

**3.2.6. ಘಟಕಾಂತ್ಯ ಅಭ್ಯಾಸಗಳು**

1. ಕರ್ನಾಟಕ ರಾಜ್ಯ ಬೋರ್ಡ್‌ನ ಸೆಕೆಂಡರಿ ಶಿಕ್ಷಣದ ಸಮಾಜ ವಿಜ್ಞಾನ ಪಠ್ಯಸೂಚಿಯ ವಿಷಯವಸ್ತುವಿನ ಉದ್ದೇಶಗಳು ಮತ್ತು ಸಂಘಟನೆಯನ್ನು ಸ್ಪಷ್ಟವಾಗಿ ತಿಳಿಸಿ.
2. ಸಿಬಿಎಸ್‌ಇ ನ ಸಮಾಜ ವಿಜ್ಞಾನ ಪಠ್ಯಸೂಚಿಯ ಉದ್ದೇಶಗಳು ಮತ್ತು ವಿಷಯವಸ್ತು ಸಂಘಟನೆಯನ್ನು ವಿಶದೀಕರಿಸಿ.
3. ಕರ್ನಾಟಕ ರಾಜ್ಯ ಬೋರ್ಡ್ ಮತ್ತು ಸಿಬಿಎಸ್‌ಇ ಪಠ್ಯಸೂಚಿಯ ನಿಮ್ಮ ವೀಕ್ಷಣಾಂಶಗಳನ್ನು ತಿಳಿಸಿ.

**3.2.7. ಪರಾಮರ್ಶನ ಸೂಚಿ**


1. Teaching of Social Studies, S.K Mangal &Uma Mangal, PHI Learning Private Limited, New Delhi, 2001.
2. Teaching of Social Studies, J C Aggarwal, Vikas Publishing House, New Delhi, 2008.
3. Modern Teaching of Civics/ Political Science, M.H. Syed, Anmol Publications, New Delhi, 2004.
4. Methods of Teaching Civics, J.P Kumar & D.B. Rao, Discovery Publishing House, New Delhi, 2004.
5. Teaching of Economics, Amita Yadav, Anmol Publications, New Delhi, 2004.
6. Teaching of History, S.K Kochhar, Sterling Publishers, New Delhi, 2003.
7. Teaching of History and Civics, Timmareddy, VidyanidhiPrakashana, Gadag, 2000.
8. http://www.bdu.ac.in/cde/docs/ebooks/B-Ed/I/TEACHING%20%20OF%20SOCIAL%20SCIENCE.pdf
   http://paleeri.blogspot.com/2019/09/note-on-curriculum-in-social-sciences.html
9. http://cbseacademic.nic.in/web_material/CurriculumMain20/Main-Secondary/Social_Science_Sec_2019-20.pdf
10. https://byjus.com/kseeb/class-10-social-science-syllabus/

## ಬ್ಲಾಕ್ 3 : ಸಮಾಜ ವಿಜ್ಞಾನಗಳ ಪಠ್ಯಕ್ರಮ ಮತ್ತು ಬೋಧನೆ

### ಘಟಕ 3 : ಇತಿಹಾಸ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

**ಘಟಕದ ರಚನೆ**

3.3.1. ಕಲಿಕಾ ಉದ್ದೇಶಗಳು
3.3.2. ಪೀಠಿಕೆ
3.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
3.3.3.1. ಇತಿಹಾಸ ಬೋಧನೆ: ವಿಧಾನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.3.3.2. ಇತಿಹಾಸ ಬೋಧನೆಯ ತಂತ್ರಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
3.3.4. ಸಾರಾಂಶಿಸೋಣ
3.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2
3.3.6. ಘಟಕಾಂತ್ಯ ಅಭ್ಯಾಸಗಳು
3.3.7. ಪರಾಮರ್ಶನ ಸೂಚಿ

### 3.3.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಇತಿಹಾಸ ಬೋಧನೆಯ ವಿಧಾನಗಳನ್ನು ವಿಶದೀಕರಿಸುವರು;
- ಇತಿಹಾಸ ಬೋಧನೆಯಲ್ಲಿ ಒಳಗೊಳ್ಳುವ ತಂತ್ರಗಳನ್ನು ಮತ್ತು ಕಾರ್ಯನೀತಿಗಳನ್ನು ವಿಶ್ಲೇಷಿಸುವರು;
- ಪರಿಣಾಮಕಾರಿ ಗ್ರಹಿಕೆಯನ್ನು ಸಾಧ್ಯವಾಗಿಸುವ ಇತಿಹಾಸ ಬೋಧನೆಯ ವಿವಿಧ ತಂತ್ರಗಳನ್ನು ಪ್ರಯೋಗಿಸುವರು; ಮತ್ತು
- ಇತಿಹಾಸ ಬೋಧನೆಯ ವಿವಿಧ ವಿಧಾನಗಳ ಗುಣ–ಮಿತಿಗಳನ್ನು ಪಟ್ಟಿಮಾಡುವರು.

### 3.3.2. ಪೀಠಿಕೆ

ಪ್ರಿಯ ವಿದ್ಯಾರ್ಥಿಗಳೇ,

ಹಿಂದಿನ ಘಟಕದಲ್ಲಿ ಸಮಾಜ ವಿಜ್ಞಾನದ ಪಠ್ಯಕ್ರಮದ ತತ್ವಗಳನ್ನು ಮತ್ತು ಸಂಘಟನೆಯನ್ನು ಅರ್ಥ ಮಾಡಿಕೊಂಡೆವು. ನಿಶ್ಚಿತಗೊಳಿಸಿದ ಪಠ್ಯಕ್ರಮವನ್ನು ಕಾಲಕ್ರಮದಲ್ಲಿ ಕಾರ್ಯರೂಪಕ್ಕೆ ತರಬೇಕು. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಅಗತ್ಯಗಳಿಗೆ ತಕ್ಕಂತೆ ಕೆಲವು ನಿರ್ದಿಷ್ಟ ವಿಧಾನಗಳು ಇದಕ್ಕೆ ಆವಶ್ಯಕ. ಪಠ್ಯವಿಷಯವು ವಸ್ತುವಿನ ಸ್ವರೂಪವನ್ನು ಅವಲಂಬಿಸಿದಂತೆ ಬೇರೆ ಬೇರೆ ಘಟಕಗಳಿಗೆ ಬೇರೆ ಬೇರೆ ಉಪಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಘಟಕವು ವಿಶೇಷವಾಗಿ ಇತಿಹಾಸಕ್ಕೆ ಸಂಬಂಧಿಸಿದಂತೆ ಸಮಾಜ ವಿಜ್ಞಾನ ಬೋಧನೆಯಲ್ಲಿ ಬಳಸಲಾಗುವ ವಿಭಿನ್ನ ವಿಧಾನಗಳತ್ತ ಗಮನ ಕೇಂದ್ರೀಕರಿಸುತ್ತದೆ. ಕಥಾನಿರೂಪಣೆ, ಉಪನ್ಯಾಸ, ಆಕರ ಮತ್ತು ಜೀವನ ಚರಿತ್ರೆಯ ವಿಧಾನಗಳು ಇದರಲ್ಲಿ ಒಳಗೊಳ್ಳುತ್ತವೆ. ಇತಿಹಾಸ ಬೋಧನೆಯ ವಿವಿಧ ತಂತ್ರಗಳನ್ನು ಮತ್ತು ಮಾರ್ಗೋಪಾಯಗಳನ್ನೂ ನಾವು ಈ ಘಟಕದಲ್ಲಿ ವಿಚಾರಮಾಡೋಣ.

### 3.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 3.3.3.1. ಇತಿಹಾಸ ಬೋಧನೆ: ವಿಧಾನಗಳು

ಪರಿಣಾಮಕಾರಿ ಬೋಧನಾ ವಿಧಾನಗಳು ತರಗತಿಯಲ್ಲಿ ವಿದ್ಯಾರ್ಥಿ ಯಶಸ್ಸು ಗಳಿಸಲು ನೆರವಾಗುವ ಆವಶ್ಯಕ ಮಾರ್ಗಗಳಾಗಿವೆ. ಪ್ರತಿಯೋರ್ವ ವಿದ್ಯಾರ್ಥಿಯೂ ವಿಭಿನ್ನ ವ್ಯಕ್ತಿತ್ವ ಹಾಗೂ ಕಲಿಕಾ ಸಾಮರ್ಥ್ಯಗಳನ್ನು ಹೊಂದಿರುತ್ತಾನೆ ಎಂಬ ಅಂಶ ನಿಮ್ಮ ಗಮನಕ್ಕೆ ಬಂದಿದೆ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಬೋಧಿಸಲು

ಬೋಧನಾ ವಿಧಾನವನ್ನು ಆಯ್ಕೆ ಮಾಡಿಕೊಳ್ಳುವಾಗ ಪರಿಗಣಿಸಬೇಕಾದ ಹಲವು ಅಂಶಗಳಿವೆ. ಬೋಧನಾ ವಿಧಾನಗಳನ್ನು ಆಯ್ಕೆ ಮಾಡಲು ಕೆಲವು ನಿರ್ಧಾರಕ ಕಾರಕಾಂಶಗಳೆಂದರೆ, ವಿದ್ಯಾರ್ಥಿಯ ಆಸಕ್ತಿ ಮತ್ತು ಹಿನ್ನೆಲೆ ಜ್ಞಾನ, ಅವರ ಪರಿಸರ ಮತ್ತು ಕಲಿಕಾ ಸಾಮರ್ಥ್ಯಗಳು. ಶಿಕ್ಷಕರು ವಿದ್ಯಾರ್ಥಿಗಳಿಗೆ ಶ್ರವಣ, ಮತ್ತು ದೃಶ್ಯ ಕಲಿಕಾ ಸಾಧನಗಳ ಮೂಲಕ ಕಲಿಯಲು ಸಹ ಸಹಾಯ ಮಾಡುವರು.

**ಇತಿಹಾಸ ಬೋಧನೆಯ ವಿಧಾನಗಳು**

ಇತಿಹಾಸ ಎಂದರೆ ಭೂಮಂಡಲದ ಮೇಲೆ ಆಗಿ ಹೋಗಿರುವ ಮನುಷ್ಯನ ಗತ ಚಟುವಟಿಕೆಗಳ ದಾಖಲೆ. ಕಲಿಕೆಯ ಪರಿಸರದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲು ಬಳಸಲಾಗುವ ವಿವಿಧ ತತ್ವಗಳು ಮತ್ತು ಆಚರಣೆಗಳನ್ನು ಬೋಧನಾ ವಿಧಾನಗಳು ಎನ್ನುತ್ತೇವೆ. ಶಿಕ್ಷಕರು ಬಳಸುವ ವಿಧಾನಗಳು ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಏನು ಕೌಶಲ್ಯಗಳನ್ನು ಅಥವಾ ಮಾಹಿತಿಯನ್ನು ತಲುಪಿಸಲು ಇಚ್ಛಿಸುತ್ತಾರೆ ಎನ್ನುವುದನ್ನು ಅವಲಂಬಿಸಿದೆ.

**ಕಥಾ ನಿರೂಪಣೆ (Story Telling Method)**

ಇತಿಹಾಸ ಬೋಧನೆಯ ವಿಧಾನಗಳಲ್ಲಿ ಕಥಾನಿರೂಪಣೆ ಮುಖ್ಯವಾದ ಒಂದು ವಿಧಾನ. ಪ್ರಸಿದ್ಧ ರಾಜರು, ಸುಧಾರಕರು, ಹೆಸರಾಂತ ಪುರುಷರು ಮತ್ತು ಮಹಿಳೆಯರು, ಆದಿಕಾಲದ ಮಾನವನ ಕಥೆ, ಸಂತ ಮಹಾತ್ಮರು, ಅನ್ವೇಷಕರು ಇತ್ಯಾದಿ ವ್ಯಕ್ತಿಗಳ ಕಥೆಯನ್ನು ವಿದ್ಯಾರ್ಥಿಗಳಿಗೆ ಹೇಳಬಹುದು. ಈ ವಿಧಾನದಲ್ಲಿ ನಿರೂಪಣೆ ಮುಖ್ಯ ಕ್ರಿಯೆಯಾಗಿದೆ. ಇದೊಂದು ಕಲೆಯೇ ಆಗಿದೆ. ಆಸಕ್ತಿಕರ ಘಟನೆಗಳನ್ನು ಕ್ರಮಬದ್ಧ ರೀತಿಯಲ್ಲಿ ಸ್ಪಷ್ಟ ಮಾತಿನ ಮೂಲಕ ವಿದ್ಯಾರ್ಥಿಗಳಿಗೆ ಪ್ರಸ್ತುತಪಡಿಸುವುದು ಇದರ ಉದ್ದೇಶ. ಈ ಪ್ರಸ್ತುತಿ ವಿದ್ಯಾರ್ಥಿಗಳು ಆ ಘಟನಾವಳಿಗಳನ್ನು ತಮ್ಮ ಮನಸ್ಸಿನಲ್ಲಿ ಪುನರ್ ರಚಿಸಲು ಸಮರ್ಥರಾಗುವಂತೆ ಹಾಗೂ ಅನುಭವಗಳ ಮೂಲಕ ಅವರ ಮನಸ್ಸಿನಲ್ಲಿ ಜೀವಂತವಾಗಿ ಉಳಿಯುವ ರೀತಿಯಲ್ಲಿ ಇರಬೇಕು.

ಈ ವಿಧಾನದಲ್ಲಿ ಯಶಸ್ಸು ಕಥೆಯನ್ನು ಪರಿಣಾಮಕಾರಿಯಾಗಿ ನಿರೂಪಿಸವ ಶಿಕ್ಷಕರ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಶಿಕ್ಷಕರು ಒಳ್ಳೆಯ ಅಭಿನಯಗಾರನೂ, ಒಳ್ಳೆಯ ಮಾತುಗಾರನೂ ಆಗಿರಬೇಕು. ಪ್ರತಿಯೋರ್ವ ಇತಿಹಾಸ ಶಿಕ್ಷಕನೂ ಈ ಕಲೆಯನ್ನು ತಿಳಿದಿರಬೇಕು. ಸಮೃದ್ಧ ಕಲ್ಪನಾಶಕ್ತಿ, ಖಚಿತವೂ ವಿಸ್ತಾರವೂ ವೈವಿಧ್ಯಮಯವೂ ಆದ ಗತಕಾಲದ ಜ್ಞಾನ– ಇವು ಈ ವಿಧಾನದ ಯಶಸ್ಸಿಗೆ ಬೇಕಾದ ಮೂಲಭೂತ ಅಗತ್ಯತೆಗಳಾಗಿವೆ.

**ಕಥೆಗಳ ವಿಧಗಳು:** ಇತಿಹಾಸ ಬೋಧನೆಯಲ್ಲಿ ಉಪಯೋಗಿಸಬಹುದಾದ ಕಥೆಗಳಲ್ಲಿ ಮೂರು ವಿಧಗಳಿವೆ:
ಎ) ನಿಜವಾಗಿ ನಡೆದ ಕಥೆ: ಈ ಕಥೆಗಳು ಇತಿಹಾಸ ಬೋಧನೆಯಲ್ಲಿ ಮೌಲ್ಯಯುತ ಕೊಡುಗೆ ನೀಡುತ್ತವೆ.
ಬಿ) ಕಾಲ್ಪನಿಕ: ಈ ಕಥೆಗಳು ನಿಜವಾದ ಕಥೆಗಳಲ್ಲ. ಬಹುತೇಕ ಕಥೆಗಳು ಅಲೌಕಿಕ ವಸ್ತು ವಿಷಯಗಳನ್ನು ಕುರಿತದ್ದಾಗಿರುತ್ತವೆ.
ಸಿ) ಆಖ್ಯಾಯಿಕೆ: ಪೌರಾಣಿಕ ಕಥೆಗಳು ಆಖ್ಯಾಯಿಕೆಗಳು ಹಳೆಯ ಕಥೆಗಳಾಗಿರುತ್ತವೆ. ಆದರೆ, ಬಹಳಷ್ಟು ಆಖ್ಯಾಯಿಕೆಗಳು ಹಿಂದೆ ವಾಸ್ತವವಾಗಿ ನಡೆದ ಏನೋ ಒಂದು ಘಟನೆಯನ್ನು ಆಧರಿಸಿಯೇ ಇರುತ್ತವೆ.

**ಅನುಕೂಲತೆಗಳು:**

- **ಆಸಕ್ತಿ ವರ್ಧನೆ:** ಮಕ್ಕಳು ಕಥೆ ಆಲಿಸುವುದರಲ್ಲಿ ಆನಂದವನ್ನು ಅನುಭವಿಸುತ್ತಾರೆ. ಆದ್ದರಿಂದ, ಕಥಾನಿರೂಪಣೆಯನ್ನು ಬೋಧನೆಯ ಒಂದು ಆಸಕ್ತಿಕರ ಮಾಧ್ಯಮವನ್ನಾಗಿ ಬಳಸಬಹುದು.
- **ಕಲ್ಪನಾಶಕ್ತಿಯ ವಿಕಸನ:** ಸರಿಯಾದ ರೀತಿಯಲ್ಲಿ ಹೇಳಿದ ಒಳ್ಳೆಯ ಕಥೆ ಕೇಳುಗರಲ್ಲಿ ಕಲ್ಪನಾಶಕ್ತಿಯನ್ನು ಬೆಳೆಸುತ್ತದೆ.
- **ಸೃಜನಾತ್ಮಕ ಸಾರ್ಥ್ಯದ ತರಬೇತಿ:** ಕಥಾವರ್ಣನೆಯ ಮುಖಾಂತರ ಮಗುವು ಕಲ್ಪನಾಶಕ್ತಿಯನ್ನು ಬೆಳೆಸಿಕೊಳ್ಳುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕತೆ ಬೆಳೆಯುತ್ತದೆ.
- **ಸದ್ಗುಣಗಳನ್ನು ರೂಢಿಸಿಕೊಳ್ಳುವಿಕೆ:** ಕಥೆಯು ಸದ್ವರ್ತನೆಯ ಕುರಿತಾದ ವಿಚಾರಗಳನ್ನು ರೂಪಿಸುವದಲ್ಲದೆ, ಮಗುವಿನ ಚಾರಿತ್ರ್ಯ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ದಾರಿ ಮಾಡುತ್ತದೆ.

- **ಕಲಿಕೆ ಮನರಂಜನೆಯಿಂದ ಕೂಡಿರುತ್ತದೆ:** ಮಕ್ಕಳಿಗೆ ಶಿಕ್ಷಣವು ಮನರಂಜಕವಾಗಿರಬೇಕು. ಇದು ಕಥೆ ಹೇಳುವುದರಿಂದ ಮಾತ್ರ ಸಾಧ್ಯ. ಇದು ಮಗು ತನ್ನ ಶಿಕ್ಷಣವನ್ನು ಆನಂದಿಸುವಂತೆ ಮಾಡುತ್ತದೆ.

**ಆಕರ ವಿಧಾನ ಅಥವಾ ಮೂಲಾಧಾರ ವಿಧಾನ: (Source Method)**

ಈ ವಿಧಾನದ ಪ್ರಕಾರ, ವಿದ್ಯಾರ್ಥಿಗಳು ಲಭ್ಯವಿರುವ ಆಕರಗಳ ಸಹಾಯದಿಂದ ಇತಿಹಾಸವನ್ನು ನಿರ್ಮಾಣ ಮಾಡಬೇಕಾಗುತ್ತದೆ. ಈ ವಿಧಾನದ ಉದ್ದೇಶಗಳು ಇಂತಿವೆ:

- ಆಕರಗಳನ್ನು ಬಳಸುವ ಮೂಲಕ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವುದು.
- ಆಕರಗಳ ವಿಮರ್ಶಾತ್ಮಕ ವಿಶ್ಲೇಷಣೆಯ ಮೂಲಕ ತಮ್ಮದೇ ಆದ ಸ್ವತಂತ್ರ ನಿರ್ಣಯಗಳನ್ನು ತೆಗೆದುಕೊಳ್ಳುವಂತೆ ಮಾಡುವುದು.
- ದತ್ತಾಂಶ ಸಂಗ್ರಹಣೆ ದತ್ತಾಂಶಗಳ ಸಂಘಟನೆ ಮತ್ತು ಅರ್ಥೈಸುವಿಕೆ ಮುಂತಾದ ಮೂಲಭೂತ ಕೌಶಲ್ಯಗಳನ್ನು ವಿಕಸನಗೊಳಿಸುವುದು.
- ಸೂಕ್ತ ದೃಷ್ಟಿಕೋನದೊಂದಿಗೆ ಇತಿಹಾಸದ ಅಧ್ಯಯನದಲ್ಲಿ ಆಸಕ್ತಿಯನ್ನು ಬೆಳೆಸಿ ಪ್ರೋತ್ಸಾಹಿಸುವುದು.

**ಆಕರಗಳ ವರ್ಗೀಕರಣ:**
ಆಕರಗಳನ್ನು ಈ ಕೆಳಗಿನ ವರ್ಗಗಳಾಗಿ ವಿಂಗಡಿಸಬಹುದು–

- ಪುರಾತತ್ವ ಆಕರಗಳು – ಇವನ್ನು ಪುನಃ ಮೂರು ವರ್ಗಗಳಾಗಿ ವಿಂಗಡಿಸಬಹುದು. ಕೊತ್ತಳಗಳು, ಆರಾಧನಾ ಸ್ಥಳಗಳು, ಮಡಿಕೆಕುಡಿಕೆಗಳು ಇತ್ಯಾದಿ. ಭೂಶೋಧನೆಯು (ತೋಡುಗೆಲಸ) ಆ ಸ್ಥಳದ ಹೊರ ಪ್ರಪಂಚದೊಂದಿಗಿನ ಸಾಂಸ್ಕೃತಿಕ ಸಂಪರ್ಕದ ವಿವಿಧ ಹಂತಗಳನ್ನು ತಿಳಿಯಲು ನೆರವಾಗುತ್ತವೆ.
- ಶಾಸನ ಲಿಪಿಯ ರೂಪದ ಆಕರಗಳು ಸಮೃದ್ಧವಾಗಿದ್ದು ಹೆಚ್ಚು ಅಧಿಕೃತವೂ ವಿಶ್ವಸಾರ್ಹ ಸಾಕ್ಷ್ಯಾಧಾರವೂ ಆಗಿವೆ. ಶಿಲಾಫಟಕಗಳು, ಕಂಬಗಳು, ತಾಮ್ರದ ತಗಡುಗಳು, ಕಟ್ಟಡಗಳ ಗೋಡೆಗಳು, ಕಂದುಗೆಂಪಿನ ಗಟ್ಟಿ ಜೇಡಿ ಮಣ್ಣಿನ (ಟೆರಾಕೊಟ) ಇಟ್ಟಿಗೆಗಳ ಕಟ್ಟಡಗಳು ಇತ್ಯಾದಿ ಇದರಲ್ಲಿ ಒಳಗೊಳ್ಳುತ್ತವೆ.
- ನಾಣ್ಯರಚನೆಯ ಸಾಕ್ಷ್ಯಾಧಾರಗಳನ್ನು ನಾಣ್ಯಗಳ ಅಧ್ಯಯನದಿಂದ ಸಂಗ್ರಹಿಸಲಾಗುತ್ತದೆ.

**ಸಾಹಿತ್ಯಿಕ ಆಕರಗಳು**
ಈ ಆಕರಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು:

- ಪವಿತ್ರ ಅಥವಾ ಧಾರ್ಮಿಕ ಸಾಹಿತ್ಯ– ಇದರಲ್ಲಿ ವೇದಗಳು ಮಹಾಕಾವ್ಯಗಳು, ಪುರಾಣಗಳು, ಬೌದ್ಧ ಮತ್ತು ಜೈನ ಸಾಹಿತ್ಯ ಇತ್ಯಾದಿ ಒಳಗೊಳ್ಳುತ್ತವೆ.
- ಲೌಕಿಕ ಸಾಹಿತ್ಯ– ಇದರಲ್ಲಿ ಖಾಸಗಿ ಮತ್ತು ಅಧಿಕೃತ ದಸ್ತಾವೇಜುಗಳು ಒಳಗೊಂಡಿವೆ. ಇದು ಜನರ ಸಾಮಾಜಿಕ, ಆರ್ಥಿಕ, ರಾಜನೈತಿಕ ಮತ್ತು ಸಾಂಸ್ಕೃತಿಕ ಜೀವನದ ಬಗ್ಗೆ ಉಪಯುಕ್ತ ಮಾಹಿತಿ ಒದಗಿಸುತ್ತದೆ.
- ವಿದೇಶಿಯರಿಂದ ವಿಷಯ ಕಥನ– ಮೆಗಾಸ್ತನಿಸ್, ಫಾಹಿಯಾನ್, ಹಿರೊಡೊಟಸ್ ಮೊದಲಾದ ವಿದೇಶಿಯರು ಬರೆದ ವಿಷಯ ಕಥನಗಳು ಇದರಲ್ಲಿ ಒಳಗೊಳ್ಳುತ್ತವೆ.

**ಮೌಖಿಕವಾಗಿ ಬಂದ ಸಂಪ್ರದಾಯ ಮತ್ತು ಜನಪದ ಸಂಪ್ರದಾಯ:** ಇವು ಸ್ಥಾನೀಯ ಇತಿಹಾಸದ ಬಗ್ಗೆ ಮಾಹಿತಿಯನ್ನು ಪಡೆಯಲು ಬಹಳ ಉಪಯುಕ್ತ. ಇವುಗಳನ್ನು ಮೂಲಭೂತ ಆಕರಗಳು ಮತ್ತು ಪರೋಕ್ಷ ಆಕರಗಳು ಎಂದು ವರ್ಗೀಕರಿಸುತ್ತಾರೆ.

ಮೂಲಭೂತ ಆಕರಗಳು ನಿಜವಾದ ಆಕರಗಳಾಗಿರುತ್ತವೆ. ಅವು ಘಟನೆಯೊಂದಕ್ಕೆ ನೇರವಾಗಿ ಸಂಬಂಧಿಸಿರುತ್ತವೆ. ಈ ಕಥನಗಳು ಆ ಘಟನೆಗೆ ನೇರವಾಗಿ ಸಂಬಂಧಿಸಿದ ಅಥವಾ ಅದಕ್ಕೆ ಸಾಕ್ಷಿಯಾದ ವ್ಯಕ್ತಿಗಳಿಗಂದ ಸಿದ್ಧಗೊಂಡಿರುತ್ತವೆ.

ಪರೋಕ್ಷ ಆಕರಗಳು ವಾಸ್ತವಿಕ ಘಟನೆಯ ಸ್ಥಳದಿಂದ ಬಹಳ ದೂರವಿದ್ದ ವ್ಯಕ್ತಿಗಳಿಂದ ವಿಶ್ವಸನೀಯ ಕಥನಗಳನ್ನು ಆಧರಿಸಿ ಸಿದ್ಧಪಡಿಸಿದವುಗಳಾಗಿರುತ್ತವೆ.

ಉತ್ತಮ ಫಲಿತಾಂಶಗಳನ್ನು ಪಡೆಯಲು ಈ ಕೆಳಗಿನ ಅಂಶಗಳನ್ನು ಪರಿಗಣಿಸಬಹುದು:

- ಪ್ರಾರಂಭಿಕ ಹಂತದಲ್ಲಿ ಆಕರಗಳನ್ನು ಸಂಶೋಧಿಸುವುದರಲ್ಲಿ ವಿದ್ಯಾರ್ಥಿಗಳಿಂದ ಸ್ವಲ್ಪ ಅಭ್ಯಾಸ ಮಾಡಿಸುವುದು ಒಳ್ಳೆಯದು.
- ಮೂಲ ಆಕರವನ್ನು, ವಿಶೇಷವಾಗಿ ಒಂದು ಉದ್ಧೃತ ಭಾಗವನ್ನು, ಪ್ರತಿಯೊಬ್ಬ ವಿದ್ಯಾರ್ಥಿಯು ನೋಡಬೇಕು ಮತ್ತು ವಿದ್ಯಾರ್ಥಿಗಳೇ ಸ್ವತಃ ಅದನ್ನು ಗಮನವಿಟ್ಟು ಓದಬೇಕು. ಆಕರ ಗ್ರಂಥ ಇಲ್ಲದ ಪಕ್ಷದಲ್ಲಿ ಸೈಕ್ಲೊಸ್ಟೈಲ್ ಮಾಡಿದ ಉದ್ಧೃತ ಭಾಗದ ನಕಲು ಪ್ರತಿಗಳನ್ನು ತೆಗೆದುಕೊಳ್ಳಬೇಕು.
- ಶಿಕ್ಷಕರು ಇತಿಹಾಸದ ಮೂಲಗಳನ್ನು ಒಳಗೊಂಡಿರುವ ಒಳ್ಳೆಯ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳಬೇಕು.
- ಇತಿಹಾಸದ ಆಕರ ಗ್ರಂಥಗಳನ್ನು ಓದುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು.

**ಮಿತಿಗಳು**

- ಸುಸ್ಪಷ್ಟತೆಯ ಮತ್ತು ವಾಸ್ತವಿಕತೆಯ ಭಾವವನ್ನು ಇದು ಬೆಳೆಸುತ್ತದೆ.
- 'ನಾವು ಇದನ್ನು ಹೇಗೆ ತಿಳಿಯುತ್ತೇವೆ?' ಎಂಬ ಪ್ರಶ್ನೆಯನ್ನು ಕುರಿತಾದ ಮಕ್ಕಳ ಕುತೂಹಲವನ್ನು ಇದು ತಣಿಸುತ್ತದೆ.
- ಈ ವಿಧಾನ ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳನ್ನು ಇತಿಹಾಸದ ಸಂಶೋಧನೆಗೆ ಮುಂದಾಗುವಂತೆ ಮಾಡುತ್ತದೆ.
- ಆಕರಗಳ ಬಳಕೆಯು ಕೆಲವು ಉಪಯುಕ್ತ ಮಾನಸಿಕ ಅಭ್ಯಾಸಗಳನ್ನು ಒದಗಿಸುತ್ತದೆ– ವಿವೇಚನಾಯುಕ್ತ ಚಿಂತನೆ ಮತ್ತು ಕಲ್ಪನೆ, ಹೋಲಿಕೆ ಮಾಡುವುದು ಮತ್ತು ವಿಶ್ಲೇಷಿಸುವುದು, ತೀರ್ಮಾನಗಳಿಗೆ ಬರುವುದು, ಸ್ವ–ಅಭಿವೃದ್ಧಿ ಮತ್ತು ಸಂವಾದ.
- ಮೂಲ ಆಕರಗಳನ್ನು ಮೌಖಿಕ ಪಾಠವನ್ನು ಸಮರ್ಥಿಸುವ ಹೆಚ್ಚು ಮುಖ್ಯ ಅಂಶಗಳನ್ನು ವಿಶದೀಕರಿಸಲು ಅಥವಾ ಐತಿಹಾಸಿಕ ಘಟನೆಗಳ ಏಕಮುಖೀಯ ಚಿತ್ರಣಕ್ಕೆ ಪೂರಕವಾಗಿ ಬಳಸಲು ಉಪಯೋಗಿಸಬಹುದು.

**ಜೀವನಚರಿತ್ರೆಯ ವಿಧಾನ (Biographical Method)**

ಜೀವನಚರಿತ್ರೆಯ ವಿಧಾನವನ್ನು ಕಾರ್ಲೈಲ್ ಗ್ರೇಟ್‌ಮನ್ ಸಿದ್ಧಾಂತವೆಂದೂ ಕರೆಯುತ್ತಾರೆ. ಕಾರ್ಲೈಲ್ ಈ ಸಿದ್ಧಾಂತದ ಪ್ರಮುಖ ಪ್ರತಿಪಾದಕ. ರೂಸೋ ಇತಿಹಾಸ ಬೋಧನೆಯನ್ನು ಜೀವನ ಚರಿತ್ರೆಯಿಂದ ಆರಂಭಿಸಿದನು. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸಲು ಇದು ಒಂದು ಪರಿಣಾಮಕಾರಿ ವಿಧಾನ. ಇದನ್ನು ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ಬಳಸುತ್ತಾರೆ. ಪ್ರಾರಂಭಿಕ ವಿದ್ಯಾರ್ಥಿಗಳಿಗೆ ಸಾಮಗ್ರಿಗೆ ಇದು ಪೂರಕವಾಗಿರುತ್ತದೆ. ಇದು ಮನುಷ್ಯನೊಬ್ಬನಿಗೆ ಸಂಬಂಧಿಸಿದ್ದರಿಂದ ಮನಸ್ಸಿಗೆ ಹಿಡಿಸುವಂತೆ ಇರುತ್ತದೆ. ಜೀವನ ಚರಿತ್ರೆಯ ವಿಧಾನದಲ್ಲಿ ಇತಿಹಾಸವನ್ನು ನಮ್ಮ ದೇಶದ ಹಾಗೂ ಪ್ರಪಂಚದ ಪ್ರಸಿದ್ಧ ವ್ಯಕ್ತಿಗಳ ಕಥೆಗಳ ಸರಣಿಯ ರೂಪದಲ್ಲಿ ಹೇಳಿಕೊಡಲಾಗುತ್ತದೆ. ಶಾಲೆಯಲ್ಲಿ ಶ್ರೇಷ್ಠ ನಾಯಕರ ಜೀವಿತ ಕಥೆಯನ್ನು ಹೇಳಿಕೊಡಲಾಗುತ್ತದೆ. ಇತಿಹಾಸದ ವಾಸ್ತವಾಂಶಗಳನ್ನು ಹೇಳುವಾಗ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಜೀವನದ ಮೌಲ್ಯಗಳನ್ನು ಮತ್ತು ಆದರ್ಶಗಳನ್ನು ರೂಢಿಸಬೇಕು.

**ಜೀವನ ಚರಿತ್ರೆಯ ವಿಧಾನವು ಈ ಕೆಳಗಿನ ತತ್ವಗಳನ್ನು ಆಧರಿಸಿದೆ**

- ಒಂದು ದೇಶದ ಅಥವಾ ಪ್ರಪಂಚದ ಇತಿಹಾಸ ಆ ದೇಶದ ಅಥವಾ ಪ್ರಪಂಚದ ಪ್ರಸಿದ್ಧ ವ್ಯಕ್ತಿಗಳ ಕಾಲಾನುಕ್ರಮದಲ್ಲಿರುವ ಜೀವನ ಚರಿತ್ರೆಗಳ ಸರಣಿಯಲ್ಲದೆ ಮತ್ತೇನೂ ಅಲ್ಲ.
- ಪ್ರಸಿದ್ಧ ವ್ಯಕ್ತಿಗಳು ಅವರ ಐತಿಹಾಸಿಕ ಕಾಲವನ್ನು ಪ್ರತಿನಿಧಿಸುತ್ತಾರೆ ಮತ್ತು ದೊಡ್ಡ ದೊಡ್ಡ ಐತಿಹಾಸಿಕ ಆಂದೋಲನಗಳು ಯಾವಾಗಲೂ ಆಯಾ ಕಾಲದ ಹೆಸರಾಂತ ವ್ಯಕ್ತಿಗಳಿಂದ ಪ್ರಾರಂಭಿಸಲ್ಪಟ್ಟಿವೆ ಅಥವಾ ಪ್ರಭಾವಿತಗೊಂಡಿವೆ.
- ಪ್ರಸಿದ್ಧ ವ್ಯಕ್ತಿಗಳು ದೇವರ ಶ್ರೇಷ್ಠ ಸೃಷ್ಟಿಯಾಗಿದ್ದಾರೆ.

**ಜೀವನ ಚರಿತ್ರೆಯ ವಿಧಾನದ ಅನುಕೂಲತೆಗಳು**

- ವಿಷಯವನ್ನು ಸುಲಭವಾಗಿ ಅರಿಯಲು ಇದೊಂದು ಸರಳ ವಿಧಾನ.
- ಮಕ್ಕಳಿಗೆ ಈ ವಿಧಾನ ಬಹಳ ಆಕರ್ಷಕವಾಗುತ್ತದೆ. ಚಿಕ್ಕ ಮಕ್ಕಳು ಸ್ವಾಭಾವಿಕವಾಗಿ ಶೂರವೀರರ ಆರಾಧಕರು. ಅವರು ವ್ಯಕ್ತಿಗಳಲ್ಲಿ ಮತ್ತು ಅವರ ಇತಿಹಾಸದಲ್ಲಿ ಆಸಕ್ತಿ ತೋರುತ್ತಾರೆ.
- ಸಾಹಚರ್ಯ, ದೇಶಭಕ್ತಿ, ರಾಷ್ಟ್ರವಾದ, ಸತ್ಯ, ದಾನಬುದ್ಧಿ, ನಿಸ್ವಾರ್ಥತೆ ಮತ್ತು ಕರುಣೆ ಮೊದಲಾದ ಸಾಮಾಜಿಕ ಮತ್ತು ನೈತಿಕ ಸದ್ಗುಣಗಳನ್ನು ಬೆಳೆಸುತ್ತದೆ.

**ಉಪನ್ಯಾಸ ವಿಧಾನ(Lecture Method )**

ಉಪನ್ಯಾಸ ವಿಧಾನವು ಶಿಕ್ಷಣ ಸಂಸ್ಥೆಗಳಲ್ಲಿ ಉಪಯೋಗಿಸಲಾಗುವ ಅತಿ ಹಳೆಯ ಬೋಧನಾ ವಿಧಾನವಾಗಿದೆ. ಈ ವಿಧಾನ ಮಾಹಿತಿ ಸಂವಹನದ ಏಕಮುಖೀಯ ಮಾರ್ಗವಾಗಿದೆ. ಈ ವಿಧಾನದಲ್ಲಿ ಕೇಳುವುದು ಮಾತ್ರ ವಿದ್ಯಾರ್ಥಿಗಳ ಕೆಲಸವಾಗಿದ್ದು ಕೆಲವು ವೇಳೆ ಉಪನ್ಯಾಸ ಸಮಯದಲ್ಲಿ ಅಗತ್ಯಬಿದ್ದಲ್ಲಿ ಕೆಲವು ನೋಟ್ಸ್‌ಗಳನ್ನು ಮಾಡಿಕೊಂಡು ಬಳಿಕ ಆ ಮಾಹಿತಿಯನ್ನು ಸಂಯೋಜಿಸಿ ಸಂಘಟಿಸಬೇಕಾಗುತ್ತದೆ. ತರಗತಿಯಲ್ಲಿ ವಿದ್ಯಾರ್ಥಿಗಳ ಗಮನ ಸೆಳೆಯುವುದು ಈ ವಿಧಾನದ ಪ್ರಮುಖ ಸಮಸ್ಯೆಯಾಗಿದೆ. ಜೊತೆಗೆ, ಈ ವಿಧಾನದ ಮೂಲಕ ತರಗತಿಯಲ್ಲಿ ಅನೇಕ ವಿದ್ಯಾರ್ಥಿಗಳು ವಿಷಯವನ್ನು ಗ್ರಹಿಸಲಾರರು.

ಈ ವಿಧಾನದ ಮುಖ್ಯ ಲಕ್ಷಣಗಳು ಹೀಗಿವೆ:

- ಇದು ಹೊಸ ವಿಚಾರಗಳನ್ನು ಸೃಷ್ಟಿಸುತ್ತದೆ.
- ದೊಡ್ಡ ತರಗತಿಗೆ ಇದು ಒಳ್ಳೆಯ ವಿಧಾನ.
- ಶಿಕ್ಷಕರು ಅನುಭವಸ್ಥರಾಗಿರುತ್ತಾರೆ ಮತ್ತು ವಿಷಯದ ಮೇಲೆ ಪ್ರಭುತ್ವ ಹೊಂದಿರುತ್ತಾರೆ. ವಿದ್ಯಾರ್ಥಿಗಳು ಕೇಳುವ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಲು ಮತ್ತು ಎಲ್ಲ ಅಂಶಗಳನ್ನು ವಿವರಿಸಲು ಸಮರ್ಥರಾಗಿರುತ್ತಾರೆ.
- ಏನೇ ಸ್ಪಷ್ಟತೆ ಬೇಕಾದಲ್ಲಿ ವಿದ್ಯಾರ್ಥಿಗಳು ಶಿಕ್ಷಕರನ್ನು ಕೇಳಬಹುದು.
- ಕೇಳುವುದರ ಮೂಲಕ ವಿದ್ಯಾರ್ಥಿಗಳು ಕಲಿಯುತ್ತಾರೆ.

**ಉಪನ್ಯಾಸ ವಿಧಾನದ ಅನುಕೂಲತೆಗಳು**

- ಈ ಬೋಧನ ವಿಧಾನದಲ್ಲಿ ಒಂದು ತರಗತಿಯ ಅವಧಿಯಲ್ಲಿ ಅನೇಕ ವಿಷಯಗಳನ್ನು ಪೂರ್ಣಗೊಳಿಸಬಹುದು.
- ಈ ವಿಧಾನದ ಬಳಕೆಯಲ್ಲಿ ಯಾವುದೇ ಉಪಕರಣ ಅಥವಾ ಪ್ರಯೋಗಾಲಯದ ಅಗತ್ಯವಿಲ್ಲ.
- ಕಲಿಕಾ ಸಾಮಗ್ರಿಗಳ ಅಗತ್ಯವಿಲ್ಲ.
- ವಿದ್ಯಾರ್ಥಿಗಳ ಶ್ರವಣಕೌಶಲ್ಯ ವೃದ್ಧಿಸುತ್ತದೆ.
- ಮೌಖಿಕವಾಗಿ ಪ್ರಸ್ತುತಪಡಿಸುವುದರಿಂದ ಸಾಮಗ್ರಿಯನ್ನು ತರ್ಕಬದ್ಧವಾಗಿ ಜೋಡಿಸಲಾಗಿರುತ್ತದೆ.
- ಭಾಷೆಗಳನ್ನು ಕಲಿಯಲು ನೆರವಾಗುತ್ತದೆ.

**ಉಪನ್ಯಾಸದ ವಿಧಾನದ ಮಿತಿಗಳು**

- ಮನೋವೈಜ್ಞಾನಿಕ ದೃಷ್ಟಿಯಿಂದ ಈ ವಿಧಾನ ಅಂಗೀಕಾರಾರ್ಹವಲ್ಲ. ಏಕೆಂದರೆ, ವ್ಯಕ್ತಿಗಳು ಭಿನ್ನ ಭಿನ್ನ ಪ್ರವೃತ್ತಿಯವರಾಗಿರುತ್ತಾರೆ. ಶಿಕ್ಷಕರು ಎಲ್ಲ ವಿದ್ಯಾರ್ಥಿಗಳಿಗೂ ಅವರವರ ವ್ಯಕ್ತಿಗತ ಭಿನ್ನತೆಗಳನ್ನು ಪರಿಗಣಿಸದೆ, ಒಂದೇ ಉಪನ್ಯಾಸವನ್ನು ಕೊಡುತ್ತಾರೆ.
- ಆಲಿಸುವುದನ್ನು ಬಿಟ್ಟರೆ ಕಲಿಕಾರ್ಥಿಯ ಕಡೆಯಿಂದ ಯಾವುದೇ ರೀತಿಯ ತೊಡಗಿಕೊಳ್ಳುವಿಕೆ ಇರುವುದಿಲ್ಲ.
- ಉಪನ್ಯಾಸದಲ್ಲಿ ಬಳಸಿದ ಭಾಷೆ ವಿದ್ಯಾರ್ಥಿಗಳ ಮಟ್ಟಕ್ಕೆ ಗ್ರಹಿಸಲು ಅಸಾಧ್ಯವಾಗಿರುವ ಸಾಧ್ಯತೆಯಿದ್ದು ಅವರು ಉಪನ್ಯಾಸದ ಪೂರ್ಣ ಲಾಭ ಪಡೆಯದೆ ಹೋಗಬಹುದು.
- ಉಪನ್ಯಾಸಗಳನ್ನು ವಿದ್ಯಾರ್ಥಿಗಳು ಮರೆತುಬಿಡುತ್ತಾರೆ. ಚಟುವಟಿಕೆಗಳ ಮೂಲಕದ ಅನುಭವವಿದ್ದರೆ ಕಲಿತದ್ದು ನೆನಪಿನಲ್ಲಿರುತ್ತದೆ.
- ಉಪನ್ಯಾಸ ಕೇಳುವಾಗ ಪಾಠಕ್ಕೆ ಗಮನ ಕೊಡುವ ಮನಶ್ಶಕ್ತಿಯ ಮಟ್ಟ ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ಆಗಿರುವುದಿಲ್ಲ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಇತಿಹಾಸ ಬೋಧನೆಗೆ ಸೂಕ್ತವಾದ ಯಾವುದಾದರೂ ಎರಡು ವಿಧಾನಗಳನ್ನು ಹೆಸರಿಸಿ.
2. ಉಪನ್ಯಾಸ ಬೋಧನಾ ವಿಧಾನದ ಯಾವುದಾದರೂ ಎರಡು ಗುಣಗಳನ್ನು ಮತ್ತು ದೋಷಗಳನ್ನು ಪಟ್ಟಿಮಾಡಿ.

**3.3.3.2. ಇತಿಹಾಸ ಬೋಧನೆಯ ತಂತ್ರಗಳು**

**ಎ) ನಾಟಕ ಅಥವಾ ಪಾತ್ರಾಭಿನಯ**

ನಾಟಕೀಕರಣ ಇತಿಹಾಸ ಬೋಧನೆಗೆ ಬಹಳ ಉಪಯೋಗಕರ. ಪಾತ್ರಾಭಿನಯ ಸಾಮಾಜಿಕ ನಾಟಕ ಅಥವಾ ಸೃಜನಾತ್ಮಕ ನಾಟಕ – ಇವುಗಳನ್ನು ಒಂದು ನಿರ್ದಿಷ್ಟ ಸನ್ನಿವೇಶವನ್ನು ಅಧ್ಯಯನ ಮತ್ತು ಸಂವಾದದ ಉದ್ದೇಶಕ್ಕೆ ಪ್ರಸ್ತುತಪಡಿಸಲು ಉಪಯೋಗಿಸುತ್ತಾರೆ. ಇಲ್ಲಿ ಸಿದ್ದಪಡಿಸಲಾದ ಬರಹವಿರುವುದಿಲ್ಲ. ಪ್ರದರ್ಶನಾಭ್ಯಾಸವಿಲ್ಲದ ಮಾತುಗಳನ್ನು ಕಂಠಪಾಠ ಮಾಡದ ಮತ್ತು ಕನಿಷ್ಠ ಲಕ್ಷಣಗಳನ್ನು ಬಳಸುವ ನಾಟಕ ಇದಾಗಿರುತ್ತದೆ. ನಾಟಕೀಕರಣವು ನಾಟಕ, ಆಡಂಬರ ಪ್ರದರ್ಶನ, ಮೂಕ ನಾಟಕ, ಸ್ತಬ್ಧ ಚಿತ್ರ ಹಾಗೂ ಕಡಿಮೆ ಅನೌಪಚಾರಿಕ ನಾಟಕದ ಚಟುವಟಿಕೆಗಳನ್ನು ಒಳಗೊಳ್ಳಬಹುದು. ನಾಟಕದ ಅಂತರ್ವಸ್ತು ವ್ಯಾಪಕವಾದುದು. ನಾಟಕದ ಮೂಲಕ ಮಕ್ಕಳು ಸಾಮಾಜಿಕ ವಿಷಯಗಳು (ಮನೆ, ಮಾಲಿನ್ಯ), ಐತಿಹಾಸಿಕ ಘಟನೆಗಳು (ಅಂತರ್ಯುದ್ಧ, ಬಂಡಾಯ, ಕೈಗಾರಿಕಾ ಕ್ರಾಂತಿ) ರಾಗ, ದ್ವೇಷ, ಮೋಸ ಮುಂತಾದ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲರು. ನಾಟಕದ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ಅಂಶಗಳನ್ನು ಒಳಗೊಂಡಿರುವುದರಿಂದ ಇದು ಒಂದು ಮಾದರಿ ಬೋಧನಾ ಮಾಧ್ಯಮವಾಗಿದೆ.

ಪಾತ್ರಾಭಿನಯವು ವಾಸ್ತವಿಕ ಜೀವನದ ಪರಿಸ್ಥಿತಿಯನ್ನು ತರಗತಿಯ ಒಳಗೆ ತರುವ ಒಂದು ಮಾರ್ಗವಾಗಿದೆ. ಪಾತ್ರಾಭಿನಯ ಎಂದರೆ ಮತ್ತೊಬ್ಬ ವ್ಯಕ್ತಿಯ ಅಣಕು ಪ್ರಯೋಗ. ತಾವು ಭಿನ್ನವಾದ್ದನ್ನು ಮಾಡುತ್ತಿದ್ದೇವೆ ಎಂದು ತೋರಿಸುವ ಸನ್ನಿವೇಶ ಇದಾಗಿದೆ. ಪಾತ್ರಾಭಿನಯದಲ್ಲಿ ಸ್ಥಿರ ಸನ್ನಿವೇಶವನ್ನು ವಿದ್ಯಾರ್ಥಿಗಳು ಪೂರ್ವಸಿದ್ಧತೆ ಇಲ್ಲದೆ ನಿರ್ವಹಿಸುತ್ತಾ ಮುಂದುವರೆದು, ಆ ಸನ್ನಿವೇಶವನ್ನು ಪೂರ್ಣ ಮಾಡುತ್ತಾರೆ.

**ನಾಟಕೀಕರಣದ ಉದ್ದೇಶಗಳು**

- ಆಯಾ ಪರಿಸ್ಥಿತಿಗಳಲ್ಲಿ ಪಾತ್ರವನ್ನು ಅಭಿನಯಿಸಲು ಅಗತ್ಯವಾದ ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುವುದು.
- ಆರೋಗ್ಯಕರ ಸುಖಾನುಭವ ಮತ್ತು ವಿನೋದಗಳತ್ತ ಒಲವು ಮತ್ತು ಆಸಕ್ತಿ ಬೆಳೆಸುವುದು.

- ಪರಿಣಾಮಕಾರಿ ಕೌಶಲ್ಯಗಳನ್ನು ಬೆಳೆಸುವುದು.
- ವಾಸ್ತವಿಕ ಜೀವನದ ಪರಿಸ್ಥಿತಿಗಳ ಅರಿವನ್ನು ಒದಗಿಸುವುದು.

**ನಾಟಕೀಕರಣದ ತತ್ವಗಳು**

- ಮಾಡುವಿಕೆಯಿಂದ ಕಲಿಯುವುದು.
- ತತ್‌ಕ್ಷಣದ ಪುನರ್ಬಲನದ ನಿಯಮ.
- ವಾಸ್ತವಿಕ ಉದ್ದೇಶಿತ ಕಾರ್ಯಕ್ಕೆ ಮುಂಚೆ ಪೂರ್ವಾಭ್ಯಾಸ.
- ತಂಡಕಾರ್ಯದ ಮೂಲಕ ಸಾಮಾಜಿಕ ಕೌಶಲ್ಯಗಳ ಬೆಳವಣಿಗೆ.

**ನಾಟಕೀಕರಣದ ಅನುಕೂಲತೆಗಳು**

- **ಜ್ಞಾಪಕ ಶಕ್ತಿಯನ್ನು ಹೆಚ್ಚಿಸುತ್ತದೆ:** ಮನೋವೈಜ್ಞಾನಿಕ ದೃಷ್ಟಿಯಿಂದ ಇದು ಮಾನಸಿಕ ವ್ಯಾಯಾಮ ಮತ್ತು ಚಿಂತನೆಯನ್ನು ಒದಗಿಸುತ್ತದೆ. ಸಂಭಾಷಣೆಗಳು ಸ್ಪಷ್ಟ ಹಾಗೂ ಖಚಿತವಾಗಿದ್ದು, ಅವುಗಳನ್ನು ವಿದ್ಯಾರ್ಥಿಗಳು ನೆನಪಿನಲ್ಲಿಡಬೇಕಾಗುವುದರಿಂದ ಸ್ಮರಣಶಕ್ತಿಯು ಹೆಚ್ಚುತ್ತದೆ. ಈ ಮಾರ್ಗವು ಈ ಅಭ್ಯಾಸವನ್ನು ಬೆಳೆಸುವುದು ನಿಶ್ಚಿತ.
- **ಆಸಕ್ತಿಯನ್ನು ಬೆಳೆಸಲು ನೆರವಾಗುತ್ತದೆ:** ವಿದ್ಯಾರ್ಥಿಯು ಯಾವಾಗಲೂ ಪುಸ್ತಕವನ್ನು ಓದುತ್ತಾ ಇದ್ದರೆ ಅಥವಾ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾ ಇದ್ದರೆ ಅವನಲ್ಲಿ ಆಸಕ್ತಿ ಉಳಿಯುವುದಿಲ್ಲ. ನಾಟಕೀಕರಣ ವಿಧಾನವು ಒಂದು ಬದಲಾವಣೆಯನ್ನು ಕೊಡಲು ನೆರವಾಗುತ್ತದೆ. ಬದಲಾವಣೆಯಿಂದ ಆಸಕ್ತಿಯನ್ನು ಮೂಡಿಸಬಹುದು. ಈ ಬದಲಾವಣೆಯ ವಿಧಾನದಿಂದ ವಿದ್ಯಾರ್ಥಿಯು ಎಂದಿಗೂ ಬಳಲುವುದಿಲ್ಲ, ದಣಿಯುವುದಿಲ್ಲ. ಈ ವಿಧಾನದಿಂದ ಅಶಿಸ್ತಿನ ವಿಷಯವನ್ನು ಪರಿಹರಿಸಬಹುದು. ಪಾಠದಲ್ಲಿ ಆಸಕ್ತಿ ಕಳೆದುಕೊಂಡ ತಕ್ಷಣವೇ ವಿದ್ಯಾರ್ಥಿಗಳಲ್ಲಿ ಅಶಿಸ್ತಿನ ಸಮಸ್ಯೆ ತಲೆದೋರುತ್ತದೆ.
- **ಉತ್ತಮ ಬೋಧಪ್ರದ ಮೌಲ್ಯವಿದೆ:** ಸಂವೇಗಾತ್ಮಕ ಪರಿಸ್ಥಿತಿಯಲ್ಲಿ ಕಲಿಕೆ ಚೆನ್ನಾಗಿ ಆಗುತ್ತದೆ ಎಂದು ತಿಳಿಯಲಾಗಿದೆ. ನಾಟಕೀಕರಣ ಅಂತಹ ಪರಿಸ್ಥಿತಿಯನ್ನು ಒದಗಿಸುತ್ತದೆ. ನಾಟಕ ಎಂಬ ಪದಕ್ಕೆ ಸಮನಾದ ಡ್ರಾಮಾ ಎಂಬ ಆಂಗ್ಲ ಪದ ಗ್ರೀಕ್ ಭಾಷೆಯಿಂದ ಬಂದಿದ್ದು, 'ನಟಿಸು ಅಥವಾ ಮಾಡು' ಎಂಬ ಅರ್ಥ ಉಳ್ಳದ್ದಾಗಿದೆ.
- **ಮಾಡುವಿಕೆಯಿಂದ ಕಲಿಯುವುದಕ್ಕೆ ಅವಕಾಶಗಳನ್ನು ಒದಗಿಸುತ್ತದೆ:** ಮಾಡುವಿಕೆಯಿಂದ ಕಲಿಯುವುದಕ್ಕೆ ನಾಟಕೀಕರಣವು ಅವಕಾಶವನ್ನು ಒದಗಿಸುತ್ತದೆ.
- **ಕಲ್ಪನಾಶಕ್ತಿಯನ್ನು ಮತ್ತು ಸಹಾನುಭೂತಿಯನ್ನು ಬೆಳೆಸುತ್ತದೆ:** ನಾಟಕೀಕರಣದಿಂದ ಮಗುವಿನಲ್ಲಿ ಕಲ್ಪನಾಶಕ್ತಿಯನ್ನು ಅಭಿವೃದ್ಧಿಗೊಳಿಸಬಹುದು. ವಿವಿಧ ಅವಸ್ಥೆಗಳ ವಿವಿಧ ಚಟುವಟಿಕೆಗಳ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಲು ಇದು ನೆರವಾಗುತ್ತದೆ. ಅವರು ತಮ್ಮ ಸಂಪರ್ಕಕ್ಕೆ ಬಂದ ವ್ಯಕ್ತಿಗಳಿಗೆ ಸಹಾನುಭೂತಿ ತೋರುತ್ತಾರೆ. ಅವರ ಮನೋಭಾವವೂ ಸಹ ಬದಲಾಗುತ್ತದೆ.
- **ಸಂವೇದನಾ ತರಬೇತಿ:** ನಾಟಕೀಕರಣದ ಕಲೆ ಮಕ್ಕಳ ಇಂದ್ರಿಯಗಳಿಗೆ ಬೋಧಪ್ರದವಾಗಿರುತ್ತದೆ. ಇದರ ಮೂಲಕ ಕಿವಿಗಳು, ಕಣ್ಣುಗಳು ಮತು ಕೈಗಳು ತರಬೇತಿ ಪಡೆಯುತ್ತವೆ. ಇದು ಬುದ್ಧಿಶಕ್ತಿ ಮತ್ತು ಸಂವೇಗಗಳನ್ನು ಆಕರ್ಷಿಸುತ್ತದೆ.
- **ವಿಹಾರ ವಿನೋದಗಳನ್ನು ಒದಗಿಸುವಲ್ಲಿ ನೆರವಾಗುತ್ತದೆ:** ಸಾಧಾರಣವಾಗಿ ಪ್ರತಿಯೊಬ್ಬರೂ ನಾಟಕವನ್ನು ಇಷ್ಟಪಡುತ್ತಾರೆ. ಏಕೆಂದರೆ ನಾಟಕವು ಮನರಂಜಕವೂ ಬೋಧಪ್ರದವೂ ಆಗಿರುತ್ತದೆ. ಇದು ಐತಿಹಾಸಿಕ ಘಟನೆಗಳನ್ನು ನೆನಪಿನಲ್ಲಿಡಲು ಅವಕಾಶವನ್ನು ಒದಗಿಸುತ್ತದೆ.

**ಬಿ) ಪ್ರವಾಸ ಮತ್ತು ಕ್ಷೇತ್ರಪ್ರವಾಸ (Excursion and Field Trip)**

ಕೆಲವು ನಿಶ್ಚಿತ ಉದ್ದೇಶಗಳನ್ನು ಸಾಧಿಸಲು ದೈನಂದಿನ ತರಗತಿಯ ಹೊರಗೆ ಒಂದು ಸ್ಥಳಕ್ಕೆ ಭೇಟಿ ಕೊಡುವುದಕ್ಕೆ ಕ್ಷೇತ್ರಪ್ರವಾಸ ಎನ್ನುವರು. ಇಲ್ಲಿ ಈಡೇರುವ ರೀತಿಯಲ್ಲಿ ಉದ್ದೇಶವು ಮತ್ತಾವ ರೀತಿಯಲ್ಲಿಯೂ

ಈಡೇರಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ತರಗತಿಯಿಂದ ಹೊರಬಂದು, ಏನಾದರೂ ಹೊಸದನ್ನು ಅನುಭವಿಸಲು ಕ್ಷೇತ್ರಪ್ರವಾಸ ಅನುವು ಮಾಡುತ್ತದೆ. ಇಂತಹ ಪ್ರವಾಸಕ್ಕೆ ಗುರುತಿಸಲಾಗುವ ಸ್ಥಳಗಳು ಐತಿಹಾಸಿಕ ಸ್ಥಳಗಳು, ಮೃಗಾಲಯಗಳು, ಶಿಕ್ಷಣಸಂಸ್ಥೆಗಳು, ವಸ್ತು ಸಂಗ್ರಹಾಲಯಗಳು, ನಾಟಕ ಶಾಲೆಗಳು ಮುಂತಾದುವುಗಳಾಗಿರಬಹುದು.

ಪ್ರವಾಸ ಆಂಗ್ಲಭಾಷೆಯ ಸಮಾನಾರ್ಥಕ ಪದವಾದ ಎಕ್ಸ್‌ಕರ್ಷನ್. ಇದರ ಅರ್ಥ ಪೂರ್ವ ನಿಶ್ಚಿತ ಪ್ರಯಾಣ, ಲಘುಪ್ರಯಾಣ, ಸಂಚಾರ ಎಂದು. ಈ ಚಟುವಟಿಕೆಯಲ್ಲಿ ಸಮಾಜ ವಿಜ್ಞಾನದ ವಿದ್ಯಾರ್ಥಿಗಳು ವಾಸ್ತವವಾಗಿ ಸ್ಥಳಗಳಿಗೆ, ಕ್ಷೇತ್ರಗಳಿಗೆ ಭೇಟಿಕೊಟ್ಟು ನೇರ ಅನುಭವ ಪಡೆಯುತ್ತಾರೆ. ಇದರಿಂದ ಕಲಿಕೆ ಸರಳ, ಆಸಕ್ತಿಕರ ಹಾಗೂ ಪರಿಣಾಮಕಾರಿಯಾಗುವುದು. ಇದು ವಿದ್ಯಾರ್ಥಿಗಳಿಗೆ 'ಕಾಣಲು', 'ಕೇಳಲು', ಪರೀಕ್ಷಿಸಲು, ದತ್ತಾಂಶ ಸಂಗ್ರಹಿಸಲು ಮತ್ತು ಪ್ರಶ್ನೆಗಳನ್ನು ಕೇಳಲು ಹೇರಳ ಅವಕಾಶ ಒದಗಿಸುತ್ತದೆ.

**ಕ್ಷೇತ್ರಪ್ರವಾಸದ ಅನುಕೂಲತೆಗಳು**

- **ಇದು ಪಠ್ಯಕ್ರಮದ ಗುಣಮಟ್ಟವನ್ನು ಹೆಚ್ಚಿಸುತ್ತದೆ:** ಕ್ಷೇತ್ರಪ್ರವಾಸಗಳು ಶೈಕ್ಷಣಿಕ ಸಾಧ್ಯತೆಗಳಿಂದ ತುಂಬಿದೆ. ಕಾರಣ, ವಿದ್ಯಾರ್ಥಿಗಳು ಒಂದು ವಿಷಯದ ಬಗ್ಗೆ ಕೇವಲ ಓದಿ ಅಥವಾ ಕೇಳಿ ತಿಳಿಯದೆ ನೇರವಾದ ಅನುಭವದಿಂದ ಕಲಿಯುತ್ತಾರೆ. ವಾಸ್ತವಿಕ ಪ್ರಾಪಂಚಿಕ ಅನುಭವದಲ್ಲಿ ತೊಡಗಿಕೊಳ್ಳುವುದರಿಂದ ಕಲಿಕೆ ದೈನಂದಿನ ತರಗತಿಯ ಬೋಧನಾ ಕಾರ್ಯಕ್ರಮಗಳಿಗಿಂತ ಹೆಚ್ಚು ಅರ್ಥಪೂರ್ಣವೂ ಸ್ಮರಣೀಯವೂ ಆಗಿರುತ್ತದೆ.
- **ವಿದ್ಯಾರ್ಥಿಗಳಿಗೆ ಇಂದ್ರಿಯಾನುಭವಾತ್ಮಕ ಕಲಿಕಾ ಅನುಭವಗಳನ್ನು ಕೊಡುತ್ತದೆ:** ವಾಸ್ತವಿಕ ಪ್ರಪಂಚದ ಅನುಭಗಳಲ್ಲಿ ತೊಡಗಿಕೊಳ್ಳುವುದರಿಂದ ಕಲಿಕೆ ಹೆಚ್ಚು ಅರ್ಥಪೂರ್ಣವೂ ಸ್ಮರಣೀಯವೂ ಆಗುತ್ತದೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ನೇರವಾದ ಅನುಭವದ ಮುಖಾಂತರ ಕಲಿಯುವರಾದ್ದರಿಂದ ಅವರಿಗೆ ವಿಷಯದ ಬಗ್ಗೆ ಸುಸ್ಪಷ್ಟ ಪರಿಕಲ್ಪನೆಯಿರುತ್ತದೆ.
- **ನೋಟ್ಸ್ ಸಿದ್ಧಪಡಿಸುವಂತಹ ಮೂರ್ತರೂಪದ ಕೌಶಲ್ಯಗಳು ವಿಕಸನಗೊಳ್ಳುತ್ತವೆ:** ಪ್ರವಾಸದ ಬಳಿಕ ಪ್ರಶ್ನಿಸುವಿಕೆ, ವರದಿ ಸಲ್ಲಿಸುವಿಕೆ ಅಥವಾ 'ಧನ್ಯವಾದ' ಸೂಚಿಸುವಂತಹ ಪತ್ರ ಬರೆಯುವಿಕೆ ಅಥವಾ ತಮ್ಮ ಅನುಭವಗಳನ್ನು ಮೌಲ್ಯಮಾಪನ ಮಾಡುವಿಕೆ ಮುಂತಾದ ಕೌಶಲ್ಯಗಳನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬಹುದು. ಅಂತಹ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಬರಹ, ಟಿಪ್ಪಣಿ ಸಿದ್ಧಪಡಿಸುವಿಕೆ, ವೀಕ್ಷಣೆ, ವರದಿ ಸಲ್ಲಿಸುವಿಕೆ ಮುಂತಾದ ಆವಶ್ಯಕ ಕೌಶಲ್ಯಗಳು ವರ್ಧಿಸುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ, ವಾಸ್ತವಿಕ ಪ್ರಪಂಚದ ಅನುಭವಗಳಲ್ಲಿ ತೊಡಗಿಕೊಳ್ಳುವುದರಿಂದ ಕಲಿಕೆ ಹೆಚ್ಚು ಗಟ್ಟಿಯಾಗುತ್ತದೆ.
- **ಕ್ಷೇತ್ರಪ್ರವಾಸವು ನಿಯಮಿತ ಬೋಧನಾ ಕಾರ್ಯಕ್ರಮಕ್ಕೆ ವೈವಿಧ್ಯತೆಯನ್ನು ಕೊಡುವುದು:** ಇವು ವಿಶೇಷವೂ ಆನಂದದಾಯಕವೂ ಆದ ಕಲಿಕಾ ಅನುಭವಗಳಾಗಿರುತ್ತವೆ. ವಿದ್ಯಾರ್ಥಿಗಳಲ್ಲಿ ಸಂಬಂಧಿತ ತರಗತಿಯ ಚಟುವಟಿಕೆಗಳಲ್ಲಿ ಧನಾತ್ಮಕ ಮನೋಭಾವವನ್ನು ಬೆಳೆಸುತ್ತವೆ. ವಿದ್ಯಾರ್ಥಿಗಳು ಕೇವಲ ಓದುವುದರಿಂದ ಅಥವಾ ಕೇಳುವುದರಿಂದ ಮಾತ್ರ ಕಲಿಯದೆ, ವಾಸ್ತವವಾದ ನೇರ ಅನುಭವಗಳಿಂದ ಕಲಿಯುತ್ತಾರಾದ್ದರಿಂದ ಕ್ಷೇತ್ರಪ್ರವಾಸವು ಕಲಿಕೆಯನ್ನು ಪರಿಣಾಮಕಾರಿಯಾಗಿಸುತ್ತದೆ.
- **ಕ್ಷೇತ್ರಪ್ರವಾಸಗಳು ವಿದ್ಯಾರ್ಥಿಗಳು ಅವರು ತರಗತಿಯಲ್ಲಿ ಏನು ಕಲಿಯುತ್ತಾರೋ ಅದರ ಸುಸಂಗತತೆ ಮತ್ತು ಪ್ರಾಮುಖ್ಯತೆ, ಮಹತ್ವವನ್ನು ಅರಿಯಲು ಅವರಿಗೆ ನೆರವಾಗುತ್ತದೆ:** ಉದಾಹರಣೆಗೆ, ಶಾಸನವನ್ನು ಓದುವುದು ಒಂದು ಕೌಶಲ್ಯ. ಈ ಕೌಶಲ್ಯವನ್ನು ಪಡೆಯುವುದರಿಂದ ಅದರಲ್ಲಿ ಕೊಟ್ಟಿರುವ ಮಾಹಿತಿ ಮತ್ತು ಅದರ ಬಳಕೆಯ ಮೌಲ್ಯ ಏನೆಂದು ತಿಳಿಯಲು ಸಾಧ್ಯವಾಗುತ್ತದೆ.

**ಕ್ಷೇತ್ರಪ್ರವಾಸದ ಆಯೋಜನೆಯ ಹಂತಗಳು**

**1. ಲಘುಪ್ರವಾಸ ಆಯ್ಕೆ:**

- ಕ್ಷೇತ್ರಪ್ರವಾಸದ ಗುರಿಗಳನ್ನು ಗುರುತಿಸುವುದು ಮತ್ತು ಮೌಲ್ಯಮಾಪನದ ಯೋಜನೆ ಸಿದ್ಧಪಡಿಸುವುದು.

- ಭೇಟಿ ನೀಡಬೇಕಾದ ಸ್ಥಳವನ್ನು ಆಯ್ಕೆ ಮಾಡಿ ತಾರೀಖು ಮತ್ತು ಸಮಯವನ್ನು ನಿಶ್ಚಯಿಸುವುದು.
- ಕ್ಷೇತ್ರದ ವಿಶೇಷ ಲಕ್ಷಣಗಳ ಪರಿಚಯ ಮಾಡಿಕೊಳ್ಳಲು ಮೊದಲು ಅಲ್ಲಿಗೆ ಭೇಟಿ ಕೊಟ್ಟು ವಿಳಾಸ, ಹೋಗಲು ದಾರಿ, ಸಂಪರ್ಕಿಸಬೇಕಾದ ವ್ಯಕ್ತಿ ಮತ್ತು ಮೊಬೈಲ್ ಸಂಖ್ಯೆಗಳನ್ನು ಪಡೆದುಕೊಳ್ಳುವುದು.

**2. ಯೋಜನೆ:**

- ಕ್ಯಾಮರಾ ಮುಂತಾದ ವಿಶೇಷ ಉಪಕರಣಗಳನ್ನು ಅಣಿಗೊಳಿಸಿಕೊಳ್ಳುವುದು ಮತ್ತು ಭೇಟಿ ನೀಡುವ ಸ್ಥಳದಲ್ಲಿ ಪ್ರವೇಶ ಶುಲ್ಕವಿದ್ದರೆ ಅದನ್ನು ಸಂಗ್ರಹಿಸುವುದು.
- ಪ್ರವಾಸದ ಬಗ್ಗೆ ಪೋಷಕರಿಗೆ ತಿಳಿಸುವುದು.
- ತುರ್ತು ಪರಿಸ್ಥಿತಿಗೆಂದು ವಿದ್ಯಾರ್ಥಿಗಳ ಹೆಸರು ಮತ್ತು ಮನೆಯ ದೂರವಾಣಿ ಸಂಖ್ಯೆಯನ್ನು ಪಟ್ಟಿ ಮಾಡಿಕೊಳ್ಳುವುದು.
- ಆಡಳಿತಾತ್ಮಕ ಅನುಮತಿಗಾಗಿ ಹಾಗೂ ಸಾರಿಗೆಗೆ ಸಂಬಂಧಿಸಿದ ಫೈಲ್‌ಗಳಿಗಾಗಿ ಪತ್ರಗಳನ್ನು ಸಲ್ಲಿಸುವುದು.
- ಭೋಜನ ವ್ಯವಸ್ಥೆ ಮಾಡುವುದು, ದಿನದ ವೇಳಾಪಟ್ಟಿ ಸಿದ್ಧಪಡಿಸುವುದು.

**3. ಕ್ಷೇತ್ರಪ್ರವಾಸಕ್ಕೆ ಸಿದ್ಧತೆ / ಕ್ಷೇತ್ರ ಪ್ರವಾಸದ ಪೂರ್ವ ಚರ್ಚೆ:**

- ಕ್ಷೇತ್ರ ಪ್ರವಾಸದ ಉದ್ದೇಶದ ಬಗ್ಗೆ ಚರ್ಚಿಸುವುದು.
- ಕ್ಷೇತ್ರದ ಛಾಯಾಚಿತ್ರ ಅಥವಾ ಪೋಸ್ಟರ್‌ಗಳನ್ನು ತೋರಿಸುವುದು.
- ನಡವಳಿಕೆಯ ಮಾನದಂಡವನ್ನು ನಿಶ್ಚಯಿಸಿ ದುಡ್ಡಿನ ಬಳಕೆ, ಭೋಜನ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳುವುದು.
- ಉಡುಪಿನ ಬಗೆಗಿನ ಸಂಹಿತೆ ಮತ್ತು ಇತರ ಅಗತ್ಯ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದು.
- ಒಳ್ಳೆಯ ಪ್ರಶ್ನೆಗಳನ್ನು ಕೇಳುವುದು ಹೇಗೆ ಎಂದು ಚರ್ಚಿಸಿ ಹಾಗೂ ಮಾಹಿತಿ ಕಲೆ ಹಾಕಲು ಮುಕ್ತ ವೀಕ್ಷಣಾ ಪ್ರಶ್ನೆಗಳ ಪಟ್ಟಿ ಮಾಡಿಮಾಡುವುದು.
- ಕ್ಷೇತ್ರ ಪ್ರವಾಸದ ವೇಳಾಪಟ್ಟಿಯನ್ನು ಪುನರವಲೋಕಿಸಿ ಸೂಕ್ತ ಬದಲಾವಣೆಗಳು ಅಗತ್ಯವಿದ್ದಲ್ಲಿ ಮಾಡುವುದು.

**4. ಕಾರ್ಯಗತಗೊಳಿಸುವಿಕೆ:**

- ಅಗತ್ಯವಿದ್ದರೆ ವಿದ್ಯಾರ್ಥಿಗಳಿಗೆ ಅನುಭವದ ಬಗೆಗಿನ ವೀಕ್ಷಣೆಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡುವುದು.
- ಕ್ಷೇತ್ರಪ್ರವಾಸದಲ್ಲಿದ್ದಾಗ ಸಂಗ್ರಹಿಸಿದ ಸಾಮಗ್ರಿಗಳನ್ನು ಪ್ರದರ್ಶಿಸಲು ತರಗತಿಯಲ್ಲಿ ಸುದ್ದಿ ಹಲಗೆ / ನೋಟಿಸ್ ಬೋರ್ಡ್ ಇರಿಸುವುದು.
- ಕ್ಷೇತ್ರಪ್ರವಾಸದ ಸಂದರ್ಭದಲ್ಲಿ ಸಹಾಯ ಮಾಡಿದವರೆಲ್ಲರಿಗೂ 'ಕೃತಜ್ಞತಾ ಸೂಚಕ ಪತ್ರ'ವನ್ನು ಮಕ್ಕಳಿಂದ ಬರೆಸುವುದು.
- ವಿಶೇಷವಾಗಿ ಕಲಿತ ವಿಚಾರಗಳ ಮಾಹಿತಿಯನ್ನು ಸಂಗ್ರಹಿಸುವುದು.

**5. ಕ್ಷೇತ್ರಪ್ರವಾಸದ ಮೌಲ್ಯಮಾಪನ:**

- ಈ ಕ್ಷೇತ್ರಪ್ರವಾಸದ ವೈಶಿಷ್ಟ್ಯಪೂರ್ಣ ಶೈಕ್ಷಣಿಕ ಮೌಲ್ಯ ಏನಾಗಿತ್ತು?
- ವಿದ್ಯಾರ್ಥಿಗಳು ಉದ್ದೇಶಗಳನ್ನು ಈಡೇರಿಸಿದರೆ?

- ಸಾಕಷ್ಟು ಸಮಯಾವಕಾಶವಿತ್ತೇ?
- ಸಾಕಷ್ಟು ಸಿಬ್ಬಂದಿ ಇತ್ತೆ?, ವಯಸ್ಕರ ಮೇಲುಸ್ತುವಾರಿ ಇತ್ತೆ?
- ಇನ್ನಷ್ಟು ಉತ್ತಮವಾಗಿಸಲು ಭಿನ್ನವಾಗಿ ಏನಾದರೂ ಮಾಡಬಹುದೇ?
- ಮುಂದಿನ ಬಾರಿ ಯಾವ ಅಂಶಗಳಿಗೆ ಒತ್ತು ನೀಡಬೇಕು?
- ಭವಿಷ್ಯದಲ್ಲಿ ಯಾವ ಸಮಸ್ಯೆಗಳಿಗೆ ಮನಸ್ಸು ಕೊಡಬೇಕು?

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಬಿಟ್ಟ ಸ್ಥಳ ಭರ್ತಿ ಮಾಡಿ.

1. ಪ್ರಸಿದ್ಧ ರಾಜರು, ಸುಧಾರಕರು, ಹೆಸರಾಂತ ಪುರುಷರು ಮತ್ತು ಮಹಿಳೆಯರು – ಇವರುಗಳ ಬಗ್ಗೆ ಕಥೆಗಳನ್ನು ಹೇಳುವುದಕ್ಕೆ ____________________ ಎನ್ನವರು.
2. ವಿದ್ಯಾರ್ಥಿಗಳು ಲಭ್ಯವಿರುವ ಆಕರಗಳ ಸಹಾಯದಿಂದ ಇತಿಹಾಸವನ್ನು ನಿರ್ಮಿಸಬೇಕು. ಇದನ್ನು ______________________ ಎನ್ನುವರು.
3. ಮೂಲ ಆಕರಗಳೆಂದರೆ ______________________ ಆಕರಗಳು.
4. ಜೀವನ ಚರಿತ್ರೆಯ ವಿಧಾನವನ್ನು____________________ ಎಂದು ಕರೆಯುತ್ತಾರೆ.
5. ಸಂವಹನದ ಏಕಮುಖೀಯ ಮಾರ್ಗದಂತೆ ಇರುವ ವಿಧಾನ ____________________
6. ____________________ ನಲ್ಲಿ ವಿದ್ಯಾರ್ಥಿಗಳು ತರಗತಿಯ ಹೊರಗಿನ ಸ್ಥಳಗಳಿಗೆ ಭೇಟಿ ನೀಡುವ ಅವಕಾಶ ಹೊಂದಿರುತ್ತಾರೆ.

**3.3.4. ಸಾರಾಂಶಿಸೋಣ**

- ತರಗತಿಯಲ್ಲಿ ವಿದ್ಯಾರ್ಥಿಗಳು ಯಶಸ್ಸನ್ನು ಗಳಿಸಬೇಕಾದರೆ ಸಮರ್ಥ ಬೋಧನಾ ವಿಧಾನಗಳು ಅಗತ್ಯ.
- ಇತಿಹಾಸ ಬೋಧನೆಗೆ ಕಥಾ ನಿರೂಪಣೆಯ ವಿಧಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.
- ಮೂಲ ಆಕರ ವಿಧಾನವು ಚಟುವಟಿಕೆ ಆಧಾರಿತ ವಿಧಾನವಾಗಿದೆ.
- ಆಕರಗಳನ್ನು ಹಲವು ಶೀರ್ಷಿಕೆಯಡಿ ವರ್ಗೀಕರಿಸಬಹುದು– ಮೂಲ ಆಕರ, ಪರೋಕ್ಷ ಆಕರ, ಪುರಾತತ್ವ ಆಕರ, ಸಾಹಿತ್ಯಕ ಆಕರ ಮತ್ತು ಸಾಂಪ್ರದಾಯಿಕ ಆಕರ.
- ಜೀವನ ಚರಿತ್ರೆಯ ವಿಧಾನ ಎಂದರೆ ಹೆಸರಾಂತ ವ್ಯಕ್ತಿಗಳ ಜೀವನ ಚರಿತ್ರೆಯ ಮೂಲಕ ಚರಿತ್ರೆಯನ್ನು ಬೋಧಿಸುವುದು.
- ಉಪನ್ಯಾಸ ವಿಧಾನ ಬೋಧನೆಯು ಅತ್ಯಂತ ಹಳೆಯ ವಿಧಾನ.
- ನಾಟಕೀಕರಣವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುತ್ತದೆ.
- ಕ್ಷೇತ್ರಪ್ರವಾಸವು ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಪರಿಣಾಮಕಾರಿಯಾಗಿಸಲು ಅವಕಾಶಮಾಡಿಕೊಡುತ್ತದೆ.

**3.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಉತ್ತರಗಳಿಗಾಗಿ ಈ ಸ್ವಯಂ ಕಲಿಕಾ ಸಾಮಗ್ರಿಯ 3.3.3.1 ನೇ ಭಾಗ ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
1. ಕಥಾ ನಿರೂಪಣೆ ವಿಧಾನ 2. ಮೂಲ ಆಕರ ವಿಧಾನ 3. ಮೂಲ 4. ಕಾರ್ಲೈಲ್‌ನ ಪ್ರಸಿದ್ಧ ವ್ಯಕ್ತಿಗಳು ಎಂಬ ಸಿದ್ಧಾಂತ 5. ಉಪನ್ಯಾಸ ವಿಧಾನ

### 3.3.6. ಘಟಕಾಂತ್ಯ ಅಭ್ಯಾಸಗಳು

1. ನಿಮ್ಮ ತರಗತಿಯಲ್ಲಿ ಇತಿಹಾಸ ಬೋಧನೆಯಲ್ಲಿ ನೀವು ಉಪಯೋಗಿಸಿರುವ ಬೇರೆ ಬೇರೆ ವಿಧಾನಗಳನ್ನು ವಿಶದೀಕರಿಸಿ.
2. ನೀವು ಉಪಯೋಗಿಸಿದ ಪ್ರತಿಯೊಂದು ವಿಧಾನದ ಅನುಕೂಲತೆಗಳನ್ನು ಉಲ್ಲೇಖಿಸಿ.
3. ನೀವು ಉಪಯೋಗಿಸಿರುವ ವಿಧಾನಗಳಲ್ಲಿ ನಿಮಗೆ ಏನೇನು ಸಮಸ್ಯೆಗಳು ಎದುರಾಗುತ್ತಲಿವೆ ಎಂಬುದನ್ನು ಗುರುತಿಸಿ.

### 3.3.7. ಪರಾಮರ್ಶನ ಸೂಚಿ


1. Teaching of Social Studies, S.K Mangal &Uma Mangal, PHI Learning Private Limited, New Delhi, 2001.
2. Teaching of Social Studies, J C Aggarwal, Vikas Publishing House, New Delhi, 2008.
3. Modern Teaching of Civics/ Political Science, M.H. Syed, Anmol Publications, New Delhi, 2004.
4. Methods of Teaching Civics, J.P Kumar & D.B. Rao, Discovery Publishing House, New Delhi, 2004.
5. Teaching of Economics, Amita Yadav, Anmol Publications, New Delhi, 2004.
6. Teaching of History, S.K Kochhar, Sterling Publishers, New Delhi, 2003.
7. Teaching of History and Civics, Timmareddy, VidyanidhiPrakashana, Gadag, 2000.

## ಬ್ಲಾಕ್ 3 : ಸಮಾಜ ವಿಜ್ಞಾನಗಳ ಪಠ್ಯಕ್ರಮ ಮತ್ತು ಬೋಧನೆ

### ಘಟಕ 4 : ಭೂಗೋಳ ವಿಜ್ಞಾನದ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

**ಘಟಕದ ರಚನೆ**


3.4.1. ಕಲಿಕಾ ಉದ್ದೇಶಗಳು

3.4.2. ಪೀಠಿಕೆ

3.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.4.3.1. ಭೂಗೋಳ ವಿಜ್ಞಾನದ ಬೋಧನೆ: ಬೋಧನೆಯ ವಿಧಾನಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

3.4.3.2. ಭೂಗೋಳ ವಿಜ್ಞಾನದ ಬೋಧನೆ: ಬೋಧನಾ ತಂತ್ರಗಳು ಮತ್ತು ಕಾರ್ಯತಂತ್ರಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.4.4. ಸಾರಾಂಶಿಸೋಣ

3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

3.4.6. ಘಟಕಾಂತ್ಯ ಅಭ್ಯಾಸಗಳು

3.4.7. ಪರಾಮರ್ಶನ ಸೂಚಿ


### 3.4.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು:

- ಭೂಗೋಳ ವಿಜ್ಞಾನ ಬೋಧನಯ ಬೇರೆ ಬೇರೆ ವಿಧಾನಗಳನ್ನು ವಿವರಿಸುವರು;
- ಭೂಗೋಳ ವಿಜ್ಞಾನ ಬೋಧನೆಯಲ್ಲಿ ಉಪಯೋಗಿಸುವ ತಂತ್ರಗಳನ್ನು ಮತ್ತು ಕಾರ್ಯತಂತ್ರಗಳನ್ನು ವಿವರಿಸುವರು;
- ವಿಭಿನ್ನ ವಿಧಾನಗಳ ಗುಣಾವಗುಣಗಳನ್ನು ವಿಶ್ಲೇಷಿಸುವರು;
- ಪರಿಣಾಮಕಾರಿ ಬೋಧನೆಗೆ ಪೂರಕವಾಗುವಂತೆ ಸೂಕ್ತ ವಿಷಯ ವಸ್ತುವಿಗೆ ಸೂಕ್ತ ವಿಧಾನವನ್ನು ಆಯ್ಕೆ ಮಾಡಿ ಬಳಸುವರು; ಮತ್ತು
- ಈಗ ತರಗತಿಯಲ್ಲಿ ಉಪಯೋಗಿಸಲಾಗುತ್ತಿರುವ ವಿಧಾನಗಳನ್ನು ಸುಧಾರಿಸುವರು.

### 3.4.2. ಪೀಠಿಕೆ

ಹಿಂದಿನ ಘಟಕದಲ್ಲಿ ಇತಿಹಾಸ ಬೋಧನೆಯ ಹಲವಾರು ವಿಧಾನಗಳನ್ನು ನಾವು ಚರ್ಚೆ ಮಾಡಿದ್ದೇವಲ್ಲದೆ, ಇತಿಹಾಸದ ಪರಿಣಾಮಕಾರಿ ಬೋಧನೆಯಲ್ಲಿ ಒಳಗೊಂಡಿರುವ ಕಾರ್ಯತಂತ್ರಗಳನ್ನು ಚರ್ಚಿಸಿದ್ದೇವೆ. ಇತಿಹಾಸವು ಸಮಾಜವಿಜ್ಞಾನದ ಅಡಿಯಲ್ಲಿ ಅಧ್ಯಯನ ಮಾಡಲಾಗುವ ವಿಷಯಗಳಲ್ಲಿ ಒಂದಾಗಿದೆ ಎಂದೂ ನಮ್ಮ ಹಿಂದಿನ ಅಧ್ಯಯನದಿಂದ ಅರ್ಥ ಮಾಡಿಕೊಂಡಿದ್ದೇವೆ. ಸಮಾಜ ವಿಜ್ಞಾನದಡಿಯಲ್ಲಿ ಅಧ್ಯಯನ ಮಾಡಲಾಗುವ ಮತ್ತೊಂದು ಪ್ರಮುಖ ವಿಷಯವೆಂದರೆ ಭೂಗೋಳ ವಿಜ್ಞಾನ. ಸಮಾಜ ವಿಜ್ಞಾನದ ಪ್ರತಿಯೊಂದು ವಿಷಯವೂ ವಿಷಯವಸ್ತುವಿನಲ್ಲಿ ಮತ್ತು ವ್ಯಾಪ್ತಿಯಲ್ಲಿ ವ್ಯತ್ಯಾಸವಾಗುವುದರಿಂದ ಅವುಗಳನ್ನ ಬೋಧಿಸುವ ವಿಧಾನಗಳು ಬೇರೆ ಬೇರೆಯಾಗುತ್ತವೆ. ಆದ್ದರಿಂದ, ಈ ಘಟಕದಲ್ಲಿ ನಾವು ಭೂಗೋಳ ವಿಜ್ಞಾನ ಬೋಧನೆಯ ವಿಧಾನಗಳನ್ನು ಮತ್ತು ತಂತ್ರಗಳನ್ನು ಅಧ್ಯಯನ ಮಾಡೋಣ.

### 3.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 3.4.3.1. ಭೂಗೋಳ ವಿಜ್ಞಾನದ ಬೋಧನೆ: ಬೋಧನೆಯ ವಿಧಾನಗಳು

ಭೂಗೋಳ ವಿಜ್ಞಾನವು ಭೂಮಿ, ಭೂಮಿಯ ಲಕ್ಷಣಗಳು, ಅದರ ಮೇಲಿನ ನಿವಾಸಿಗಳು, ಭೂಮಿಯ ಮತ್ತು ಗ್ರಹಗಳಲ್ಲಿನ ವಿದ್ಯಮಾನಗಳು ಇತ್ಯಾದಿಗಳ ಅಧ್ಯಯನಕ್ಕೆ ಮೀಸಲಾಗಿರುವ ಸಮಾಜ ವಿಜ್ಞಾನದ ಒಂದು ಕ್ಷೇತ್ರ ಎಂದು ನಾವು ಹಿಂದಿನ ಘಟಕದಿಂದ ತಿಳಿದುಕೊಂಡಿದ್ದೇವೆ. ಭೂಮಿ ಮತ್ತು ಅದರ ಮಾನವ ಸಂಬಂಧಿ ಹಾಗೂ ಸಹಜ ಸಂಕೀರ್ಣತೆಗಳನ್ನು– ಕೇವಲ ಅವು ಹೇಗಿವೆ ಎಂದು ಮಾತ್ರವಲ್ಲ, ಬದಲಾಗಿ ಅವು ಹೇಗೆ ಬದಲಾಗಿವೆ ಮತ್ತು ಹೇಗೆ ಉಂಟಾಗಿವೆ  ಎಂಬುದೂ ಸೇರಿದಂತೆ– ಅರ್ಥ ಮಾಡಿಕೊಳ್ಳುವ ಉದ್ದೇಶ ಹೊಂದಿರುವ, ಎಲ್ಲವನ್ನೂ ಒಳಗೊಳ್ಳುವ  ಶಿಸ್ತು ಭೂಗೋಳವಿಜ್ಞಾನ. ಬ್ರಹ್ಮಾಂಡದ ಮತ್ತು ಅದರ ಗುಣಲಕ್ಷಣಗಳ ವ್ಯವಸ್ಥಿತ ಅಧ್ಯಯನ ಇದಾಗಿದೆ. ಸಾಂಪ್ರದಾಯಿಕವಾಗಿ, ಭೂಗೋಳ ವಿಜ್ಞಾನವು ನಕ್ಷಾ ರೇಖನ ಮತ್ತು ಸ್ಥಳಗಳ ವೈವಿಧ್ಯಮಯ ಪರಿಸರಗಳು, ಸ್ಥಳಗಳು ಮತ್ತು ಜಾಗಗಳು ಮತ್ತು ಅವುಗಳ ನಡುವಣ ಅನ್ಯೋನ್ಯ ಕ್ರಿಯೆಗಳ ಅಧ್ಯಯನವನ್ನು ಒಳಗೊಳ್ಳುತ್ತದೆ. ವಸ್ತುಗಳು ಏಕೆ ಹಾಗಿವೆ, ಇರುವಲ್ಲಿ ಏಕೆ ಇವೆ ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವ ಪ್ರಯತ್ನವನ್ನು ಇದು ಮಾಡುತ್ತದೆ. ಸ್ಥಳಗಳ ಗುಣಲಕ್ಷಣಗಳು, ವಿಶೇಷವಾಗಿ ಅವುಗಳ ಸಹಜ ಪರಿಸರ ಮತ್ತು ಜನರು ಹಾಗೂ ಅವುಗಳ ನಡುವಣ ಸಂಬಂಧ– ಇವುಗಳನ್ನು ಕುರಿತಾದ ಪುರಾತನ ಪದ್ಧತಿಯಲ್ಲಿ ಈ ಆಧುನಿಕ ಜ್ಞಾನಶಿಸ್ತು ನೆಲೆಗೊಂಡಿದೆ. ಭೂಗೋಳ ವಿಜ್ಞಾನ ಬೋಧನೆಯ ಕ್ಷೇತ್ರದಲ್ಲಿನ ವಿಶೇಷಜ್ಞರು, ಅದರ ಪರಿಣಾಮಕಾರಿ ಬೋಧನೆಗೆ ಹಲವು ವಿಧಾನಗಳನ್ನ ಸಲಹೆ ಮಾಡಿದ್ದಾರೆ. ಈ ವಿಧಾನಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

**ವೀಕ್ಷಣಾ ವಿಧಾನ(Observation Method )**

ಮಕ್ಕಳು ವಸ್ತುಗಳನ್ನು, ಅದರಲ್ಲಿಯೂ ತಮ್ಮ ಸುತ್ತಮುತ್ತ ಇರುವ ವಸ್ತುಗಳನ್ನು ತಾವೇ ಸ್ವತಃ ನೋಡುವುದಕ್ಕೆ ಕುತೂಹಲ ಉಳ್ಳವರಾಗಿರುತ್ತಾರೆ. ಮಕ್ಕಳ ಈ ವರ್ತನೆಯನ್ನು ಮನೋವಿಜ್ಞಾನಿಗಳು ಗಮನಿಸಿದ್ದಾರೆ. ಭೂಗೋಳ ಶಾಸ್ತ್ರಜ್ಞರು ಈ ಅಂಶದಿಂದ ತಮಗೆ ಅನುಕೂಲವಾಗುವ ರೀತಿಯಲ್ಲಿ ಪ್ರಯೋಜನ ಪಡೆದಿದ್ದಾರೆ. ಮಗು ತಾನೇ ಸ್ವತಃ ಗಮನಿಸಿದ ವಸ್ತು ಮತ್ತು ತನ್ನ ಪ್ರಯತ್ನದಿಂದ ತಾನೇ ಕಂಡುಹಿಡಿದ ವಾಸ್ತವಾಂಶ– ಇವು ಮಗುವಿನ ಮಾನಸಿಕ ಜೀವನದ ಒಂದು ಭಾಗವಾಗುತ್ತದೆ. ಇದು ಮಗುವಿನ ಕಲಿಕೆಯಲ್ಲಿ ಬಹಳ ಮೌಲ್ಯವುಳ್ಳದ್ದಾಗಿದೆ.

ವೀಕ್ಷಣಾ ವಿಧಾನದ ಮುಖ್ಯ ಮುಖಗಳೆಂದರೆ:

- ವೀಕ್ಷಿಸುವುದು
- ದಾಖಲಿಸುವುದು
- ಅರ್ಥೈಸುವುದು

ನೇರ ವೀಕ್ಷಣೆಯಿಂದ ಭೌಗೋಳಿಕ ಮಾಹಿತಿಯನ್ನು ಪಡೆಯುವ ತಂತ್ರವು ಈ ವಿಷಯದ ಅಧ್ಯಯನಕ್ಕೆ ತಳಹದಿಯಾಗಿದೆ.

**ಭೌಗೋಳಿಕ ವೀಕ್ಷಣೆಗೆ ಸಾಧನಗಳು:** ಭೂಗೋಳ ವಿಜ್ಞಾನ ಬೋಧನೆಯ ವೀಕ್ಷಣಾ ವಿಧಾನವನ್ನು ತರಗತಿಯ ಒಳಗೆ ಮತ್ತು ಹೊರಗೆ–ಎರಡೂ ಕಡೆಗಳಲ್ಲಿಯೂ ಬಳಸಬಹುದು.

**ಭೂಗೋಳ (ಗ್ಲೋಬ್):** ಭೂಗೋಳ ಒಂದು ಬಹಳ ಉಪಯುಕ್ತ ಸಾಧನ. ವೀಕ್ಷಣೆಯ ಮೂಲಕ ಮಕ್ಕಳು ರೇಖಾಂಶ, ಅಕ್ಷಾಂಶ, ಮಧ್ಯಾಹ್ನ ರೇಖೆ ಇತ್ಯಾದಿ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಬಹುದು.

**ಚಾರ್ಟುಗಳು:** ಮಕ್ಕಳು ತಾವೇ ಸಿದ್ದಪಡಿಸಿದ ಛಾರ್ಟುಗಳು ಅಥವಾ ಮಾರಾಟಕ್ಕೆಂದೇ ಸಿದ್ಧಪಡಿಸಿರುವ ಛಾರ್ಟುಗಳು ಮಕ್ಕಳ ವೀಕ್ಷಣೆಯನ್ನು ಹೆಚ್ಚಿಸುತ್ತವೆ.

**ಮಾದರಿಗಳು:** ಮಕ್ಕಳು ವಸ್ತುಗಳನ್ನು ವೀಕ್ಷಿಸುತ್ತಾರೆ ಹಾಗೂ ಅವರು ತಮ್ಮ ವೀಕ್ಷಣೆಯ ಫಲಿತಾಂಶಗಳನ್ನು ಮಾದರಿಗಳಾಗಿ ಪರಿವರ್ತಿಸಬಲ್ಲದು.

**ತರಗತಿಯ ಹೊರಗೆ:** ತರಗತಿಯ ಹೊರಗೆ ಕೆಲವು ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಶಿಕ್ಷಕರು ಮಕ್ಕಳ ವೀಕ್ಷಣೆಯನ್ನು ಪುಷ್ಟಿಗೊಳಿಸಬಲ್ಲರು. ಈ ಉದ್ದೇಶಕ್ಕಾಗಿ ಈ ಮುಂದಿನ ವಿಧಾನಗಳನ್ನು ಶಿಕ್ಷಕರು ಅನುಸರಿಸಬಹುದು. ತರಗತಿಯ ಹೊರಗೆ ಗದ್ದೆಗಳು, ಬೆಳೆಗಳು, ಮಣ್ಣು ಇತ್ಯಾದಿ ಕಾಣಸಿಗುತ್ತವೆ. ಇವು ಸಹ ಭೌಗೋಳಿಕ ಅಂಶಗಳೇ ಆಗಿವೆ. ಈ ಅಂಶಗಳ ವೀಕ್ಷಣೆ ಮಾಡಿ ಬಳಿಕ ತರಗತಿಯಲ್ಲಿ ಸಂವಾದವನ್ನು ನಡೆಸುವುದರಿಂದ ಮಕ್ಕಳ ಭೌಗೋಳಿಕ ವಾಸ್ತವಾಂಶಗಳ ಜ್ಞಾನ ಪುಷ್ಟಿಗೊಳ್ಳುತ್ತದೆ. ಸುತ್ತ ಮುತ್ತಲಿನ ಪರಿಸರ ಮಾನವ ಜೀವನವನ್ನು ಅರ್ಥಪೂರ್ಣವಾಗಿಸಲು ಹೇಗೆ ಕೊಡುಗೆ ನೀಡುತ್ತವೆ ಎಂಬ ಹಿನ್ನೆಲೆಯಲ್ಲಿ ಅವುಗಳನ್ನು ವೀಕ್ಷಿಸಲು  ಶಿಕ್ಷಕರು ಪ್ರೇರೇಪಿಸಬೇಕು. ಈ ಕೆಳಗಿನ ವಿಧಾನಗಳು ಸಹ ಭೂಗೋಳ ವಿಜ್ಞಾನದ ಕಲಿಕೆಯನ್ನು ಹೆಚ್ಚಿಸಲು ಸಹಾಯಕವಾಗುತ್ತವೆ.

**ಎ) ಕ್ಷೇತ್ರಪ್ರವಾಸ:** ಕ್ಷೇತ್ರಪ್ರವಾಸಗಳು ಪರಿಸರವನ್ನು ಅನ್ವೇಷಿಸುವುದಕ್ಕೆ ನೆರವಾಗುತ್ತದೆ. ಭೌಗೋಳಿಕ ವಸ್ತುಗಳ ವೀಕ್ಷಣೆ ಮಾಡಿ ಸಂಕ್ಷಿಪ್ತ ಟಿಪ್ಪಣಿ ಬರೆಯಲು ಮಾದರಿಗಳನ್ನು ಕಲೆ ಹಾಕಲು ಹಾಗೂ ಇನ್ನಿತರ ಚಟುವಟಿಕೆಗಳನ್ನು ಮಾಡಲು ಮಕ್ಕಳನ್ನು ವಿಶಾಲ ನೈಸರ್ಗಿಕ ಭೂಪ್ರದೇಶಕ್ಕೆ ಕರೆದುಕೊಂಡು ಹೋಗಬಹುದು.

**ಬಿ) ಪ್ರವಾಸಗೋಷ್ಠಿ:** ಪ್ರವಾಸಗೋಷ್ಠಿಗಳು ಬೋಧಪ್ರದವೂ ಹೌದು, ಮನರಂಜಕವೂ ಹೌದು. ಮಕ್ಕಳು ಪರಿಸರದೊಂದಿಗೆ ಅನ್ಯೋನ್ಯ ಕ್ರಿಯೆಯನ್ನು ನಡೆಸಿ ಕಲಿಯುತ್ತಾರೆ. ಗಿರಿಧಾಮಗಳಿಗೆ, ಭೌಗೋಳಿಕ ಸ್ಮಾರಕಗಳಿಗೆ ಏರ್ಪಡಿಸಲಾಗುವ ಪ್ರವಾಸಗೋಷ್ಠಿ ಮಕ್ಕಳು ಕೆಲವು ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತವೆ.

**ವೀಕ್ಷಣಾ ವಿಧಾನದ ಗುಣಗಳು:**

- ವಿದ್ಯಾರ್ಥಿಗಳು ವೀಕ್ಷಣೆ ಮಾಡಲು ಮತ್ತು ಅವರು ವೀಕ್ಷಣೆ ಮಾಡುವುದರ ಬಗ್ಗೆ ತರ್ಕ ಮಾಡಲು ಅವರಿಗೆ ತರಬೇತಿ ನೀಡುತ್ತದೆ. ಈ ವಿಧಾನವು ಭೂಗೋಳ ವಿಜ್ಞಾನದ ವಿದ್ಯಾರ್ಥಿಗಳನ್ನು ಪರಿಸರದ ನೇರ ಸಂಪರ್ಕಕ್ಕೆ ತರುತ್ತದೆ.
- ಈ ವಿಧಾನದಿಂದ ವೀಕ್ಷಣೆ ಮತ್ತು ಅನುಭವಗಳ ಮುಖಾಂತರ ಗೊತ್ತಿಲ್ಲದಿರುವುದನ್ನು ಗೊತ್ತಿರುವುದರ ರೂಪದಲ್ಲಿ ಅರ್ಥೈಸುತ್ತೇವೆ. ಮೂಲಭೂತವಾಗಿ ಇದೊಂದು ಶಾಲೆಯಿಂದ ಹೊರಗೆ ಕೈಗೊಳ್ಳುವ ಕಾರ್ಯ. ಎಲ್ಲೆಲ್ಲಿ ನೇರ ವೀಕ್ಷಣೆಗೆ ಅವಕಾಶವಿದೆಯೋ ಅಲ್ಲಿ ಇನ್ನಾವುದೂ ಅದರ ಸ್ಥಾನದಲ್ಲಿ ಬರಲು ಅವಕಾಶ ಕೊಡಬಾರದು. ಹೀಗೆ, ಇದು ಭೌಗೋಳಿಕ ಜ್ಞಾನವನ್ನು ಸಂಪಾದಿಸುವ ನೇರ ವಿಧಾನವಾಗಿದೆ.
- ಫಲಿತಾಂಶಗಳಿಗಿಂತ ಕಾರ್ಯದಲ್ಲಿ ಈ ವಿಧಾನದ ಗುಣ(ಶ್ರೇಷ್ಠತೆ)ವಿರುವುದು. ಈ ವಿಧಾನವು ದತ್ತಾಂಶಗಳನ್ನು ಸಂಗ್ರಹಿಸುವುದಕ್ಕಿಂತ ಅರಿವಿನಿಂದ ಕೂಡಿದ ವೀಕ್ಷಣೆಯಲ್ಲಿನ ತರಬೇತಿಯಾಗಿದೆ.
- ಈ ವಿಧಾನವು ನಿಖರ ಚಿಂತನೆ ಮತ್ತು ಅನ್ವೇಷಣೆಯ ಅಭ್ಯಾಸವನ್ನು ಬೆಳೆಸುತ್ತದೆ.

**ವೀಕ್ಷಣಾ ವಿಧಾನದ ಮಿತಿಗಳು**

- ವೀಕ್ಷಣಾ ವಿಧಾನದ ಅಧ್ಯಯನವು ತರಗತಿಯ ಹೊರಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೆಚ್ಚು ಸಮಯವನ್ನು  ವಿನಿಯೋಗಿಸಬೇಕಾಗುತ್ತದೆ ಮತ್ತು ಭಾರತೀಯ ಶಾಲೆಗಳ ಶಾಲಾ ವೇಳಾಪಟ್ಟಿಯು ಇದಕ್ಕೆ ಅವಕಾಶ ಮಾಡುವುದಿಲ್ಲ.
- ಚಿಕ್ಕ ಮಕ್ಕಳು ಮಾಡುವ ವೀಕ್ಷಣೆ ಮಿತಿ ಉಳ್ಳದ್ದೇ ಆಗಿರುತ್ತದೆಯಾದ್ದರಿಂದ ಈ ವಿಧಾನವು ಮೇಲಿನ ತರಗತಿಗಳಿಗೆ ಸೂಕ್ತವಾಗಿದೆ.
- ಕೆಲವೊಮ್ಮೆ ವೀಕ್ಷಣಾತ್ಮಕ ಅಧ್ಯಯನ ತನ್ನ ಸಹಜ ಗುಣವನ್ನು ಕಳೆದುಕೊಂಡು ಗುರಿಯಿಲ್ಲದ ಅಲೆದಾಟವಾಗಿ ಸಮಯ ಶಕ್ತಿಗಳ ಅಪವ್ಯಯವಾಗುವ ಸಂಭವವಿದೆ. ಇದಕ್ಕೆ ಕಾರಣ ಶಿಕ್ಷಕರ ಅರಿವಿನ

ಕೊರತೆ ಮತ್ತು ನೇರ ಕಾರ್ಯದ ಕೊರತೆ. ಸೂಕ್ತ ಮಾರ್ಗದರ್ಶನ ಮತ್ತು ಅರಿವು ಇಲ್ಲದೆ ಮಕ್ಕಳನ್ನು ವೀಕ್ಷಣೆಗಾಗಿ ಬಿಡುವುದು ಒಂದಿನಿತೂ ಲಾಭಕರವಲ್ಲ. ಸೂಕ್ತ ಮಾರ್ಗದರ್ಶನವಿರಬೇಕು ಹಾಗೂ ಮಗುವಿನ ವಾಸ್ತವ ವೀಕ್ಷಣೆ ಮಿತಿಯುಳ್ಳದ್ದಾದ್ದರಿಂದ ವೀಕ್ಷಣೆಯಿಂದ ಪಡೆದ ಜ್ಞಾನವನ್ನು ಸಮರ್ಪಕ ವಿಧಾನಗಳಿಂದ ಪೋಷಿಸಬೇಕು.

**ಬಿ) ಪ್ರಯೋಗಾಲಯ ವಿಧಾನ(Laboratory Method)**

ಪ್ರಕೃತಿ ವಿಜ್ಞಾನಗಳಲ್ಲಿ ಅಷ್ಟೊಂದು ಯಶಸ್ವಿಯಾಗಿ ಬಳಸಲಾಗಿರುವ ಪ್ರಯೋಗಾಲಯ ಬೋಧನಾ ವಿಧಾನವನ್ನು ಅಷ್ಟೇ ಯಶಸ್ವಿಯಾಗಿ ಭೂಗೋಳ ವಿಜ್ಞಾನದಲ್ಲಿಯೂ ಅಳವಡಿಸಿಕೊಳ್ಳಲಾಗಿದೆ. ನಿರ್ದೇಶಿತ ಅಧ್ಯಯನದ ಫಲವಾಗಿ ಈ ವಿಧಾನ ಬೆಳೆದಿದೆ. ಪ್ರಯೋಗಾಲಯ ವಿಧಾನವು ಉಪಕರಣ ಮತ್ತು ಅವುಗಳ ಬಳಕೆಗೆ ಮುಖ್ಯವಾಗಿ ಒತ್ತು ನೀಡುತ್ತದೆ. ಉತ್ತಮ ಕಾರ್ಯಕ್ಕೆ ನೆರವಾಗುವ ಪುಸ್ತಕಗಳು, ನಿಯತಕಾಲಿಕೆಗಳು, ನಕ್ಷೆಗಳು, ಚಿತ್ರಗಳು, ರೇಖಾಚಿತ್ರಗಳು ಮತ್ತು ನಿರ್ಮಾಣ ಸಾಮಗ್ರಿಗಳು ಹಾಗೂ ಇನ್ನಿತರ ಸಾಮಗ್ರಿ ವಿಧಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ಕೈಗೆ ಎಟುಕುವಂತೆ ಹೊಂದಿರುವ ಕೊಠಡಿ ಈ ವಿಧಾನಕ್ಕೆ ಬೇಕಾಗುತ್ತದೆ. ವಿಶೇಷ ಕೊಠಡಿ ಇಲ್ಲದಿದ್ದ ಪಕ್ಷದಲ್ಲಿ ಭೂಗೋಳ ವಿಜ್ಞಾನ ಶಿಕ್ಷಕರು ಈ ಉಪಕರಣಗಳನ್ನು ಸಾಧಾರಣ ತರಗತಿಯಲ್ಲಿಯೇ ಇಡಬಹುದು.

ಸಮಸ್ಯಾ ಪರಿಹಾರ ಉಪಕ್ರಮ ಅಥವಾ ಪ್ರಾಯೋಜನೆಯ ಪೂರ್ಣಗೊಳಿಸುವಿಕೆ ಅಥವಾ ಚಾರ್ಟ್ ಮಾದರಿಗಳು ಮತ್ತು ನಕ್ಷೆಗಳ ತಯಾರಿಕೆ ಅಥವಾ ಒಂದು ಸಾಮಾನ್ಯ ನಿಯಮಗಳನ್ನು ನಿಗಮನಗೊಳಿಸಲು ಒಂದು ಪ್ರಯೋಗವನ್ನು ಕೈಗೊಳ್ಳುವಿಕೆ– ಇವೆಲ್ಲದರಂತೆಯೇ ಪ್ರಯೋಗಾಲಯ ವಿಧಾನದ ಕ್ರಮವೂ ಇರುತ್ತದೆ. ಭೂಗೋಳಶಾಸ್ತ್ರದ ಕೆಲವು ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಲು ಶಿಕ್ಷಕ ಮತ್ತು ವಿದ್ಯಾರ್ಥಿಗಳೀರ್ವರೂ ಕೆಲವು ವೈಜ್ಞಾನಿಕ ನಿಯಮಗಳನ್ನು ಆಧರಿಸಿ ಕೆಲವು ಪ್ರಯೋಗಗಳನ್ನು ಮಾಡುತ್ತಾರೆ. ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಅಥವಾ ಗುಂಪಿನಲ್ಲಿ ಭೂಗೋಳ ಶಾಸ್ತ್ರದ ಸಮಸ್ಯೆಗಳನ್ನು ಬಿಡಿಸಲು ಸಾಮಗ್ರಿಗಳನ್ನು ಉಪಯೋಗಿಸುತ್ತಾರೆ.

ಈ ವಿಧಾನವು 'ಮಾಡಿ–ಕಲಿ' ಎಂಬ ತತ್ವದ ಮೇಲೆ ನಿಂತಿದೆ. ವಿದ್ಯಾರ್ಥಿಗಳು ತಮ್ಮ ಕೈಗಳನ್ನು ಅಥವಾ ಕಣ್ಣುಗಳನ್ನು ಅಥವಾ ಅನೇಕ ವೇಳೆ ಎರಡನ್ನೂ ಉಪಯೋಗಿಸುತ್ತಾರೆ. ವಿದ್ಯಾರ್ಥಿಗಳಿಗೆ ಅವರದೇ ಕ್ರಿಯಾಶೀಲ ಪ್ರಯತ್ನದಿಂದ ಮಾಹಿತಿಯನ್ನು ಪಡೆಯಲು ಅವರನ್ನು ತೊಡಗಿಸಲಾಗುತ್ತದೆ. ಇದೊಂದು ಚಟುವಟಿಕೆಯ ವಿಧಾನವಾಗಿದ್ದು, ವಿದ್ಯಾರ್ಥಿಗಳು ಒಬ್ಬ ಅನ್ವೇಷಕರಂತೆ ಅಥವಾ ಸಂಶೋಧನೆ ನಡೆಸುವರಂತೆ ಯಾವಾಗಲೂ ಮಾನಸಿಕವಾಗಿ ಕ್ರಿಯಾಶೀಲರಾಗಿರುತ್ತಾರೆ. ಮಗುವು ಅದರ ಮನಸ್ಸು ಕ್ರಿಯಾಶೀಲವಾಗಿದ್ದಾಗ ಮಾತ್ರ ಕಲಿಯುತ್ತದೆ. ವೈಯಕ್ತಿಕ ವೈಲಕ್ಷಣ್ಯಗಳಿಗೆ (ಭಿನ್ನ ಲಕ್ಷಣಗಳಿಗೆ) ಅವಕಾಶ ಮಾಡುವ ರೀತಿಯಲ್ಲಿ ಎಲ್ಲ ವಿಧಾನಗಳ ಶ್ರೇಷ್ಠ ವೈಶಿಷ್ಟ್ಯಗಳನ್ನು ವಿಧಾನವು ಸಂಯೋಜಿಸುತ್ತದೆ. ಈ ವಿಧಾನವು ಸಮಸ್ಯಾ ಪರಿಹಾರ, ನಿರ್ದೇಶಿತ ಅಥವಾ ಮೇಲ್ವಿಚಾರಣೆಯಲ್ಲಿ ನಡೆಯುವ ಅಧ್ಯಯನ ಮತ್ತು ಸಾಮಾಜೀಕರಿಸಿದ ಸನ್ನಿವೇಶವನ್ನು ಆಧರಿಸಿದೆ.

ಭೂಗೋಳ ವಿಜ್ಞಾನದಲ್ಲಿನ ಪ್ರಾಯೋಗಿಕ ಕಾರ್ಯವು ಪ್ರಯೋಗಶಾಲೆಯ ಕಾರ್ಯವನ್ನು ಒಳಗೊಳ್ಳುತ್ತದೆ. ಕ್ಷೇತ್ರದಿಂದ ಅಥವಾ ಕೃಷಿ ಜಮೀನಿನಿಂದ ಅಥವಾ ಅಂಕಿಅಂಶಗಳನ್ನು ಒದಗಿಸುವ ವರದಿಗಳಿಂದ ಸಂಗ್ರಹಿಸಿದ ದತ್ತಾಂಶಗಳನ್ನು ಪ್ರಯೋಗಶಾಲೆಯಲ್ಲಿ ನಕ್ಷೆ ಮತ್ತು ಚಿತ್ರಗಳಾಗಿ ರೂಪಾಂತರಿಸಲಾಗುತ್ತದೆ. ಕ್ಷೇತ್ರ ವೀಕ್ಷಣೆಯ ಬಳಿಕ ವಿಚಾರಗಳಿಗೆ ಮೂರ್ತ ರೂಪವನ್ನು ಕೊಡಲು ಪ್ರಯೋಗಶಾಲೆಯ ಅಗತ್ಯ ತೋರಿಬರುತ್ತದೆ.

**ಪ್ರಯೋಗಶಾಲೆ ವಿಧಾನದ ಗುಣಗಳು**

ಬಹುಮಟ್ಟಿನ ಆಧುನಿಕ ಶಿಕ್ಷಣ ಪದ್ಧತಿ ಮಕ್ಕಳು 'ಮಾಡಿ–ಕಲಿ'ಯತ್ತಾರೆ ಎಂಬ ಆಧಾರ ಕಲ್ಪನೆಯನ್ನು ಆಧರಿಸಿದೆ. ಈ ವಿಧಾನದಲ್ಲಿ ವಿದ್ಯಾರ್ಥಿಯು ಸ್ವಂತ ಅನುಭವವೇ ನಿಜವಾದ ಕಲಿಕೆಯ ಆಧಾರ. ಈ ಮಾರ್ಗದಲ್ಲಿ ಬೋಧನೆ ಪಡೆದ ವಿದ್ಯಾರ್ಥಿಗಳು ವೀಕ್ಷಣಾಪರರು, ಕರಾರುವಾಕ್ಕಾಗಿರಲು ಮತ್ತು ಸ್ವತಃ ಚಿಂತನಾಪರರು ಆಗಲು ಕಲಿಯುತ್ತಾರೆ.

- ಈ ವಿಧಾನವು ತನ್ನೆಲ್ಲಾ ಬೋಧನಾ ಪ್ರಕ್ರಿಯೆಯ ಭಾರವನ್ನು ಜ್ಞಾನ ಸಂಚಯಕ್ಕಿಂತ ಹೆಚ್ಚಾಗಿ ಮನಸ್ಸಿನ ಬೆಳವಣಿಗೆಯ ಪ್ರಕ್ರಿಯೆಯ ಮೇಲೆ ಹಾಕುತ್ತದೆ. ಸ್ವಾಭಾವಿಕವಾಗಿಯೇ, ಯುವ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡುವುದು ಆಸಕ್ತಿಕರವೂ, ಇಷ್ಟವೂ ಆಗಿರುತ್ತದೆ.
- ಅನ್ವೇಷಣೆಗಳನ್ನು ಮಾಡುವ ಸಹಜ ರೀತಿ ಮತ್ತು ಮಾನವಕುಲ ರೂಪುಗೊಂಡಿರುವ ರೀತಿಯು ಅಮೂರ್ತದಿಂದ ಮೂರ್ತ ರೂಪಕ್ಕೆ ಬರುವುದೇ ಆಗಿದೆ. ಪ್ರಯೋಗಶಾಲೆಯ ಕಾರ್ಯ ಅತ್ಯಂತ ಮೂರ್ತಸ್ವರೂಪದ್ದು. ಆದ್ದರಿಂದ, ಯುವ ವಿದ್ಯಾರ್ಥಿಗಳಿಗೆ ಅದು ಆಸಕ್ತಿಕರವೂ, ಆನಂದದಾಯಕವೂ ಆಗಿರುತ್ತದೆ. ಇದು ಮಾಡುವಿಕೆಗೆ ಪ್ರಾಧಾನ್ಯ ನೀಡುತ್ತದೆಯಾದ್ದರಿಂದ ತಮ್ಮ ಸಾಮರ್ಥ್ಯಕ್ಕೆ ನಿಲುಕುವುದನ್ನು ವಿದ್ಯಾರ್ಥಿಗಳು ಸಾಧಿಸಬೇಕಾಗುತ್ತದೆ.
- ಪ್ರಯೋಗಶಾಲೆ ವಿಧಾನವು ಸಮತೋಲಿತ ನಿರ್ಣಯ, ಮತ್ತೊಬ್ಬರನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಇವೇ ಮೊದಲಾದ ಅಮೂಲ್ಯ ವ್ಯಕ್ತಿಗತ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ. ಉದಾಹರಣೆಗೆ, ತರಗತಿಯಲ್ಲಿ ಓಡಾಡುತ್ತಿರುವಾಗ, ಪ್ರಯೋಗ ಕೈಗೊಳ್ಳುವಾಗ ಸಾಮಗ್ರಿಗಳ ವಿನಿಮಯ ಮಾಡಿಕೊಳ್ಳುವಾಗ ಮಕ್ಕಳು ಗುಂಪಿನ ಒಳಿತಿಗಾಗಿ ಸ್ವನಿಯಂತ್ರಣವನ್ನು ಆಚರಣೆಗೆ ತರಲು ಕಲಿಯುತ್ತಾರೆ.
- ಹಳೆಯ ರೀತಿಯ ಉಪದೇಶಾತ್ಮಕ ವಿಧಾನಕ್ಕಿಂತ ಈ ವಿಧಾನದಿಂದ ಸಾಧಿಸಿದ ಕಲಿಕೆಯು ಉತ್ತಮ ಗುಣಮಟ್ಟದ್ದೂ ಹೆಚ್ಚು ವಾಸ್ತವವೂ ಮತ್ತು ಹೆಚ್ಚು ವ್ಯಾಪಕವೂ ಆಗಿರುತ್ತದೆ.
- ಭೂಗೋಳಶಾಸ್ತ್ರದ ಅಧ್ಯಯನದಲ್ಲಿ ಪ್ರಯೋಗಶಾಲೆಯ ಕಾರ್ಯ ಒಂದು ಮುಖ್ಯ ಭಾಗವಾಗಿದೆ.
- ಇದು ಮನೋವೈಜ್ಞಾನಿಕ ದೃಷ್ಟಿಯಿಂದ ಯುಕ್ತವಾಗಿದೆ. ಏಕೆಂದರೆ, ಮಾನವನ ಮೂಲಭೂತ ಮನಃಪ್ರವೃತ್ತಿಯಾದ ಚಟುವಟಿಕೆಗೆ ಇದು ಪ್ರೇರೇಪಿಸುತ್ತದೆ.
- ಭೂಗೋಳಶಾಸ್ತ್ರ ಬೋಧನೆಯ ಅತ್ಯಂತ ಮುಖ್ಯವಾದ ಭಾಗ ಎಂದರೆ, ವಿದ್ಯಾರ್ಥಿಗಳ ಮನೋಭಾವಕ್ಕೆ ಅನುಕೂಲಕರವಾದ, ಆರೋಗ್ಯಕರ ವಾತಾವರಣ ಎನ್ನಬಹುದಾಗಿದೆ. ಸೂಕ್ತ ಸಾಮಗ್ರಿಗಳು ಮತ್ತು ಉಪಕರಣಗಳು ಹಾಗೂ ಭೌತಿಕ ವ್ಯವಸ್ಥೆಯು ಜ್ಞಾನ ಚಿಲುಮೆಯ ಒರತೆ ತುಂಬಲು ಸಹಾಯ ಮಾಡುತ್ತವೆ.
- ಭೂಗೋಳ ಶಾಸ್ತ್ರದ ಕೆಲವು ವಿಷಯಗಳನ್ನು ಚಟುವಟಿಕೆಯ ವಿಧಾನದ ಮೂಲಕ ಅತ್ಯಂತ ಯಶಸ್ವಿಯಾಗಿ ಬೋಧಿಸಬಹುದು. ಈ ವಿಧಾನ ಪ್ರಾಕೃತಿಕ ಭೂಗೋಳ ವಿಜ್ಞಾನ ಮತ್ತು ನಕ್ಷಾಕಾರ್ಯದ ಕ್ಷೇತ್ರದಲ್ಲಿ ಬಹಳ ಪರಿಣಾಮಕಾರಿ.
- ಮಗು ತಾನು ಕಲಿಯುತ್ತಿರುವುದರ ಮಹತ್ವವೇನೆಂದು ಅರಿಯುವುದಕ್ಕೆ ಚಟುವಟಿಕೆಯ ವಿಧಾನದ ಬಳಕೆ ನೆರವಿಗೆ ಬರುವುದು.
- ಈ ವಿಧಾನದಲ್ಲಿ ವಿಷಯಗಳನ್ನು ತಾವೇ, ತಮ್ಮಿಂದಲೇ ಕಂಡುಕೊಳ್ಳಲು ಅವುಗಳ ಬಗ್ಗೆ ಚಿಂತಿಸಲು ಹಾಗೂ ಅನುಭವಕ್ಕೆ ತಂದುಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶವಿದೆ.
- ಈ ವಿಧಾನದಲ್ಲಿ ಕಲಿಕಾರ್ಥಿಗಳು ಕೇವಲ ಕೇಳುಗರಾಗಿರದೆ, ಪಾಠದಲ್ಲಿ ಸಕ್ರಿಯವಾಗಿ ಭಾಗವಹಿಸುವವರಾಗಿರುತ್ತಾರೆ. ಕೆಲವರು ಪ್ರಯೋಗಗಳನ್ನು ಕೈಗೊಳ್ಳುತ್ತಿದ್ದರೆ ಮತ್ತೆ ಕೆಲವರು ತಾವು ವೀಕ್ಷಿಸಿದ್ದರ ಬಗ್ಗೆ ಚರ್ಚಿಸುತ್ತಾರೆ, ನಿರ್ಣಯ ಕೈಗೊಳ್ಳುತ್ತಾರೆ.

**ಪ್ರಯೋಗಶಾಲಾ ವಿಧಾನದ ಮಿತಿಗಳು**

- ಭೌಗೋಳಿಕ ವಾಸ್ತವಾಂಶಗಳನ್ನು ಅಥವಾ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳು ಪ್ರಯೋಗಗಳ ಮುಖಾಂತರ ಕಂಡುಹಿಡಿಯುವಂತೆ ಮಾಡುವುದು ಅಷ್ಟೇನೂ ಸುಲಭ ಸಾಧ್ಯವಲ್ಲ.
- ಇದು ಅತಿ ನಿಧಾನವಾದ ಕಲಿಕೆಯ ಮತ್ತು ಬೋಧನೆಯ ವಿಧಾನ
- ಕೆಲವೊಮ್ಮೆ ಇದು ಪಥಭ್ರಷ್ಟಗೊಂಡು ಒಂದು ತೆರನ ಶಾರೀರಿಕ ತರಬೇತಿಯಂತಾಗಿಬಿಡುತ್ತದೆ.
- ಈ ವಿಧಾನವನ್ನ ಅನುಸರಿಸುವುದಕ್ಕೆ ಅನುಕೂಲವಾಗುವಂತೆ ಭಾರತೀಯ ಶಾಲೆಗಳ ಭೂಗೋಳಶಾಸ್ತ್ರ ವಿಷಯದ ಕೊಠಡಿಗಳು ಸಾಮಗ್ರಿಗಳಿಂದ ಸಮರ್ಪಕವಾಗಿ ಸಜ್ಜಾಗಿರುವುದಿಲ್ಲ.

- ಈ ವಿಧಾನವನ್ನು ಆರ್ಥಿಕ, ಪ್ರಾದೇಶಿಕ, ಐತಿಹಾಸಿಕ ಮತ್ತು ಮಾನವ ಭೂಗೋಳ ಶಾಸ್ತ್ರವನ್ನು ಬೋಧಿಸಲು ಉಪಯೋಗಕರವಾಗಿ ಪ್ರಯೋಗಿಸಲು ಸಾಧ್ಯವಿಲ್ಲ
- ಈ ವಿಧಾನವನ್ನು ಕೆಳಹಂತದಲ್ಲಿ ಬಳಸಲು ಸಾಧ್ಯವಿಲ್ಲ. ಕಾರಣ, ಮಕ್ಕಳು ಅವರ ತರ್ಕಶಕ್ತಿ ಮತ್ತು ವೀಕ್ಷಣಾ ಶಕ್ತಿಯನ್ನು ಬೆಳೆಸಿಕೊಂಡಿರುವುದಿಲ್ಲ.

ಪ್ರಯೋಗಶಾಲೆ ವಿಧಾನದಲ್ಲಿ ಬೋಧಿಸಬಹುದಾದ ಭೂಗೋಳಶಾಸ್ತ್ರದಲ್ಲಿನ ಕೆಲವು ಪರಿಕಲ್ಪನೆಗಳು ಕೆಳಗಿನಂತಿವೆ:

- ಪ್ರತಿದಿನವೂ ಗಜಕಡ್ಡಿಯ ನೆರಳಿನ ಉದ್ದವನ್ನು ಕಂಡುಹಿಡಿಯುವುದರ ಮೂಲಕ ಸೂರ್ಯನು ಛಳಿಗಾಲಕ್ಕಿಂತ ಬೇಸಿಗೆ ಕಾಲದಲ್ಲಿ ಬಹುಮಟ್ಟಿಗೆ ನೆತ್ತಿಯ ಮೇಲಿರುತ್ತಾನೆ ಎಂದು ಸಾಧಿಸಿ ತೋರಿಸಿ. ನೆರಳು ಯಾವಾಗ ಅತ್ಯಂತ ದೀರ್ಘವಾಗಿರುತ್ತದೆ ಎಂದು ತೋರಿಸಿಕೊಡಬಹುದು.
- ಮಂಜುಗಡ್ಡೆಯ ಕರಗುವ ಬಿಂದುವಿನಲ್ಲಿ ಮತ್ತು ನೀರಿನ ಕುದಿಯುವ ಬಿಂದುವಿನಲ್ಲಿ ತಾಪಮಾಪಕವನ್ನು ಪರೀಕ್ಷಿಸಿನೋಡಿ
- ಗರಿಷ್ಠ ಮತ್ತು ಕನಿಷ್ಠ ತಾಪಮಾಪಕಗಳನ್ನು ಪರೀಕ್ಷಿಸಿ. ಬಳಿಕ ಅವುಗಳಿಂದ ರೀಡಿಂಗ್‌ಗಳನ್ನು ತೆಗೆದುಕೊಳ್ಳಿ
- ಕಿತ್ತಳೆ ಹಣ್ಣಿನ  ಮೂಲಕ ಹೆಣಿಗೆ ಸೂಜಿಯನ್ನು ಚುಚ್ಚಿರಿ. ಲಂಬರೇಖೆಯಿಂದ 23.5 ಡಿಗ್ರಿ ಬಾಗಿರುವ ಭೂಮಿಯ ಅಕ್ಷವನ್ನು ಸೂಚಿಸುವ ರೀತಿಯಲ್ಲಿ ಆ ಸೂಜಿಯನ್ನು ಹಿಡಿಯಿರಿ. ಸೂರ್ಯನನ್ನು ಸೂಚಿಸುವಂತಿರುವ ಉರಿಯುತ್ತಿರುವ ಮೇಣದ ಬತ್ತಿಯ ಸುತ್ತ ಇದನ್ನು ತಿರುಗಿಸಿ. ಭೂಮಿಯು ಎಲ್ಲಿರುವುದು ಎಂದು ನೋಡಿ.
- ಗಾಳಿಯಲ್ಲಿರುವ ಧೂಳಿನ ಕಣಗಳನ್ನು ಈ ರೀತಿಯಲ್ಲಿ ಸುಲಭವಾಗಿ ನೋಡಬಲ್ಲೆವು. ಸೂರ್ಯನ ಬೆಳಕು ಬರುತ್ತಿರುವ ಕಿಟಕಿಯನ್ನು ಕಪ್ಪಾಗಿಸಿ. ಷಟ್ಟರ್‌ನಲ್ಲಿ ಸೂರ್ಯನ ಕಿರಣ ಬರುವಂತೆ ಒಂದು ಸಣ್ಣ ರಂಧ್ರ ಕೊರೆಯಿರಿ. ಒಂದು ಡಸ್ಟರ್ ಅನ್ನು ಅಲುಗಾಡಿಸಿ ಅಥವಾ ಬ್ರೌನ್‌ಪೇಪರ್ ಅನ್ನು ಕೊಠಡಿಯಲ್ಲಿ  ಸುಡಿ. ಆಗ ನರ್ತಿಸುವ ಧೂಳನ್ನು ನೋಡಿ.
- ರೇಖಾಂಶ ತಿಳಿದಿರುವ ಸ್ಥಳದಲ್ಲಿ, ಮಧ್ಯಾಹ್ನ ವೇಳೆಯ ಸೂರ್ಯನ ಎತ್ತರ ಎಷ್ಟು ಎಂದು ಹೇಗೆ ಕಂಡುಹಿಡಿಯುವಿರಿ?
- ದೀಪದ ಸುತ್ತ ಚೆಂಡನ್ನು ತಿರುಗುವಂತೆ ಮಾಡುವುದರ ಮೂಲಕ ಪರಿಭ್ರಮಣ (Rotation) ಪರಿಕ್ರಮಣ (Revolution) ಗಳನ್ನು ವಿವರಿಸಬಹುದು.
- ಸಾಗರ ಹರಿವನ್ನು ವಿವರಿಸಲು ಹೀಗೆ ಮಾಡಬಹುದು– ಪೂರ್ತಿ ನೀರು ತುಂಬಿದ ಫ್ಲಾಸ್ಕ್ ತೆಗೆದುಕೊಳ್ಳಿ. ಅದರೊಳಗೆ ಪೊಟಾಸಿಯಂ ಪರಮಾಂಗನೇಟ್ ಹಾಕಿ. ಫ್ಲಾಸ್ಕ್‌ಅನ್ನು ಬಿಸಿ ಮಾಡಿ. ಆಗ ಬಿಸಿ ನೀರಿನ ಹರಿವು ಮೇಲೇರುತ್ತದೆ ಮತ್ತು ಫ್ಲಾಸ್ಕ್‌ನ ಮೇಲ್ಭಾಗದಿಂದ ತಣ್ಣೀರು ಅದರ ಜಾಗಕ್ಕೆ ಕೆಳಗೆ ಹರಿದು ಬರುತ್ತದೆ. ಪೊಟಾಸಿಯಂ ಪರಮಾಂಗನೇಟ್ ಬಿಸಿ ನೀರಿನ ಹರಿವನ್ನು ಕಾಣಲು ಸಹಾಯ ಮಾಡುತ್ತದೆ.

### ಸಿ) ಪ್ರಾದೇಶಿಕ ವಿಧಾನ(Regional Method )

ಭೂಗೋಳ ಶಾಸ್ತ್ರ ಬೋಧನೆಯ ವಿಧಾನಗಳಲ್ಲಿ ಒಂದಾದ ಪ್ರಾದೇಶಿಕ ವಿಧಾನವು ರಾಜಕೀಯ ವಿಭಾಗಗಳನ್ನು ಆಧರಿಸಿದೆ. ಪ್ರತಿಯೊಂದು ದೇಶವನ್ನು ಅದರ ಬೆಟ್ಟಗುಡ್ಡಗಳು, ನದಿಗಳು, ಹವಾಮಾನ, ಉತ್ಪಾದನೆ, ಪಟ್ಟಣಗಳು, ಜನರು, ಕೈಗಾರಿಕೆಗಳು ಮತ್ತು ವಾಣಿಜ್ಯ ಮುಂತಾದುವುಗಳ ಹಿನ್ನೆಲೆಯಲ್ಲಿ ವಿವರವಾದ ಅಧ್ಯಯನ ಮಾಡಲಾಗುತ್ತದೆ. ಆಧುನಿಕ ಉಪಕ್ರಮದಲ್ಲಿ ಖನಿಜ ಸಂಪತ್ತು ಮತ್ತು ಆರ್ಥಿಕ ಪ್ರಗತಿ ಮುಂತಾದುವುಗಳನ್ನು ಸಮಾನ ರೀತಿಯಲ್ಲಿ ಹೊಂದಿರುವ ದೇಶಗಳನ್ನು ಒಟ್ಟಾಗಿ ಅಧ್ಯಯನ ಮಾಡಲಾಗುತ್ತದೆ.

ಇಡೀ ಪ್ರಪಂಚವನ್ನು ಸಹಜವಾಗಿಯೇ ಪರಸ್ಪರ ಭಿನ್ನವಾಗಿರುವ ಪ್ರದೇಶಗಳಾಗಿ ವಿಭಜಿಸುವ ಮೂಲಕ ಹರ್ಬರ್ಟ್‌ಸನ್ ಎಂಬಾತ ಈ ವಿಧಾನಕ್ಕೆ ಚಾಲನೆ ಕೊಟ್ಟ. ಭೂಗೋಳಶಾಸ್ತ್ರ ಮಾನವ ಮತ್ತು ಅವನ ಭೌತಿಕ ಪರಿಸರ – ಇವೆರಡರ ನಡುವಣ ಅನ್ಯೋನ್ಯಕ್ರಿಯೆಯ ಅಧ್ಯಯನ ಎಂದಾದಲ್ಲಿ ವಿವಿಧ ರೀತಿಯ ಭೌತಿಕ ಪರಿಸರವನ್ನು ಅಥವಾ ವಿವಿಧ ಪ್ರಾಕೃತಿಕ ಪ್ರದೇಶಗಳನ್ನು ಅಧ್ಯಯನ ಮಾಡುವುದು ಅತ್ಯುತ್ತಮ ಎಂಬುದು ಸುಸ್ಪಷ್ಟವೇ ಆಗಿದೆ.

ಪ್ರೊಫೆಸರ್ ಇ.ಎ. ಮೆಕನೀಸ್ ಹೀಗೆ ಹೇಳಿದ್ದಾರೆ – "ಅಧ್ಯಯನ ಮಾಡಬೇಕಾದ ಕ್ಷೇತ್ರವನ್ನು ಸ್ವಾಭಾವಿಕ ಪ್ರದೇಶಗಳಾಗಿ ವಿಂಗಡಿಸಿ ಪ್ರತಿಯೊಂದು ಪ್ರದೇಶವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವುದೇ ಭೂಗೋಳ ವಿಜ್ಞಾನ ಬೋಧನೆಯ ಪ್ರಾದೇಶಿಕ ವಿಧಾನ. ಪ್ರಮುಖ ರಾಜಕೀಯ ವಿಭಾಗಗಳು ಬಹಳ ಪ್ರಾಧಾನ್ಯ ಉಳ್ಳವಾಗಿದ್ದು, ಅವುಗಳನ್ನು ಕೆಲವೊಮ್ಮೆ ಬೋಧಿಸಬೇಕಾಗುತ್ತದೆ. ಆದರೆ, ಮಾನವನ ಚಟುವಟಿಕೆಗಳಿಗೆ ಭೌತಿಕ ಪರಿಸರದ ಸಂಬಂಧವೇನು ಎಂದು ನೋಡುವ ಉದ್ದೇಶಕ್ಕೆ ಸ್ವಾಭಾವಿಕ ಪ್ರದೇಶಗಳ ಅಧ್ಯಯನ ಅತಿ ಹೆಚ್ಚು ಪರಿಣಾಮಕಾರಿ.

ಶಿಕ್ಷಕರು ಸಾಧ್ಯವಾದಷ್ಟು ಮಕ್ಕಳ ಸ್ವಂತ ಪ್ರದೇಶದಿಂದ ಪ್ರಾರಂಭಿಸುವುದು ಉಚಿತ. ಸ್ಥಳೀಯ ಸುತ್ತಮುತ್ತಲ ಪ್ರದೇಶದ ಭೌಗೋಳಿಕ ಅಧ್ಯಯನ ಮುಂದುವರೆದ ಅಧ್ಯಯನಗಳಿಗೆ ಆಧಾರವಾಗಬೇಕು. ಮಕ್ಕಳು ತಮ್ಮ ಕಲ್ಪನೆಯನ್ನು ವಿಶಾಲವಾಗಿ ಹರಿಯಬಿಡಲಿ, ಸ್ಥಳೀಯ ಸುತ್ತಮುತ್ತಲಿನ ಭೌಗೋಳಿಕ ಅಧ್ಯಯನದಿಂದ ಪಡೆದ ಅನುಭವ ಮತ್ತು ಜ್ಞಾನವನ್ನು ದೂರದ ದೇಶಗಳ ಅಧ್ಯಯನಕ್ಕೆ ಬಳಸಿಕೊಳ್ಳಲಿ. ಈ ಎಲ್ಲ ಸಾಮಾಜಿಕ ಮತ್ತು ಪ್ರಾಕೃತಿಕ ವಿದ್ಯಮಾನಗಳ ಕಾರ್ಯ–ಕಾರಣ ಸಂಬಂಧವನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವಂತೆ ಮಾಡಬೇಕು.

ಹರ್ಬರ್ಟ್‌ಸನ್‌ನ ಪ್ರಪಂಚದ ವರ್ಗೀಕರಣವನ್ನು ಮಾರ್ಪಡಿಸಿದ ರೂಪದಲ್ಲಿ ಈ ಉಪಕ್ರಮದಲ್ಲಿ ಬಳಸಬಹುದು. ಖಂಡಗಳನ್ನು ಉಪ–ವಿಭಾಗಗಳಾಗಿ ವಿಂಗಡಿಸುವುದರಲ್ಲಿ ಮತ್ತು ಮಾನವನ ಚಟುವಟಿಕೆಗಳನ್ನು ಪ್ರಭಾವಿಸುವ ಅಂಶಗಳನ್ನು ವಿಶ್ಲೇಷಿಸುದರಲ್ಲಿ ಆತನ ವರ್ಗೀಕರಣ ಮೌಲ್ಯಯುತವಾದುದು. ಒಂದು ವಾತಾವರಣದ ವಿಭಾಗದಲ್ಲಿ ಬರುವ ದೇಶಗಳನ್ನು ರಚನಾತ್ಮಕ ವಲಯಗಳಾಗಿ ವಿಭಜನೆ ಮಾಡಬಹುದು. ಒಂದು ನಿರ್ದಿಷ್ಟ ಪ್ರದೇಶದ ಅಧ್ಯಯನದಲ್ಲಿ ವೈವಿಧ್ಯಮಯ ವಿಧಾನಗಳನ್ನು ಅಳವಡಿಸಿಕೊಳ್ಳಲು ತಕ್ಕಮಟ್ಟಿನ ಅವಕಾಶವಿದೆ.

ಭೌಗೋಳಿಕ ಘಟಕವೊಂದನ್ನು ಸಹಜ ಪ್ರದೇಶಗಳಾಗಿ ವಿಭಾಗಿಸುವುದು ವೈಜ್ಞಾನಿಕ ವಿಧಾನವೆಂದು ಪರಿಗಣಿಸಲಾಗಿದೆ. ಈ ವಿಧಾನ ಕಲಿಕಾರ್ಥಿಗಳಲ್ಲಿ ಪ್ರಾದೇಶಿಕ ಪ್ರಜ್ಞೆಯನ್ನು ಜಾಗೃತಗೊಳಿಸಿ ವಿಕಾಸಗೊಳಿಸುತ್ತದೆ. ಈ ವಿಧಾನವನ್ನು ಆಗಾಗ್ಗೆ ಪ್ರಯೋಗಿಸುವುದರ ಮೂಲಕ ವಿದ್ಯಾರ್ಥಿಗಳು ಪ್ರಾದೇಶಿಕ ಪ್ರಜ್ಞೆಯನ್ನು ಅಭಿವೃದ್ಧಿಪಡಿಸಿಕೊಂಡಾಗ ಮುಂದಿನ ಭೂಗೋಳಶಾಸ್ತ್ರೀಯ ಕಾರ್ಯದಲ್ಲಿ ಉಪಯುಕ್ತವಾಗಬಲ್ಲ ಒಂದು ರೀತಿಯ ಸಾಧನವನ್ನು ಸಂಪಾದಿಸಿಕೊಂಡಂತಾಗುತ್ತದೆ. ಪ್ರಾದೇಶಿಕ ಅನುಕ್ರಮದಲ್ಲಿ ಪ್ರತಿಯೊಂದು ಶೀರ್ಷಿಕೆಯಡಿ ಪರೀಕ್ಷಣೆ ಮತ್ತು ಟಿಪ್ಪಣಿ ಬರೆಯುವ ಕಾರ್ಯ ಈ ವಿಧಾನಕ್ಕೆ ಅಗತ್ಯವಾಗುತ್ತದೆ.

**ಪ್ರಾದೇಶಿಕ ವಿಧಾನದಲ್ಲಿ ಬೋಧಿಸುವಾಗ ಸಾಮಾನ್ಯವಾಗಿ ಅನುಸರಿಸಲಾಗುವ ಕ್ರಮ**

ಪ್ರಾದೇಶಿಕ ವಿಧಾನದಲ್ಲಿ ಬೋಧಿಸುವಾಗ ಸಾಮಾನ್ಯವಾಗಿ ಅನುಸರಿಸಲಾಗುವ ಕ್ರಮ ಈ ಕೆಳಗಿನಂತಿವೆ:

- ರಚನೆ, ಉಬ್ಬುತಗ್ಗು, ನೀರ್ಗಾಲುವೆಗಳು ಮತ್ತು ವಾತಾವರಣ– ಇವುಗಳನ್ನು ಗುರುತಿಸಿ. ಇವುಗಳನ್ನು ಈ ಸರಣಿ ಕ್ರಮದಲ್ಲಿಯೇ ಪರಿಗಣಿಸಬೇಕು.
- ಪ್ರಾಕೃತಿಕ ಮತ್ತು ಕೃಷಿ ಸಂಬಂಧಿತ ಸಸ್ಯವರ್ಗ ಮತ್ತು ಪ್ರಾಣಿಜೀವನವನ್ನು ಪರಿಗಣಿಸಬೇಕು.
- ಖನಿಜಗಳ ವಿತರಣೆಯನ್ನು ಮತ್ತು ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಅವುಗಳ ಬಳಕೆಯನ್ನು ಪರಿಗಣಿಸಬೇಕು.
- ಜನಸಂಖ್ಯೆಯ ವಿತರಣೆ, ಪಟ್ಟಣಗಳ ಪ್ರಮುಖ ಕಸುಬುಗಳನ್ನು ಅಧ್ಯಯನ ಮಾಡಬೇಕು.

- ಅಂತಿಮವಾಗಿ ಒಂದು ಪ್ರದೇಶವನ್ನು ವಿಶ್ವದ ಇತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡಲಾಗುತ್ತದೆ. ಈ ಹಂತದಲ್ಲಿಯೇ ತುಲನಾತ್ಮಕ ವಿಧಾನವನ್ನೂ ಸಹ ಉಪಯೋಗಿಸಲಾಗುತ್ತದೆ. ಹೀಗೆ, ತುಲನಾತ್ಮಕ ಮತ್ತು ಪ್ರಾದೇಶಿಕ ವಿಧಾನಗಳ ಸಂಯೋಜನೆಯು ಭೂಗೋಳ ಶಾಸ್ತ್ರ ಬೋಧನೆಯನ್ನು ಪರಿಣಾಮಕಾರಿಯಾಗಿಸುವುದಷ್ಟೇ ಅಲ್ಲದೆ, ಬಹಳಷ್ಟು ಶ್ರಮವನ್ನು ಕಡಿಮೆ ಮಾಡುತ್ತದೆ.

**ಪ್ರಾದೇಶಿಕ ವಿಧಾನದ ಗುಣಗಳು (Merits)**

- ಇದು ವಿದ್ಯಾರ್ಥಿಗಳಿಗೆ ಭೂಗೋಳ ಶಾಸ್ತ್ರವನ್ನು ಅರ್ಥಮಾಡಿಕೊಳ್ಳುವ ಅತ್ಯಂತ ತ್ವರಿತ ಗತಿಯ ವಿಧಾನ. ಪ್ರೊ. ಇ.ಎ. ಮೆಕ್‌ನಿ ಹೇಳಿರುವ ಹಾಗೆ– "ಯಾವುದೇ ಪ್ರದೇಶದ ಭೌಗೋಳಿಕತೆಯ ಮುಖ್ಯ ಗುಣಲಕ್ಷಣಗಳನ್ನು ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವ ಇದರ ಲಕ್ಷಣವೇ ಈ ವಿಧಾನದ ಮುಖ್ಯ ಅನುಕೂಲತೆ ಅಥವಾ ಗುಣವಾಗಿದೆ.
- ಕ್ರಮಬದ್ಧ ಮತ್ತು ವ್ಯವಸ್ಥಿತ: ಇದು ವೈಜ್ಞಾನಿಕವೂ ಕ್ರಮಬದ್ಧವೂ ಮತ್ತು ವ್ಯವಸ್ಥಿತವೂ ಆದ ವಿಧಾನವಾಗಿದೆ. ಮೇಲೆ ಹೇಳಿದಂತ, ರಚನೆ, ಉಬ್ಬುತಗ್ಗುಗಳು, ಹವಾಮಾನ, ಸಸ್ಯವರ್ಗ, ಖನಿಜ ಸಂಪತ್ತು ಮತ್ತು ಮಾನವ ಜೀವನ" – ಈ ಕ್ರಮದಲ್ಲಿ ಆಯಾ ಪ್ರದೇಶಕ್ಕೆ ಹೇಗೆ ಸಂಬಂಧಪಟ್ಟಿವೆ ಎಂದು ಪ್ರತ್ಯೇಕ ಪ್ರದೇಶದ ಅಧ್ಯಯನ ಮಾಡಲಾಗುತ್ತದೆ.
- ಸ್ವತಂತ್ರ ಅಧ್ಯಯನಕ್ಕೆ ಎಡೆಗೊಡುತ್ತದೆ: ಪ್ರಾದೇಶಿಕ ವಿಧಾನ ಸ್ವತಂತ್ರ ಅಧ್ಯಯನವನ್ನು ಅನುಕೂಲಿಸುತ್ತದೆ. ಬೋಧನೆಯ ಪ್ರತ್ಯೇಕ ವಿಧಾನವನ್ನು ಇದು ಅವಲಂಬಿಸಬಹುದು. ವಿದ್ಯಾರ್ಥಿಗಳಲ್ಲಿ ಪ್ರಾದೇಶಿಕ ಪ್ರಜ್ಞೆಯನ್ನು ಬೆಳೆಸಿದ ನಂತರ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಪ್ರಾದೇಶಿಕ ಅನುಕ್ರಮದಲ್ಲಿ ಪ್ರತಿ ಶೀರ್ಷಿಕೆಯಡಿ ಪರೀಕ್ಷಣೆ ನಡೆಸಿ ಟಿಪ್ಪಣೆ ಬರೆಯಲು ಹೇಳಬಹುದು.
- ಈ ವಿಧಾನವು ಭೌತಿಕ ಲಕ್ಷಣಗಳು ಮತ್ತು ಸಾಮಾಜಿಕ–ಆರ್ಥಿಕ ಚಟುವಟಿಕೆಗಳ ನಡುವಣ ಸಹಸಂಬಂಧದ ಸ್ಪಷ್ಟ ಚಿತ್ರಣವನ್ನು ಕೊಡುತ್ತದೆ ಅಲ್ಲದೆ ಭೌತಿಕ ಲಕ್ಷಣಗಳು ಹಾಗೂ ಮಾನವನ ಸಾಮಾಜಿಕ, ಆರ್ಥಿಕ ಚಟುವಟಿಕೆ ಮತ್ತು ಜೀವನದ ಇತರ ಅಂಶಗಳ ನಡುವಣ ಸಹ ಸಂಬಂಧದ ಸ್ಪಷ್ಟಚಿತ್ರಣ ಕೊಡುತ್ತದೆ.
- ಅಂತರರಾಷ್ಟ್ರೀಯ ಸಾಮರಸ್ಯವನ್ನು ಪ್ರೋತ್ಸಾಹಿಸುತ್ತದೆ: ಬೇರೆ ಬೇರೆ ಪ್ರದೇಶಗಳು ಇಡೀ ವಿಶ್ವದಲ್ಲಿ ವಿಭಿನ್ನ ವಲಯಗಳಲ್ಲಿ ಚದುರಿ ಹೋಗಿದ್ದರೂ ರಾಜಕೀಯ ಮಿತಿಗಳಿದ್ದರೂ ಮಾನವ ಜೀವನ ಬಹುತೇಕ ಒಂದೇ ತೆರನದ್ದಾಗಿರುತ್ತದೆ ಎಂಬ ಅಂಶವನ್ನು ವಿದ್ಯಾರ್ಥಿಗೆ ಮನದಟ್ಟು ಮಾಡುತ್ತದೆ. ಹೀಗೆ, ಈ ವಿಧಾನವು ವಿದ್ಯಾರ್ಥಿಗಳ ಮನೋದೃಷ್ಟಿಯನ್ನು ವಿಶಾಲಗೊಳಿಸಿ ಅವರಲ್ಲಿ ಸಹನಶೀಲತೆ, ಭ್ರಾತೃತ್ವ ಮತ್ತು ಸಾರ್ವತ್ರಿಕವಾದ ಕರುಣೆಯ ಮನೋಭಾವವನ್ನು ಮೂಡಿಸುತ್ತದೆ.

**ಈ ವಿಧಾನದ ಮಿತಿಗಳು**

- ಬಹಳಷ್ಟು ಪುನರಾವರ್ತನೆ: ಈ ವಿಧಾನದಲ್ಲಿ ಬಹಳ ವಿಷಯಾಂತರ (Digression) ಮತ್ತು ಪುನರಾವರ್ತನೆ ಕಂಡುಬರುತ್ತದೆ. ಏಕೆಂದರೆ, ವಿದ್ಯಾರ್ಥಿ ಮತ್ತೆ ಮತ್ತೆ ಒಂದೇ ಯೋಜನೆಯನ್ನು ಅನುಸರಿಸಬೇಕಾಗುತ್ತದೆ. ಅಧ್ಯಯನದ ಪ್ರದೇಶ ಬದಲಾಗಬಹುದು. ಆದರೆ, ಉಪಕ್ರಮದ ವಿಧಾನ ಒಂದೇ ಆಗಿರುವುದು.
- ಮೇಲಿನ ತರಗತಿಗಳಿಗೆ ಮಾತ್ರ ಉಪಯುಕ್ತ– ಈ ವಿಭಾಗಕ್ಕೆ ವಿದ್ಯಾರ್ಥಿಗಳಿಗೆ ಭೂಗೋಳ ವಿಜ್ಞಾನದ ಹಿನ್ನೆಲೆ ಆವಶ್ಯಕವಾಗುತ್ತದೆ. ಈ ವಿಧಾನವನ್ನು ಅನುಸರಿಸುವ ಮುಂಚೆ ಅವರು ಕಾರ್ಯ–ಕಾರಣ ತಂತ್ರವನ್ನು ಕಲಿಯಬೇಕಾಗುತ್ತದೆ. ಆದ್ದರಿಂದ, ಇದನ್ನು ಮೇಲಿನ ತರಗತಿಗಳಿಗೇ ಬೋಧಿಸಬೇಕಾಗುತ್ತದೆ.
- ಸಣ್ಣ ಸಣ್ಣ ಪ್ರದೇಶಗಳು ಕೈಬಿಟ್ಟು ಹೋಗುವ ಅಪಾಯ – ನಾವು ಈಗಾಗಲೇ ನೋಡಿದಂತೆ, ಪ್ರಾಕೃತಿಕ ಪ್ರದೇಶದ ಎಲ್ಲೆಗಳನ್ನು ನಿಖರವಾಗಿ ಗುರುತಿಸಿರುವುದಿಲ್ಲ. ಆದ್ದರಿಂದ, ಒಂದು ಪ್ರದೇಶ ಮತ್ತೊಂದು ಪ್ರದೇಶದೊಳಗೆ ಸೇರಿಹೋಗಿ ಅದು ಪೂರ್ತಿಯಾಗಿ ಉಪೇಕ್ಷಿತಗೊಳ್ಳಬಹುದು. ಕೆಲವು

ವೇಳೆ ಸಣ್ಣ ಪ್ರದೇಶಗಳು ಬಹಳ ಮುಖ್ಯವಾಗಿರುತ್ತವೆ ಮತ್ತು ಭೌಗೋಳಿಕ ದೃಷ್ಟಿಕೋನದಿಂದ ಮುಖ್ಯವಾಗಿರುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸೆಕೆಂಡರಿ ಶಾಲೆಗಳಲ್ಲಿ ಇತಿಹಾಸ ಬೋಧನೆಗೆಂದು ಅನುಸರಿಸಲಾಗುವ ಯಾವುದಾದರೂ ಎರಡು ವಿಧಾನಗಳನ್ನು ಹೆಸರಿಸಿ. ಅವುಗಳ ಗುಣ–ದೋಷಗಳನ್ನು ಪಟ್ಟಿಮಾಡಿ.
2. ನೀವು "ಕೈಗಾರಿಕಾ ಕ್ರಾಂತಿ" ಎಂಬ ವಿಷಯವನ್ನು ಬೋಧಿಸಬೇಕಾಗಿದೆ. ನೀವು ಯಾವ ವಿಧಾನವನ್ನು ಆಯ್ಕೆ ಮಾಡುವಿರಿ? ಇದರ ಅನುಕೂಲತೆಗಳು ಯಾವುವು?

### 3.4.3.2. ಭೂಗೋಳ ವಿಜ್ಞಾನದ ಬೋಧನೆ: ಬೋಧನಾ ತಂತ್ರಗಳು ಮತ್ತು ಕಾರ್ಯತಂತ್ರಗಳು

**ಎ) ಪುನರಾವರ್ತಿತ ಅಭ್ಯಾಸ(Drill) ಮತ್ತು ಆಚರಣೆ (Practice)**

ಪುನರಾವರ್ತಿತ ಅಭ್ಯಾಸ ಮತ್ತು ಆಚರಣೆ– ಇವೆರಡೂ ಎಲ್ಲಾ ಶಿಕ್ಷಕರಿಗೂ ಬೋಧನಾತ್ಮಕ ತಂತ್ರವಾಗಿ ಪರಿಚಿತವಾಗಿದೆ. ಇದು "ಪುನರಾವರ್ತಿತ ಅಭ್ಯಾಸದ ಮೂಲಕ ಜ್ಞಾನ ಅಥವಾ ಕೌಶಲ್ಯ ಸಂಪಾದನೆಯನ್ನು ಪ್ರೋತ್ಸಾಹಿಸುತ್ತದೆ." ಶಬ್ದಭಂಡಾರದ ಪದಗಳ ಸ್ಪೆಲಿಂಗ್‌ಗಳ ಕಂಠಪಾಠ ಅಥವಾ ಅಂಕಿಅಂಶಗಳ ವಾಸ್ತವಾಂಶಗಳ ಅಭ್ಯಾಸ ಮುಂತಾದ ಕೆಲಸಗಳು ಇದರಲ್ಲಿ ಒಳಗೊಳ್ಳುತ್ತವೆ. ಇದು ಇನ್ನೂ ಸಂಕೀರ್ಣವಾದ ಕಲಿಕಾ ಕಾರ್ಯಗಳಲ್ಲಿ ಅಥವಾ ಶಾರೀರಿಕ ಶಿಕ್ಷಣ, ಪಂದ್ಯ ಮತ್ತು ಕ್ರೀಡೆಗಳಲ್ಲಿ ಕಂಡುಬರಬಹುದು.

ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಗಳು ಸಾಮಗ್ರಿಗಳನ್ನು ಅವರದೇ ಆದ ವೇಗದಲ್ಲಿ ಕರಗತ ಮಾಡಿಕೊಳ್ಳಲು ಕಲಿಕಾರ್ಥಿಗಳಿಗೆ ನೆರವಾಗುತ್ತವೆ. ನಿಯತವಾದ ಕ್ರಮವು ಸಾಮಾನ್ಯವಾಗಿ ಪುನರಾವರ್ತನ ಸ್ವರೂಪದ್ದಾಗಿದ್ದು ಇದನ್ನು ಪುನರ್ಬಲನ ಉಪಕರಣವಾಗಿ ಉಪಯೋಗಿಸಲಾಗುತ್ತದೆ. ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಗಳ ಸಂಯೋಜಿತ ಘಟಕ (Package)ಗಳು ಅಭಿಪ್ರೇರಣೆ ಹೆಚ್ಚಿಸಲು ಪಂದ್ಯಗಳನ್ನು ಅಳವಡಿಸಿಕೊಳ್ಳಬಹುದು. ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಗಳನ್ನು ಆಧಾರಭೂತ ಕೌಶಲ್ಯಗಳನ್ನು ಬೆಳೆಸಲು ಕಂಪ್ಯೂಟರ್‌ಗಳನ್ನು ಬಳಸುವ ಶಿಕ್ಷಕರು ಕಲಿಕೆಗೆ ಪ್ರೋತ್ಸಾಹ ನೀಡಲು ಬಳಸುತ್ತಾರೆ. ಏಕೆಂದರೆ, ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಗಳು ವಿದ್ಯಾರ್ಥಿಗಳ ಮೂಲಭೂತ ಕೌಶಲ್ಯಗಳ ಸಂಪಾದನೆಯನ್ನು ಹೆಚ್ಚಿಸುತ್ತದೆ. ಈ ವಿಧದ ಮಾದರಿ ಸಾಫ್ಟ್‌ವೇರ್ ಸಂಯೋಜಿತ ಘಟಕ (Software Package) ದಲ್ಲಿ ನಿರ್ದಿಷ್ಟ ಪಠ್ಯವಿಷಯ ಸಾಮಗ್ರಿಯನ್ನು ಸಿದ್ಧಪಡಿಸಲಾಗಿರುವ ಕ್ಲಿಷ್ಟತೆಯ ಮಟ್ಟವನ್ನು ಅನುಸರಿಸಿ ವಿದ್ಯಾರ್ಥಿ ಆಯ್ಕೆ ಮಾಡಿಕೊಳ್ಳಬಹುದು. ಬಹಳಷ್ಟು ಸಂದರ್ಭಗಳಲ್ಲಿ ಪಂದ್ಯದ ಸನ್ನಿವೇಶ ಮತ್ತು ಚಲನಾತ್ಮಕ ಗ್ರಾಫಿಕ್ಸ್‌ಗಳ ಅಳವಡಿಕೆಯಿಂದ ಈ ಪ್ರಶ್ನೆಗಳನ್ನು ತ್ವರಿತವಾಗಿ, ನಿಖರವಾಗಿ ಉತ್ತರಿಸಲು ವಿದ್ಯಾರ್ಥಿಗಳು ಪ್ರೇರಿತರಾಗುತ್ತಾರೆ. ಒಳ್ಳೆಯ ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಗಳ ಸಾಫ್ಟ್‌ವೇರ್ ಪ್ಯಾಕೇಜ್ ವಿದ್ಯಾರ್ಥಿಗಳಿಗೆ ಪ್ರತಿಪುಷ್ಟಿ ಕೊಡುತ್ತದೆ, ಸರಿಯಾದ ಉತ್ತರ ಪಡೆಯುವುದು ಹೇಗೆ ಎಂದು ವಿವರಿಸುತ್ತದೆ ಮತ್ತು ವಿದ್ಯಾರ್ಥಿಗಳ ಪ್ರಗತಿಯನ್ನು ಗುರುತಿಸಲು ಬೇಕಾದ ನಿರ್ವಹಣಾ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.

ಕಾಗದ ಆಧಾರಿತ ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಗಳಿಂದ ಕಂಪ್ಯೂಟರ್ ಆಧಾರಿತ ವ್ಯವಸ್ಥೆಗಳಿಗೆ ಖಚಿತವಾದ ಬದಲಾವಣೆ ಆಗುತ್ತಲಿದೆ. ಸೂಕ್ತ ಸಾಫ್ಟ್‌ವೇರ್‌ನಿಂದ ಒಡಗೂಡಿದ ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಗಳು ದೈನಂದಿನ ತರಗತಿಯ ಅನುಭವಗಳನ್ನು, ಗುಣಮಟ್ಟವನ್ನು ವರ್ಧಿಸಬಲ್ಲದು. ಬಹಳಷ್ಟು ಸಾಫ್ಟ್‌ವೇರ್‌ಗಳ ವ್ಯಕ್ತಿವಿಶಿಷ್ಟಗೊಳಿಸಿದ ಅನ್ಯೋನ್ಯಕ್ರಿಯಾತ್ಮಕ ಲಕ್ಷಣಗಳಿಂದಾಗಿ ಕಂಪ್ಯೂಟರ್ ವಿಸ್ತರಿಸಿದ, ಯೋಜನಾಬದ್ಧವಾದ ಅಭ್ಯಾಸವನ್ನು ಅನುಕೂಲಿಸಬಲ್ಲದು. ಸಣ್ಣ ಪರಿಮಾಣದಲ್ಲಿ ಬಳಸಿದಾಗ ವಿದ್ಯುನ್ಮಾನ ಕಲಿಕಾ ಅನುಭವಗಳು ಯಾವುದೇ ಪಾಠಕ್ಕೆ ಪರಿಣಾಮಕಾರಿಯಾಗಿ ಪೂರಕವಾಗಬಲ್ಲದು.

ಕೆಲವು ನಿರ್ದಿಷ್ಟ ಸಾಫ್ಟ್‌ವೇರ್‌ಗಳು ವಿದ್ಯಾರ್ಥಿಗಳಲ್ಲಿ ಯಾವುದಾದರೊಂದು ವಿಷಯಕ್ಷೇತ್ರದಲ್ಲಿ ನಿರ್ದಿಷ್ಟ ಕೌಶಲ್ಯಗಳನ್ನು ಪುನರ್ಬಲನಗೊಳಿಸಲು ಅನುವು ಮಾಡಿಕೊಡುತ್ತವೆ. ಪಠ್ಯಕ್ರಮದ ಆದ್ಯಂತ ಸುಲಭವಾಗಿ ಏಕೀಕೃತಗೊಳಿಸಲು ಸಾಧ್ಯವಾಗದಿದ್ದರೂ, ಪುನರಾವರ್ತಿತ ಅಭ್ಯಾಸ ಮತ್ತು ಅಭ್ಯಾಸ ಚಟುವಟಿಕೆಯ ಸಾಫ್ಟ್‌ವೇರ್‌ಗಳು ಉಪಯೋಗಕರವಾಗಬಲ್ಲವು. ಸಾಧಾರಣವಾಗಿ ಇದು ಒಂದು ಅಥವಾ ಎರಡು ಮಾದರಿಗಳಲ್ಲಿ ಲಭ್ಯವಿವೆ. ಮೊದಲನೆಯದು ನಿರ್ದಿಷ್ಟ ವಿಷಯಕ್ಷೇತ್ರ ಅಥವಾ ಆ ಕ್ಷೇತ್ರದ ಒಂದು ಭಾಗವನ್ನು ಗಮನದಲ್ಲಿರಿಸುತ್ತದೆ. ವಾಚನ (ಓದುವುದು) ಮತ್ತು ಗಣಿತ ಅತ್ಯಂತ ಸಾಮಾನ್ಯ ವಿಷಯ ಕ್ಷೇತ್ರಗಳು. ಎರಡನೇ ವಿಧವು ಪಠ್ಯಕ್ರಮದ ಹಲವು ಕ್ಷೇತ್ರಗಳಲ್ಲಿ ಕೌಶಲ್ಯಗಳ ಅಭಿವೃದ್ಧಿಗೆ ಪ್ರಯತ್ನಿಸುತ್ತದೆ.

**ಬಿ) ಅಧ್ಯಯನ ತಂಡಗಳ ಬಳಕೆ(Using Study Groups)**

ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಅಧ್ಯಯನ ತಂಡ ರಚನೆ ಒಂದು ಬಹಳ ಪರಿಣಾಮಕಾರಿ ತಂತ್ರವಾಗಿದೆ. ಕಾರಣ, ತಂಡವು ಅಪೂರ್ವ ಅಂತರ್ದೃಷ್ಟಿಯನ್ನು ವಿನಿಮಯ ಮಾಡಿಕೊಂಡು ಪರಸ್ಪರರಿಂದ ಕಲಿಯುತ್ತಾರೆ. ತಂಡದ ಸದಸ್ಯರು ತಾವು ಅರ್ಥ ಮಾಡಿಕೊಂಡಿರುವ ಗೊಂದಲಮಯ ಪರಿಕಲ್ಪನೆಗಳನ್ನು ತಂಡದ ಇತರ ಸದಸ್ಯರಿಗೆ ಬೋಧಿಸಬಲ್ಲರು. ಅಧ್ಯಯನ ತಂಡವು ಪ್ರಾಯೋಜನೆ ಪೂರ್ಣಗೊಳಿಸುವಿಕೆ, ಪ್ರಸ್ತುತಿಗಳನ್ನು ತಯಾರಿಸುವುದು ಮತ್ತು ಪರೀಕ್ಷೆಗಳಿಗೆ ಸಜ್ಜಾಗುವುದು ಮೊದಲಾದುವುಗಳಿಗೆ ವಿಶೇಷವಾಗಿ ಸಹಕಾರಿಯಾಗಿದೆ. ಅಧ್ಯಯನ ತಂಡಗಳ ಅನುಕೂಲತೆಗಳು ಮತ್ತು ಅಧ್ಯಯನ ತಂಡಗಳನ್ನು ಪರಿಣಾಮಕಾರಿಯಾಗಿ ಮಾಡಲು ಉಪಯೋಗಿಸಬಹುದಾದ ತಂತ್ರಗಳು ಈ ಕೆಳಗಿನಂತಿವೆ:

**ಅಧ್ಯಯನ ತಂಡದ ಲಾಭಗಳು**

- **ಟಿಪ್ಪಣಿಗಳ ವಿನಿಮಯ:** ವಿದ್ಯಾರ್ಥಿಗಳು ತರಗತಿಯ ಉಪನ್ಯಾಸದ ನೋಟ್ಸ್‌ಗಳನ್ನು ಹೋಲಿಸಿ ನೋಡಲು ಅಧ್ಯಯನ ತಂಡ ಶ್ರೇಷ್ಠ ಮಾರ್ಗೋಪಾಯವನ್ನು ಒದಗಿಸುತ್ತದೆ. ಟಿಪ್ಪಣಿ ಅಥವಾ ನೋಟ್ಸ್‌ಗಳನ್ನು ಹೋಲಿಸಿ ನೋಡುವುದರಿಂದ ಉಪನ್ಯಾಸದ ಸಮಯದಲ್ಲಿ ಕೈಬಿಟ್ಟು ಹೋದ ಯಾವುದೇ ಮಾಹಿತಿ ಅಥವಾ ಮುಖ್ಯ ಪರಿಕಲ್ಪನೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.
- **ಪ್ರತಿಭೆಯ ಕೊಡುಕೊಳುಗೆ:** ಪ್ರತಿಯೊಬ್ಬರಿಗೂ ಅವರದೇ ಆದ ಪ್ರತಿಭೆಗಳು ಮತ್ತು ಅಂತರ್ದೃಷ್ಟಿಗಳು ಇರುವುದರಿಂದ ತಂಡದ ಸದಸ್ಯರು ಪರಸ್ಪರರಿಂದ ಕಲಿತುಕೊಳ್ಳಬಹುದು. ತಂಡದ ಇತರ ಸದಸ್ಯರ ಪ್ರತಿಭೆ ಮತ್ತು ಜ್ಞಾನದಿಂದ ವಿದ್ಯಾರ್ಥಿಗಳು ಲಾಭ ಪಡೆದುಕೊಳ್ಳಲು ಅಧ್ಯಯನ ತಂಡವು ಅವಕಾಶ ಮಾಡುತ್ತದೆ.
- **ಬೆಂಬಲ ವ್ಯವಸ್ಥೆ:** ಶಾಲೆಗಳು ಕೆಲವೊಮ್ಮೆ ಬಹಳ ತ್ರಾಸದಾಯಕವಾಗುವುವು. ಆದ್ದರಿಂದ, ಪರಿಸ್ಥಿತಿಯಲ್ಲಿರುವ ಬೆಂಬಲ ನೀಡಬಲ್ಲ ವ್ಯಕ್ತಿಗಳಿಂದ ಬೆಂಬಲ ಪಡೆಯುವುದು ಅನುಕೂಲಕರ. ಅಧ್ಯಯನ ತಂಡವನ್ನು ಸೇರುವುದು ಅಥವಾ ರಚಿಸುವುದು ಸಹವಿದ್ಯಾರ್ಥಿಗಳಿಂದ, ತಂಡದ ಸದಸ್ಯರಿಂದ ಪ್ರೇರಣೆ ಮತ್ತು ಬೆಂಬಲ ಪಡೆಯುವುದಕ್ಕೆ ಅಧ್ಯಯನ ತಂಡವನ್ನು ಸೇರುವುದು ಅಥವಾ ರಚಿಸುವುದು ಒಂದ ಶ್ರೇಷ್ಠ ಮಾರ್ಗವಾಗಿದೆ. ತರಗತಿಗಳು ತಪ್ಪಿ ಹೋಗಿದ್ದರೆ ಅದನ್ನು ಇದು ಸುಲಭವಾಗಿ ಸರದೂಗಿಸಬಲ್ಲದು.
- **ಹೆಚ್ಚು ಸಾಮಗ್ರಿಗಳನ್ನು ಪೂರೈಸಬಹುದು:** ತಂಡಗಳಲ್ಲಿ ಕಾರ್ಯ ನಿರ್ವಹಿಸುವುದರಿಂದ ಹೆಚ್ಚು ಸಂಖ್ಯೆಯಲ್ಲಿ ಪರಕಲ್ಪನೆಗಳತ್ತ ಗಮನ ಹರಿಸಬಹುದು. ಏಕೆಂದರೆ, ಹೆಚ್ಚು ಸಂಖ್ಯೆಯಲ್ಲಿ ವ್ಯಕ್ತಿಗಳಿದ್ದಾಗ ಒಬ್ಬರು ಮಾಡುವುದಕ್ಕಿಂತ ಹೆಚ್ಚಿನ ಸಾಮಗ್ರಿಯನ್ನು ಪುನರಾವಲೋಕಿಸಬಹುದು. ಹಲವು ತಂಡಗಳು ತಂಡದ ಪ್ರತ್ಯೇಕ ಸದಸ್ಯರಿಗೆ ಸಂಶೋಧನೆ ಮತ್ತು ಅಧ್ಯಯನ ಮಾಡುವುದಕ್ಕಾಗಿ ವಿಷಯವನ್ನು ಕೊಟ್ಟು ತಂಡಕ್ಕೆ ಸಾರಾಂಶವನ್ನು ಒದಗಿಸುವಂತೆ ಹೇಳುತ್ತವೆ. ಈ ತಂತ್ರ ವಿದ್ಯಾರ್ಥಿಗಳು ಕಡಿಮೆ ಸಮಯದಲ್ಲಿ ಅವರೊಬ್ಬರೇ ಓದಿದ್ದರೆ ಎಷ್ಟು ಕಲಿಯಬಹುದೋ ಅದಕ್ಕಿಂತ ಹೆಚ್ಚು ವಿಷಯವನ್ನು ಕಲಿಯಲು ಅವಕಾಶ ಮಾಡಿಕೊಡುತ್ತದೆ.
- **ಇದು ಕಲಿಕೆಯನ್ನು ವಿನೋದಕರವನ್ನಾಗಿ ಮಾಡುತ್ತದೆ:** ನಿಮ್ಮ ಅಧ್ಯಯನ ಸಭೆಯನ್ನು ಕಳೆಗಟ್ಟಿಸುವುದಕ್ಕೆ ತಂಡದಲ್ಲಿ ವ್ಯಾಸಂಗ ಮಾಡುವುದು ಒಳ್ಳೆಯ ಮಾರ್ಗ. ಗ್ರಂಥಾಲಯದಲ್ಲಿ ಏಕಾಕಿಯಾಗಿ ಗಂಟೆಗಟ್ಟಳೆ ಕಳೆಯುವುದು ಬಹಳ ಬೇಸರವೂ ಶ್ರಮಪೂರಿತವೂ ಆಗಿರುವುದು. ಅಧ್ಯಯನ ತಂಡಕ್ಕೆ

ಸೇರುವುದರಿಂದ ಮತ್ತು ಸಮೂಹದ ಒಂದು ಪರಿಸರದಲ್ಲಿ ವ್ಯಾಸಂಗ ಕೈಗೊಳ್ಳುವುದರಿಂದ ಕಲಿಕೆ ಮತ್ತಷ್ಟು ತೃಪ್ತಿದಾಯಕವೂ ಅನಂದಭರಿತವೂ ಆಗುತ್ತದೆ.

ಪರಿಣಾಮಕಾರಿ ಅಧ್ಯಯನ ತಂಡಗಳನ್ನು ರೂಪಿಸಲು ಕೆಲವು ಶಿಫಾರಸುಗಳನ್ನು ಈ ಕೆಳಗೆ ನೀಡಲಾಗಿದೆ:

- ಸುಸ್ಪಷ್ಟ ಉದ್ದೇಶಗಳನ್ನು ಮತ್ತು ಗುರಿಗಳನ್ನು ಸೃಷ್ಟಿಸಿ – ಪ್ರತಿಯೊಂದು ವ್ಯಾಸಂಗ ಅವಧಿಗೆ ಮುನ್ನ ಅದು ಉತ್ಪಾದಕವೂ ವಿಷಯಾಂತರವಾಗದೆಯೂ ಇರಲೋಸುಗ ತಂಡದ ಸದಸ್ಯರು ತಾವೇನು ಸಾಧಿಸಬೇಕು ಎನ್ನುವುದರ ಬಗ್ಗೆ ಚರ್ಚಿಸಬೇಕು.
- ಸಿದ್ಧರಾಗಿರಿ – ಪ್ರತ್ಯೇಕ ಸದಸ್ಯನು ವ್ಯಾಸಂಗ ಅವಧಿಗೆ ಸಿದ್ಧರಾಗದೆ ಆಗಮಿಸಿದಲ್ಲಿ ಅಧ್ಯಯನ ತಂಡ ಬಹಳ ನಿಷ್ಪರಿಣಾಮಕಾರಿಯಾಗುವುದು. ಅಧ್ಯಯನ ತಂಡದ ಪ್ರತಿಯೊಬ್ಬ ಸದಸ್ಯನೂ ಉಪನ್ಯಾಸದ ನೋಟ್ಸ್ ಅನ್ನು ಪುನರಾವಲೋಕಿಸಬೇಕು, ಪಠ್ಯಪುಸ್ತಕದಿಂದ ಆಯ್ಕೆ ಮಾಡಿದ ವಾಚನ ಸಾಮಗ್ರಿಗಳನ್ನು ಓದಿ ಪೂರೈಸಬೇಕು ಮತ್ತು ಅಧ್ಯಯನಕ್ಕಾಗಿ ನಿರ್ದಿಷ್ಟ ವಿಷಯಗಳನ್ನು ಗುರುತಿಸಬೇಕು.
- ಸಹಭಾಗಿತ್ವವನ್ನು ಖಚಿತಪಡಿಸಿಕೊಳ್ಳಬೇಕು – ಅಧ್ಯಯನ ತಂಡದ ಪ್ರತಿಯೋರ್ವ ಸದಸ್ಯನು ಸಕ್ರಿಯವಾಗಿ ಭಾಗವಹಿಸಬೇಕು. ಪ್ರತಿಯೊಬ್ಬರೂ ಶ್ರೇಷ್ಠ ಕೊಡುಗೆಯನ್ನು ನೀಡಲು ಉತ್ತಮ ಮಾರ್ಗವೆಂದರೆ ನಿರ್ದಿಷ್ಟ ವಿಷಯವನ್ನು ಸದಸ್ಯರಿಗೆ ನಿಯೋಜಿಸಿ ಪ್ರತಿಯೋರ್ವ ಸದಸ್ಯನು ತಂಡಕ್ಕೆ ಬೋಧಿಸುವಂತೆ ಸೂಚನೆ ನೀಡುವುದು. ಪ್ರತ್ಯೇಕ ಸದಸ್ಯ ಮಾಹಿತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಬೋಧನೆ ಒಂದು ಉತ್ತಮ ಮಾರ್ಗ.
- ವಿಷಯದತ್ತ ಕೇಂದ್ರೀಕೃತರಾಗಿ – ಪ್ರತಿಯೊಂದು ವ್ಯಾಸಂಗ ಅವಧಿಗೆ ಮುಂಚೆ ಅದರ ನಿರ್ವಹಣೆಯನ್ನು ಯಾರಿಗಾದರೂ ಒಪ್ಪಿಸಬೇಕು. ವ್ಯಾಸಂಗ ಅವಧಿಯನ್ನು ಮುನ್ನಡೆಸುವ ಜವಾಬುದಾರಿಯನ್ನು ಹೊತ್ತಿರುವ ವ್ಯಕ್ತಿ ಪಥದಲ್ಲಿಯೇ ಮುಂದುವರೆದು ಆವಶ್ಯಕ ಅಧ್ಯಯನ ಸಾಮಗ್ರಿಯನ್ನು ಪೂರೈಸಬೇಕು. ವ್ಯಾಸಂಗ ಅವಧಿಯ ನಿರ್ವಹಣೆ ಹೊತ್ತ ವ್ಯಕ್ತಿ ಸದಸ್ಯರಿಗೆ ಆಯಾಸವಾಗುವುದನ್ನು ತಡೆಯಲು ವಿರಾಮ ವೇಳೆಯನ್ನು ವೇಳಾಪಟ್ಟಿಯಲ್ಲಿ ಸೇರಿಸಬೇಕು.
- ಅಧ್ಯಯನ ತಂಡದ ಗಾತ್ರ 4 ರಿಂದ 6 ವ್ಯಕ್ತಿಗಳಷ್ಟಿರಬೇಕು. ವ್ಯಕ್ತಿಗಳು ಸಾಧಾರಣವಾಗಿ ಹೆಚ್ಚಾಗಿ ಇತರರೊಡನೆ ಬೆರೆಯುತ್ತಾರೆಯಾದ್ದರಿಂದ ಸಣ್ಣ ಅಧ್ಯಯನ ತಂಡಗಳಲ್ಲಿ ಅಧಿಕ ಸಾಮಗ್ರಿಯನ್ನು ಪೂರೈಸಲು ಸಾಧ್ಯವಾಗದು. ದೊಡ್ಡ ತಂಡಗಳಲ್ಲಿ ತಂಡದ ಕೆಲ ಸದಸ್ಯರು ಅಷ್ಟೇನೂ ಕೊಡುಗೆ ನೀಡುವುದಿಲ್ಲ ಮತ್ತು ಸಂಘಟನೆಯೂ ಒಂದು ಸಮಸ್ಯೆಯಾಗಿಬಿಡುತ್ತದೆ. ತಂಡದಲ್ಲಿ 4 ರಿಂದ 6 ಜನರಿದ್ದರೆ ಪರಸ್ಪರ ಬೆರೆಯುವಿಕೆಯನ್ನು ಕಡಿಮೆಗೊಳಿಸಿ ವ್ಯಕ್ತಿಗತ ಕೊಡುಗೆಯನ್ನು ಗರಿಷ್ಠಗೊಳಿಸಬಹುದು.
- ಉತ್ತಮ ಗ್ರೇಡುಗಳನ್ನು ಪಡೆಯಬೇಕೆಂಬ ಸಾಮಾನ್ಯ ಗುರಿಯನ್ನು ಹೊಂದಿರುವ ಸದಸ್ಯರಿಂದಾದ ಅಧ್ಯಯನ ತಂಡಗಳು ಅತ್ಯಂತ ಪರಿಣಾಮಕಾರಿ ಅಧ್ಯಯನವನ್ನು ಸಾಧಿಸುತ್ತವೆ. ಶಾಲೆಯಲ್ಲಿ ಯಶಸ್ವಿಯಾಗಲಿಕ್ಕೆ ಕಟಿಬದ್ಧರಾದ ವಿದ್ಯಾರ್ಥಿಗಳು ಸಾಮಾನ್ಯವಾಗಿ ನಿಯೋಜಿಸಿದ ವಾಚನ ಕಾರ್ಯವನ್ನು ಮುಗಿಸುತ್ತಾರೆ, ವಿಸ್ತಾರವಾದ ನೋಟ್ಸ್ ಬರೆಯುತ್ತಾರೆ, ಪ್ರಶ್ನೆಗಳನ್ನು ಕೇಳಿ ಗೊಂದಲಗಳಿದ್ದರೆ ಪರಿಹರಿಸಿಕೊಳ್ಳುತ್ತಾರೆ ಹಾಗೂ ತಂಡಕ್ಕೆ ಒಳ್ಳೆಯ ಕೊಡುಗೆ ನೀಡುತ್ತಾರೆ. ವಿಷಯವಸ್ತುವನ್ನು ಅವಲಂಬಿಸಿ ಕೆಲವು ವೇಳೆ ಅಪೂರ್ವ ಪ್ರತಿಭೆಗಳಿರುವ ಅಥವಾ ಜ್ಞಾನವಿರುವ ಸದಸ್ಯರನ್ನು ತಂಡಕ್ಕೆ ಆಯ್ಕೆ ಮಾಡಿದರೆ ಅನುಕೂಲವಾಗುತ್ತದೆ.
- ಚಿತ್ತಚಾಂಚಲ್ಯ ಉಂಟುಮಾಡದೆ ಇರುವಂತಹ, ತಂಡದ ಸದಸ್ಯರು ಪರಸ್ಪರ ಸರಾಗವಾಗಿ ಸಂವಹನ ನಡೆಸಲು ಸೂಕ್ತವಾಗಿರುವ ಪರಿಸರದಲ್ಲಿ ಅಧ್ಯಯನ ಮಾಡುವುದು ಅತ್ಯುತ್ತಮ. ಬಹಳಷ್ಟು ಕಾಲೇಜು ಗ್ರಂಥಾಲಯಗಳಲ್ಲಿ ಅಧ್ಯಯನ ಕೊಠಡಿ ಸಹ ಇರುವುದು. ಹೊರಾಂಗಣದಲ್ಲಿ ಓದುವುದು ಒಳ್ಳೆಯದೆ, ಆದರೆ ಇತರರ ಏಕಾಗ್ರತೆಗೆ ತೊಂದರೆಯಾಗದಂತೆ ಗಮನಹರಿಸಬೇಕು.
- ತಂಡದಲ್ಲಿ ಅಧ್ಯಯನ ಮಾಡುವಾಗ ಒಂದು ಸಲಕ್ಕೆ 2 ರಿಂದ 3 ಗಂಟೆಗಳಿಗಿಂತ ಹೆಚ್ಚು ಕಾಲ ಓದದಿರುವುದು ಉತ್ತಮ. ದೀರ್ಘವ್ಯಾಸಂಗ ಅವಧಿಗಳಲ್ಲಿ ತಂಡದ ಸದಸ್ಯರು ಹೆಚ್ಚಾಗಿ

ಬೆರೆಯುತ್ತಾರೆಯಾದ್ದರಿಂದ ಅಧ್ಯಯನವು ಅಷ್ಟೇನೂ ಉತ್ಪಾದಕವಾಗಿರುವುದಿಲ್ಲ. ಆದಾಗ್ಯೂ, ಒಂದು ಗಂಟೆಗಿಂತ ಕಡಿಮೆ ಸಮಯದ ವ್ಯಾಸಂಗಾವಧಿ ಆತುರದ್ದು, ಅನುತ್ಪಾದಕವೂ ಆಗಿರುತ್ತದೆ. ಕಾರಣ, ಆ ಅವಧಿಯಲ್ಲಿ ಕೆಲವೇ ವಿಷಯಗಳನ್ನು ಮಾತ್ರ ಚರ್ಚೆ ಮಾಡಲು ಸಾಧ್ಯ.

- ಸಮೂಹ ವ್ಯಾಸಂಗ ಅವಧಿಯನ್ನು ಒಂದೇ ಸ್ಥಳ ಮತ್ತು ಸಮಯದಲ್ಲಿ ಆಯೋಜಿಸಬಹುದು. ಹೀಗೆ, ಪ್ರತಿಯೊಬ್ಬ ಸದಸ್ಯನಿಗೂ ತಂಡದೊಂದಿಗಿನ ಭೇಟಿಗೆ ಮುಂಚೆ ಸಮರ್ಪಕವಾಗಿ ಸಿದ್ಧರಾಗಲು ಸಮಯ ಒದಗುವುದು. ಇದರಿಂದ ಕಾರ್ಯದ ವೇಳಾಪಟ್ಟಿಯನ್ನು ಸುಲಭವಾಗಿ ರಚಿಸಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಭೂಗೋಳವಿಜ್ಞಾನ ಬೋಧನೆಯಲ್ಲಿ "ಪುನರಾವರ್ತಿತ ಅಭ್ಯಾಸ ಮತ್ತು ಅನುಷ್ಠಾನ" ತಂತ್ರದ ಬಳಕೆಯ ಅನುಕೂಲತೆಗಳು ಮತ್ತು ಮಿತಿಗಳು ಯಾವುವು?
2. ನೀವು ಭೂಗೋಳವಿಜ್ಞಾನದ ಒಂದು ನಿರ್ದಿಷ್ಟ ವಿಷಯವನ್ನು ಅಧ್ಯಯನ ತಂಡದ ವಿಧಾನದಿಂದ ಬೋಧಿಸಬೇಕಿದೆ. ಅಧ್ಯಯನ ತಂಡದ ರಚನೆಗೆ ನೀವು ಯಾವ ಮಾರ್ಗದರ್ಶಿಯನ್ನು ಅನುಸರಿಸುವಿರಿ?

### 3.4.4. ಸಾರಾಂಶಿಸೋಣ

ನಾವೀಗ ಇದುವರೆಗೆ ಭೂಗೋಳಶಾಸ್ತ್ರ ಬೋಧನೆಯ ವಿಧಾನಗಳು ಮತ್ತು ತಂತ್ರಗಳ ಬಗ್ಗೆ ಅಧ್ಯಯನ ಮಾಡಿದ್ದನ್ನು ಕ್ರೋಢೀಕರಿಸೋಣ.

- ಭೂಗೋಳಶಾಸ್ತ್ರ ಬೋಧನೆಗೆ ವೀಕ್ಷಣೆಯ ವಿಧಾನವನ್ನು ತರಗತಿಯ ಒಳಗೆ ಮತ್ತು ಹೊರಗೆ ಉಪಯೋಗಿಸಬಹುದು
- ಕ್ಷೇತ್ರಪ್ರವಾಸ ಮತ್ತು ಪ್ರವಾಸಗೋಷ್ಠಿಗಳು ವೀಕ್ಷಣಾವಿಧಾನದ ಶ್ರೇಷ್ಠ ಮಾರ್ಗಗಳಾಗಿವೆ.
- ಪ್ರಯೋಗಶಾಲೆ ವಿಧಾನವು 'ಮಾಡಿ–ಕಲಿ' ಎಂಬ ಮನೋವೈಜ್ಞಾನಿಕ ನಿಯಮವನ್ನು ಅವಲಂಬಿಸಿದೆ.
- ಪ್ರಾದೇಶಿಕ ವಿಧಾನವು ಹವಾಮಾನ, ಖನಿಜಗಳು ಇತ್ಯಾದಿ ಲಕ್ಷಣಗಳನ್ನು ಸಮಾನವಾಗಿ ಹೊಂದಿರುವ ಬೇರೆ ಬೇರೆ ದೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ.
- ಪುನರಾವರ್ತಿತ ಅಭ್ಯಾಸ ಮತ್ತು ಆಚರಣೆ ಮತ್ತೆ ಮತ್ತೆ ಮಾಡುವ ಅಭ್ಯಾಸಗಳ ಮೂಲಕ ಜ್ಞಾನ ಮತ್ತು ಕೌಶಲ್ಯಗಳನ್ನು ಸಂಪಾದಿಸಲು ಅವಕಾಶಗಳನ್ನು ಒದಗಿಸುತ್ತದೆ.
- ಅಧ್ಯಯನ ತಂಡಗಳು ಅಪೂರ್ವ ಅಂತರ್ದೃಷ್ಟಿಗಳನ್ನು ಹಂಚಿಕೊಳ್ಳಲು ಮತ್ತು ಪರಸ್ಪರರಿಂದ ಕಲಿತುಕೊಳ್ಳಲು ನೆರವಾಗುತ್ತದೆ.

### 3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಉತ್ತರಗಳಿಗಾಗಿ ಈ ಸ್ವಯಂಕಲಿಕಾ ಸಾಮಗ್ರಿಯ 3.4.3.1 ನೇ ಭಾಗವನ್ನು ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಉತ್ತರಗಳಿಗಾಗಿ ಈ ಸ್ವಯಂಕಲಿಕಾ ಸಾಮಗ್ರಿಯ 3.4.3.2 ನೇ ಭಾಗವನ್ನು ನೋಡಿ.

### 3.4.6. ಘಟಕಾಂತ್ಯ ಅಭ್ಯಾಸಗಳು

1. ಭೂಗೋಳ ಶಾಸ್ತ್ರ ಪಠ್ಯವಸ್ತುವಿನಿಂದ ಎರಡು ವಿಷಯಗಳನ್ನು ತೆಗೆದುಕೊಳ್ಳಿ. ಅವುಗಳನ್ನು ಬೋಧಿಸಲು ಯಾವ ವಿಧಾನಗಳನ್ನು ಅನುಸರಿಸುವಿರಿ?

2. ಭೂಗೋಳಶಾಸ್ತ್ರದ ಸ್ನಾತಕೋತ್ತರ ವಿಭಾಗಕ್ಕೆ ಭೇಟಿ ಕೊಟ್ಟು ಪ್ರಯೋಗಶಾಲೆಯನ್ನು ಅಧ್ಯಯನ ಮಾಡಿ. ನೀವು ನೋಡಿದ ಉಪಕರಣಗಳನ್ನು ಕುರಿತ ಒಂದು ಟಿಪ್ಪಣಿಯನ್ನು ಬರೆಯಿರಿ.

### 3.4.7. ಪರಾಮರ್ಶನ ಗ್ರಂಥಗಳು


1. Teaching of Social Studies, S.K Mangal &Uma Mangal, PHI Learning Private Limited, New Delhi, 2001.
2. Teaching of Social Studies, J C Aggarwal, Vikas Publishing House, New Delhi, 2008.
3. Modern Teaching of Civics/ Political Science, M.H. Syed, Anmol Publications, New Delhi, 2004.
4. Methods of Teaching Civics, J.P Kumar & D.B. Rao, Discovery Publishing House, New Delhi, 2004.
5. Teaching of Economics, Amita Yadav, Anmol Publications, New Delhi, 2004.
6. Teaching of History, S.K Kochhar, Sterling Publishers, New Delhi, 2003.
7. Teaching of History and Civics, Timma Reddy, VidyanidhiPrakashana, Gadag, 2000.

# ಬ್ಲಾಕ್ 3 : ಸಮಾಜ ವಿಜ್ಞಾನಗಳಲ್ಲಿ ಪಠ್ಯಕ್ರಮ ಮತ್ತು ಬೋಧನೆ

## ಘಟಕ 5 : ಅರ್ಥಶಾಸ್ತ್ರ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

**ಘಟಕದ ರಚನೆ**


3.5.1 ಕಲಿಕಾ ಉದ್ದೇಶಗಳು

3.5.2. ಪೀಠಿಕೆ

3.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.5.3.1. ಅರ್ಥಶಾಸ್ತ್ರ ಬೋಧನೆ: ವಿಧಾನಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

3.5.3.2. ಅರ್ಥಶಾಸ್ತ್ರ ಬೋಧನೆ: ತಂತ್ರಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

3.5.4. ಸಾರಾಂಶಿಸೋಣ

3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2

3.5.6. ಘಟಕಾಂತ್ಯ ಅಭ್ಯಾಸಗಳು

3.5.7. ಪರಾಮರ್ಶನ ಸೂಚಿ


### 3.5.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಅರ್ಥಶಾಸ್ತ್ರ ಬೋಧನೆಯ ವಿಧಾನಗಳನ್ನು ವಿವರಿಸುವರು;
- ಅರ್ಥಶಾಸ್ತ್ರ ಬೋಧನೆಯ ತಂತ್ರ ಹಾಗೂ ಮಾರ್ಗೋಪಾಯಗಳನ್ನು ವರ್ಣಿಸುವರು;
- ಅರ್ಥಶಾಸ್ತ್ರ ಬೋಧನೆಯ ವಿವಿಧ ವಿಧಾನಗಳ ಗುಣಗಳು ಹಾಗೂ ಮಿತಿಗಳನ್ನು ಗುರುತಿಸುವರು; ಮತ್ತು
- ಅರ್ಥಶಾಸ್ತ್ರ ಬೋಧನೆಯ ವಿವಿಧ ವಿಷಯಗಳಿಗೆ ಸೂಕ್ತವಾದ ವಿಧಾನಗಳನ್ನು ಆಯ್ಕೆಮಾಡುವರು.

### 3.5.2. ಪೀಠಿಕೆ

ಪ್ರಿಯ ವಿದ್ಯಾರ್ಥಿಗಳೇ,

ಹಿಂದಿನ ಘಟಕಗಳಲ್ಲಿ ನಾವು ಸಮಾಜ ವಿಜ್ಞಾನದ ಅರ್ಥ ಮತ್ತು ವ್ಯಾಪ್ತಿಯನ್ನು ವಿಚಾರಮಾಡಿದ್ದೇವೆ. ಸಮಾಜ ಪಾಠಗಳ ವಿಷಯ ಬಹಳ ವಿಸ್ತೃತವಾದ ವಿಷಯ ಕ್ಷೇತ್ರವಂದೂ ಅದು ತನ್ನ ಅಡಿಯಲ್ಲಿ ಅನೇಕ ಶಾಸ್ತ್ರಗಳನ್ನು ಒಳಗೊಂಡಿದೆ ಎಂದೂ ತಿಳಿದಿದ್ದೇವೆ. ಅಂತೆಯೇ ಅರ್ಥಶಾಸ್ತ್ರದ ಅರ್ಥ, ಸ್ವರೂಪ ಮತ್ತು ವ್ಯಾಪ್ತಿಯನ್ನು ವಿಶ್ಲೇಷಣೆ ಮಾಡಿದ್ದೇವೆ. ಇದರ ಜೊತೆಗೆ, ಒಂದು ವಿಷಯವನ್ನು ಬೋಧಿಸುವ ವಿಧಾನ ಆ ವಿಷಯದ ಸ್ವರೂಪವನ್ನು ಅವಲಂಬಿಸಿದೆ ಎನ್ನುವುದೂ ನಮಗೆ ಸ್ಪಷ್ಟವಾಗಿದೆ. ಈ ಘಟಕದಲ್ಲಿ ನಾವು ನಮ್ಮ ಗಮನವನ್ನು ಅರ್ಥಶಾಸ್ತ್ರ ಬೋಧನೆಯ ವಿಧಾನಗಳು ಮತ್ತು ಕಾರ್ಯನೀತಿಗಳ ಮೇಲೆ ಕೇಂದ್ರೀಕರಿಸಲಿದ್ದೇವೆ.

### 3.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 3.5.3.1. ಅರ್ಥಶಾಸ್ತ್ರ ಬೋಧನೆ: ವಿಧಾನಗಳು

ಆಧುನಿಕ ಸನ್ನಿವೇಶದಲ್ಲಿ ಅರ್ಥಶಾಸ್ತ್ರ ವಿವಿಧ ಚಟುವಟಿಕೆಗಳ ಕೇಂದ್ರವಾಗಿದೆ ಮತ್ತು ಅನೇಕ ವ್ಯಾವಹಾರಿಕ, ವಾಣಿಜ್ಯ ಚಟುವಟಕೆಗಳಿಗೆ ಆಧಾರವಾಗಿದೆ. ಇದು ಅರ್ಥಶಾಸ್ತ್ರದ ಮಹತ್ವವನ್ನು ಮುನ್ನೆಲೆಗೆ ತಂದಿದೆ. ಪರಿಣಾಮಕಾರಿಯಾದ ಅರ್ಥಶಾಸ್ತ್ರದ ಕಲಿಕೆಗೆ ಅದನ್ನು ಬೋಧಿಸುವ ವಿಧಾನ, ಅದರ ವಿಷಯ ವಸ್ತುವಿನಷ್ಟೇ ಉತ್ತಮವಾದುದಾಗಿರಬೇಕು. ಅರ್ಥಶಾಸ್ತ್ರವನ್ನು ಬೋಧಿಸುವ ಕೆಲವು ಬೋಧನಾ ವಿಧಾನಗಳನ್ನು, ಕಾರ್ಯನೀತಿಗಳು ಮತ್ತು ತಂತ್ರಗಳನ್ನು ಇಲ್ಲಿ ವಿವರಿಸಿದೆ.

### (ಎ) ಯೋಜನಾ ವಿಧಾನ ಅಥವಾ ಪ್ರಾಯೋಜನಾ ವಿಧಾನ (Project Method)

ಪರಿಣತರು ಪ್ರಾಯೋಜನೆ (Project) ಪರಿಕಲ್ಪನೆಯನ್ನು ವಿವಿಧ ರೀತಿಗಳಲ್ಲಿ ಪರಿಭಾಷಿಸಿದ್ದಾರೆ. ಅವುಗಳಲ್ಲಿ ಕೆಲವು ಪರಿಭಾಷೆಗಳು ಹೀಗಿವೆ:

ಪ್ರೊ. ಕಿಲ್‌ಪ್ಯಾಟ್ರಿಕ್ ಪರಿಭಾಷೆ ಈ ರೀತಿ ಇದೆ– " ಒಂದು ಸಾಮಾಜಿಕ ಪರಿಸರದಲ್ಲಿ ಮುಂದುವರೆಯುವ ಉದ್ದೇಶಪೂರ್ಣ ಚಟುವಟಿಕೆಯೇ ಪ್ರಾಯೋಜನೆ "

ಒಂದು ಬೋಧನಾ ವಿಧಾನವಾಗಿ ಈ ವಿಧಾನವನ್ನು ಪರಿಪೂರ್ಣಗೊಳಿಸಿದ ಜೆ.ಎ. ಸ್ಟೀವನ್‌ಸನ್ ಪ್ರಾಯೋಜನೆಯ ಪರಿಕಲ್ಪನೆಯನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ– "ಇದು (ಪ್ರಾಯೋಜನೆ) ಸ್ವಾಭಾವಿಕ/ನೈಸರ್ಗಿಕ ಭೂಮಿಕೆಯಲ್ಲಿ ಕೈಗೊಳ್ಳಲಾಗುವ ಸಮಸ್ಯಾತ್ಮಕ ಕ್ರಿಯೆ ಅಥವಾ ಚಟುವಟಿಕೆಯಾಗಿದೆ".

ಸಿ.ವಿ. ಗುಡ್‌ರವರ ಪ್ರಕಾರ: "ಪ್ರಾಯೋಜನೆ ಶೈಕ್ಷಣಿಕ ಮೌಲ್ಯವನ್ನು ಹೊಂದಿರುವ ಮತ್ತು ಒಂದು ಅಥವಾ ಹೆಚ್ಚಿನ ತಿಳುವಳಿಕೆಯ ಗುರಿಯನ್ನು ಹೊಂದಿರುವ ಮಹತ್ವಪೂರ್ಣವಾದ ಚಟುವಟಿಕೆಯ ಘಟಕವಾಗಿದೆ. ಇದು ಸಮಸ್ಯೆಗಳ ಅನುಶೀಲನೆಯನ್ನು ಮತ್ತು ಸಮಸ್ಯೆಗಳ ಪರಿಹಾರವನ್ನು ಒಳಗೊಂಡಿರುವುದಲ್ಲದೆ, ಅನೇಕ ವೇಳೆ ಭೌತಿಕ ಸಾಮಗ್ರಿಗಳನ್ನು ಉಪಯೋಗಿಸಬೇಕಾದ ಚಟುವಟಿಕೆಯಾಗಿದೆ. ಇದು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ ಯೋಜಿಸಲ್ಪಟ್ಟ ಸ್ವಾಭಾವಿಕವಾದ ಜೀವಂತ ರೀತಿಯಲ್ಲಿ ಪೂರ್ಣಗೊಳಿಸುವ ಚಟುವಟಿಕೆಯಾಗಿದೆ.

ಮನೋವೈಜ್ಞಾನಿಕ ದೃಷ್ಟಿಯಿಂದ, ಪ್ರಾಯೋಜನಾ ವಿಧಾನ 'ಮಾಡಿ–ಕಲಿ' ತತ್ವವನ್ನು ಆಧರಿಸಿದೆ. ಇದು ವಿದ್ಯಾರ್ಥಿಗಳಲ್ಲಿ ಗರಿಷ್ಠ ಪ್ರಮಾಣದ ಉದ್ದೇಶಪೂರ್ವಕ ಚಟುವಟಿಕೆಯನ್ನು ಪ್ರೋತ್ಸಾಹಿಸುತ್ತದೆ. ಈ ವಿಧಾನ ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳನ್ನ ಉಪಯೋಗಿಸಿಕೊಳ್ಳುವುದಲ್ಲದೆ, ಅವುಗಳನ್ನು ಕಾರ್ಯದಲ್ಲಿ ತೊಡಗಿಸುತ್ತದೆ.

**ಪ್ರಾಯೋಜನಾ ವಿಧಾನದ ತತ್ವಗಳು**

- ಪ್ರಾಯೋಜನಾ ವಿಧಾನ ಚಟುವಟಿಕೆಯನ್ನು–ದೈಹಿಕ ಅಥವಾ ಮನೋಗತ್ಯಾತ್ಮಕ – ಅವಲಂಬಿಸಿರಬೇಕು;
- ಅದು ತನ್ನ ಕ್ರಿಯೆಯಲ್ಲಿ ಉದ್ದೇಶ ಪೂರ್ವಕವಾಗಿರಬೇಕು;
- ಪ್ರಾಯೋಜನೆಯ ಮೂಲಕ ವಿದ್ಯಾರ್ಥಿಗಳು ಅನುಭವವನ್ನು ಪಡೆದುಕೊಳ್ಳಬೇಕು. ಈ ಅನುಭವ ಕರಕೌಶಲ, ಮೂರ್ತರೂಪ ಅಥವಾ ಮಾನಸಿಕವಾಗಿರಬಹುದು;
- ಅದು ವಾಸ್ತವವಾದ ಅನುಭವವನ್ನು ಒದಗಿಸಬೇಕು;
- ಅದು ತನ್ನ ಸ್ವರೂಪದಲ್ಲಿ ಉಪಯುಕ್ತವಾಗಿರಬೇಕು;

**ಪ್ರಾಯೋಜನಾ ವಿಧಾನದ ಹಂತಗಳು**

ಪ್ರಾಯೋಜನಾ ವಿಧಾನ ಈ ಕೆಳಗಿನ ಹಂತಗಳನ್ನು ಹೊಂದಿದೆ:

- **ಪ್ರಾಯೋಜನೆಯ ಆಯ್ಕೆಗೆ ಸನ್ನಿವೇಶವನ್ನು ಒದಗಿಸುವುದು:** ಪ್ರಾಯೋಜನೆಯನ್ನು ಯಾವತ್ತೂ ವಿದ್ಯಾರ್ಥಿಗಳ ಮೇಲೆ ಹೇರಬಾರದು. ವಿದ್ಯಾರ್ಥಿಗಳೊಂದಿಗೆ ಸಂಭಾಷಣೆ, ಚಿತ್ರ ತೋರಿಸುವಿಕೆ, ಕಥಾ ನಿರೂಪಣೆ, ಪ್ರವಾಸ ಇತ್ಯಾದಿಗಳ ಮೂಲಕ ಪ್ರಾಯೋಜನೆಯನ್ನು ಆಯ್ಕೆ ಮಾಡಿಕೊಳ್ಳಲು ಸನ್ನಿವೇಶವನ್ನು ಒದಗಿಸಬಹುದು.
- **ಒಂದು ಪ್ರಾಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವುದು:** ಒಂದು ಸನ್ನಿವೇಶವನ್ನು ಒದಗಿಸಿದ ನಂತರ ಮುಂದಿನ ಹೆಜ್ಜೆ ಒಂದು ಪ್ರಾಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವುದು. ವಿದ್ಯಾರ್ಥಿಗಳ ಒಂದು

ವಾಸ್ತವಿಕ ಅಗತ್ಯವನ್ನು ತೃಪ್ತಿಗೊಳಿಸುವ ಮತ್ತು ಎಲ್ಲರಿಗೂ ಸೂಕ್ತವೆನಿಸುವ ಪ್ರಾಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಈ ಪ್ರಾಯೋಜನೆ ನಮ್ಮದೇ ಎಂದೆನಿಸಬೇಕು.

- **ಯೋಜಿಸುವಿಕೆ:** ಸೂಕ್ತವಾದ ಪ್ರಾಯೋಜನೆಯನ್ನು ಆಯ್ಕೆ ಮಾಡಿಕೊಂಡ ನಂತರದ ಹಂತ ಪ್ರಾಯೋಜನೆಯನ್ನು ಕಾರ್ಯರೂಪಕ್ಕೆ ತರಲು ವಿದ್ಯಾರ್ಥಿಗಳೇ ಶಿಕ್ಷಕರ ಮಾರ್ಗದರ್ಶನದಲ್ಲಿ ಯೋಜನೆಯನ್ನು ತಯಾರಿಸುವುದು. ಇದಕ್ಕಾಗಿ ಪೂರ್ವಭಾವಿಯಾಗಿ ಚರ್ಚಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಚರ್ಚೆಯಲ್ಲಿ ಭಾಗವಹಿಸಲು ಮತ್ತು ಸಲಹೆಗಳನ್ನು ಕೊಡುವಂತೆ ಪ್ರೋತ್ಸಾಹಿಸಬೇಕು. ಹೀಗೆ ರೂಪಿಸಿದ ಕ್ರಿಯಾಯೋಜನೆಯನ್ನು ವಿದ್ಯಾರ್ಥಿಗಳು ತಮ್ಮ ಪ್ರಾಯೋಜನಾ ನೋಟ್‌ಬುಕ್‌ನಲ್ಲಿ ಬರೆದುಕೊಳ್ಳಬೇಕು.
- **ಕ್ರಿಯಾಯೋಜನೆಯನ್ನು ಜಾರಿಗೊಳಿಸುವಿಕೆ:** ಕ್ರಿಯಾಯೋಜನೆ ಸಿದ್ಧವಾದ ನಂತರ ಅದನ್ನು ಜಾರಿಗೊಳಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ಪ್ರಾಯೋಜನೆಯ ವಿವಿಧ ಕಾರ್ಯಗಳನ್ನು ವಿದ್ಯಾರ್ಥಿಗಳು ತಮ್ಮ ಆಸಕ್ತಿಗಳಿಗೆ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ತಮ್ಮತಮ್ಮಲ್ಲೇ ಹಂಚಿಕೊಳ್ಳುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಳಬೇಕು. ಪ್ರಾಯೋಜನೆಯನ್ನು ಫಲಪ್ರದವಾಗಿ ಪೂರ್ಣಗೊಳಿಸುವುದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಏನಾದರೂ ಒಂದು ಕಾರ್ಯವನ್ನು ಕೊಡಬೇಕು. ನಂತರ ಎಲ್ಲರೂ ಪ್ರಾಯೋಜನೆ ಪೂರ್ಣಗೊಳ್ಳುವರೆಗೆ ಪರಸ್ಪರ ಸಹಕಾರದಿಂದ ಕೆಲಸ ಮಾಡುವಂತೆ ಗಮನಿಸಿಕೊಳ್ಳಬೇಕು.
- **ಮೌಲ್ಯಮಾಪನ:** ಪ್ರಾಯೋಜನೆ ಪೂರ್ಣಗೊಂಡ ನಂತರ ತಮ್ಮ ಕಾರ್ಯವನ್ನು ಪುನರವಲೋಕಿಸುವಂತೆ ವಿದ್ಯಾರ್ಥಿಗಳಿಗೆ ಹೇಳಬೇಕು. ಅವರು ಯೋಜಿಸಿದಂತೆ ಮುಂದುವರೆದಿದ್ದೇವೆಯೇ ಅಥವಾ ಇಲ್ಲವೇ ಎಂದು ತೀರ್ಮಾನಿಸಬೇಕು. ಇದು ಒಂದು ರೀತಿಯ ಆತ್ಮವಿಮರ್ಶೆಯಾಗಿದ್ದು, ತರಬೇತಿಯ ದೃಷ್ಟಿಯಿಂದ ಬಹಳ ಮುಖ್ಯವಾದ್ದರಿಂದ ಅದನ್ನು ಎಂದಿಗೂ ಕಡೆಗಣಿಸಬಾರದು.
- **ದಾಖಲಿಸುವಿಕೆ:** ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದು ಪ್ರಾಯೋಜನಾ ನೋಟ್‌ಬುಕ್ ಇಟ್ಟುಕೊಂಡು ಪ್ರಾಯೋಜನೆಯ ಎಲ್ಲ ಚಟುವಟಿಕೆಗಳನ್ನೂ ಅದರಲ್ಲಿ ದಾಖಲಿಸಬೇಕು. ಈ ದಾಖಲೆ ಪ್ರಾಯೋಜನೆಯ ಆಯ್ಕೆ, ಅದಕ್ಕಾಗಿ ಕೈಗೊಂಡ ಚರ್ಚೆ, ಜಾರಿಗೊಳಿಸುವ ಸಮಯದಲ್ಲಿ ಎದುರಿಸಿದ, ಅನುಭವಿಸಿದ ತೊಂದರೆಗಳು, ಹಂಚಿಕೆ ಮಾಡಿಕೊಂಡ ಕರ್ತವ್ಯಗಳು, ಪರಾಮರ್ಶನ ಮಾಡಿದ ಆಕರಗಳು ಮತ್ತು ಪುಸ್ತಕಗಳು, ಸಂಗ್ರಹಿಸಿದ ಮಾಹಿತಿಗಳು, ಪಡೆದುಕೊಂಡ ಅನುಭವಗಳು, ತೆಗೆದುಕೊಂಡ ಮಾರ್ಗದರ್ಶನ ಮುಂತಾದುವುಗಳನ್ನು ಒಳಗೊಂಡಿರಬೇಕು.

**ಶಾಲೆಗಳಲ್ಲಿ ಕೈಗೊಳ್ಳಬಹುದಾದ ಪ್ರಾಯೋಜನೆಗಳು**

ಅರ್ಥಶಾಸ್ತ್ರದಲ್ಲಿ ಈ ಮುಂದೆ ಕಾಣಿಸಿದ ಪ್ರಾಯೋಜನೆಗಳನ್ನು ಕೈಗೊಳ್ಳಬಹುದು– ತರಕಾರಿ ಅಂಗಡಿ, ಬಟ್ಟೆ ಅಂಗಡಿ ನಡೆಸುವುದು, ವ್ಯವಸಾಯ ಅಥವಾ ಹೊಲಗಳಲ್ಲಿ ಉಳುವುದು, ಒಂದು ಶಾಲೆಯನ್ನು ನಡೆಸುವುದು, ಕೃಷಿ ಫಾರಂ ನಡೆಸುವುದು, ಅಂಚೆ ಕಛೇರಿ ನಡೆಸುವುದು, ಹಳ್ಳಿಯ ಸಂತೆ ಅಥವಾ ಪಟ್ಟಣದ ಸಂತೆ ಇತ್ಯಾದಿ, ಮನೆಯ ಮಾದರಿ ನಿರ್ಮಿಸುವುದು, ಕೈಗಾರಿಕೆಗಳು, ರೈಲ್ವೆ ನಿಲ್ದಾಣ ಇತ್ಯಾದಿಗಳ ಕಾರ್ಯಗಳನ್ನು ಅರಿತುಕೊಳ್ಳುವ, ಅಥವಾ ಇವುಗಳ ಕಾರ್ಯಗಳಲ್ಲಿ ನೇರವಾಗಿ ಭಾಗವಹಿಸುವ ಪ್ರಾಯೋಜನೆಗಳನ್ನು ಸಂಘಟಿಸಬಹುದು.

ಸೀನಿಯರ್ (ಹಿರಿಯ) ವಿದ್ಯಾರ್ಥಿಗಳಿಗೆ ಈ ಕೆಳಕಂಡ ಪ್ರಾಯೋಜನೆಗಳನ್ನು ಶಿಫಾರಸು ಮಾಡಬಹುದು:

- ಅರ್ಥವ್ಯವಸ್ಥೆಯ ಬೇರೆ ಬೇರೆ ವಿಭಾಗಗಳನ್ನು ಸೂಚಿಸುವ ಮರಳಿನ ಅಥವಾ ಮಣ್ಣಿನ (Clay) ಮಾದರಿಗಳನ್ನು ಮಾಡುವುದು;
- ಆರ್ಥಿಕತೆಯ ವಿವಿಧ ಮುಖಗಳನ್ನು ತೋರಿಸುವ ನಾಟಕಗಳನ್ನು ಪ್ರದರ್ಶಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು;
- ರೈಲ್ವೆ ಲೈನ್, ಸೇತುವೆ, ಪೈರು ಬೆಳೆದ ಹೊಲಗಳು, ರಸ್ತೆಗಳು ಮತ್ತು ಇತರ ಲಕ್ಷಣಗಳ ಮಾದರಿಗಳನ್ನು ಮಾಡುವುದು;

- ಸ್ಥಳೀಯ ಕ್ಷೇತ್ರಗಳ ಆರ್ಥಿಕ ಮತ್ತು ಭೌಗೋಳಿಕ ವಿತರಣೆಯನ್ನು ಚಿತ್ರಿಸುವುದು;
- ಅರ್ಥಶಾಸ್ತ್ರದ ಮ್ಯೂಸಿಯಂ ಏರ್ಪಡಿಸಿ ಅದನ್ನು ನಡೆಸಿಕೊಂಡು ಹೋಗುವುದು ಮತ್ತೊಂದು ಮುಖ್ಯವಾದ ಮತ್ತು ಉಪಯುಕ್ತವಾದ ಶೈಕ್ಷಣಿಕ ಮೌಲ್ಯವುಳ್ಳ ಅರ್ಥಶಾಸ್ತ್ರದ ಪ್ರಾಯೋಜನೆಯಾಗಿದೆ;
- ವಿದ್ಯಾರ್ಥಿಗಳು ತರಕಾರಿ ಅಥವಾ ಹಣ್ಣುಗಳನ್ನು ಬೆಳೆಸುವುದು ಒಂದು ಪ್ರಾಯೋಜನೆಯಾಗುತ್ತದೆ.

**ಪ್ರಾಯೋಜನಾ ವಿಧಾನದ ಗುಣಗಳು**

- ಈ ವಿಧಾನ ಮನೋವೈಜ್ಞಾನಿಕ ತತ್ವವನ್ನು ಆಧರಿಸಿರುವುದರಿಂದ ಅತ್ಯಂತ ಸ್ವಾಭಾವಿಕವಾದುದಾಗಿದೆ.
- ಈ ವಿಧಾನವು ಇತರ ಸಾಂಪ್ರದಾಯಿಕ ವಿಧಾನಗಳಿಗೆ ಹೋಲಿಸಿದಾಗ ಹೆಚ್ಚು ಅರ್ಥಪೂರ್ಣವೂ ಹಾಗೂ ಮೌಲ್ಯಯುತವೂ ಆಗಿದೆ.
- ಈ ವಿಧಾನದ ಬೋಧನೆ ವಿದ್ಯಾರ್ಥಿಗಳಲ್ಲಿ ಸಹಕಾರ, ಸಹಾನುಭೂತಿ ಮತ್ತು ಭ್ರಾತೃತ್ವದ ಭಾವನೆ ಮುಂತಾದ ಸಾಮಾಜಿಕ ಗುಣಗಳನ್ನು ವಿಕಾಸಗೊಳಿಸುತ್ತದೆ.
- ಇದು ಶಾರೀರಿಕ ಚಟುವಟಿಕೆಗಳನ್ನು ಒಳಗೊಳ್ಳುವುದರಿಂದ ಶ್ರಮ ಗೌರವದ ಭಾವನೆಯನ್ನು ಬೆಳೆಸುತ್ತದೆ.
- ಈ ವಿಧಾನದಿಂದ ವಿದ್ಯಾರ್ಥಿಗಳು 'ಮಾಡು-ಕಲಿ' ತತ್ವದ ಮತ್ತು ವಸ್ತುಗಳ ನೇರ ಅನುಭವದ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾರೆ.
- ಅನ್ವೇಷಣೆಯ ಕ್ರಿಯೆಯ ಅಭ್ಯಾಸದಲ್ಲಿ ಮತ್ತು ಸ್ವಯಂ-ಉತ್ತರದಾಯಿತ್ವದಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ಸಿಗುತ್ತದೆ.
- ಈ ವಿಧಾನದ ಮೂಲಕ ಮಕ್ಕಳು ಸಂಶೋಧನೆಯ ಮೂಲಕ ಕಲಿಯಲು ಅವಕಾಶವಿರುವುದರಿಂದ ಹೆಚ್ಚಿನ ತೃಪ್ತಿ ಪಡೆಯುತ್ತಾರೆ.
- ವಿದ್ಯಾರ್ಥಿಗಳು ತಮ್ಮ ಕೆಲಸವನ್ನು ತಾವೇ ಮೌಲ್ಯಮಾಪನ ಮಾಡಿಕೊಳ್ಳಬಹುದು.

**ಪ್ರಾಯೋಜನಾ ವಿಧಾನದ ಮಿತಿಗಳು**

- ಈ ವಿಧಾನದಲ್ಲಿ ಹೆಚ್ಚು ಹಣವನ್ನು ಬಳಕೆ ಮಾಡಬೇಕಾಗುವುದರಿಂದ, ಅದನ್ನು ಕೈಗೊಳ್ಳುವುದು ಬಹಳ ಕಷ್ಟ.
- ಈ ವಿಧಾನವನ್ನು ಆಚರಣೆಗೆ ತರಲು ತರಬೇತಿ ಪಡೆದ ಮತ್ತು ಅರ್ಹತೆ ಹೊಂದಿರುವ ಶಿಕ್ಷಕರ ಅಗತ್ಯವಿದೆ.
- ಈ ವಿಧಾನವನ್ನು ಉಪಯೋಗಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಎಲ್ಲ ಶಾಲೆಗಳೂ ಹೊಂದಿರುವುದಿಲ್ಲ.
- ಎಲ್ಲಾ ಶೈಕ್ಷಣಿಕ ಮಟ್ಟಗಳ ಬೋಧನೆಗೆ ಸೂಕ್ತವಾದ ಪ್ರಾಯೋಜನೆಗಳನ್ನು ವಿನ್ಯಾಸಗೊಳಿಸುವುದು ಕಷ್ಟಕರ.

**ಬಿ) ಸಾಮಾಜೀಕೀಕೃತ ಅಧ್ಯಯನ (ವಾಚನ) ವಿಧಾನ(Socialised Recitation Method)**

ಒಂದು ನಿರ್ದಿಷ್ಟ ಶೀರ್ಷಿಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ತಮ್ಮ ಸಹಕಾರಾತ್ಮಕ ಪ್ರಯತ್ನಗಳಿಂದ, ಪಾರಸ್ಪರಿಕ ಚರ್ಚೆಯಿಂದ ಸ್ವಯಂ-ಅಭಿವ್ಯಕ್ತಿಗಾಗಿ, ಅಪೇಕ್ಷಿತ ಜ್ಞಾನಕ್ಕಾಗಿ ಮತ್ತು ಸ್ವಾನುಭವ ಪಡೆಯುವುದಕ್ಕಾಗಿ ಸಾಮೂಹಿಕ ಸನ್ನಿವೇಶದಲ್ಲಿ ನಿರ್ದಿಷ್ಟ ವಿಷಯವನ್ನು ಬೋಧಿಸುವ ವಿಧಾನವನ್ನು ಸಾಮಾಜೀಕೀಕೃತ ಅಧ್ಯಯನ ಅಥವಾ ವಾಚನ ವಿಧಾನ ಎಂದು ಹೇಳುತ್ತಾರೆ.

ಸಹಕಾರಾತ್ಮಕ ಪ್ರಯತ್ನ ಈ ವಿಧಾನದ ಮುಖ್ಯ ಅಂಶ. ಸ್ಟೋರ್ಲಿಂಗ್‌ನ ಪ್ರಕಾರ "ಸಾಮಾಜೀಕೃತ ತಂತ್ರಗಳ ಮುಖ್ಯ ಉದ್ದೇಶ ಸಮೂಹ ಕಾರ್ಯಕ್ಕೆ ತಂತ್ರಗಳನ್ನು ರೂಪಿಸುವುದು, ಪರ್ಯಾಲೋಚಿತ

ಚಿಂತನೆಯನ್ನು ಪ್ರೋತ್ಸಾಹಿಸುವುದು, ಹಿಂದಿನ ಜ್ಞಾನಕ್ಕೆ ಪೂರಕ ಜ್ಞಾನವನ್ನು ಒದಗಿಸುವುದು, ಸೃಜನಾತ್ಮಕ ಅಭಿವ್ಯಕ್ತಿಯನ್ನು ಪ್ರೋತ್ಸಾಹಿಸುವುದು, ಅಪೇಕ್ಷಿತ ಸಾಮಾಜಿಕ ಅಭಿವೃತ್ತಿಯನ್ನು ಅನೇಕ ವಿಧದ ಸಾಮಾಜೀಕೃತ ಸನ್ನಿವೇಶಗಳನ್ನು ಒದಗಿಸುವುದರ ಮೂಲಕ ವಿಕಾಸಗೊಳಿಸುವುದು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಸಹಕಾರಾತ್ಮಕ ಚಿಂತನೆಯ ಮೂಲಕ ಸಾಮಾಜೀಕೃತ ಪರಿಸ್ಥಿತಿಗಳನ್ನು ಒದಗಿಸುವುದು ಆಗಿದೆ.

ಯೋಕಾಮ್ ಮತ್ತು ಸಿಂಪ್ಸನ್ನರ ಪ್ರಕಾರ "ಸಾಮಾಜೀಕೃತ ಪಠಣ/ವಾಚನದಲ್ಲಿ ಮಕ್ಕಳು ಸಹಜವಾದ ರೀತಿಯಲ್ಲಿ ಚರ್ಚಿಸುತ್ತಾರೆ, ಪ್ರಶ್ನೆ ಕೇಳುತ್ತಾರೆ, ವರದಿ ಮಾಡುತ್ತಾರೆ, ಯೋಜಿಸುತ್ತಾರೆ ಮತ್ತು ಕಾರ್ಯಪ್ರವೃತ್ತರಾಗುತ್ತಾರೆ. ಶಿಕ್ಷಕರು ಮಾರ್ಗದರ್ಶಕರಾಗಿ, ಸಮಾಲೋಚಕರಾಗಿ, ಸಲಹೆಗಾರರಾಗಿ, ಕೊಡುಗೆ ನೀಡುವವರಾಗಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ನಿಜವಾದ ಅರ್ಥದಲ್ಲಿ ಮಕ್ಕಳು ವಿಷಯವನ್ನು ಅಥವಾ ಮಾಹಿತಿಯನ್ನು ಕೇವಲ ಕೇಳಿಸಿಕೊಳ್ಳದೆ ತಾವೇ ಸ್ವತಃ ಏನನ್ನಾದರೂ ಅನ್ವೇಷಿಸುವಂತೆ ಮಾಡುವ ಪ್ರಯತ್ನ ಕೈಗೊಳ್ಳುತ್ತಾರೆ.

ಈ ವಿಧಾನದಲ್ಲಿ ಜ್ಞಾನಾರ್ಜನೆ ಮಾಡಲು ವಿದ್ಯಾರ್ಥಿಗಳು ಸಹಕಾರಾತ್ಮಕ ಪ್ರಯತ್ನಗಳನ್ನು ಮಾಡುತ್ತಾರೆ ಮತ್ತು ಒಂದು ನಿರ್ದಿಷ್ಟ ಶೀರ್ಷಿಕೆಗೆ (ಟಾಪಿಕ್) ಸಂಬಂಧಿಸಿದಂತೆ ಅಥವಾ ಸಮಸ್ಯೆಯೊಂದರ ಪರಿಹಾರದಲ್ಲಿ ಅನುಭವ ಪಡೆಯಲು ಪ್ರಯತ್ನಿಸುತ್ತಾರೆ.

**ಈ ವಿಧಾನದ ಉತ್ತಮ ತತ್ವಗಳು**

- ಈ ವಿಧಾನದಲ್ಲಿ ಇಡೀ ತರಗತಿಯನ್ನು ಒಂದು ಸಮಾಜದಂತೆ ಪರಿಗಣಿಸಲಾಗುತ್ತದೆ.
- ಅಭಿರುಚಿಗಳು ಮತ್ತು ಮನೋಭಾವಗಳಿಗೆ ತಕ್ಕಂತೆ ಗುಂಪುಗಳಿಗೆ ಶೀರ್ಷಿಕೆಯನ್ನು ಒಪ್ಪಿಸಲಾಗುತ್ತದೆ.
- ವಿದ್ಯಾರ್ಥಿಗಳ ಸ್ವಯಂ ಚಟುವಟಿಕೆಗೆ ಒತ್ತು ಕೊಡಲಾಗುತ್ತದೆ.

**ಸಾಮಾಜೀಕೃತ ಅಧ್ಯಯನ / ವಾಚನ ಉದ್ದೇಶಗಳು**

- ವಿದ್ಯಾರ್ಥಿಗಳಲ್ಲಿ ಚಟುವಟಿಕೆಯನ್ನು ಹೆಚ್ಚಿಸಿ ಮತ್ತು 'ಮಾಡು–ಕಲಿ' ಕಾರ್ಯನೀತಿಗಳನ್ನು ಅನುಸರಿಸಿ ಬೋಧನೆಯನ್ನು ನೈಜವಾಗಿಯೂ ಆಸಕ್ತಿದಾಯಕವಾಗಿಯೂ ಮತ್ತು ಸ್ವಾಭಾವಿಕವಾದುದಾಗಿಯೂ ಮಾಡುವುದು;
- ಸ್ನೇಹಪರವಾಗಿ ಸಹಕಾರಾತ್ಮಕ ರೀತಿಯಲ್ಲಿ ಒಟ್ಟಿಗೆ ಕೆಲಸ ಮಾಡುವಂತೆ ಮಾಡಿ ವಿದ್ಯಾರ್ಥಿಗಳಲ್ಲಿ ಸಾಮಾಜಿಕಪ್ರಜ್ಞೆಯನ್ನು ವಿಕಾಸಗೊಳಿಸುವುದು;
- ಸಾಮಾಜಿಕ ಜವಾಬ್ದಾರಿಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು;
- ದೂರ ಸರಿಯುವ ಪ್ರವೃತ್ತಿಯುಳ್ಳ ವಿದ್ಯಾರ್ಥಿಗಳನ್ನು ಹೆಚ್ಚು ಆತ್ಮವಿಶ್ವಾಸವುಳ್ಳವರನ್ನಾಗಿ ಮಾಡಲು ಅವಕಾಶವನ್ನು ಒದಗಿಸುವುದು;
- ಸಾಮೂಹಿಕ ಚರ್ಚೆಯ ಮೂಲಕ ತೀರ್ಮಾನ ತೆಗೆದುಕೊಳ್ಳಲು ಮತ್ತು ಪಾರಸ್ಪರಿಕ ಕೊಡುಗೆಗಳಿಂದ ಪ್ರತಿಫಲ ಪಡೆದುಕೊಳ್ಳಲು ಮತ್ತು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ನೀಡುವುದು;
- ವಿದ್ಯಾರ್ಥಿಗಳು ತಮ್ಮ ಸ್ವಾಭಾವಿಕ ಆಸಕ್ತಿಗಳನ್ನು ಉಪಯೋಗಿಸಿಕೊಳ್ಳಲು ಮತ್ತು ವಿಕಾಸಗೊಳಿಸಿಕೊಳ್ಳಲು ಸಹಾಯ ಮಾಡುವುದು;

ಸಿ) **ಸಾಮಾಜೀಕೃತ ಅಧ್ಯಯನ(ವಾಚನ)ದ ತಂತ್ರಗಳು**

**ಅನೌಪಚಾರಿಕ ಸಮೂಹ ತಂತ್ರಗಳು:** ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮ ಅನುಭವಗಳ ಬಗ್ಗೆ ಮತ್ತು ಸಮೂಹಗಳ ಬಗ್ಗೆ ಅನೌಪಚಾರಿಕ ರೀತಿಯಲ್ಲಿ ಮಾತನಾಡಿಕೊಳ್ಳುತ್ತಾರೆ. ಪ್ರಶ್ನೆ ಕೇಳಲು, ವಿವರಣೆ ಕೇಳಲು ಮತ್ತು ಸ್ಪಷ್ಟೀಕರಣ ಪಡೆಯಲು ಸಮೂಹದ ಯಾವುದೇ ವಿದ್ಯಾರ್ಥಿಗೆ ಸ್ವಾತಂತ್ರ್ಯವಿರುತ್ತದೆ.

**ಔಪಚಾರಿಕ ಸಮೂಹ ತಂತ್ರಗಳು:** ಈ ತಂತ್ರಗಳನ್ನು ಒಂದು ಕ್ಲಬ್, ಕೌನ್ಸಿಲ್ (ಪರಿಷತ್ತು), ಸೆನೆಟ್ ಅಥವಾ ಒಂದು ಸಮಿತಿಯ ವಿನ್ಯಾಸದಲ್ಲಿ ಆಯೋಜಿಸಲಾಗುತ್ತದೆ. ಕಾರ್ಯಕ್ಕೆ ಸಂಬಂಧಿಸಿದ ಅಥವಾ ಚರ್ಚೆಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ದಾಖಲಿಸಲಾಗುತ್ತದೆ. ಈ ರೀತಿಯ ತಂತ್ರಗಳು ಶಿಕ್ಷಕರಿಗೆ ಹೆಚ್ಚಿನ ಜವಾಬ್ದಾರಿಯನ್ನು ಹೊರಿಸುತ್ತವೆ ಮತ್ತು ಇಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ನಾಯಕತ್ವ ವಹಿಸುವ ಅವಕಾಶಗಳನ್ನು ಮಾಡಬೇಕಾಗುತ್ತದೆ. ಈ ತಂತ್ರಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು:

- ತಂಡ ಚರ್ಚೆ (ಪ್ಯಾನಲ್ ಡಿಸ್ಕಷನ್)
- ವಿಚಾರ ಗೋಷ್ಠಿ (ಸಿಂಪೊಸಿಯಂ)
- ವಿಚಾರ ಸಂಕಿರಣ ಯೋಜನೆ (ಸೆಮಿನಾರ್ ಯೋಜನೆ)
- ಕಾರ್ಯಾಗಾರ ತಂತ್ರ (ವರ್ಕ್‌ಷಾಪ್ ತಂತ್ರ)

**ಸಾಮಾಜಿಕೀಕೃತ ಅಧ್ಯಯನ (ವಾಚನ)ದ ಗುಣಗಳು**

- ಚಟುವಟಿಕೆಯ ಆಯೋಜನೆಯನ್ನು ಕಲಿಯಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ;
- ಸಾಮಾನ್ಯ ಆಸಕ್ತಿಗಳನ್ನು ಮತ್ತು ಉದ್ದೇಶಗಳನ್ನು ಹುಡುಕಲು ಇದು ಸಹಾಯ ಮಾಡುತ್ತದೆ;
- ನಾಯಕತ್ವವನ್ನು ಅಭ್ಯಾಸ ಮಾಡಲು ಇದು ಸಹಾಯ ನೀಡುತ್ತದೆ;
- ಆರಂಭಿಕ ಪ್ರಯತ್ನವನ್ನು ಇದು ಪ್ರೋತ್ಸಾಹಿಸುತ್ತದೆ.
- ಚಿಂತನಾ ಸ್ವಾತಂತ್ರ್ಯವನ್ನು ಸಾಧಿಸಲು ಇದು ಸಹಾಯ ಮಾಡುತ್ತದೆ;
- ಇದು ವಿದ್ಯಾರ್ಥಿಗಳಲ್ಲಿ ಕೆಲವು ಉತ್ತಮ ಗುಣಗಳನ್ನು ಬೆಳೆಸುತ್ತದೆ. ಉದಾಹರಣೆಗೆ, ಆತ್ಮವಿಶ್ವಾಸ, ಬೇರೆಯವರಿಗೆ ಗೌರವ ತೋರುವುದು, ಸಹಕಾರ ಇತ್ಯಾದಿ
- ಇದು ವರದಿ ಮಾಡುವ ಕೌಶಲ್ಯವನ್ನು ಮತ್ತು ಚರ್ಚೆಯಲ್ಲಿ ಭಾಗವಹಿಸುವ ಸಾಮರ್ಥ್ಯವನ್ನು ವಿಕಾಸಗೊಳಿಸುತ್ತದೆ.

**ಡಿ) ಅನ್ವೇಷಣಾ ವಿಧಾನ(Discovery Method)**

ಅನ್ವೇಷಣಾ ವಿಧಾನ ವಿಜ್ಞಾನ ವಿಷಯಗಳ ಬೋಧನೆಯಲ್ಲಿ ಜನಪ್ರಿಯವಾದ ವಿಧಾನವಾಗಿದೆ. ಐತಿಹಾಸಿಕವಾಗಿ ಈ ವಿಧಾನವನ್ನು ಮೊದಲಿಗೆ ವಿಜ್ಞಾನ ವಿಷಯಗಳ ಬೋಧನೆ ಮತ್ತು ಕಲಿಕೆಗೆ ಹ್ಯೂರಿಸ್ಟಿಕ್ ಅನ್ವೇಷಣೆ (Heuristic Discovery Method) ಎನ್ನುವ ಹೆಸರಿನಲ್ಲಿ ಉಪಯೋಗಿಸುತ್ತಿದ್ದರು. ಈ ವಿಧಾನವನ್ನು ಇಂಗ್ಲೆಂಡಿನಲ್ಲಿನ ರಸಾಯನ ಶಾಸ್ತ್ರ ವಿಷಯದಲ್ಲಿ ಪ್ರಾಧ್ಯಾಪಕರಾದ ಎಚ್.ಇ. ಆರ್ಮಸ್ಟ್ರಾಂಗ್ ಎಂಬುವರು ರಸಾಯನ ಶಾಸ್ತ್ರ ಬೋಧನೆಗೆ ಹ್ಯೂರಿಸ್ಟಿಕ್ ವಿಧಾನ ಎನ್ನುವ ಹೆಸರಿನಲ್ಲಿ ಉಪಯೋಗಿಸಿದರು.

ನಂತರದಲ್ಲಿ, ಈ ಬೋಧನಾ ವಿಧಾನ ಶಾಲೆಗಳಲ್ಲಿ ಸಮಾಜ ವಿಜ್ಞಾನಗಳು ಸೇರಿದಂತೆ ಇತರ ಕೆಲವು ವಿಷಯಗಳ ಬೋಧನೆಗೆ ಸೂಕ್ತವಾದುದು ಎಂದು ಕಂಡುಬಂದಿತು. ಆ ನಂತರ ಅನ್ವೇಷಣಾ ವಿಧಾನವನ್ನು ಸಮಾಜ ವಿಜ್ಞಾನದ ಬೋಧನಾ ವಿಧಾನದಲ್ಲಿ ಸೇರಿಸಲಾಯಿತು.

ಈ ವಿಧಾನದ ಹೆಸರೇ ಸೂಚಿಸುವಂತೆ ಈ ವಿಧಾನವು ವಿದ್ಯಾರ್ಥಿಗಳನ್ನು ತಥ್ಯಾಂಶಗಳ ಕಲಿಕೆಯಲ್ಲಿ ಮತ್ತು ತಮ್ಮ ಶಿಕ್ಷಕರಿಂದ ಹೇಳಿಸಿಕೊಳ್ಳದೆ ಅಥವಾ ನಿಗದಿತ ಪಠ್ಯಪುಸ್ತಕ ಕೊಟ್ಟಿರುವ ಮಾಹಿತಿಗಳ ಸಹಾಯ ತೆಗೆದುಕೊಳ್ಳದೆ ತಮ್ಮ ಸ್ವಂತ ಪ್ರಯತ್ನದಿಂದ ಸ್ವತಂತ್ರವಾಗಿ ತಾವೇ ಸಮಸ್ಯೆಗಳ ಪರಿಹಾರದಲ್ಲಿ ತೊಡಗಿಕೊಳ್ಳುವುದನ್ನು ಒತ್ತಿ ಹೇಳುತ್ತದೆ.

ಈ ವಿಧಾನವನ್ನು ಪ್ರತಿಪಾದಿಸಿದ ಪ್ರೊ. ಆರ್ಮ್‌ಸ್ಟ್ರಾಂಗೆ ಈ ವಿಧಾನವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ– "ಹ್ಯೂರಿಸ್ಟಿಕ್ ಅಥವಾ ಅನ್ವೇಷಣಾ ವಿಧಾನದಲ್ಲಿ ವಿದ್ಯಾರ್ಥಿಗಳನ್ನು ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟರ ಮಟ್ಟಿಗೆ ಅನ್ವೇಷಣೆಯ ಅಥವಾ ಹುಡುಕಿಕೊಳ್ಳುವ ಮನೋಭಾವದಲ್ಲಿ ಅಂದರೆ ಅನ್ವೇಷಕನ ಸ್ಥಾನದಲ್ಲಿರಿಸಲು

ಪ್ರಯತ್ನಿಸಲಾಗುತ್ತದೆ. ಈ ವಿಧಾನ ವಿದ್ಯಾರ್ಥಿಗಳು ವಸ್ತು ಮತ್ತು ವಿಷಯಗಳನ್ನು ಬೇರೆಯವರ ಸಹಾಯವಿಲ್ಲದೆ ಸ್ಪಷ್ಟಪಡಿಸಿಕೊಳ್ಳುವ ವಿಧಾನವಾಗಿದೆ".

ಸಮಾಜಶಾಸ್ತ್ರ ಬೋಧನೆಗೆ ಅನ್ವೇಷಣಾ ವಿಧಾನವನ್ನು ಅಳವಡಿಸಿಕೊಂಡಾಗ ಮಾಹಿತಿಯನ್ನು ಮತ್ತು ಜ್ಞಾನವನ್ನು ಉಪನ್ಯಾಸದ ಮೂಲಕ ಅಥವಾ ನಿರೂಪಣೆಯ ಮೂಲಕ ಅಥವಾ ಪ್ರತಿಪಾದನೆಯ ಮೂಲಕ ನೇರವಾಗಿ ವಿದ್ಯಾರ್ಥಿಗಳ ತಲೆಗೆ ತುಂಬುವುದಿಲ್ಲ. ಆದರೆ, ಇದಕ್ಕೆ ಪ್ರತಿಯಾಗಿ ಮಾಹಿತಿಯನ್ನು ಸಂಗ್ರಹಿಸಲು ಮತ್ತು ತಥ್ಯಾಂಶಗಳು, ಪರಿಕಲ್ಪನೆಗಳು ಮತ್ತು ವಿಷಯದ ನಿಯಮ ಅಥವಾ ತತ್ವಗಳನ್ನು ತಮ್ಮ ಸ್ವಂತ ಪ್ರಯತ್ನದಿಂದ ಅನ್ವೇಷಿಸುವಂತೆ ವಿದ್ಯಾರ್ಥಿಗಳನ್ನು ಸ್ಫೂರ್ತಿಭರಿತರನ್ನಾಗಿ ಮಾಡಲಾಗುತ್ತದೆ. ಅನುಶೀಲನೆಗೆ (Investigation) ಅಥವಾ ಅನ್ವೇಷಣೆಗೆ ವಿಷಯವನ್ನು ಅಥವಾ ಸಮಸ್ಯೆಯನ್ನು ಅಥವಾ ಶೀರ್ಷಿಕೆಯನ್ನು ಶಿಕ್ಷಕರು ಸಲಹೆ ಮಾಡುತ್ತಾರೆ ಅಥವಾ ವಿದ್ಯಾರ್ಥಿಗಳು ತಾವೇ ಆಯ್ಕೆ ಮಾಡಿಕೊಳ್ಳುತ್ತಾರೆ.

ಅನ್ವೇಷಣಾ ವಿಧಾನ ಈ ಕೆಳಕಂಡ ಹಂತಗಳನ್ನು ಹೊಂದಿದೆ:

- ಅಧ್ಯಯನದ ವಿಷಯದ ಬಗ್ಗೆ ಮತ್ತು ಅನ್ವೇಷಣೆಯ ಉದ್ದೇಶದ ಬಗ್ಗೆ ಸ್ಪಷ್ಟವಾದ ತಿಳುವಳಿಕೆ
- ಸಂಬಂಧಪಟ್ಟ ಮಾಹಿತಿಗಳು ಮತ್ತು ದತ್ತಾಂಶಗಳ ಸಂಗ್ರಹಣೆ
- ಸಂಗ್ರಹಿಸಿದ ಮಾಹಿತಿಯ ಮತ್ತು ದತ್ತಾಂಶಗಳ ವಿಶ್ಲೇಷಣೆ
- ಪರಿಹಾರದ ಬಗ್ಗೆ ಸಾಧ್ಯವಿರಬಹುದಾದ ತಾತ್ಕಾಲಿಕ ಪ್ರಾಕ್ಕಲ್ಪನೆಯ ನಿರೂಪಣೆ.
- ನಿರೂಪಿಸಿದ ಪ್ರಾಕ್ಕಲ್ಪನೆಯನ್ನು ಪರೀಕ್ಷಿಸುವುದು
- ತೀರ್ಮಾನಗಳನ್ನು ಕೈಗೊಳ್ಳುವುದು

**ಅನ್ವೇಷಣಾ ವಿಧಾನದ ಗುಣಗಳು**

- ವಿದ್ಯಾರ್ಥಿಗಳಲ್ಲಿ ಅನ್ವೇಷಣೆಯ ಮನೋಭಾವದ ವಿಕಾಸಕ್ಕೆ ಇದು ಸಹಾಯ ಮಾಡುತ್ತದೆ.
- ಈ ವಿಧಾನದಲ್ಲಿ ತಥ್ಯಾಂಶಗಳನ್ನು, ಪರಿಕಲ್ಪನೆಗಳನ್ನು ಮತ್ತು ನಿಯಮಗಳನ್ನು, ತತ್ವಗಳನ್ನು ತಮ್ಮದೇ ಆದ ಸ್ವತಂತ್ರ ಪ್ರಯತ್ನದಿಂದ ಹುಡುಕಿಕೊಳ್ಳಲು ಒತ್ತಾಯಿಸಲಾಗುತ್ತದೆ.
- ಇದು ವಿದ್ಯಾರ್ಥಿಗಳು ಸಕ್ರಿಯರಾದ ಮತ್ತು ಸ್ವತಂತ್ರರಾದ ಜ್ಞಾನದ ಅನುಶೀಲಕರಾಗಿಯೂ ಅಥವಾ ಅನ್ವೇಷಕರನ್ನಾಗಿಯೂ ಆಗುವಲ್ಲಿ ಸಹಾಯ ಮಾಡುತ್ತದೆ.
- ಈ ವಿಧಾನದಲ್ಲಿ ವಿದ್ಯಾರ್ಥಿಗಳು ಬೋಧನೆ–ಕಲಿಕೆಯ ಕೇಂದ್ರಬಿಂದುಗಳಾಗಿರುತ್ತಾರೆ.
- ಇದು ವಿದ್ಯಾರ್ಥಿಗಳಲ್ಲಿ ಉತ್ತಮ ಅಭ್ಯಾಸಗಳು ಮತ್ತು ಆತ್ಮವಿಶ್ವಾಸ, ಆತ್ಮನಿರ್ಭರತೆ, ಸ್ವಯಂ–ಅಧ್ಯಯನ, ಪಟ್ಟುಬಿಡದಿರುವಿಕೆ ಮುಂತಾದ ಗುಣಗಳ ವಿಕಾಸಕ್ಕೆ ಸಹಾಯ ಮಾಡುತ್ತದೆ.
- ಇದು ವಿದ್ಯಾರ್ಥಿಗಳನ್ನು ಸರಿಯಾದ ಮಾನಸಿಕ ವಿಕಾಸಕ್ಕೆ ಸಹಾಯ ಮಾಡುತ್ತದೆ.

**ಇ).ಅನ್ಯೋನ್ಯ ಕ್ರಿಯಾತ್ಮಕ ಉಪನ್ಯಾಸ ವಿಧಾನ (Interactive Lecture Method)**

ಇತಿಹಾಸದ ಬೋಧನೆ ಬಗ್ಗೆ ಅಧ್ಯಯನ ಮಾಡುವಾಗ ನಾವು ಉಪನ್ಯಾಸ ವಿಧಾನದ ಬಗ್ಗೆ ವಿಶದವಾಗಿ ಕಲಿತಿದ್ದೇವೆ. ಸಾಂಪ್ರದಾಯಿಕವಾದ ಉಪನ್ಯಾಸ ವಿಧಾನವನ್ನು ಅನ್ಯೋನ್ಯ–ಕ್ರಿಯಾತ್ಮಕವಾದುದನ್ನಾಗಿ ಹೆಚ್ಚು ಆಸಕ್ತಿಕರವಾದುದನ್ನಾಗಿ ಮಾಡಬಹುದು. ಇದಕ್ಕೆ ಉದಾಹರಣೆಯಾಗಿ ಕೆಲವು ಪರಿಕಲ್ಪನೆಗಳನ್ನು ನಿಮಗೆ ಪರಿಚಯಿಸಬಹುದು.

**ಮಸ್ತಿಷ್ಕ ಆಂದೋಳನ (Brain Storming)**

ಮಸ್ತಿಷ್ಕ ಆಂದೋಳನ ಅನ್ಯೋನ್ಯ–ಕ್ರಿಯಾತ್ಮಕ ಉಪನ್ಯಾಸದಲ್ಲಿ ಉಪಯುಕ್ತವಾದ ತಂತ್ರವಾಗಿದೆ. ಈ ಲಘು ಅಭ್ಯಾಸ ಸಣ್ಣ ಗುಂಪಿನಲ್ಲಿ ಅಥವಾ ವಿದ್ಯಾರ್ಥಿಗಳ ಜೋಡಿಗಳಲ್ಲಿ ಒಂದು ವಿಚಾರವನ್ನು ತರಗತಿಯಲ್ಲಿ ಬೋಧಿಸಲು ತೊಡಗಿದಾಗ ಆ ವಿಚಾರದ ಬಗ್ಗೆ ವಿದ್ಯಾರ್ಥಿಗಳು ಎಷ್ಟು ತಿಳಿದಿದ್ದಾರೆ ಎಂಬುದನ್ನು

ಅರಿತುಕೊಳ್ಳಲು ಸಹಾಯ ನೀಡುತ್ತದೆ. ಉದಾಹರಣೆಗೆ, ಕೆಲವು ಮುಖ್ಯ ನೀತಿ ಬದಲಾವಣೆಗಳೊಂದಿಗೆ ನೂತನ ಆರ್ಥಿಕ ನೀತಿಯ ವಿಚಾರವನ್ನು ಬೋಧಿಸಲು ಆರಂಭಿಸುವುದಕ್ಕೆ ಮುಂಚೆ ನೂತನ ಆರ್ಥಿಕ ನೀತಿಯನ್ನು 1991 ರಲ್ಲಿ ಭಾರತದಲ್ಲಿ ಪರಿಚಯಿಸುವ ಪ್ರಯತ್ನವಾದದ್ದು ಏಕೆ ಎಂಬುದರ ಬಗ್ಗೆ ವಿದ್ಯಾರ್ಥಿಗಳು ಎಷ್ಟು ತಿಳಿದಿದ್ದಾರೆ ಎಂದು ಕೇಳಬಹುದು. ಇದರ ಬಗ್ಗೆ ವಿದ್ಯಾರ್ಥಿಗಳು ಪರಸ್ಪರ ಚರ್ಚಿಸಿ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಇದರ ಮೂಲಕ ಹಿಂದಿನ ತರಗತಿಯಲ್ಲಿ ವಿದ್ಯಾರ್ಥಿಗಳು ನಿರ್ದಿಷ್ಟ ವಿಚಾರವಾಗಿ ಎಷ್ಟರಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು. ಉಪನ್ಯಾಸ ಮಾಡುವಾಗ ಯಾವುದೇ ಹಂತದಲ್ಲಿ ಮಸ್ತಿಷ್ಕ ಆಂದೋಳನವನ್ನು ಉಪಯೋಗಿಸಿಕೊಳ್ಳಬಹುದು. ಇದು ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಕೊಳ್ಳಲು ಸಹಾಯಮಾಡುತ್ತದೆ.

**ಉದಾಹರಣೆ ಕೊಡಲು ಹೇಳುವುದು:** ಉಪನ್ಯಾಸವನ್ನು ಇನ್ನೂ ಹೆಚ್ಚು ಪ್ರಭಾವಕಾರಿಯನ್ನಾಗಿ ಮಾಡಲು ಪರಿಕಲ್ಪನೆಗಳಿಗೆ ಸಂಬಂಧಿಸಿದ ಉದಾಹರಣೆಗಳನ್ನು ಕೊಡಲು ವಿದ್ಯಾರ್ಥಿಗಳನ್ನು ಕೇಳುವುದು ಅಥವಾ ಪ್ರಚೋದಿಸುವುದು ಇನ್ನೊಂದು ಅಭ್ಯಾಸವಾಗಿದೆ. ಉದಾಹರಣೆಗೆ, ಅಂತಿಮ ಮತ್ತು ಮಧ್ಯಸ್ಥ ಸರಕುಗಳ ನಡುವಣ ವ್ಯತ್ಯಾಸವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡಾಗ ಅವರ ಆಯ್ಕೆಯ ಯಾವುದಾದರೂ ವಸ್ತು (ಸರಕು) ಯಾವಾಗ ಮಧ್ಯಸ್ಥ ಸರಕು ಆಗುತ್ತದೆ ಮತ್ತು ಯಾವಾಗ ಅಂತಿಮ ಸರಕು ಆಗುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಪರಿಸ್ಥಿತಿಗಳನ್ನು ಸೂಚಿಸುವಂತೆ ಕೇಳಬಹುದು. ಈ ಅಭ್ಯಾಸದ ಮೂಲಕ ವಿದ್ಯಾರ್ಥಿಗಳ ಪರಿಕಲ್ಪನೆಯ ತಿಳುವಳಿಕೆ ಉತ್ತಮವಾಗುತ್ತದೆ. ಏಕೆಂದರೆ, ವಿದ್ಯಾರ್ಥಿಗಳು ತತ್‌ಕ್ಷಣದಲ್ಲಿ ತಾವು ಕಲಿತ ಪರಿಕಲ್ಪನೆಯನ್ನು ಅನ್ವಯಿಸುತ್ತಾರೆ ಮತ್ತು ಆ ಇಡೀ ಅಧ್ಯಾಯದ ಬೋಧನೆ ಮುಗಿಯುವವರೆಗೆ ಕಾಯಬೇಕಾಗುವುದಿಲ್ಲ. ಇದಲ್ಲದೆ ಈ ಪ್ರಕ್ರಿಯೆ ವಿದ್ಯಾರ್ಥಿಗಳು ತಮ್ಮ ಅನುಮಾನಗಳು ಏನಾದರೂ ಇದ್ದಲ್ಲಿ ಅವುಗಳನ್ನು ಪರಿಕಲ್ಪನೆಗಳನ್ನು ಕಲಿಯುವಾಗ ಪರಿಹರಿಸಿಕೊಳ್ಳಬಹುದು.

**ಎಫ್) ಸಂಗೀತದ ಮೂಲಕ ಅರ್ಥಶಾಸ್ತ್ರವನ್ನು ಬೋಧಿಸುವುದು**

ಅರ್ಥಶಾಸ್ತ್ರದ ಬೋಧನೆಯಲ್ಲಿ ಸಂಗೀತವನ್ನು ಉಪಯೋಗಿಸುವುದು ಬೋಧನಾ ಪ್ರಕ್ರಿಯೆಯ ಪ್ರಭಾವವನ್ನು ಹೆಚ್ಚಿಸುವ ಆಧುನಿಕ ತರಬೇತಿ ವಿಧಾನವಾಗಿದೆ. ಮೊದಲು, ವಿಚಾರಗಳನ್ನು ವಿಕಾಸಗೊಳಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ಕಲಾತ್ಮಕ ಸೃಷ್ಟಿಯ ಮೂಲಕ ತಮ್ಮ ಭಾವನೆಗಳನ್ನು, ಸಂವೇದಗಳನ್ನು ಅಭಿವ್ಯಕ್ತಗೊಳಿಸಲು ಪ್ರೋತ್ಸಾಹಿಸಲಾಗುತ್ತದೆ. ಇದರಿಂದಾಗಿ, ವಿದ್ಯಾರ್ಥಿಗಳು ಕಲಾವಿದನ ಸ್ಫೂರ್ತಿಯನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ ಮತ್ತು ಕಲಾವಿದನ ಪ್ರತಿಭೆ ಮತ್ತು ಅನುಭವದಿಂದ ಅನೇಕ ವಿಧಗಳಲ್ಲಿ ಅರ್ಥಶಾಸ್ತ್ರದ ಮೂಲಭೂತ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವ ಪ್ರತಿಫಲವನ್ನು ಪಡೆಯುತ್ತಾರೆ. ಇದೂ ಅಲ್ಲದೆ, ವಿದ್ಯಾರ್ಥಿಗಳಿಗೆ ಹೊಸ ಮಾಹಿತಿಯನ್ನು ಒಪ್ಪಿಕೊಳ್ಳಲು ಮತ್ತು ಸತ್ಯಪೂರ್ಣವಾಗಿ ತಮ್ಮ ಜ್ಞಾನವನ್ನು ಸಮೃದ್ಧಿಪಡಿಸಿಕೊಳ್ಳಲು ಮತ್ತು ಅಂತಿಮವಾಗಿ ಸಂಕೀರ್ಣವಾದ ಕಲಾತ್ಮಕ ಪ್ರಾಯೋಜನೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗುತ್ತದೆ.

ಸಾಂಪ್ರದಾಯಿಕವಲ್ಲದ ಕಲಿಕೆ ಮತ್ತು ವೈಯಕ್ತಿಕವಾದ ಅಪರಿಣತವಾದ ಜ್ಞಾನದ ಅನ್ವಯಿಕತೆ ಅರ್ಥಶಾಸ್ತ್ರ ಶಿಕ್ಷಣದಲ್ಲಿ ಧನಾತ್ಮಕ ಪ್ರತಿಫಲವನ್ನು ಸುಗಮಗೊಳಿಸಬಲ್ಲದು. ಹೀಗಾಗಲು ಕಾರಣವೇನೆಂದರೆ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಅನುಭವಗಳಿಗೆ ಅರ್ಥಶಾಸ್ತ್ರದ ಪರಿಕಲ್ಪನೆಗಳನ್ನು ಅನ್ವಯಿಸಲು ಶಕ್ತರಾಗುತ್ತಾರೆ. ಅದೂ ಅಲ್ಲದೆ, ವಿದ್ಯಾರ್ಥಿಗಳು ಗುಣಾತ್ಮಕವಾದ ವಿಷಯಗಳು ಮತ್ತು ನಕ್ಷೆಗಳನ್ನು ವಿಶ್ಲೇಷಣೆ ಮಾಡುವುದರ ಮೂಲಕ, ವಿಶೇಷವಾಗಿ ಈ ಕಾರ್ಯ ಜನಪ್ರಿಯ ರಾಗಗಳಿಗೆ (ಮೆಲೊಡಿ) ಸಂಬಂಧಿಸಿದ್ದರೆ ಕಲಿಕೆಯ ಪ್ರಕ್ರಿಯೆಯನ್ನು ಆನಂದಿಸುತ್ತಾರೆ. ಇದರಿಂದ ಅರ್ಥಶಾಸ್ತ್ರದ ಮೂಲಭೂತ ಪರಿಕಲ್ಪನೆಗಳು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ. ವಿದ್ಯಾರ್ಥಿಗಳ ವರ್ತನೆಗಳು ಮತ್ತು ಪ್ರತಿಕ್ರಿಯೆಗಳು ತೋರಿಸಿರುವಂತೆ, ತರಗತಿಯಲ್ಲಿ ಸಂಗೀತದ ಅನುದೇಶಾತ್ಮಕ(ಬೋಧನಾತ್ಮಕ) ಉಪಯೋಗ ಯಾವಾಗಲೂ ಧನಾತ್ಮಕ ಪ್ರತಿಫಲವನ್ನು ಕೊಡುತ್ತದೆ. ಈ ವಿಧಾನ ಸಕ್ರಿಯ ಕಲಿಕೆಯನ್ನು ಸುಗಮಗೊಳಿಸುತ್ತದೆ. ವಿಶೇಷವಾಗಿ, ಅಂಥ ಹಾಡು (ಸಂಗೀತ) ಎಲ್ಲರಿಗೂ ಮೆಚ್ಚುಗೆಯಾದರೆ ಮತ್ತು ಸಾಮಾನ್ಯ ಅನುಭವಕ್ಕೆ ಸಂಬಂಧಿಸಿದ್ದರೆ ಮತ್ತು ಹಾಡುವ ಕಲಾಕರ ವಿದ್ಯಾರ್ಥಿಗಳಿಗೆ ಜನಪ್ರಿಯನಾಗಿದ್ದರೆ, ಈ ಹಾಡಿನ ಮೂಲಕ ಕಲಿಕೆಯ ಉದಾಹರಣೆಯನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಸುಲಭವಾಗುತ್ತದೆ.

ತಿವಾರಿ ಮತ್ತು ಖಾಂಡ್ಕೆ ಮೊದಲ ಪ್ರಾಯೋಗಿಕ ಉಪಕ್ರಮದಲ್ಲಿ ಪ್ರಾರಂಭಿಕ ಅರ್ಥಶಾಸ್ತ್ರದ ಬೋಧನೆಗೆ ಸಹಾಯಕವಾಗಿ ಸಂಗೀತವನ್ನು ಉಪಯೋಗಿಸಿದ್ದಾರೆ. ಅವರು ಅವರ ಪ್ರಯತ್ನದಲ್ಲಿ ವಿದ್ಯಾರ್ಥಿಗಳಿಗೆ ಅನೇಕ ಹಾಡುಗಳನ್ನು ಆಯ್ಕೆ ಮಾಡಿಕೊಳ್ಳಲು ಹೇಳಿದರು ಮತ್ತು ಅದನ್ನು ಹಾಡಿ ಪ್ರದರ್ಶಿಸಲು ಹೇಳಿದರು. ಕಡೆಯಲ್ಲಿ, ಅವರು ಆಯ್ಕೆ ಮಾಡಿಕೊಂಡಿದ್ದ ಹಾಡುಗಳಲ್ಲಿ ಇರುವ ಆರ್ಥಿಕ ಅರ್ಥಗಳನ್ನು ಮತ್ತು ಸಿದ್ಧಾಂತಗಳನ್ನು ಚರ್ಚಿಸಿದರು. ಈ ಪ್ರಾಯೋಜನೆಯ ಮುಖ್ಯ ವಿಚಾರ ಅರ್ಥಶಾಸ್ತ್ರ ತರಗತಿಗಳಲ್ಲಿ ಪಾಠಗಳ ರೂಪದಲ್ಲಿ ಬರುವುದಲ್ಲದೆ, ಅದು ನಿತ್ಯ ಜೀವನದಲ್ಲಿಯೂ ಇರುತ್ತದೆ ಎಂಬುದನ್ನು ವಿದ್ಯಾರ್ಥಿಗಳು ನಂಬುವಂತೆ ಮಾಡುವುದಾಗಿತ್ತು. ಇದು ಅರ್ಥಶಾಸ್ತ್ರದ ಪರಿಕಲ್ಪನೆಗಳ ಅಧ್ಯಯನ ಕೈಗೊಳ್ಳುವುದನ್ನು, ಅವುಗಳನ್ನು ಅರ್ಥ ಮಾಡಿಕೊಂಡು ನೆನಪಿನಲ್ಲಿ ಇಟ್ಟುಕೊಳ್ಳುವುದನ್ನು ಸುಲಭ ಸಾಧ್ಯವನ್ನಾಗಿಸಿತು. ಇದು ಅವರ ಅನುಭವದ ಅನ್ವಯಿಕತೆಯಿಂದ ಸಾಧ್ಯವಾಯಿತು.

ಸಂಗೀತ ಮತ್ತು ಅರ್ಥಶಾಸ್ತ್ರಗಳಲ್ಲಿ ಬಹಳಷ್ಟು ಸಮಾನತೆಗಳಿವೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮಾಹಿತಿಯ ವಿನಿಮಯವನ್ನು ಪರಿವರ್ತನೆಗಳನ್ನು (ಏರುಪೇರುಗಳನ್ನು) ದ್ವಿಗುಣಗೊಳ್ಳುವಿಕೆಯನ್ನು ಸರಕುಗಳ ಬೇಡಿಕೆಗಳನ್ನು ಮತ್ತು ಉಪಭೋಕ್ತರ (ಬಳಕೆದಾರರ) ವರ್ತನೆಯನ್ನು ಗಮನಿಸಬಹುದು. ಇವೆಲ್ಲವೂ ಸಂಗೀತ ಮತ್ತು ಅರ್ಥಶಾಸ್ತ್ರದ ಅತ್ಯಂತ ಸಾಮಾನ್ಯ ಅಂಶಗಳಾಗಿವೆ. ಉದಾಹರಣೆಗೆ, ಸರಕುಗಳ ಬೇಡಿಕೆಗೆ ಸಂಬಂಧಿಸಿದಂತೆ ಇದನ್ನು ಸಂಗೀತದ ಲಕ್ಷಣಗಳಿಗೆ (ಲಯ, ಧ್ವನಿ, ಆವೃತ್ತಿ) ತಥ್ಯಾಂಶಗಳಿಗೆ ಸಂಬಂಧಿಸಬಹುದು. ಏಕೆಂದರೆ, ಇವೆಲ್ಲವೂ ಕೇಳುಗರ ಕೋರಿಕೆಗಳಿಗೆ ಅನುಗುಣವಾಗಿ ನಿರ್ಧಾರಿತವಾಗುತ್ತವೆ. ಮತ್ತೊಂದು ಉದಾಹರಣೆ ಉಪಭೋಕ್ತಾ (ಬಳಕೆದಾರ)ನಿಗೆ ಸಂಬಂಧಿಸಿದೆ. ಪ್ರತಿಯೊಬ್ಬ ಬಳಕೆದಾರನು ತನ್ನ ಪ್ರತಿ ವರ್ತನೆಯ ಮನಃಸ್ಥಿತಿಗೆ ತಕ್ಕಂತೆ ಸಂಗೀತವನ್ನು ಆಯ್ಕೆ ಮಾಡಿ ಅದನ್ನು ಹೇಳಲು ಇಷ್ಟಪಡುತ್ತಾನೆ/ಳೆ. ಸಂಗೀತದ ಪ್ರಯೋಜನ ಅಂದರೆ ತೃಪ್ತಿ. ಬಳಕೆದಾರನು/ಳು ಒಂದು ಕಾಲಾವಧಿಯಲ್ಲಿ ಆನಂದಿಸುವುದರಿಂದ ಲಭಿಸುತ್ತದೆ ಎನ್ನುವುದು ಪ್ರತಿಯೊಬ್ಬ ಬಳಕೆದಾರನಿಗೆ ಅನ್ವಯಿಸುತ್ತದೆ ಎನ್ನುವುದು ಸಾಮಾನ್ಯ ಸಂಗತಿಯಾಗಿದೆ (ಡೈಮೇಜ಼ಿ,2015). ಈ ಬೋಧನಾ ವಿಧಾನದ ಮೂಲಕ, ಶಿಕ್ಷಕ ತಾನು ಬೋಧಿಸುವ ವಿಷಯಗಳ(ಕೋರ್ಸಿನ) ಅರ್ಥಶಾಸ್ತ್ರವೂ ಸೇರಿದಂತೆ, ಪರಿಣಾಮವನ್ನು ಹೆಚ್ಚಿಸಬಹುದು.

ಒಂದು ಪ್ರಾಯೋಗಿಕ ಬೋಧನಾ ವಿಧಾನವಾಗಿ, ಸಂಗೀತದ ಪ್ರಯೋಗ ಎಲ್ಲ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತದೆ ಮತ್ತು ಅವರ ಗಮನವನ್ನು ಸೆಳೆಯುತ್ತದೆ. ಇದಕ್ಕೆ ಕಾರಣ, ನಿರಂತರ ಚಲನೆ, ಪುನರಾವರ್ತನೆ ಮತ್ತು ಹಾಡುಗಳ ಲಯ. ಇದಕ್ಕೂ ಮಿಗಿಲಾಗಿ, ಸಂಗೀತ ತನ್ನ ಲಯಬದ್ಧತೆಯಿಂದಾಗಿ ಅಶಾಬ್ದಿಕ ಸಂವಹನ ಸಾಮರ್ಥ್ಯವನ್ನು, ಧ್ವನಿಮಾಧುರ್ಯವನ್ನು ಮತ್ತು ಸಂಗೀತ ಲಹರಿಯ ದಿಶೆಯನ್ನು ಉತ್ತಮಪಡಿಸುತ್ತದೆ. ಈ ವಿಧಾನದ ಬೋಧನೆ ಶಿಕ್ಷಕರಿಗೆ ಕಠಿಣ ಕಾರ್ಯವಾಗುತ್ತದೆ ಎನ್ನುವುದನ್ನು ಮರೆಯಬಾರದು. ಈ ವಿಧಾನ ಸಿದ್ಧತೆ, ಜ್ಞಾನ, ಕಲ್ಪನಾಶೀಲತೆ ಮತ್ತು ಪ್ರತಿಭೆಯನ್ನು ಅಪೇಕ್ಷಿಸುತ್ತದೆ. ಪಠ್ಯವಸ್ತುವಿನಂತೆ ಬೋಧನೆಯನ್ನು ಫಲಪ್ರದವಾಗಿಸಲು ಈ ಗುಣಗಳ ಅವಶ್ಯಕತೆಯಿದೆ.

ಈ ಬೋಧನಾ ವಿಧಾನ ಭಾರತದಲ್ಲಿ ಇನ್ನೂ ಅಷ್ಟೇನೂ ಜನಪ್ರಿಯವಾಗಿಲ್ಲದಿದ್ದರೂ ಇದು ಅರ್ಥಶಾಸ್ತ್ರದ ಬೋಧನೆಯಲ್ಲಿ ಸಂಶೋಧನೆ ಮತ್ತು ಬೋಧನಾ ತಂತ್ರನೀತಿಗಳನ್ನು ವಿಕಾಸಗೊಳಿಸಲು ಅವಕಾಶ ನೀಡುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಅರ್ಥಶಾಸ್ತ್ರದ ಬೋಧನಾ ವಿಧಾನಗಳನ್ನು ಪಟ್ಟಿ ಮಾಡಿ. ಅವುಗಳ ಗುಣಗಳನ್ನು ಮತ್ತು ಮಿತಿಗಳನ್ನು ಕುರಿತು ಚರ್ಚಿಸಿ
2. ನಿಮ್ಮ ತರಗತಿಯಲ್ಲಿ ಅರ್ಥಶಾಸ್ತ್ರವನ್ನು ಬೋಧಿಸುವಾಗ ನೀವು ಎದುರಿಸಬಹುದಾದ ಸಮಸ್ಯೆಗಳನ್ನು ಪಟ್ಟಿ ಮಾಡಿ.

### 3.5.3.2. ಅರ್ಥಶಾಸ್ತ್ರ ಬೋಧನೆ: ತಂತ್ರಗಳು

**ಎ) ಮೇಲ್ವಿಚಾರಿತ ಅಧ್ಯಯನ**

ಬೈನಿಂಗ್ ಮತ್ತು ಬೈನಿಂಗರ ಮಾತುಗಳಲ್ಲಿ – ಮೇಲ್ವಿಚಾರಿತ ಅಧ್ಯಯನವು ವಿದ್ಯಾರ್ಥಿಗಳು ತರಗತಿಯಲ್ಲಿ ತಮ್ಮ ಡೆಸ್ಕ್‌ಗಳಲ್ಲಿ ಕುಳಿತು ಅಥವಾ ಕೆಲವರು ಟೇಬಲ್ ಸುತ್ತ ಕುಳಿತು ಅಧ್ಯಯನ ಮಾಡುತ್ತಿರುವ ಗುಂಪನ್ನು ಅಥವಾ ತರಗತಿಯನ್ನು ಅಧ್ಯಾಪಕರು ಮೇಲ್ವಿಚಾರಣೆ ಮಾಡುವ ಕಾರ್ಯವಾಗಿದೆ. ಈ ಕ್ರಮದಲ್ಲಿ ವಿದ್ಯಾರ್ಥಿಗಳು ಅವರುಗಳಿಗೆ ನಿಯೋಜಿತವಾದ ಕಾರ್ಯವನ್ನು ಅಂದರೆ ಅಧ್ಯಯನವನ್ನು ಮಾಡುವುದರಲ್ಲಿ ತನ್ಮಯರಾಗಿರುವುದನ್ನು ಕಾಣುತ್ತೇವೆ. ಹೀಗೆ, ಅಧ್ಯಯನ ಮಾಡುತ್ತಿರುವಾಗ ಅವರಿಗೆ ಪರಿಹಾರಿಸಲಾಗದ ಸಂಶಯ ಅಥವಾ ಗೊಂದಲ ಅಥವಾ ಕಠಿಣತೆ ತಲೆದೋರಿದರೆ, ಅವರು ಶಿಕ್ಷಕರನ್ನು ಮಾರ್ಗದಶನಕ್ಕಾಗಿ ಮತ್ತು ಸಹಾಯಕ್ಕಾಗಿ ಕೇಳುತ್ತಾರೆ. ಶಿಕ್ಷಕರು ವಿದ್ಯಾರ್ಥಿಗಳು ಕಲಿಯದಿದ್ದಾಗ ತರಗತಿಯಲ್ಲಿ ಅಲ್ಲಿಂದಿಲ್ಲಿಗೆ ಶಾಂತವಾಗಿ ನಡೆದಾಡುತ್ತಿರುತ್ತಾರೆ ಅಥವಾ ಡೆಸ್ಕಿನ ಸಮೀಪ ಕುಳಿತಿರುತ್ತಾರೆ ಮತ್ತು ವಿದ್ಯಾರ್ಥಿಗಳು ಏನಾದರೂ ತಪ್ಪು ಕ್ರಮವನ್ನು ಅನುಸರಿಸುತ್ತಿದ್ದರೆ ನಿರಂತರವಾಗಿ ಗಮನಿಸುತ್ತಿದ್ದು ಅದನ್ನು ಸರಿಪಡಿಸುತ್ತಾರೆ. ಅವರು ಯಾವಾಗಲೂ ಅವರಿಗೆ ನಿರ್ದೇಶನ ನೀಡಲು ಮತ್ತು ಸಹಾಯ ಮಾಡಲು ಸಿದ್ಧವಾಗಿರುತ್ತಾರೆ.

ಮ್ಯಾಕ್ಸ್‌ವೆಲ್ ಮತ್ತು ಕೆಲ್ಲರ್ ಮೇಲ್ವಿಚಾರಿತ ಅಧ್ಯಯನವನ್ನು ಹೀಗೆ ಪರಿಭಾಷಿಸಿದ್ದಾರೆ– " ...ಮೇಲ್ವಿಚಾರಿತ ಅಧ್ಯಯನವು ಶಿಕ್ಷಕನು ವಿದ್ಯಾರ್ಥಿಗಳ ಅಧ್ಯಯನ ಮತ್ತು ಪರ್ಯಾಯ ಚಟುವಟಿಕೆಗಳನ್ನು ಮೌನವಾಗಿ ಮೇಲ್ವಿಚಾರಣೆ ಮಾಡುವುದಾಗಿದೆ".

ಈ ವಿಧಾನಕ್ಕೆ ಶಿಕ್ಷಕ ಸರಿಯಾದ ಯೋಜನೆಯೊಂದಿಗೆ ಸಿದ್ಧನಾಗಿರಬೇಕಾಗುತ್ತದೆ. ವಿದ್ಯಾರ್ಥಿಗಳ ತೊಂದರೆಗಳನ್ನು ಮತ್ತು ದುರ್ಬಲತೆಗಳನ್ನು ಗುರುತಿಸಲು ಶಿಕ್ಷಕ ಒಳ್ಳೆಯ ವೀಕ್ಷಕನಾಗಿರಬೇಕಾಗುತ್ತದೆ, ಮೇಲ್ವಿಚಾರಕನಾಗಿರಬೇಕಾಗುತ್ತದೆ. ಎಚ್ಚರದಿಂದ ಇರುವ ಶಿಕ್ಷಕ ಮಾತ್ರ ಒಳ್ಳೆಯ ಅಧ್ಯಯನ ಅಭ್ಯಾಸಗಳನ್ನು ವಿಕಾಸಗೊಳಿಸಿಕೊಳ್ಳಲು, ಕಾರ್ಯಕುಶಲತೆಗಳನ್ನು ಕಲಿಯಲು ಮತ್ತು ಸಹಕಾರಾತ್ಮಕ ಸ್ಫೂರ್ತಿಯನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಬಲ್ಲನು. ಪ್ರತಿ ವಿದ್ಯಾರ್ಥಿಯೂ ತಾನು ಹಾಕಿಕೊಂಡ ಗುರಿಯನ್ನು ತಲುಪಲು ಶಿಕ್ಷಕ ಪ್ರಯತ್ನಿಸಬೇಕು.

**ಈ ವಿಧಾನದ ಗುಣಗಳು**

- ಇದು ಬಹಳ ಉಪಯುಕ್ತವಾದ ವಿಧಾನ. ಏಕೆಂದರೆ ಇದು ಶಿಕ್ಷಕರ ನಿರ್ದೇಶನವನ್ನು ಆಧರಿಸಿದ ಅಧ್ಯಯನ ವಿಧಾನವಾಗಿದೆ. ಇದರಿಂದ ಮುಖ್ಯವಾದ ಕೌಶಲಗಳನ್ನು ವಿಕಾಸಗೊಳಿಸಬಹುದಾಗಿದೆ. ಶಿಕ್ಷಕನಿಗೆ ಸಮೀಪದಿಂದ ವಿದ್ಯಾರ್ಥಿಗಳನ್ನು ವೀಕ್ಷಿಸುವ ಅವಕಾಶ ದೊರೆಯುತ್ತದೆ.
- ವಿದ್ಯಾರ್ಥಿಗಳಿಗೆ ಶಿಕ್ಷಕನ ವ್ಯಕ್ತಿಗತ ಗಮನ ನೀಡುವಿಕೆಯಿಂದ ಸಹಾಯ ದೊರೆಯುತ್ತದೆ. ಇದರಿಂದ ಶಿಕ್ಷಕನಿಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಬಗೆಗೂ ಮಾಹಿತಿ ದೊರೆಯುತ್ತದೆ. ಶಿಕ್ಷಕ ವಿದ್ಯಾರ್ಥಿಗಳ ಅಧ್ಯಯನದ ಅಭ್ಯಾಸವನ್ನು, ಅಧ್ಯಯನ ಕೌಶಲಗಳ ದಕ್ಷತೆಯನ್ನು ಮತ್ತು ಪ್ರಗತಿಯ ಪ್ರಮಾಣವನ್ನು ಪತ್ತೆ ಮಾಡಬಹುದು. ಮಾರ್ಗದರ್ಶನ ಬೇಕಾದಾಗ ಶಿಕ್ಷಕ ಅದನ್ನು ನೀಡಬಹುದು. ಇದು ವಿದ್ಯಾರ್ಥಿಗೆ ಬಹಳ ಉಪಯುಕ್ತವೆನಿಸುತ್ತದೆ. ತಪ್ಪುಗಳನ್ನು ತತ್‌ಕ್ಷಣದಲ್ಲಿಯೇ ವೀಕ್ಷಿಸಿ ತಿದ್ದಿದಾಗ ಅದು ವಿದ್ಯಾರ್ಥಿಗಳ ಸಮಯದ ಉಳಿತಾಯ ಮಾಡುತ್ತದೆ. ಇದರಿಂದ ತನ್ನ ಪ್ರಯತ್ನವನ್ನು ಬೇರೆ ಕಡೆ ತಿರುಗಿಸಲು ಶಿಕ್ಷಕನಿಗೆ ಸಾಧ್ಯವಾಗುತ್ತದೆ.
- ಈ ಮೂಲಕ ಪ್ರಜಾಸತ್ತಾತ್ಮಕ ಮಾನವೀಯ ಸಂಬಂಧಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಮೇಲ್ವಿಚಾರಿತ ಅಧ್ಯಯನದಲ್ಲಿ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಸಾಮಗ್ರಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದನ್ನು ಕಲಿಯುತ್ತಾರೆ.
- ಶಿಕ್ಷಕನಿಗೆ ವಿದ್ಯಾರ್ಥಿಗಳ ವೈಯಕ್ತಿಕ ವ್ಯತ್ಯಾಸಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಶಿಕ್ಷಕ ನಿಧಾನವಾಗಿ ಕಲಿಯುವವರಿಗೆ ಮತ್ತು ವೇಗವಾಗಿ ಕಲಿಯುವವರಿಗೆ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಮಾರ್ಗದರ್ಶನ ನೀಡಬಹುದು.

- ಶಿಕ್ಷಕ ನಿರಂತರವಾಗಿ ಒಂದೇ ಸಮನೆ ವೀಕ್ಷಿಸುತ್ತಿರುವಾಗ ಅಧ್ಯಯನ ಸಾಮಗ್ರಿಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬಹುದು.
- ವಿದ್ಯಾರ್ಥಿಗಳ ಜ್ಞಾನ ವಿಸ್ತೃತಗೊಳ್ಳುತ್ತದೆ. ಅಧ್ಯಯನದ ಸಮಯದಲ್ಲಿ ವಿದ್ಯಾರ್ಥಿಗಳು ಜ್ಞಾನದ ಆಸಕ್ತಿಪೂರ್ಣ ಎಳೆಗಳನ್ನು ಕಂಡುಕೊಳ್ಳಬಹುದು. ಅವುಗಳನ್ನು ನಂತರದಲ್ಲಿ ಸ್ಪಷ್ಟ ಮಾಡಿಕೊಳ್ಳಬಹುದು. ಹೊಸ ತಥ್ಯಾಂಶಗಳನ್ನು ಕಂಡುಕೊಳ್ಳಲು, ವಾಸ್ತವಿಕತೆಯನ್ನು ಮೆಚ್ಚಿಕೊಳ್ಳಲು ಸಹಾಯ ಮಾಡುತ್ತದೆ.
- ಈ ವಿಧಾನ ಶಿಕ್ಷಕ–ವಿದ್ಯಾರ್ಥಿಗಳ ನಡುವೆ ಒಳ್ಳೆಯ ಸಂಬಂಧವನ್ನು ವಿಕಾಸಗೊಳಿಸುತ್ತದೆ. ಶಿಕ್ಷಕನಿಗೆ ವಿದ್ಯಾರ್ಥಿಗಳನ್ನು ಮತ್ತು ಅವರ ತೊಂದರೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.
- ಈ ವಿಧಾನದಿಂದ ಬಂದ ಅನುಭವ ವಿಮರ್ಶಾತ್ಮಕ ಆಲೋಚನೆಯನ್ನು ವಿಕಾಸಗೊಳಿಸಬಲ್ಲದು. ವಿದ್ಯಾರ್ಥಿಗಳು ತಮ್ಮ ಅಧ್ಯಯನ ಸಾಮಗ್ರಿಯನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವುದನ್ನು ಕಲಿತುಕೊಳ್ಳುತ್ತಾರೆ. ಇದು ಒಂದು ಮೌಲ್ಯಯುತ ಅನುಭವವಾಗಿದೆ.

**ಸಿ) ನಿಯೋಜಿತ ಕಾರ್ಯ (Assignment):**

ನಿಯೋಜಿತ ಕಾರ್ಯ ವಿಶೇಷವಾಗಿ ಸೆಕೆಂಡರಿ (ಪ್ರೌಢ) ಶಾಲಾ ಮಟ್ಟದಲ್ಲಿ ಅರ್ಥಶಾಸ್ತ್ರವನ್ನು ಬೋಧಿಸುವ ಉಪಯುಕ್ತ ಸಾಧನವಾಗಿದೆ. ಅರ್ಥಶಾಸ್ತ್ರದಲ್ಲಿ ಒಂದು ಮುಖ್ಯವಾದ ಶೀರ್ಷಿಕೆ (ಟಾಪಿಕ್)ಯನ್ನು ಅಧ್ಯಯನದ ಸಿದ್ಧತೆಗೆ, ಅಧ್ಯಯನಕ್ಕೆ ಅಥವಾ ಪುನರಾವರ್ತನೆಗೆ ಅಥವಾ ಪರಿಹಾರಾತ್ಮಕ ಕಾರ್ಯಕ್ಕೆ ವಿದ್ಯಾರ್ಥಿಗಳಿಗೆ ನಿಯೋಜಿಸಲಾಗುತ್ತದೆ. ವಿದ್ಯಾರ್ಥಿಗಳು ಅಪೇಕ್ಷಿತ ನಿಯೋಜಿತ ಕಾರ್ಯವನ್ನು ಬರೆಯಬೇಕು.. ಹೀಗೆ, ಬರೆದ ನಿಯೋಜಿತ ಕಾರ್ಯ ಜ್ಞಾನದ ಸಂಘಟನೆಯಲ್ಲಿ, ತಥ್ಯಾಂಶಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಮತ್ತು ಪರೀಕ್ಷೆಗೆ ಉತ್ತಮವಾಗಿ ಸಿದ್ಧರಾಗುವಲ್ಲಿ ಸಹಾಯ ಮಾಡುತ್ತದೆ.

**ನಿಯೋಜಿತ ಕಾರ್ಯದ ಉದ್ದೇಶಗಳು**

- ತರಗತಿಯ ಅಥವಾ ಪ್ರಯೋಗಶಾಲಾ ಕಾರ್ಯಕ್ಕೆ ಮೊದಲು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು.
- ಯಾವುದೇ ವಿಷಯ (ಶೀರ್ಷಿಕೆ) ಬಗ್ಗೆ ಸಂಶೋಧನೆ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಸಕ್ರಿಯ ಕಲಿಕೆಯನ್ನು ಹೆಚ್ಚಿಸುವುದು.
- ಉಪನ್ಯಾಸಕ್ಕೆ, ಪ್ರಾತ್ಯಕ್ಷಿಕೆಗೆ ಅಥವಾ ಚರ್ಚೆಗೆ ವೇದಿಕೆಯನ್ನು ಸೃಷ್ಟಿಸುವುದು.
- ಸಾಮರ್ಥ್ಯ, ಹಿನ್ನೆಲೆ, ಅನುಭವಗಳಲ್ಲಿ ವಿದ್ಯಾರ್ಥಿಗಳಲ್ಲಿರುವ ವ್ಯಕ್ತಿಗತ ವ್ಯತ್ಯಾಸಗಳನ್ನು ವಿಭೇದೀಕೃತ ನಿಯೋಜಿತ ಕಾರ್ಯಗಳ ಮೂಲಕ ಲಾಭಪ್ರದವಾಗಿ ಉಪಯೋಗಿಸಿಕೊಳ್ಳುವುದು.
- ತರಗತಿಯಲ್ಲಿ ಬೋಧಿಸಿದ ಕಲಿಕಾ ಸಾಮಗ್ರಿಯನ್ನು ಪುನರಾವಲೋಕಿಸುವುದು ಅಥವಾ ಪುನಃ ಅಭ್ಯಾಸ ಮಾಡುವುದು.
- ಸಮೃದ್ಧಗೊಳಿಸಿದ ಕಲಿಕಾ ಸಾಮಗ್ರಿಯನ್ನು ಒದಗಿಸುವುದು.

**ನಿಯೋಜಿತ ಕಾರ್ಯಗಳ ವಿಧಗಳು**

**ಅಧ್ಯಯನ ನಿಯೋಜಿತ ಕಾರ್ಯಗಳು**

ಅಧ್ಯಯನ ನಿಯೋಜಿತ ಕಾರ್ಯಗಳು ವ್ಯಕ್ತಿಗಳ (ವಿದ್ಯಾರ್ಥಿಗಳ) ಸಾಮರ್ಥ್ಯಕ್ಕೆ ಅನುಗುಣವಾಗಿ ವ್ಯತ್ಯಾಸ ಹೊಂದುತ್ತವೆ. ಇವು ಸಮೃದ್ಧ ಪರಿಹಾರ ನಿಯೋಜಿತ ಕಾರ್ಯಗಳಾಗಿರಬಹುದು ಅಥವಾ ಚಾರ್ಟುಗಳು, ನಕ್ಷೆಗಳು ತಾಲಿಕೆಗಳು ಮುಂತಾದುವುಗಳನ್ನು ಬರೆಯುವ ನಿಯೋಜಿತ ಕಾರ್ಯಗಳಾಗಿರಬಹುದು. ಇಲ್ಲವೇ ಒದಗಿಸಿದ ಪರಾಮರ್ಶನ ಮೂಲಗಳ ಬೆಳಕಿನಲ್ಲಿ ಒಂದು ಶೀರ್ಷಿಕೆಯ (ಟಾಪಿಕ್‌ನ) ಬಗ್ಗೆ ನಿಯೋಜಿತ ಕಾರ್ಯವನ್ನು ಸಿದ್ಧಪಡಿಸುವುದಾಗಿರುಬಹುದು. ಅಥವಾ ಒಂದು ದತ್ತ ವಾದ ವಿವಾದದ ಪರ ಅಥವಾ

ವಿರೋಧವಾಗಿ ವಿಷಯದ ಅಂಶಗಳನ್ನು ಪಟ್ಟಿ ಮಾಡುವುದಾಗಿರಬಹುದು, ಸಂಖ್ಯಾಶಾಸ್ತ್ರೀಯ ಅಥವಾ ದೃಶ್ಯರೂಪದ ಸಾಮಗ್ರಿಗಳ (ಉದಾ: ನಕ್ಷೆ, ತಾಲಿಕೆ) ಬಗ್ಗೆ ಸಿಂಧುತ್ವ ಪೂರ್ಣ ತೀರ್ಮಾನಗಳನ್ನು ಬರೆಯುವುದಾಗಿರಬಹುದು

**ಪುನರಾವರ್ತಿತ ನಿಯೋಜಿತ ಕಾರ್ಯಗಳು**

ಈ ನಿಯೋಜಿತ ಕಾರ್ಯಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಕೊಡಲಾಗುತ್ತದೆ:

- ವಿದ್ಯಾರ್ಥಿಗಳು ಮಾಡಿದ ಕೆಲಸವನ್ನು ಪುನಃ ಪುನಃ ಮಾಡಿಸುವುದು ಅಂದರೆ ಡ್ರಿಲ್ ಮಾಡಿಸುವುದು.
- ಟಾಪಿಕ್ ಅಥವಾ ಘಟಕದಲ್ಲಿರಬಹುದಾದ ತಥ್ಯಾಂಶಗಳನ್ನು ನೆನಪಿಸಲು ಸಹಾಯಮಾಡುವುದು
- ಟಾಪಿಕ್‌ನ ತಿಳುವಳಿಕೆಯನ್ನು ಒರೆ ಹಚ್ಚುವುದು.
- ಪರೀಕ್ಷಿಸುವ ವಿಷಯ ಸಾಮಗ್ರಿಗಳ ನಿರ್ದಿಷ್ಟ ಉದ್ದೇಶಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ನಿಯೋಜಿತ ಕಾರ್ಯಗಳನ್ನು ಪೂರ್ವಭಾವಿಯಾಗಿ ಸಿದ್ಧಗೊಳಿಸಬೇಕು.

**ಪರಿಹಾರಾತ್ಮಕ ನಿಯೋಜಿತ ಕಾರ್ಯಗಳು:**

ಮೇಲೆ ವಿವರಿಸಿದ ನಿಯೋಜಿತ ಕಾರ್ಯಗಳಿಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳ ಬೆಳಕಿನಲ್ಲಿ ಈ ನಿಯೋಜಿತ ಕಾರ್ಯಗಳನ್ನು ರೂಪಿಸಲಾಗುತ್ತದೆ. ಈ ನಿಯೋಜಿತ ಕಾರ್ಯಗಳು ದುರ್ಬಲ ಅಂಶಗಳನ್ನು, ಸುಲಭವಾಗಿ ಕಾಣುವ ತಪ್ಪು ಕಲ್ಪನೆಗಳನ್ನು ನಿವಾರಿಸುತ್ತದೆ.

**ನಿಯೋಜಿತ ಕಾರ್ಯಗಳ ಗುಣಗಳು**

- ಸಾಮಗ್ರಿಗಳ ಪೂರ್ಣಗೊಳಿಸುವಿಕೆಯನ್ನು ಹೆಚ್ಚಿಸುತ್ತದೆ.
- ತರಗತಿಯ ಸಮಯವನ್ನು ಉಳಿತಾಯ ಮಾಡುತ್ತದೆ
- ವೈಯಕ್ತಿಕ ಗಮನಕ್ಕೆ ಅವಕಾಶ ನೀಡುತ್ತವೆ.

**ನಿಯೋಜಿತ ಕಾರ್ಯಗಳ ಮಿತಿಗಳು**

- ಎಚ್ಚರ ವಹಿಸಿ ಮಾಡಿದ ಯೋಜನೆ ಮತ್ತು ಅನುಸರಣಾ ಕಾರ್ಯವನ್ನು ಇದು ಅಪೇಕ್ಷಿಸುತ್ತದೆ.
- ಮಾಪನದ ಸಮಸ್ಯೆಯನ್ನು ಒಡ್ಡುತ್ತವೆ.
- ಪ್ರಮಾಣೀಕೃತವಲ್ಲದ ಫಲಿತಾಂಶಗಳನ್ನು ಉಂಟುಮಾಡುತ್ತವೆ.

**3.5.4. ಸಾರಾಂಶಿಸೋಣ**

- ಮನೋವೈಜ್ಞಾನಿಕವಾಗಿ, ಪ್ರಾಯೋಜನಾ ವಿಧಾನ 'ಮಾಡಿ–ಕಲಿ' ತತ್ವಗಳ ಆಧಾರವನ್ನು ಹೊಂದಿದೆ ಇದು ವಿದ್ಯಾರ್ಥಿಗಳ ಕಡೆಯಿಂದ ಗರಿಷ್ಠಮಟ್ಟದ ಚಟುವಟಿಕೆಯನ್ನು ಪ್ರೋತ್ಸಾಹಿಸುತ್ತದೆ.
- ಸಹಕಾರಾತ್ಮಕ ಪ್ರಯತ್ನ ಸಾಮಾಜೀಕೃತ ಪಠಣ (ವಾಚನ)ದ ಮುಖ್ಯ ಅಂಶವಾಗಿದೆ
- ಸಾಮಾಜೀಕೃತ ಪಠಣ (ವಾಚನ) ವಿಧಾನದಲ್ಲಿ ವಿದ್ಯಾರ್ಥಿಗಳು ಬೋಧನಾ–ಕಲಿಕಾ ಸನ್ನಿವೇಶದಲ್ಲಿ ಅಪೇಕ್ಷಿತ ಅನುಭವದ ಆರ್ಜನೆಯಲ್ಲಿ ತಮ್ಮ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದರಲ್ಲಿ ಸಾಕಷ್ಟು ಸಕ್ರಿಯರಾಗಿರುತ್ತಾರೆ.
- ಅನ್ವೇಷಣಾ ವಿಧಾನ ಅಥವಾ ಹ್ಯೂರಿಸ್ಟಿಕ್ ವಿಧಾನವನ್ನು ಲಂಡನ್ನಿನ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾದ ಎಚ್.ಇ. ಆರ್ಮ್‌ಸ್ಟ್ರಾಂಗ್ ಪರಿಚಯಿಸಿದರು.
- ಮೇಲ್ವಿಚಾರಿತ ಅಧ್ಯಯನದಲ್ಲಿ ಶಿಕ್ಷಕ ವಿದ್ಯಾರ್ಥಿಗಳ ತೊಂದರೆಗಳನ್ನು ಮತ್ತು ದುರ್ಬಲತೆಗಳನ್ನು ಪತ್ತೆ ಮಾಡಲು ಒಳ್ಳೆಯ ವೀಕ್ಷಕನಾಗಿರುತ್ತಾನೆ ಮತ್ತು ಮೇಲ್ವಿಚಾರಕನಾಗಿರುತ್ತಾನೆ.

- ಲಿಖಿತ ನಿಯೋಜಿತ ಕಾರ್ಯಗಳು ಜ್ಞಾನವನ್ನು ತಮ್ಮದಾಗಿಸಿಕೊಳ್ಳಲು (ಸ್ವಾಂಗೀಕರಣ ಮಾಡಿಕೊಳ್ಳಲು) ಜ್ಞಾನವನ್ನು ಸಂಘಟಿಸಿಕೊಳ್ಳಲು ಮತ್ತು ಪರೀಕ್ಷೆಗೆ ಚೆನ್ನಾಗಿ ಸಿದ್ಧಪಡಿಸಿಕೊಳ್ಳಲು ಸಹಾಯ ಮಾಡುತ್ತವೆ.
- ಅರ್ಥಶಾಸ್ತ್ರವನ್ನು ಬೋಧಿಸಲು ಸಂಗೀತವನ್ನು ಉಪಯೋಗಿಸಬಹುದು. ಭಾರತದಲ್ಲಿ ಕೆಲವು ಉತ್ಸಾಹಿ ಶಿಕ್ಷಕರು ಅರ್ಥಶಾಸ್ತ್ರವನ್ನು ಬೋಧಿಸಲು ಈ ವಿಧಾನವನ್ನು ಉಪಯೋಗಿಸಿದ್ದಾರೆ.
- ನಿಯೋಜಿತ ಕಾರ್ಯಗಳು ವಿದ್ಯಾರ್ಥಿಗಳನ್ನು ಸಕ್ರಿಯಗೊಳಿಸಲು, ತಮ್ಮ ಅಧ್ಯಯನಕ್ಕೆ ಅವಧಾನ ನೀಡಲು ಸಹಾಯ ಮಾಡುತ್ತವೆ.

### 3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಉತ್ತರಗಳಿಗೆ ಈ ಘಟಕದ ವಿಭಾಗ 3.5.3.1 ನ್ನು ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಉತ್ತರಗಳಿಗೆ ಈ ಘಟಕದ ಉಪ–ವಿಭಾಗ 3.5.3.2 ನ್ನು ನೋಡಿ.

### 3.5.6. ಘಟಕಾಂತ್ಯ ಅಭ್ಯಾಸಗಳು

1. ನಿಮ್ಮ ತರಗತಿಯಲ್ಲಿ ಅರ್ಥಶಾಸ್ತ್ರವನ್ನು ಬೋಧಿಸಲು ನೀವು ಯಾವ ವಿಧಾನಗಳನ್ನು ಉಪಯೋಗಿಸುವಿರಿ? ನೀವು ಅನುಸರಿಸುತ್ತಿದ್ದ ವಿಧಾನಗಳಿಗೂ ಈಗ ಕಲಿತ ವಿಧಾನಗಳಿಗೂ ನಡುವೆ ನೀವು ಕಾಣುವ ವ್ಯತ್ಯಾಸಗಳೇನು?
2. ಅರ್ಥಶಾಸ್ತ್ರ ಬೋಧನೆಯ ವಿವಿಧ ತಂತ್ರಗಳನ್ನು ಚರ್ಚಿಸಿ.

### 3.5.7. ಪರಾಮರ್ಶನ ಸೂಚಿ


1. Teaching of Social Studies, S.K Mangal &Uma Mangal, PHI Learning Private Limited, New Delhi, 2001.
2. Teaching of Social Studies, J C Aggarwal, Vikas Publishing House, New Delhi, 2008.
3. Modern Teaching of Civics/ Political Science, M.H. Syed, Anmol Publications, New Delhi, 2004.
4. Methods of Teaching Civics, J.P Kumar & D.B. Rao, Discovery Publishing House, New Delhi, 2004.
5. Teaching of Economics, Amita Yadav, Anmol Publications, New Delhi, 2004.
6. Teaching of History, S.K Kochhar, Sterling Publishers, New Delhi, 2003.
7. Teaching of History and Civics, Timmareddy, VidyanidhiPrakashana, Gadag, 2000.
8. https://pdfs.semanticscholar.org/5f41/a9dfbb1bcefadca9aa7014a4e4ac03384a9d.pdf

## ಬ್ಲಾಕ್ 3 : ಸಮಾಜ ವಿಜ್ಞಾನಗಳ ಪಠ್ಯಕ್ರಮ ಮತ್ತು ಬೋಧನೆ

### ಘಟಕ 6 : ರಾಜ್ಯಶಾಸ್ತ್ರ ಬೋಧನೆ: ಮಾರ್ಗೋಪಾಯಗಳು, ವಿಧಾನಗಳು ಮತ್ತು ತಂತ್ರಗಳು

**ಘಟಕದ ರಚನೆ**

3.6.1. ಕಲಿಕೆಯ ಉದ್ದೇಶಗಳು
3.6.2. ಪೀಠಿಕೆ
3.6.3. ಕಲಿಕೆಯ ಅಂಶಗಳು ಮತ್ತು ಕಲಿಕೆಯ ಚಟುವಟಿಕೆಗಳು
3.6.3.1. ರಾಜ್ಯಶಾಸ್ತ್ರ ಬೋಧನೆ – ವಿಧಾನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
3.6.3.2. ರಾಜ್ಯಶಾಸ್ತ್ರ ಬೋಧನೆಯ ತಂತ್ರಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
3.6.4. ಸಾರಾಂಶಿಸೋಣ
3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
3.6.6. ಘಟಕಾಂತ್ಯ ಅಭ್ಯಾಸಗಳು
3.6.7. ಪರಾಮರ್ಶನ ಸೂಚಿ

**3.6.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ರಾಜ್ಯಶಾಸ್ತ್ರದ ಬೋಧನಾ ವಿಧಾನಗಳನ್ನು ವಿವರಿಸುವರು;
- ರಾಜ್ಯಶಾಸ್ತ್ರದ ಬೋಧನೆಯಲ್ಲಿ ಒಳಗೊಂಡಿರುವ ತಂತ್ರಗಳನ್ನು ಮತ್ತು ಕಾರ್ಯನೀತಿಗಳನ್ನು ವರ್ಣಿಸುವರು;
- ರಾಜ್ಯಶಾಸ್ತ್ರವನ್ನು ಬೋಧಿಸುವ ವಿವಿಧ ವಿಧಾನಗಳ ಗುಣಗಳನ್ನು ಮತ್ತು ದೋಷಗಳನ್ನು ನಿರೂಪಿಸುವರು; ಮತ್ತು
- ರಾಜ್ಯಶಾಸ್ತ್ರದ ವಿವಿಧ ವಿಷಯಗಳನ್ನು ಬೋಧಿಸಲು ಸೂಕ್ತ ವಿಧಾನ/ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

**3.6.2. ಪೀಠಿಕೆ**

ಪ್ರಿಯ ವಿದ್ಯಾರ್ಥಿಗಳೇ,

ಹಿಂದಿನ ಘಟಕಗಳಲ್ಲಿ ವಿಷಯ ಸ್ವರೂಪದ ಆಧಾರದ ಮೇಲೆ ವಿವಿಧ ವಿಷಯಗಳನ್ನು ಬೋಧನೆ ಮಾಡುವ ವಿಧಾನಗಳನ್ನು ಮತ್ತು ಕಾರ್ಯತಂತ್ರಗಳನ್ನು ಅಧ್ಯಯನ ಮಾಡಿದ್ದೇವೆ. ಇದೇ ರೀತಿಯಲ್ಲಿ ಈ ಘಟಕದಲ್ಲಿ ನಾವು ರಾಜ್ಯಶಾಸ್ತ್ರವನ್ನು ಬೋಧನೆ ಮಾಡುವ ವಿಧಾನಗಳನ್ನು ಮತ್ತು ಕಾರ್ಯತಂತ್ರಗಳನ್ನು ಚರ್ಚಿಸಲಿದ್ದೇವೆ. ರಾಜ್ಯಶಾಸ್ತ್ರ ಬೋಧನೆಯಲ್ಲಿ ನಾವು ಅನುಸರಿಸಬಹುದಾದ ವಿಧಾನಗಳಾವುವು, ಅವುಗಳು ಇತರ ವಿಧಾನಗಳಿಗಿಂತೆ ಏಕೆ ಮತ್ತು ಹೇಗೆ ಭಿನ್ನವಾಗಿದೆ ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

**3.6.3. ಕಲಿಕೆಯ ಅಂಶಗಳು ಮತ್ತು ಕಲಿಕೆಯ ಚಟುವಟಿಕೆಗಳು**

**3.6.3.1 ರಾಜ್ಯಶಾಸ್ತ್ರ ಬೋಧನೆ – ವಿಧಾನಗಳು**

ಸೆಕೆಂಡರಿ(ಪ್ರೌಢ) ಶಿಕ್ಷಣ ಆಯೋಗದ ಪ್ರಕಾರ "ಅತ್ಯುತ್ತಮ ಪಠ್ಯಕ್ರಮ ಮತ್ತು ಅತ್ಯಂತ ಪರಿಪೂರ್ಣ ಪಠ್ಯವಸ್ತುವು (Syllabus) ಸರಿಯಾದ ಬೋಧನಾ ವಿಧಾನಗಳಿಂದ ಜೀವಂತಗೊಳ್ಳದಿದ್ದಲ್ಲಿ ಮತ್ತು ಸರಿಯಾದ ಶಿಕ್ಷಕರಿಂದ ಬೋಧಿಸದೇ ಇದ್ದಲ್ಲಿ ಮೃತ ಪ್ರಾಯವಾಗುತ್ತವೆ. ರಾಜ್ಯಶಾಸ್ತ್ರ ಬೋಧನೆಯ ಉದ್ದೇಶಗಳಿಗೆ

ಅನುರೂಪವಾಗಿ ವಿವಿಧ ಬೋಧನಾ ವಿಧಾನಗಳಿದ್ದು, ಶಿಕ್ಷಕರು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಅವುಗಳನ್ನು ಉಪಯೋಗಿಸಬೇಕಾಗುತ್ತದೆ. ಇಂಥ ಮುಖ್ಯವಾದ ವಿಧಾನಗಳಲ್ಲಿ ಕೆಲವನ್ನು ಈಗ ಚರ್ಚಿಸೋಣ.

**ಎ) ಚರ್ಚಾ ವಿಧಾನ**

ಚರ್ಚಾ ವಿಧಾನವನ್ನು ಬಹಳ ಹಿಂದಿನಿಂದಲೂ ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಉಪಯೋಗಿಸುತ್ತಾ ಬರಲಾಗಿದೆ. ಪ್ರಸಿದ್ಧವಾದ ಪ್ರಾಚೀನ ನಳಂದ ವಿಶ್ವವಿದ್ಯಾನಿಲಯದಲ್ಲಿ ಚರ್ಚಾ ವಿಧಾನವನ್ನು ಉಪಯೋಗಿಸುತ್ತಿದ್ದರು. ಗ್ರೀಕ್ ಪಂಡಿತರು ವಿರಾಮ ವೇಳೆಯಲ್ಲಿ ತಮ್ಮ ನಡೆದಾಟದ ಸಮಯದಲ್ಲಿ ವಿವಿಧ ಸಮಸ್ಯೆಗಳನ್ನು ಮತ್ತು ವಿವಾದಾಂಶಗಳನ್ನು ತಮ್ಮ ಶಿಷ್ಯರೊಂದಿಗೆ ಚರ್ಚಿಸುತ್ತಿದ್ದರು. ಅಧ್ಯಯನಕ್ಕೆ ತೆಗೆದುಕೊಂಡಿರುವ ಶೀರ್ಷಿಕೆ ಅಥವಾ ಸಮಸ್ಯೆಯಲ್ಲಿರುವ ಅಂತರ್ ಸಂಬಂಧಗಳ ಆಲೋಚನಾತ್ಮಕ ಪರಿಗಣನೆಯನ್ನೇ ಚರ್ಚೆ ಎಂದು ವ್ಯಾಖ್ಯಾನಿಸಲಾಗಿದೆ. ಚರ್ಚೆಯು ಸಮಸ್ಯೆಯ ಈ ಅಂತರ್‌ಸಂಬಂಧಗಳ ವಿಶ್ಲೇಷಣೆ, ತುಲನೆ, ಮೌಲ್ಯಮಾಪನ ಮತ್ತು ಅವುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಿಕೆಗೆ ಸಂಬಂಧಿಸಿದೆ. ಇದು ವಿದ್ಯಾರ್ಥಿಗಳನ್ನು ಅವರ ಯೋಚನಾ ಪ್ರಕ್ರಿಯೆಯನ್ನು ಸಮಸ್ಯೆಗಳ ಪರಿಹಾರದತ್ತ ನಿರ್ದೇಶಿಸಲು ಮತ್ತು ತಮ್ಮ ಅನುಭವಗಳನ್ನು ಕಲಿಕಾ ಸಾಮಗ್ರಿಗಳ ಹೆಚ್ಚಿನ ಸ್ಪಷ್ಟತೆಗೆ ಮತ್ತು ಅವುಗಳನ್ನು ದೃಢೀಕರಣಗೊಳಿಸಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ. ಮಾನಸಿಕ ಚಟುವಟಿಕೆಗಳನ್ನು ಪ್ರಚೋದಿಸಲು, ಪಟುತ್ವವನ್ನು ವಿಕಾಸಗೊಳಿಸಲು, ಅಭಿವ್ಯಕ್ತಿಯನ್ನು ಸುಲಲಿತಗೊಳಿಸಲು, ಯೋಚನೆಯಲ್ಲಿ ವಿಚಾರಗಳನ್ನು ಸ್ಪಷ್ಟಗೊಳಿಸಲು ಮತ್ತು ತಮ್ಮ ವಿಚಾರಗಳನ್ನು ಮತ್ತು ತಥ್ಯಾಂಶಗಳನ್ನು ಪ್ರಸ್ತುತಗೊಳಿಸುವ ತರಬೇತಿಯಲ್ಲಿ ಬಹಳ ಮುಖ್ಯವಾಗುತ್ತದೆ. ಪ್ರತಿಫಲಿತ (ವಿವೇಚನಾಯುಕ್ತ) ಚಿಂತನೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ವಿಚಾರಗಳ ಮತ್ತು ಅಭಿಪ್ರಾಯಗಳ ವಿನಿಮಯ ಉತ್ತಮ ಅವಕಾಶ ನೀಡುತ್ತದೆ.

ಬೇರೆ ಯಾವುದೇ ಗುಂಪು ಕಲಿಕೆಯಲ್ಲಿ ಕಂಡುಬರುವಂತೆ ಚರ್ಚಾ ವಿಧಾನದಲ್ಲಿ ಶಿಕ್ಷಕ ಸಾಮಾನ್ಯವಾಗಿ ವಿಚಾರಗಳನ್ನು ಒದಗಿಸಲು, ಅನುಭವಗಳನ್ನು ಉಂಟುಮಾಡಲು, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಮಾಹಿತಿ ನೀಡಲು ವಿದ್ಯಾರ್ಥಿಗಳನ್ನೇ ಅವಲಂಬಿಸುತ್ತಾನೆ. ವಿದ್ಯಾರ್ಥಿಗಳಿಗೆ ವಿಷಯ ವಸ್ತುವನ್ನು ವಿವರಿಸುವುದಕ್ಕಿಂತ ವಿದ್ಯಾರ್ಥಿಗಳಿಗೆ ಗೊತ್ತಿರುವುದನ್ನು ಹೊರ ಸೆಳೆಯುವುದು ಶಿಕ್ಷಕರ ಗುರಿಯಾಗಿರುತ್ತದೆ. ಚರ್ಚೆ ತೀವ್ರವಾಗಿದ್ದಷ್ಟು ಮತ್ತು ಸಹಭಾಗಿತ್ವ ಹೆಚ್ಚಾಗಿದ್ದಷ್ಟು ಕಲಿಕೆ ಹೆಚ್ಚು ಪ್ರಭಾವಯುತವಾಗಿರುತ್ತದೆ. ಗುಂಪಿನ ಎಲ್ಲ ಸದಸ್ಯರು ಚರ್ಚೆಯನ್ನು ಅನುಸರಿಸಬೇಕು. ಶಿಕ್ಷಕ (Instructor) ಪ್ರತಿಯೊಬ್ಬರನ್ನೂ ನಿಷ್ಪಕ್ಷಪಾತದಿಂದ ನಡೆಸಿಕೊಳ್ಳಬೇಕು. ಪ್ರಶ್ನೆಗಳನ್ನು ಪ್ರೋತ್ಸಾಹಿಸಬೇಕು, ಸಹನೆಯಿಂದ ನಡೆದುಕೊಳ್ಳಬೇಕಲ್ಲದೆ ಸಮಯೋಚಿತ ಜಾಣ್ಮೆಯನ್ನು ಹೊಂದಿರಬೇಕು. ಮತ್ತು ಎಲ್ಲ ಅನುಕ್ರಿಯೆಗಳನ್ನು ಅಥವಾ ಪ್ರತಿಕ್ರಿಯೆಗಳನ್ನು ವಿಮರ್ಶೆ ಮಾಡಬೇಕು. ಮನನೋಯಿಸುವ ವ್ಯಂಗ್ಯ ನುಡಿ ಮತ್ತು ನಗೆಚಾಟಿಕೆಯನ್ನು ಎಂದಿಗೂ ಉಪಯೋಗಿಸಬಾರದು. ಏಕೆಂದರೆ, ಶಿಕ್ಷಕನ ಅಂತಹ ವರ್ತನೆ ಸಹಭಾಗಿಗಳ ಅಭಿವ್ಯಕ್ತಿಯಲ್ಲಿ ಸಹಜ ಸ್ಫೂರ್ತಿಯನ್ನು ತಡೆಹಿಡಿಯುತ್ತದೆ. ಒಂದು ಚರ್ಚೆಯಲ್ಲಿ ವಿದ್ಯಾರ್ಥಿಗಳ ನಡುವೆ ಚರ್ಚೆಯನ್ನು ಪ್ರೋತ್ಸಾಹಿಸಲು ಶಿಕ್ಷಕ ಸುಗಮಕರ್ತನಾಗಿ ಕಾರ್ಯ ನಿರ್ವಹಿಸಬೇಕು.

**ಚರ್ಚೆಯ ಆವಶ್ಯಕ ಭಾಗಗಳು**

- ನಾಯಕ/ಮುಖಂಡ – ಅಧ್ಯಾಪಕ
- ಗುಂಪು – ವಿದ್ಯಾರ್ಥಿಗಳು
- ಚರ್ಚೆಯ ಶೀರ್ಷಿಕೆ ಅಥವಾ ಸಮಸ್ಯೆ
- ಚರ್ಚೆಯ ವಿಷಯವಸ್ತು – ಜ್ಞಾನಾಂಶಗಳು
- ಮೌಲ್ಯಮಾಪನ – ವಿಚಾರಗಳಲ್ಲಿ, ಮನೋಭಾವಗಳಲ್ಲಿ, ಅಭಿರುಚಿಗಳಲ್ಲಿ ಬದಲಾವಣೆ ಇತ್ಯಾದಿ

**ಚರ್ಚೆಗೆ ಸಿದ್ಧತೆ:** ಚರ್ಚೆಗೆ ಸಿದ್ಧವಾಗುವುದು ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿನ ಸಕ್ರಿಯ ಸಹಭಾಗಿತ್ವಕ್ಕೆ ಅತ್ಯಂತ ಆವಶ್ಯಕವಾಗಿದೆ.

ಈ ಕೆಳಗಿನ ಮಾರ್ಗದರ್ಶಿ ಸೂಚಿಗಳು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಚರ್ಚೆಯಲ್ಲಿ ಪ್ರಭಾವಯುತವಾಗಿರಲು ಸಹಾಯ ಮಾಡುತ್ತವೆ.

**ಹಂತ 1: ನಿಮ್ಮ ಚರ್ಚೆಯ ವಿಷಯವನ್ನು ತಿಳಿದುಕೊಳ್ಳಿ**

ಒಂದು ಚರ್ಚೆ ಅನೇಕ ವೇಳೆ ಪಠ್ಯದ ಒಂದು ಶೀರ್ಷಿಕೆಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಅದು ಒಂದು ವಿಚಾರದ ವರ್ಣನೆಯಾಗಿರಬಹುದು, ಕಥೆಯಾಗಿರಬಹುದು, ಒಂದು ವಿಶ್ಲೇಷಣೆಯಾಗಿರಬಹುದು ಅಥವಾ ಅನ್ವಯಿಕತೆಯಾಗಿರಬಹುದು, ಕಥೆಯಲ್ಲದ ವಿಚಾರಗಳ ಪುಸ್ತಕವಾಗಿರಬಹುದು, ಪ್ರತಿಕ್ರಿಯಾ ಲೇಖನವಾಗಿರಬಹುದು, ಕವನ/ಕವಿತೆಯಾಗಿರಬಹುದು ಅಥವಾ  ಬೇರೆ ರೀತಿಯ ಪಠ್ಯವಸ್ತುವಾಗಿರಬಹುದು. ಆ ಸಾಮಗ್ರಿಯನ್ನು ನೀವು ಸಂಪೂರ್ಣವಾಗಿ, ಆಮೂಲಾಗ್ರವಾಗಿ ಮತ್ತು ಎಚ್ಚರಿಕೆಯಿಂದ ಓದಿಕೊಳ್ಳುವುದು ಮೊದಲ ಹೆಜ್ಜೆಯಾಗುತ್ತದೆ. ನೀವು ವಿಷಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಅದನ್ನು ಒಂದಕ್ಕಿಂತ ಹೆಚ್ಚು ಸಲ ಓದಿಕೊಳ್ಳುವುದು ಅಗತ್ಯವಾಗುತ್ತದೆ. ವಿಷಯವನ್ನು ಸ್ಥೂಲವಾಗಿ ತಿಳಿದುಕೊಳ್ಳಲು ಮೊದಲು ಒಂದು ಸಲ ಓದಿಕೊಳ್ಳಿ. ನಂತರ ವಿಷಯವನ್ನು ಆಳವಾಗಿ ಅರ್ಥ ಮಾಡಿಕೊಳ್ಳಲು ಮತ್ತು ಸ್ಪಷ್ಟವಾಗಿ ಗೋಚರವಾಗಬಹುದಾದ ಯಾವುದಾದರೂ ಘಟನೆ ಅಥವಾ ವಿಚಾರವಿದ್ದರೆ ಅದಕ್ಕೆ ವಿಶೇಷ ಗಮನ ನೀಡಲು ಸಾಮಗ್ರಿಯನ್ನು ಎರಡನೇ ಸಲ ಓದಿಕೊಳ್ಳಿ. ಅಂಥ ವಿಚಾರಗಳೇನಾದರೂ ನಿಮ್ಮ ಗಮನಕ್ಕೆ ಬಂದರೆ ಅವುಗಳನ್ನು ಗುರುತು ಮಾಡಿಕೊಳ್ಳಿ.

**ಹಂತ 2: ಆಸಕ್ತಿಪೂರ್ಣ ಭಾಗಗಳನ್ನು ಗುರ್ತು ಮಾಡಿಕೊಳ್ಳಿ**

ಗುರುತು ಮಾಡಿಟ್ಟುಕೊಳ್ಳುವುದೆಂದರೆ (ಬುಕ್ ಮಾರ್ಕಿಂಗ್) ಸಾಮಗ್ರಿಯ ಪುಟಗಳಲ್ಲಿ ಗುರುತಿಸಲು ಚೀಟಿಗಳನ್ನು ಇಡುವುದು, ವಾಕ್ಯಗಳನ್ನು ಬಣ್ಣದ ಪೆನ್ಸಿಲ್‌ನಿಂದ ಗುರುತು ಮಾಡುವುದು ಅಥವಾ ಟಿಪ್ಪಣಿ ಅಂಟಿಸುವುದು. ಇವು ನಿಮಗೆ ಚರ್ಚೆಯಲ್ಲಿ ಬೇಕಾದ ಅಂಶಗಳನ್ನು ಸುಲಭವಾಗಿ ಉಪಯೋಗಿಸಿಕೊಳ್ಳಲು ಸಹಾಯ ಮಾಡುತ್ತವೆ. ಇದು ನಿಮ್ಮ ವಾದವನ್ನು ಅಥವಾ ಟಿಪ್ಪಣಿಗಳನ್ನು ಬೆಂಬಲಿಸಲು ಖಚಿತಪಡಿಸಿಕೊಳ್ಳುವುದು ಚರ್ಚೆಯ ಸಿದ್ಧತೆಯ ಒಂದು ಭಾಗವಾಗುತ್ತದೆ.

ಚರ್ಚೆಯಲ್ಲಿ ನಿಮ್ಮ ಟೀಕೆಗಳನ್ನು ಬಲಗೊಳಿಸಲು ಸಹಾಯಕವಾಗುವ ಸಾಕ್ಷ್ಯಾಧಾರವನ್ನು ನೀಡಲು ಅಥವಾ ನಿರ್ದಿಷ್ಟ ಪದಗಳನ್ನು ಅಥವಾ ವಿಚಾರಗಳನ್ನು ಪಠ್ಯದಿಂದ ನೇರವಾಗಿ ಪಡೆದುಕೊಳ್ಳಲು ಇದು ಸಹಾಯ ಮಾಡುತ್ತದೆ. ಉದಾಹರಣೆಗೆ, ಒಬ್ಬ ರಾಜಕೀಯ ನಾಯಕನ ವ್ಯಕ್ತಿತ್ವದ ಬಗ್ಗೆ ನಿಮ್ಮ ಚಿಂತನೆಯನ್ನು ನೀವು ವಿವರಿಸಬಹುದು. ಇದನ್ನೂ ಸಂಬಂಧಪಟ್ಟ ಗ್ರಂಥದ ನಿರ್ದಿಷ್ಟ ಪುಟವನ್ನು ತೆಗೆದು ಅಥವಾ ನಿಮ್ಮ ವಾದವನ್ನು ಪ್ರತಿಪಾದಿಸಲು ಆ ನಾಯಕ/ನಾಯಕಿ ಹೇಳಿದ್ದೇನು ಅಥವಾ ಮಾಡಿದ್ದೇನು ಎಂದು ತಿಳಿಸಬಹುದು. ಚರ್ಚೆಯ ಪಠ್ಯದ ಬಗ್ಗೆ ಯಾರಾದರೂ ಸಹಭಾಗಿ ನಿಮಗೆ ಒಪ್ಪಿಗೆಯಾಗದ ಒಂದು ಅಂಶವನ್ನು ಹೇಳಿದರೆ ಸಂಬಂಧಪಟ್ಟ ಲೇಖಕನ ಶಬ್ದಗಳನ್ನೇ ಉಪಯೋಗಿಸಿಕೊಂಡು ನಿಮ್ಮ ಅನಿಸಿಕೆಯನ್ನು ಸಮರ್ಥಿಸಿಕೊಳ್ಳಬಹುದು. ನೀವು ಬೇರೆಯವರ ವಿಚಾರಗಳನ್ನು ಮತ್ತು ಅಭಿಪ್ರಾಯಗಳನ್ನು ಯಾವಾಗಲೂ ಗೌರವಿಸಬೇಕು. ಆದರೆ, ಗೌರವಯುತವಾಗಿಯೇ ಒಪ್ಪಿಕೊಳ್ಳದಿರುವುದು ರೋಚಕವಾಗಿಯೇ ಇರುತ್ತದೆ.

**ಹಂತ 3:  ನಿಮ್ಮ ಯೋಚನೆಗಳನ್ನು ವ್ಯವಸ್ಥಿತಗೊಳಿಸಿಕೊಳ್ಳಿ**

ಚರ್ಚೆಯ ಶೀರ್ಷಿಕೆಯ ಬಗ್ಗೆ ಅಥವಾ ಪಠ್ಯದ ವಸ್ತುವಿನ ಬಗ್ಗೆ ನಿಮ್ಮ ಚಿಂತನೆಗಳನ್ನು ವ್ಯವಸ್ಥಿತಗೊಳಿಸಿಕೊಳ್ಳುವುದು ಮೂರನೇ ಹೆಜ್ಜೆಯಾಗಿದೆ.. ಕ್ರೀಡಾಪಟುಗಳು ಕ್ರೀಡೆಗೆ ಮುಂಚೆ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳುವಂತೆಯೇ (ವಾರ್ಮಿಂಗ್ ಅಪ್), ಚರ್ಚೆಯ ಸಹಭಾಗಿಗಳು ಮಾನಸಿಕವಾಗಿ ತಮ್ಮನ್ನು ತಾವು ಚರ್ಚೆಗೆ ಸಿದ್ಧಗೊಳಿಸಿಕೊಳ್ಳಬೇಕು. ಇದು ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅಥವಾ ಚರ್ಚೆಯ ನಾಯಕರಾಗಲು ನಿಮಗೆ ಸಹಾಯ ಮಾಡುತ್ತದೆ. ಈ ರೀತಿಯ ವ್ಯವಸ್ಥೆಯನ್ನು ನೀವು ಈ ಕೆಳಕಂಡಂತೆ ಮಾಡಿಕೊಳ್ಳಬಹುದು.

- ಚರ್ಚೆಯ ವಸ್ತುವಿನ ಬಗ್ಗೆ ನಿಮಗೆ ಇರುವ ಪ್ರಶ್ನೆಗಳನ್ನು ಗುರುತು ಮಾಡಿಕೊಳ್ಳಿ. ಪ್ರಶ್ನೆ ಕೇಳುವುದು, ಚರ್ಚೆಯನ್ನು ಮುಂದುವರೆಸಲು ಅತ್ಯುತ್ತಮ ಮಾರ್ಗವಾಗಿದೆ. 'ನನ್ನ ಅಭಿಪ್ರಾಯದಂತೆ' ಎಂದು ಪ್ರಶ್ನೆಯನ್ನು ಆರಂಭಿಸಬಹುದು.
- "ಇದು ನನ್ನನ್ನು ಯೋಚಿಸುವಂತೆ ಮಾಡುತ್ತಿದೆ" ಎಂದೂ ಪ್ರಶ್ನೆಯನ್ನು ಬರೆದುಕೊಳ್ಳಬಹುದು.
- ಪಠ್ಯದ ಯಾವುದಾದರೂ ಭಾಗ/ಅಂಶ ನೀವು ಮತ್ತು ನಿಮ್ಮ ಸಹೋದ್ಯೋಗಿಗಳು ಅಥವಾ ಸಹಪಾಠಿ ಈ ಮೊದಲೇ ಕೇಳಿದ್ದನ್ನು ನಿಮಗೆ ನೆನಪಿಸುತ್ತದೆಯೇ?
- ನೀವು ಪಠ್ಯದ ಒಂದು ವಿಷಯದೊಂದಿಗೆ ಮತ್ತೊಂದು ವಿಷಯವನ್ನ ಸಂಬಂಧಿಸಿ ನೋಡಬಹುದು. ಆಗ ನೀವು ಹೀಗೆ ಬರೆದುಕೊಳ್ಳಬಹುದು– "ಇದು ನನಗೆ ____________ವಿಷಯವನ್ನು ನೆನಪಿಗೆ ತರುತ್ತದೆ".
- ಚರ್ಚೆಯ ಯಾವುದಾದರೂ ಅಂಶ ಅಥವಾ ಪ್ರಶ್ನೆ ನಿಮ್ಮಲ್ಲಿ ಬಲವಾದ ಸಂವೇಗಾತ್ಮಕ ಪ್ರತಿಕ್ರಿಯೆಗಳನ್ನು ಉಂಟು ಮಾಡಬಹುದು. ಅವುಗಳನ್ನು ಗುರುತಿಸಿಕೊಳ್ಳಬಹುದು, ಅದಕ್ಕೆ ಕಾರಣಗಳನ್ನು ಗುರುತಿಸಿಕೊಳ್ಳಬಹುದು.

ಈ ರೀತಿ ವ್ಯವಸ್ಥೆಗೊಳ್ಳುವುದಕ್ಕೆ ಹೆಚ್ಚಿನ ಸಮಯವೇನೂ ಬೇಕಾಗುವುದಿಲ್ಲ. ಇದರ ಉದ್ದೇಶ ನಿಮ್ಮ ಮನಸ್ಸನ್ನು ಕಾರ್ಯಪ್ರವೃತ್ತಗೊಳ್ಳುವಂತೆ ಮಾಡುವುದಾಗಿದೆ. ಇದರಿಂದ ಚರ್ಚೆಗೆ ಹೆಚ್ಚಿನ ಕೊಡುಗೆ ನೀಡಲು ಸಾಧ್ಯವಾಗುತ್ತದೆ.

**ಚರ್ಚೆಯ ಕ್ರಮ**

ಶಿಕ್ಷಕ ಒಂದು ಮುಖ್ಯ ಪ್ರಶ್ನೆಯನ್ನು ಕೇಳಿ ಚರ್ಚೆಯನ್ನು ಆರಂಭಿಸಬಹುದು. ಪ್ರಶ್ನೆಯನ್ನು ಕೇಳಿದ ನಂತರ, ಶಿಕ್ಷಕ ಮೌನವಾಗಿರಬೇಕು, ವಿದ್ಯಾರ್ಥಿಗಳು ಪ್ರತಿಕ್ರಿಯಿಸಲು ಈಗ ಅವಕಾಶ ಕೊಡಬೇಕು. ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುವುದಕ್ಕೆ ಮುಂಚೆ ಶಿಕ್ಷಕ/ಶಿಕ್ಷಕಿ ಉತ್ತರವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ವಿದ್ಯಾರ್ಥಿಗಳೂ ಪ್ರಶ್ನೆಗೆ ಉತ್ತರಿಸುವ ಮುಂಚೆ ಉತ್ತರದ ಬಗ್ಗೆ ಚೆನ್ನಾಗಿ ಯೋಚನೆ ಮಾಡಬೇಕು. ಕೆಲವು ವೇಳೆ ಶಿಕ್ಷಕನಿಂದ ಮೌನವಾಗಿರಲು ಸಾಧ್ಯವಾಗದಿರಬಹುದು. ಅದೇ ವೇಳೆ ವಿದ್ಯಾರ್ಥಿಗಳು ಉತ್ತರವನ್ನು ಹುಡುಕುವುದರಲ್ಲಿ ಮಗ್ನರಾಗಿರಬಹುದು. ಏಕೆಂದರೆ, ಉತ್ತರಕ್ಕೆ ಬೇಕಾದ ಮಾಹಿತಿ ಇತ್ಯಾದಿಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಉತ್ತರವನ್ನು ಹೇಗೆ ನೀಡಬೇಕು ಎಂದು ನಿರ್ಧರಿಸಬೇಕಾಗುತ್ತದೆ ಅಥವಾ ಸೂಕ್ತವಾದ ಉದಾಹರಣೆ/ದೃಷ್ಟಾಂತವನ್ನು ಕುರಿತು ಯೋಚಿಸಬೇಕಾಗುತ್ತದೆ.

ಪ್ರಶ್ನೆ ಹೆಚ್ಚು ಕ್ಲಿಷ್ಟವಾಗಿದ್ದಷ್ಟು ಅದಕ್ಕೆ ಉತ್ತರ ನೀಡಲು ವಿದ್ಯಾರ್ಥಿಗೆ ಹೆಚ್ಚು ಸಮಯ ಬೇಕಾಗುತ್ತದೆ. ಕೆಲವು ವೇಳೆ ವಿದ್ಯಾರ್ಥಿಗಳು ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ವಿದ್ಯಾರ್ಥಿಗಳಲ್ಲಿ ತಬ್ಬಿಬ್ಬಾದ ಮುಖಚರ್ಯೆಯನ್ನು ನೋಡಿದಾಗ, ಪ್ರಶ್ನೆಗಳನ್ನು ಸ್ವಲ್ಪ ಬದಲಾದ ರೀತಿಯಲ್ಲಿ ಪದಗಳನ್ನು ಬದಲಿಸಿ ಪ್ರಶ್ನೆಯನ್ನು ಕೇಳಬೇಕು. ಪ್ರಶ್ನೆಗಳ ಸ್ವರೂಪವನ್ನು ಪಾಠದ ಉದ್ದೇಶ ಮತ್ತು ಪಾಠದ ಅಪೇಕ್ಷಿತ ಉದ್ದೇಶ ನಿರ್ಧರಿಸಬೇಕು. ಒಂದು ಸಾರಿ ಚರ್ಚೆ ಪ್ರಾರಂಭಗೊಂಡ ನಂತರ ವಿದ್ಯಾರ್ಥಿಗಳಿಂದ ಚರ್ಚೆಯ ಸಮಯದಲ್ಲಿ ಶಿಕ್ಷಕ ಹೊರ ಹೊಮ್ಮುವ ವಿಚಾರಗಳನ್ನು, ಅನುಭವಗಳನ್ನು ಮತ್ತು ಉದಾಹರಣೆಗಳನ್ನು ಗಮನವಿಟ್ಟು ಕೇಳಿಸಿಕೊಳ್ಳಬೇಕು.

ಚರ್ಚೆಗೆ ಸಿದ್ಧತೆ ಮಾಡುವಾಗ ಶಿಕ್ಷಕ ವಿದ್ಯಾರ್ಥಿಗಳ ಕೆಲವು ನಿರೀಕ್ಷಿತ ಪ್ರತಿಕ್ರಿಯೆಗಳನ್ನು ಮೊದಲೇ ನಿರೀಕ್ಷಿಸಿಕೊಂಡು ಅವುಗಳನ್ನು ಪಟ್ಟಿ ಮಾಡಿಕೊಳ್ಳಬೇಕು. ಇವು ವಿದ್ಯಾರ್ಥಿಗಳು ಚರ್ಚೆಯ ಮೇಲೆ ಬಿಗಿಯಾದ ಹಿಡಿತವನ್ನು ಹೊಂದಿರುವುದನ್ನು ಸೂಚಿಸುತ್ತದೆ. ಚರ್ಚೆ ಮುಂದುವರೆದಂತೆ ಶಿಕ್ಷಕನಿಗೆ ಚರ್ಚೆಯ ದಿಕ್ಕಿಗೆ ಮಾರ್ಗದರ್ಶನ ಆವಶ್ಯಕವಾಗಿದೆ ಎಂದೂ ವಿಷಯವನ್ನು ಇನ್ನು ಸ್ವಲ್ಪ ಆಳವಾಗಿ ಅಂದರೆ ಗಹನವಾಗಿ ಅನ್ವೇಷಿಸಲೇಬೇಕೆಂದು ಅಥವಾ ವಿಷಯವನ್ನು ಇನ್ನೂ ಹೆಚ್ಚು ವಿವರವಾಗಿ ಚರ್ಚಿಸಬೇಕೆಂದು ಹೇಳುವ ಅಗತ್ಯ ಕಂಡುಬರುತ್ತದೆ.

**'ಹೇಗೆ'** ಮತ್ತು **"ಏಕೆ"** ಎಂಬ ಪ್ರಶ್ನೆಗಳ ಮೂಲಕ ಅನುಸರಣ ಅಥವಾ ಮುಂಬರಿಕೆ ಕಾರ್ಯವನ್ನು ಮಾಡಿ ವಿದ್ಯಾರ್ಥಿಗಳು ಚರ್ಚೆಯ ವಿಷಯವನ್ನು ಅರ್ಥ ಮಾಡಿಕೊಳ್ಳುವತ್ತ ಚರ್ಚೆಯನ್ನು ತಿರುಗಿಸಲು ಮಾರ್ಗದರ್ಶನ ಮಾಡುವುದು ಶಿಕ್ಷಕನಿಗೆ ಸಾಧ್ಯವಾಗುತ್ತದೆ. ಚರ್ಚೆಯ ಒಂದು ನಿರ್ದಿಷ್ಟ ಭಾಗವನ್ನು ಕುರಿತು ವಿದ್ಯಾರ್ಥಿಗಳು ಸಂಬಂಧಪಟ್ಟ ವಿಚಾರಗಳನ್ನು ಚರ್ಚಿಸಿದರು ಎಂದು ಗೊತ್ತಾದಾಗ ಶಿಕ್ಷಕ ವಿದ್ಯಾರ್ಥಿಗಳು ಏನನ್ನು ಸಾಧಿಸಿದರು ಎನ್ನುವ ಚರ್ಚೆಯ ಭಾಗವನ್ನು ಸಾರಾಂಶೀಕರಿಸಬೇಕು. ಒಂದು ಒಳ್ಳೆಯ ಚರ್ಚಾ ಪಾಠದಲ್ಲಿ ಮಧ್ಯಮಾವಧಿ ಸಾರಾಂಶೀಕರಣ ಶಿಕ್ಷಕನಿಗೆ ಲಭ್ಯವಿರುವ ಸಾಧನಗಳಲ್ಲಿ ಒಂದಾಗಿದೆ.

ಚರ್ಚೆಯಲ್ಲಿನ ವಿಚಾರಗಳನ್ನು ಒಟ್ಟಾಗಿ ಸೇರಿಸಲು ಮತ್ತು ಚರ್ಚೆಯಲ್ಲಿ ಸ್ಥಿತ್ಯಂತರವನ್ನು ತರಲು, ಶಿಕ್ಷಕ ಪಾಠದ ಬೋಧನೋದ್ದೇಶದ ಚರ್ಚೆ ಮುಗಿಯಿತು ಎಂದು ಗೊತ್ತಾದ ತಕ್ಷಣ ಮಧ್ಯಂತರ ಸಾರಾಂಶವನ್ನು ಮಾಡಬಹುದಾಗಿದೆ. ಈ ಸಾರಾಂಶ ಚರ್ಚಿಸಿದ ವಿಷಯದ ಭಾಗಕ್ಕೆ ಸಂಬಂಧಿಸಿದ ವಿಚಾರಗಳು ಹೇಗೆ ಸಂಬಂಧಿಸಿವೆ ಮತ್ತು ಹೇಗೆ ಬೆಂಬಲ ನೀಡುತ್ತವೆ ಎಂಬುದನ್ನು ತೋರಿಸುತ್ತದೆ. ಚರ್ಚೆಯ ಕೊನೆಯ ಕಲಿಕಾ ಫಲಿತವನ್ನು (ಉದ್ದೇಶವನ್ನು) ಚರ್ಚಿಸಿದ ನಂತರ ಚರ್ಚೆಯ ತೀರ್ಮಾನದ ಮೊದಲನೆಯ ಭಾಗವನ್ನು ಪ್ರಸ್ತುತಪಡಿಸಬೇಕೆಂದು ಶಿಕ್ಷಕನಿಗೆ ಅಗತ್ಯವೆನಿಸಿದರೆ ಮಧ್ಯಂತರ ಸಾರಾಂಶವನ್ನು ಬಿಟ್ಟುಬಿಡಬಹುದು. ಒಂದು ನಿರ್ದಿಷ್ಟ ಕಲಿಕಾ ಫಲಿತಕ್ಕೆ (ಉದ್ದೇಶಕ್ಕೆ) ಸಂಬಂಧಿಸಿದಂತೆ ಮಧ್ಯಮಾವಧಿ ಸಾರಾಂಶವು ಕಲಿಕೆಯನ್ನು ಪುನರ್ಬಲನಗೊಳಿಸುತ್ತದೆ. ಒಂದು ಸಾರಾಂಶೀಕರಿಸುವ ಮತ್ತು ಸ್ಥಿತ್ಯಂತರಗೊಳಿಸುವ ಸಾಧನದ ಜೊತೆಗೆ ಮಧ್ಯಂತರ ಸಾರಾಂಶೀಕರಣವನ್ನು, ಚರ್ಚಾ ಸಮೂಹವನ್ನು ಚರ್ಚೆಯ ವಿಷಯದ ಕಡೆಗೆ ತಿರುಗಿಸಿ ಇಡಲು ಮತ್ತು /ಅಥವಾ ಚರ್ಚೆಯನ್ನು ಮತ್ತೊಬ್ಬ ಸದಸ್ಯನ ಕಡೆಗೆ ತಿರುಗಿಸಲೂ ಸಹ ಉಪಯೋಗಿಸಬಹುದು.

**ಚರ್ಚಾ ವಿಧಾನದ ಅನುಕೂಲಗಳು**

- **ಬೋಧನೆಗೆ ಬದಲಾಗಿ ಕಲಿಕೆಗೆ ಒತ್ತು ನೀಡಲಾಗುತ್ತದೆ:** ಚರ್ಚಾ ವಿಧಾನ ಬೋಧಕನಿಂದ ಕೇವಲ ಮಾತನಾಡುವಿಕೆಗೆ ಮತ್ತು ಉಪನ್ಯಾಸ ಮಾಡುವುದಕ್ಕೆ ಬದಲಾಗಿ ಕಲಿಕೆಗೆ ಒತ್ತು ನೀಡುತ್ತದೆ.
- **ಪ್ರತಿಯೊಬ್ಬರೂ ಭಾಗವಹಿಸುತ್ತಾರೆ:** ಈ ವಿಧಾನವನ್ನು ಗುಂಪಿನ ಪ್ರತಿಯೊಬ್ಬನೂ/ಳೂ ಭಾಗವಹಿಸುತ್ತಾನೆ/ಳೆ. ಆದ್ದರಿಂದ, ಪ್ರತಿಯೊಬ್ಬರೂ ಆಲೋಚಿಸುತ್ತಾರೆ ಮತ್ತು ಅಭಿವ್ಯಕ್ತಿಗೊಳಿಸುತ್ತಾರೆ. ಇದು ಕಲಿಕೆಯ ಖಚಿತ ಮಾರ್ಗವಾಗಿದೆ.
- **ಚಿಂತನೆಯ ಪ್ರಜಾಸತ್ತಾತ್ಮಕ ರೀತಿ ವಿಕಾಸಗೊಳ್ಳುತ್ತದೆ:** ಪ್ರತಿಯೊಬರೂ ಚರ್ಚೆಯಲ್ಲಿ ಸಹಕರಿಸುತ್ತಾರೆ ಮತ್ತು ಪ್ರತಿಯೊಬ್ಬರ ವಿಚಾರಗಳನ್ನೂ ಅಭಿಪ್ರಾಯಗಳನ್ನೂ ಪರಸ್ಪರ ಗೌರವಿಸಲಾಗುತ್ತದೆ. ಆದ್ದರಿಂದ, ತೀರ್ಮಾನಕ್ಕೆ ಬರುವ ಪ್ರಕ್ರಿಯೆಯಲ್ಲಿ ಪ್ರಜಾಸತ್ತಾತ್ಮಕ ಮನೋಭಾವದ ವಿಕಾಸ ಉಂಟಾಗುತ್ತದೆ.
- **ಪ್ರತಿಫಲಿತ (ವಿವೇಚನಾ ಪೂರಿತ) ಅಭಿವ್ಯಕ್ತಿಯಲ್ಲಿ ತರಬೇತಿ ದೊರೆಯುತ್ತದೆ:** ಇದು ವಿದ್ಯಾರ್ಥಿಗಳಲ್ಲಿ ಸ್ವತಂತ್ರವಾಗಿ ಆಲೋಚಿಸುವ ಮತ್ತು ಕೆಲಸ ಮಾಡುವ ಸಾಮರ್ಥ್ಯವನ್ನು ವಿಕಾಸಗೊಳಿಸುತ್ತದೆ. ಅರ್ಥಶಾಸ್ತ್ರ ಅನೇಕ ಸಮಸ್ಯೆಗಳನ್ನು ಒಳಗೊಂಡಿರುವುದರಿಂದ ಚರ್ಚಾ ವಿಧಾನ ಅರ್ಥಶಾಸ್ತ್ರವನ್ನು ಬೋಧಿಸಲು ಹೆಚ್ಚು ಸೂಕ್ತವಾಗಿದೆ. ವಿದ್ಯಾರ್ಥಿಗಳ ಸೃಜನಶೀಲತೆಯನ್ನೂ ಈ ವಿಧಾನ ಪ್ರಚೋದಿಸುತ್ತದೆ ಮತ್ತು ಅಧ್ಯಯನದಲ್ಲಿ ಮುಂದುವರೆದು ಪ್ರಯತ್ನಪಟ್ಟು ಕಲಿಯಲು ಪ್ರೇರೇಪಿಸುತ್ತದೆ.

**ಚರ್ಚಾ ವಿಧಾನದ ಮಿತಿಗಳು**

- ಎಲ್ಲಾ ವಿಧದ ಶೀರ್ಷಿಕೆಗಳನ್ನು/ ವಿಷಯಗಳನ್ನು ಈ ವಿಧಾನದಿಂದ ಬೋಧಿಸಲು ಸಾಧ್ಯವಿಲ್ಲ
- ಚಿಕ್ಕ ವಯಸಿನ ಮಕ್ಕಳಿಗೆ ಬೋಧಿಸಲು ಈ ವಿಧಾನ ಸೂಕ್ತವಾದುದಲ್ಲ
- ಕೆಲವು ವೇಳೆ ಕೆಲವು ವಿದ್ಯಾರ್ಥಿಗಳು ಚರ್ಚೆಯ ನಿಯಮಗಳನ್ನು ಅನುಸರಿಸದೇ ಇರಬಹುದು
- ಕೆಲವು ವಿದ್ಯಾರ್ಥಿಗಳು ಚರ್ಚೆಯಲ್ಲಿ ಪ್ರಬಲರಾಗಿ ವರ್ತಿಸಿ ಉಳಿದವರು ಚರ್ಚೆಯಲ್ಲಿ ಭಾಗವಹಿಸದೆ ಇರಬಹುದು.
- ಶಿಕ್ಷಕ ಚರ್ಚೆಯಲ್ಲಿ ಮಾರ್ಗದರ್ಶನ ನೀಡಲು ಮತ್ತು ನಾಯಕತ್ವ ವಹಿಸಲು ಸಮರ್ಥನಾಗಿಲ್ಲದಿರಬಹುದು.

**ಬಿ) ಸಮಸ್ಯಾ ಪರಿಹಾರ ವಿಧಾನ:**

ಈ ವಿಧಾನದ ಹೆಸರೇ ಸೂಚಿಸುವಂತೆ ಸಮಸ್ಯೆಯೇ ಈ ವಿಧಾನ ವಿಷಯವಸ್ತು.

ಈ ವಿಧಾನದ ಬಗ್ಗೆ ಕಾರ್ಟರ್ ವಿ ಗುಡ್ ಹೀಗೆ ಹೇಳುತ್ತಾರೆ– **"**ಸಮಸ್ಯಾ ಪರಿಹಾರ ವಿಧಾನದಲ್ಲಿ ಪರಿಹಾರವನ್ನು ಹುಡುಕಬೇಕಾಗಿರುವ, ಸವಾಲಾಗಿರುವ ಒಂದು ಪರಿಸ್ಥಿತಿಯನ್ನು ಸೃಷ್ಟಿಸಿ ಅದನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತದೆ. ಇದು ಒಂದು ನಿರ್ದಿಷ್ಟ ಕ್ರಮವಾಗಿದ್ದು ಸಂಬಂಧಪಟ್ಟ ಅನೇಕ ಸಣ್ಣ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿ ಒಂದು ಪ್ರಧಾನ ಸಮಸ್ಯೆಯನ್ನು ಪರಿಹರಿಸಲಾಗುತ್ತದೆ**"**.

ಲೀ ಎಮ್ ಜೇಮ್ಸ್ ಹೀಗೆ ಹೇಳುತ್ತಾರೆ– **"**ಶೈಕ್ಷಣಿಕವಾಗಿ ಮಹತ್ವಪೂರ್ಣ ತೊಂದರೆಯಿರುವ ಸಮಸ್ಯೆಗೆ ವಿವರಣೆಯನ್ನು ಅಥವಾ ಪರಿಹಾರವನ್ನು ಕಂಡುಹಿಡಿಯಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪ್ರಜ್ಞಾಪೂರ್ವಕವಾಗಿ ಮಾಡುವ ಯೋಜಿತ, ಉದ್ದೇಶಪೂರ್ಣ ಪ್ರಯತ್ನವೇ ಸಮಸ್ಯಾ ಪರಿಹಾರ ಎನ್ನುವ ಶೈಕ್ಷಣಿಕ ಸಾಧನವಾಗಿದೆ.**"**

ಸಮಸ್ಯೆ ಆಸಕ್ತಿಪೂರ್ಣವಾಗಿರಬೇಕು. ಅದು ವಿದ್ಯಾರ್ಥಿಗಳಿಗೆ ಸವಾಲೊಡ್ಡವಂತಿರಬೇಕು. ಎಲ್ಲ ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ಸಮಸ್ಯೆಯನ್ನು ಪರಿಹರಿಸಲು ಕೆಲಸ ಮಾಡಬೇಕು. ಒಂದು ದೊಡ್ಡ ಸಮಸ್ಯೆಯನ್ನು ಸಣ್ಣ ಸಮಸ್ಯೆಗಳಾಗಿ ವಿಭಜಿಸಿಕೊಳ್ಳಬಹುದು. ಸಮಸ್ಯಾ ಪರಿಹಾರ ಪೂರ್ಣವಾಗಿ ಮಾನಸಿಕ ಚಟುವಟಿಕೆಯಾಗಿರಬಹುದು ಅಥವಾ ಅದು ಭೌತಿಕ ಸ್ವರೂಪದ್ದಾಗಿದ್ದು, ದತ್ತಾಂಶಗಳನ್ನು ಕುಶಲತೆಯಿಂದ ಬಳಸುವುದಾಗಿರಬಹುದು, ಸಮಸ್ಯಾ ಪರಿಹಾರ ಸಮಸ್ಯೆಗಳನ್ನು ಗುರ್ತಿಸುವ ಮತ್ತು ಅವುಗಳನ್ನು ಸೂಕ್ತವಾದ ಕುಶಲತೆಗಳಿಂದ ವ್ಯವಸ್ಥಿತವಾದ ರೀತಿಯಲ್ಲಿ ಪರಿಹರಿಸುವ ಸಾಮರ್ಥ್ಯವಾಗಿದೆ. ಸಮಸ್ಯಾ ಪರಿಹಾರ ನಮಗೆ ಗೊತ್ತಿರುವುದನ್ನು ಉಪಯೋಗಿಸಿ ನಮಗೆ ಗೊತ್ತಿರದ ವಿಷಯವನ್ನು ಕಂಡುಹಿಡಿಯುವ ಪ್ರಕ್ರಿಯೆಯಾಗಿದೆ.ಅದು ಅಡಚಣೆಗಳನ್ನು, ಪ್ರಾಕ್ಕಲ್ಪನೆಗಳನ್ನು ನಿರೂಪಿಸಿ, ಈ ಪ್ರಾಕ್ಕಲ್ಪನೆಗಳನ್ನು ಪರೀಕ್ಷಿಸುವುದನ್ನು ಮತ್ತು ಸಮಸ್ಯೆಯೊಂದಕ್ಕೆ ತೃಪ್ತಿಕರವಾದ ಪರಿಹಾರಗಳನ್ನು ಕಂಡುಹಿಡಿಯುವುದನ್ನು ಒಳಗೊಳ್ಳುತ್ತದೆ.

**ಸಮಸ್ಯಾ ಪರಿಹಾರದ ಉದ್ದೇಶಗಳು**

- ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದು ಮತ್ತು ವಿದ್ಯಾರ್ಥಿಗಳು ಸಮಸ್ಯೆಗಳನ್ನು ಪರಿಹರಿಸುವಾಗ ತಮ್ಮ ಪ್ರಯತ್ನವನ್ನು ಏಕರೀತಿಯಾಗಿ ಮುಂದುವರೆಸಿಕೊಂಡು ಹೋಗುವಂತೆ ಮಾಡುವುದು.
- ವಿದ್ಯಾರ್ಥಿಗಳು ಸಮಸ್ಯಾ ಪರಿಹಾರ ಕಾರ್ಯತಂತ್ರಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವಂತೆ ಮಾಡುವುದು.
- ವಿದ್ಯಾರ್ಥಿಗಳು ಸಮಸ್ಯೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಪರಿಗಣಿಸುವುದರ ಮೌಲ್ಯದ ಬಗ್ಗೆ ಅರಿವು ಹೊಂದುವಂತೆ ಮಾಡುವುದು.
- ಅನೇಕ ಸಮಸ್ಯೆಗಳನ್ನು ಒಂದಕ್ಕಿಂತ ಹೆಚ್ಚು ರೀತಿಗಳಲ್ಲಿ ಪರಿಹರಿಸಬಹುದು ಎನ್ನುವುದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.
- ಸೂಕ್ತವಾದ ಸಮಸ್ಯಾ ಪರಿಹಾರ ಕಾರ್ಯತಂತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
- ಪರಿಹಾರ ಕಾರ್ಯರೀತಿಗಳನ್ನು ಖಚಿತವಾದ ರೀತಿಯಲ್ಲಿ ಅನ್ವಯಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಉತ್ತಮಪಡಿಸುವುದು
- ವಿದ್ಯಾರ್ಥಿಗಳು ಸಮಸ್ಯೆಯ ಇರುವಿಕೆಯನ್ನು ಪ್ರಶಂಸಿಸುವುದು ಮತ್ತು ಅದನ್ನು ಪರಿಹರಿಸುವ ಇಚ್ಛೆಯನ್ನು ಹೊಂದುವಂತೆ ಮಾಡುವುದು.
- ಸಮಸ್ಯೆಗೆ ಸಂಬಂಧಪಟ್ಟ ತಥ್ಯಾಂಶಗಳನ್ನು ಮತ್ತು ಮಾಹಿತಿಗಳನ್ನು ಸಂಗ್ರಹಿಸುವುದು

- ಸೂಕ್ತವಾದ ಅನುಭವದ ಆಧಾರದ ಮೇಲೆ ಬೆಂಬಲಿತವಾಗಿ ದತ್ತಾಂಶಗಳನ್ನು ಪರಿಶುದ್ಧ ರೀತಿಯಲ್ಲಿ ವ್ಯಾಖ್ಯಾನಿಸುವಂತೆ ಮಾಡುವುದು.

**ಸಮಸ್ಯಾ ಪರಿಹಾರದಲ್ಲಿರುವ ಹಂತಗಳು**

- ಸಮಸ್ಯೆಯನ್ನು ಗುರ್ತಿಸುವುದು – ಮೊದಲಿಗೆ ನಾವು ಸಮಸ್ಯೆಯ ಇರುವಿಕೆಯನ್ನು ಸಂವೇದಿಸುವುದು ಮತ್ತು ನಂತರ ಆ ಸಮಸ್ಯೆಯನ್ನು ಗುರುತಿಸುವುದು
- ಸಮಸ್ಯೆಯನ್ನು ಪರಿಭಾಷಿಸುವುದು – ಸಮಸ್ಯೆಯನ್ನು ಅತ್ಯಂತ ನಿಖರವಾದ ಮತ್ತು ಖಚಿತವಾದ ರೀತಿಯಲ್ಲಿ ಪರಿಭಾಷಿಸಬೇಕು.
- ಸಂಬಂಧಪಟ್ಟ ದತ್ತಾಂಶಗಳ ಸಂಗ್ರಹಣೆ – ಸಮಸ್ಯಾ ಪರಿಹಾರಕ್ಕೆ ಬೇಕಾದ ದತ್ತಾಂಶಗಳನ್ನು ಸರಿಯಾದ ರೀತಿಯಲ್ಲಿ ಸಂಗ್ರಹಿಸುವುದು ಮತ್ತು ವ್ಯವಸ್ಥಿತಗೊಳಿಸುವುದು
- ದತ್ತಾಂಶಗಳನ್ನು ಸಂಯೋಜಿಸಿಕೊಳ್ಳುವುದು – ಸಮಸ್ಯೆಯ ಪರಿಹಾರದ ಕಡೆಗೆ ನಮ್ಮನ್ನು ಒಯ್ಯುವಂತೆ ದತ್ತಾಂಶಗಳನ್ನು ಸಂಯೋಜಿಸಿಕೊಳ್ಳುವುದು
- ತಾತ್ಕಾಲಿಕ ಪರಿಹಾರವನ್ನು ರೂಪಿಸಿಕೊಳ್ಳುವುದು – ಸಂಯೋಜಿಸಿದ ದತ್ತಾಂಶಗಳ ಆಧಾರದ ಮೇಲೆ ವಿದ್ಯಾಥಿಗಳ ತಾತ್ಕಾಲಿಕ ಪರಿಹಾರಗಳನ್ನು ರೂಪಿಸಕೊಳ್ಳುವರು.
- ಸರಿಯಾದ ಪರಿಹಾರವನ್ನು ಕಂಡುಹಿಡಿಯುವುದು – ತಾತ್ಕಾಲಿಕ ಪರಿಹಾರಗಳಲ್ಲಿ ತರ್ಕದ ಆಧಾರದ ಮೇಲೆ ಸರಿಯಾದ ಪರಿಹಾರವನ್ನು ಕಂಡುಹಿಡಿಯುವುದು
- ಫಲಿತಾಂಶಗಳನ್ನು ತಾಳೆ ನೋಡುವುದು – ಫಲಿತಾಂಶಗಳನ್ನು ಸೂಕ್ತ ರೀತಿಯಿಲ್ಲಿ ಒರೆ ಹಚ್ಚುವುದು/ತಾಳೆ ನೋಡುವುದು.

**ಸಮಸ್ಯಾ ಪರಿಹಾರದ ವಿಧಾನದ ಗುಣಗಳು**

- ಇದು ಸಮಸ್ಯಾ ಪರಿಹಾರ ಕಂಡುಹಿಡಿಯಲು ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುತ್ತದೆ. ಸಮಸ್ಯಾ ಪರಿಹಾರದ ತರಬೇತಿ ನಿತ್ಯಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಬಹಳ ಉಪಯುಕ್ತವಾಗುತ್ತದೆ.
- ಇದು ವಿದ್ಯಾರ್ಥಿಗಳ ಚಿಂತನೆಯನ್ನು, ತರ್ಕ(ವಿವೇಚನೆಯನ್ನು) ಮತ್ತು ಕಲ್ಪನಾಶೀಲತೆಯನ್ನು ಪ್ರಚೋದಿಸುತ್ತದೆ.
- ಇದು ವಿದ್ಯಾರ್ಥಿಗಳಲ್ಲಿ ಸ್ವತಂತ್ರವಾಗಿ ಕೆಲಸಮಾಡುವ ಸಾಮರ್ಥ್ಯವನ್ನು ವಿಕಾಸಗೊಳಿಸುತ್ತದೆ
- ಅರ್ಥಶಾಸ್ತ್ರ ಅನೇಕ ಸಮಸ್ಯೆಗಳಿಂದ ತುಂಬಿರುವುದರಿಂದ ಈ ವಿಧಾನದ ಬೋಧನೆ ಅರ್ಥಶಾಸ್ತ್ರ ಬೋಧನೆಗೆ ಬಹಳ ಉಪಯೋಗಕ್ಕೆ ಬರುತ್ತದೆ.
- ಇದು ವಿದ್ಯಾರ್ಥಿಗಳ ಕುತೂಹಲವನ್ನು ಪ್ರಚೋದಿಸುತ್ತದೆ ಮತ್ತು ಕೆಲಸದಲ್ಲಿ, ಓದಿನಲ್ಲಿ ಹೆಚ್ಚು ಶ್ರಮವಹಿಸುವಂತೆ ಮಾಡುತ್ತದೆ.
- ಈ ವಿಧಾನದಲ್ಲಿ ವಿದ್ಯಾರ್ಥಿಗಳು ಒಬ್ಬರೇ ಕೆಲಸ ಮಾಡಲು ಸಾಕಷ್ಟು ಅವಕಾಶವಿದೆ. ಆದ್ದರಿಂದ, ಅವರು ತಮಗೆ –ಇಷ್ಟ ಬಂದಷ್ಟು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.
- ಇದು ವಿದ್ಯಾರ್ಥಿಗಳಲ್ಲಿ ಸ್ವಯಂ–ಅಧ್ಯಯನ ಅಭ್ಯಾಸವನ್ನು ವಿಕಾಸಗೊಳಿಸುತ್ತದೆ.
- ಈ ವಿಧಾನದಿಂದ ಕಲಿಯುವಾಗ ವಿದ್ಯಾರ್ಥಿ ಏನಾದರೂ ಕೆಲಸ ಮಾಡುತ್ತಾ ಕಲಿಯುತ್ತಾನೆ. ಆದ್ದರಿಂದ, ವಿದ್ಯಾರ್ಥಿ ಸಾಕಷ್ಟು ಮಾಹಿತಿಯನ್ನು ತನ್ನಲ್ಲಿಯೇ ದೀರ್ಘಕಾಲದವರೆಗೆ ನೆನಪಿನಲ್ಲಿ ಉಳಿಸಿಕೊಳ್ಳುತ್ತಾನೆ.
- ಈ ವಿಧಾನದಲ್ಲಿ ವಿದ್ಯಾರ್ಥಿಗೂ ಮತ್ತು ಶಿಕ್ಷಕನಿಗೂ ನಿಕಟ ಸಂಪರ್ಕವಿರುತ್ತದೆ.
- ಇದು ಸಹನೆ, ಸಹಕಾರ, ಆತ್ಮವಿಶ್ವಾಸ ಇತ್ಯಾದಿ ಗುಣಗಳನ್ನು ವಿಕಾಸಗೊಳಿಸುತ್ತದೆ.
- ಇದು ಮಾಹಿತಿ ಪರಿಷ್ಕಾರದ ಕೌಶಲ್ಯದಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತದೆ.

- ಇದು ವಿದ್ಯಾರ್ಥಿಗಳು ಬೌದ್ಧಿಕ ಪ್ರಾಮಾಣಿಕತೆಯನ್ನು ಹೊಂದಲು ಸಹಾಯ ಮಾಡುತ್ತದೆ.
- ಇದು ವಿದ್ಯಾರ್ಥಿಗಳು ವಸ್ತುಗಳ ಮತ್ತು ಚರಾಂಶಗಳ ನಡುವೆ ಅವುಗಳ ವಿನ್ಯಾಸಗಳ ಪಾರಸ್ಪರಿಕ ಸಂಬಂಧಗಳನ್ನೂ ಕಲಿತುಕೊಳ್ಳಲು ಸಹಾಯ ಮಾಡುತ್ತದೆ.
- ಇದು ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರದಲ್ಲಿ ಹೊಸ ಹೊಸ ಜ್ಞಾನಾಂಶಗಳನ್ನು ಕಂಡು ಹಿಡಿಯಲು ಬೇಕಾದ ವಿಧಾನಗಳಲ್ಲಿ ಮತ್ತು ಕೌಶಲ್ಯಗಳಲ್ಲಿ ತರಬೇತಿ ನೀಡುತ್ತದೆ.

**ಸಮಸ್ಯಾ ಪರಿಹಾರ ವಿಧಾನದ ಮಿತಿಗಳು**

**ಪಠ್ಯಕ್ರಮದ ಎಲ್ಲಾ ವಿಷಯಗಳನ್ನು ಈ ವಿಧಾನದಿಂದ ಬೋಧಿಸುವುದು ಕಷ್ಟವಾಗುತ್ತದೆ:** ಈ ವಿಧಾನಕ್ಕೆ ಅನುಗುಣವಾಗಿ ಪಠ್ಯಕ್ರಮದ ವಿದ್ಯುನ್ಮಾನ ವಿಷಯ ವಸ್ತುಗಳನ್ನು (ಇ–ಕಂಟೆಟ್) ಸಂಯೋಜಿಸುವುದು ಕಷ್ಟವಾಗತ್ತದೆ. ಪಠ್ಯಕ್ರಮದ ಎಲ್ಲಾ ವಿಷಯಗಳನ್ನು ಮತ್ತು ಕ್ಷೇತ್ರಗಳನ್ನು ಈ ವಿಧಾನದಿಂದ ಬೋಧಿಸಿ ಮುಗಿಸಲು ಸಾಧ್ಯವಿಲ್ಲ. ಇದಕ್ಕೆ ಬೇಕಾದ ಪುಸ್ತಕಗಳು ಮತ್ತು ಪರಾಮರ್ಶನ ಗ್ರಂಥಗಳು ವಿದ್ಯಾರ್ಥಿಗಳಿಗೆ ಲಭ್ಯವಿರುವುದಿಲ್ಲ. ಎಲ್ಲಾ ಮಟ್ಟದ ವಿದ್ಯಾರ್ಥಿಗಳಿಗೆ ಈ ವಿಧಾನ ಸೂಕ್ತವಾದುದಲ್ಲ. ಈ ವಿಧಾನ ಕೆಳವರ್ಗದ ವಿದ್ಯಾರ್ಥಿಗಳಿಗೆ ಸೂಕ್ತವಾಗುವುದಿಲ್ಲ. ಈ ವಿಧಾನದಲ್ಲಿ ಬೌದ್ಧಿಕ ಚಟುವಟಿಕೆ ಪ್ರಧಾನವಾಗಿರುತ್ತದೆ. ಆದ್ದರಿಂದ, ಭೌತಿಕ ಮತ್ತು ಪ್ರಾಯೋಗಿಕ ಅನುಭವಗಳನ್ನು ಇದರಲ್ಲಿ ಕಡೆಗಣಿಸಲಾಗುತ್ತದೆ.

**ಅನಾವಶ್ಯಕ ಸ್ಪರ್ಧೆಗೆ ಪ್ರೋತ್ಸಾಹ ನೀಡುತ್ತದೆ:** ಬಹಳಷ್ಟು ಮಂದಿ ಗುಂಪಿನಲ್ಲಿ ಕೆಲಸ ಮಾಡುವುದರಿಂದ ಅಪ್ರಜ್ಞಾಪೂರ್ವಕವಾಗಿ ಅಂಥ ಪರಿಸ್ಥಿತಿ ಸ್ಪರ್ಧಾತ್ಮಕವಾದುದು ಎಂದು ಗ್ರಹಿಸಿಕೊಳ್ಳುತ್ತಾರೆ. ಇದರಿಂದ ವಿನಾಶಕಾರಿ ಪರಿಣಾಮಗಳು ಉಂಟಾಗುತ್ತವೆ. ತಮ್ಮೊಂದಿಗೆ ಒಪ್ಪದಿರುವವರ ವಿಚಾರಗಳನ್ನು ವಿರೂಪಗೊಳಿಸುವುದು ಮುಂತಾದ ಅನಪೇಕ್ಷಿತ ವರ್ತನೆಗಳು ಇದರಿಂದ ಪರಿಣಮಿಸುತ್ತವೆ. ವಿರೂಪಗೊಳಿಸಬೇಕೆಂದಿರುವ ಬೇರೆಯವರ ವಿಚಾರಗಳನ್ನು ಉತ್ತಮಗೊಳಿಸಲು ಪ್ರಯತ್ನಿಸುವುದಿಲ್ಲ. ಈ ರೀತಿಯ ವರ್ತನೆಗಳು ಪ್ರಭಾವಯುತ ಸಮಸ್ಯಾ ಪರಿಹಾರಕ್ಕೆ ಸರಿಹೊಂದದಿರುವ ವಾತಾವರಣವನ್ನು ಸೃಷ್ಟಿಸುತ್ತವೆ.

**ಪರಿಣಾಮಕಾರಿ ಮಾರ್ಗದರ್ಶನದ ಅಭಾವದ ಸಾಧ್ಯತೆ:** ಕೆಲವು ವೇಳೆ ಚರ್ಚೆಗೆ ಪರಿಣಾಮಕಾರಿಯಾಗುವ ಮಾರ್ಗದರ್ಶವನ್ನು ನೀಡುವ ಶಿಕ್ಷಕರಿರುವುದಿಲ್ಲ. ಇದರ ಫಲವಾಗಿ ಚರ್ಚೆಗುರಿಯಿಲ್ಲದೆ ಮುಂದುವರೆಯುತ್ತದೆ. ಈ ವಿಧಾನವನ್ನು ಆಚರಣೆಗೆ ತರುವ ಪ್ರತಿಭಾವಂತ ಶಿಕ್ಷಕ/ಶಿಕ್ಷಕಿ ಇರುವುದಿಲ್ಲ. ಇದರಿಂದಾಗಿ ಚರ್ಚೆಯ ಅಂತ್ಯದಲ್ಲಿ ತಪ್ಪು ತೀರ್ಮಾನಗಳಿಗೆ ಬರುವ ಅನುಮಾನ ಯಾವಾಗಲೂ ಇದ್ದೇ ಇರುತ್ತದೆ.

**ಸಮಯ ಮತ್ತು ಸಂಪನ್ಮೂಲಗಳ ನಿರ್ಬಂಧಗಳಿರುತ್ತವೆ:** ಸಮಸ್ಯಾ ಪರಿಹಾರ ಸಾಪೇಕ್ಷವಾಗಿ ನಿಧಾನವಾದ ಒಂದು ಪ್ರಕ್ರಿಯೆ. ಇದು ಸಮಯ ಮತ್ತು ಹಣದ ದೃಷ್ಟಿಯಿಂದ ಉಳಿತಾಯಕರವಾದುದಲ್ಲ.

**ಸಿ) ಸಮೀಕ್ಷಾ ವಿಧಾನ:** ಸಮೀಕ್ಷಾ ವಿಧಾನ ಅಥವಾ ಸರ್ವೇ ವಿಧಾನ ರಾಜ್ಯಶಾಸ್ತ್ರ ಬೋಧನೆಯ ಒಂದು ಮುಖ್ಯ ವಿಧಾನ. ಇದು ಅನ್ವೇಷಣೆಯ ಒಂದು ಕಾರ್ಯತಂತ್ರ. ಸ್ಥಳೀಯವಾದ ಘಟನೆಗಳನ್ನು ಮತ್ತು ವಿವಾದಾಂಶಗಳನ್ನು ಅಧ್ಯಯನ ಮಾಡುವುದಕ್ಕೆ ಇದು ಉಪಯುಕ್ತ ವಿಧಾನವಾಗಿದೆ. ಈ ವಿಧಾನದಿಂದ ಸ್ಥಳೀಯವಾಗಿರುವ ವಿದ್ಯಮಾನಗಳನ್ನು ಅವುಗಳ ಪರಿಸ್ಥಿತಿಗಳು, ಸ್ಥಿತಿಗತಿಗಳು, ಅಭ್ಯಾಸಗಳು ಹಾಗೂ ಆಚರಣೆಗಳು, ಪ್ರಕ್ರಿಯೆಗಳು, ಪರಿಣಾಮಗಳು ಮುಂತಾದುವುಗಳ ರೂಪದಲ್ಲಿ ವಿವರಿಸಲು ಮತ್ತು ವ್ಯಾಖ್ಯಾನಿಸಲು ಪ್ರಯತ್ನಿಸುತ್ತದೆ. ಇದು ಪ್ರಸ್ತುತದಲ್ಲಿರುವ ಸಾಮಾಜಿಕ, ಅರ್ಥಶಾಸ್ತ್ರೀಯ ಮತ್ತು ರಾಜ್ಯಶಾಸ್ತ್ರೀಯ ಸ್ಥಿತಿಗಳಿತಗಳನ್ನು ವಿಶ್ಲೇಷಿಸುತ್ತದೆ. ಇದು ತಥ್ಯಾಂಶಗಳನ್ನು ವಿವರಿಸುತ್ತದೆ. ಇದು ಇಂದಿನ ಸ್ಥಿತಿಗಳನ್ನು , ಸ್ಥಳಗಳನ್ನು , ಸಾಮಾಜಿಕ ಸಂಘ–ಸಂಸ್ಥೆಗಳನ್ನು, ಗುಂಪುಗಳನ್ನು ಮತ್ತು ಕ್ಷೇತ್ರಗಳನ್ನು ವಿಶ್ಲೇಷಿಸುವ, ವ್ಯಾಖ್ಯಾನಿಸುವ ಮತ್ತು ವರದಿ ಮಾಡುವ ಒಂದು ವ್ಯವಸ್ಥಿತ ಪ್ರಯತ್ನವಾಗಿದೆ. ಪ್ರಸ್ತುತ ಪರಿಸ್ಥಿತಿಗೆ ಯಾವ ಅಂಶಗಳು ಕೊಡುಗೆ ನೀಡಿವೆ ಎನ್ನುವ ಪ್ರಶ್ನೆಗೆ ಈ ವಿಧಾನದಿಂದ ಉತ್ತರ ನೀಡಲಾಗುತ್ತದೆ.

ಒಂದು ಉತ್ತಮ ಸಮೀಕ್ಷೆ ನಿರ್ದಿಷ್ಟವಾದ ಸಮಸ್ಯೆಯನ್ನು ಮತ್ತು ನಿರ್ದಿಷ್ಟವಾದ ಗುರಿಯನ್ನು ಹೊಂದಿರುತ್ತದೆ. ಈ ವಿಧಾನ ಯೋಜಿಸುವಿಕೆ, ಪ್ರಜ್ಞಾಪೂರ್ವಕವಾದ ವಿಶ್ಲೇಷಣೆ ಮತ್ತು ವ್ಯಾಖ್ಯಾನಿಸುವಿಕೆ ಮತ್ತು ತರ್ಕಬದ್ಧವಾದ ಮತ್ತು ಕೌಶಲ್ಯಪೂರ್ಣವಾಗಿ ಸಂಗ್ರಹಿಸಿದ ದತ್ತಾಂಶಗಳನ್ನು ವರದಿ ಮಾಡುವಿಕೆಯನ್ನು ಒಳಗೊಳ್ಳುತ್ತದೆ. ಮುಖ್ಯವಾದ ಸಾಮಾಜಿಕ ಸಮಸ್ಯೆಗಳ ಅಧ್ಯಯನಕ್ಕೆ ಸಮೀಕ್ಷೆ ಒಂದು ವೈಜ್ಞಾನಿಕವಾದ ಮಾರ್ಗವಾಗಿದೆ.

ಈ ವಿಧಾನದಲ್ಲಿ ವಿದ್ಯಮಾನಗಳನ್ನು ಅನ್ವೇಷಿಸಲು ಮತ್ತು ಸಮೀಕ್ಷೆ ಮಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ. ವಿದ್ಯಮಾನಗಳ ವೀಕ್ಷಣಾ ಪ್ರಕ್ರಿಯೆ, ದತ್ತಾಂಶಗಳ ಸಂಗ್ರಹಣೆ ಮತ್ತು ವರ್ಗೀಕರಣ ಮಾಡಿ ಅವುಗಳನ್ನು, ತೀರ್ಮಾನಗಳನ್ನು ವರದಿ ಮಾಡುವ ಪ್ರಕ್ರಿಯೆಗಳನ್ನು ಮುಗಿಸಿದ ನಂತರ ಅವರೇ ಸ್ವತಃ ವಿದ್ಯಮಾನಗಳ ಪರಿಚಯ ಪಡೆಯುತ್ತಾರೆ.

**ಸಮೀಕ್ಷಾ ವಿಧಾನದ ಹಂತಗಳು**

- ಸಮಸ್ಯೆಯ ಆಯ್ಕೆ – ಸಮಸ್ಯೆಯನ್ನು ಆಯ್ಕೆ ಮಾಡಿ ಅದನ್ನು ನಿರೂಪಿಸಿಕೊಳ್ಳಬೇಕು, ಅದನ್ನ ಪರಿಭಾಷಿಸಬೇಕು ಮತ್ತು ಅದರ ಇತಿಮಿತಿಗಳನ್ನು ತಿಳಿದುಕೊಳ್ಳಬೇಕು
- ಯೋಜನೆಯ ಸಿದ್ಧತೆ– ವೈಜ್ಞಾನಿಕವಾದ ಮತ್ತು ವಸ್ತುನಿಷ್ಠವಾದ ಫಲಿತಾಂಶ ಬರುವಂತೆ ಯೋಜನೆ ಖಚಿತಗೊಳಿಸಬೇಕು
- ಸಾಧನೆಗಳ ತಯಾರಿ – ಸಮೀಕ್ಷೆಗೆ ಸೂಕ್ತವಾದ ಸಾಧನಗಳನ್ನು ಆಯ್ಕೆ ಮಾಡಿಕೊಳ್ಳಬೇಕು– ಉದಾಹರಣೆಗೆ, ಸೂಕ್ತವಾದ ಪ್ರಶ್ನಾವಳಿಗಳು, ಸಮೀಕ್ಷಾ ಅಂಶಾವಳಿಗಳು, ತಪಶೀಲು ಪಟ್ಟಿಗಳು, ಮುಂತಾದುವುಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಅಥವಾ ಸಿದ್ಧಪಡಿಸಿಕೊಳ್ಳಬೇಕು
- ದತ್ತಾಂಶಗಳ ಸಂಗ್ರಹಣೆ– ಇದು ಕ್ಷೇತ್ರಕ್ಕೆ ಹೋಗಿ ಅಗತ್ಯವಿರುವ ವ್ಯಕ್ತಿಗಳನ್ನು ಭೇಟಿ ಮಾಡಿ ದತ್ತಾಂಶಗಳನ್ನು (ಮಾಹಿತಿಗಳು ಮತ್ತು ಅಂಕಿಅಂಶಗಳನ್ನು) ಸಂಗ್ರಹಿಸಬೇಕು
- ದತ್ತಾಂಶಗಳ ವ್ಯಾಖ್ಯಾನ ಮತ್ತು ವರದಿ ಮಾಡುವಿಕೆ– ಸಂಗ್ರಹಿಸಿದ ದತ್ತಾಂಶಗಳನ್ನು ಸಂಖ್ಯಾಶಾಸ್ತ್ರೀಯವಾಗಿ ವಿಶ್ಲೇಷಿಸಿ, ವ್ಯಾಖ್ಯಾನಿಸಿ ವರದಿ ಮಾಡಬೇಕು.

ಈ ವಿಧಾನದಲ್ಲಿ ತರಗತಿಯನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಲಾಗುತ್ತದೆ ಮತ್ತು ಪ್ರತಿಯೊಂದು ಗುಂಪು, ಸಮಸ್ಯೆಯ ಒಂದು ನಿರ್ದಿಷ್ಟ ಅಂಶವನ್ನು ಸಮೀಕ್ಷೆ ಮಾಡುವಂತೆ ಹೇಳಲಾಗುತ್ತದೆ. ಉದಾಹರಣೆಗೆ, ಒಂದು ತರಗತಿಯನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದರೆ ಒಂದು ಗುಂಪಿಗೆ ನಗರದ/ಪಟ್ಟಣದ/ಹಳ್ಳಿಯ ಭೌಗೋಳಿಕ ಪರಿಸ್ಥಿತಿಗಳನ್ನು ಮತ್ತೊಂದು ಗುಂಪಿಗೆ ಅದರ ಚಾರಿತ್ರಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು, ಮೂರನೇ ಗುಂಪಿಗೆ ನಗರದಲ್ಲಿರುವ ಅಂಗಡಿ/ಮಾಲ್‌ಗಳನ್ನು ಮತ್ತು ನಾಲ್ಕನೇ ಗುಂಪಿಗೆ ಸ್ಥಳೀಯ ಆಡಳಿತ ಕ್ರಮ ಮುಂತಾದುವುಗಳನ್ನು ಸಮೀಕ್ಷೆ ಮಾಡುವಂತೆ ಹೇಳಲಾಗುತ್ತದೆ.

**ಸಮೀಕ್ಷಾ ವಿಧಾನದ ಅನುಕೂಲಗಳು**

- ವಿದ್ಯಾರ್ಥಿಗಳು ತಮ್ಮ ನೈಸರ್ಗಿಕ ಮತ್ತು ಸಾಮಾಜಿಕ ಪರಿಸರದೊಂದಿಗೆ ನೇರವಾದ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆ. ಇದರಿಂದಾಗಿ ಅವರು ನೇರವಾದ ಅನುಭವ ಪಡೆದುಕೊಳ್ಳುತ್ತಾರೆ. ಇದು ಅವರನ್ನು ಲವಲವಿಕೆಯುಳ್ಳವರನ್ನಾಗಿಯೂ ಆಲೋಚನಾಪರರನ್ನಾಗಿಯೂ ಮಾಡುತ್ತದೆ.
- ವಿಷಯಗಳನ್ನು ಬೋಧಿಸುವುದು ಶೈಕ್ಷಣಿಕವಾಗುತ್ತದೆ. ಕಲಿಕೆಯನ್ನು ಆಸಕ್ತಿಕರವಾಗಿಯೂ ಜೀವಂತ ವಾಗಿಯೂ ಮತ್ತು ಪರಿಣಾಮಕಾರಿಯಾಗಿಯೂ ಮಾಡುತ್ತದೆ.
- ಅದು ವಿದ್ಯಾರ್ಥಿಯ ವ್ಯಕ್ತಿತ್ವದ ಬೆಳವಣಿಗೆಯನ್ನು ಪ್ರಚೋದಿಸುತ್ತದೆ. ಅದು ಸತ್ಯ ಮತ್ತು ಮಿಥ್ಯಗಳ ನಡುವೆ ಮತ್ತು ತಥ್ಯಾಂಶಗಳು ಮತ್ತು ಪ್ರಚಾರದ ನಡುವೆ ವ್ಯತ್ಯಾಸವನ್ನು ಕಂಡುಹಿಡಿಯುವ ಸಾಮರ್ಥ್ಯವನ್ನು ವಿಕಾಸಗೊಳಿಸುತ್ತದೆ.
- ಇದು ಸೃಜನಾತ್ಮಕ ಚಟುವಟಿಕೆಗಳಿಗೆ ಅವಕಾಶವನ್ನು ಒದಗಿಸುತ್ತದೆ.

- ಈ ವಿಧಾನ 'ಮಾಡುವುದರಿಂದ ಕಲಿ', 'ನೋಡುವುದರಿಂದ ಕಲಿ' ತತ್ವಗಳ ಮೇಲೆ ಆಧಾರಿತವಾಗಿದೆ.
- ವಿದ್ಯಾರ್ಥಿಗಳು ಸಮೀಕ್ಷೆಯ ಕಾರ್ಯದಿಂದ ಉತ್ಸಾಹಿತರಾಗುತ್ತಾರೆ ಮತ್ತು ಸಮೀಕ್ಷಾ ಕಾರ್ಯದ ಬಗ್ಗೆ ಪ್ರೋತ್ಸಾಹಿತರಾಗುತ್ತಾರೆ.
- ಇದು ವಿದ್ಯಾರ್ಥಿಗಳನ್ನು ಸಾಮಾಜೀಕರಣಗೊಳಿಸುತ್ತದೆ. ಇದು ಅವರಲ್ಲಿ ಸಾಮಾಜಿಕ ಗುಣಗಳನ್ನು, ಸಾಮಾಜಿಕ ಕೌಶಲಗಳನ್ನು ಮತ್ತು ಸಾಮಾಜಿಕ ಮೌಲ್ಯಗಳನ್ನು ವಿಕಾಸಗೊಳಿಸುತ್ತದೆ.
- ಇದು ವೈಜ್ಞಾನಿಕ ದೃಷ್ಟಿಕೋನವನ್ನು ಮತ್ತು ಅನ್ವೇಷಣೆ ಮಾಡುವ ಪ್ರವೃತ್ತಿಯನ್ನು ವಿದ್ಯಾರ್ಥಿಗಳಲ್ಲಿ ವಿಕಾಸಗೊಳಿಸುತ್ತದೆ.

**ಸಮೀಕ್ಷಾ ವಿಧಾನದ ಮಿತಿಗಳು**

- ಇದು ತುಂಬಾ ಸಮಯ ತೆಗೆದುಕೊಳ್ಳುತ್ತದೆ. ಆದರೆ, ಶಾಲೆಯ ವೇಳಾಪಟ್ಟಿ ಕಡಿಮೆ ಸಮಯದ್ದಾಗಿರುತ್ತದೆ.
- ಇದು ವಿದ್ಯಾರ್ಥಿಗಳಿಗೆ ಹೊರೆ ಎನಿಸುತ್ತದೆ. ಏಕೆಂದರೆ, ಅವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಾಕಷ್ಟು ಬೆಳೆದಿರುವುದಿಲ್ಲ
- ಈ ವಿಧಾನದ ಯಶಸ್ಸು ಶಿಕ್ಷಕರ ಸಾಮರ್ಥ್ಯ ಮತ್ತು ಕೌಶಲಗಳು ಮತ್ತು ವಿದ್ಯಾರ್ಥಿಗಳಿಗೆ ಕೆಲಸದ ಬಗ್ಗೆ ಇರುವ ಶ್ರದ್ಧೆಯನ್ನು ಅವಲಂಬಿಸಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ನೀವು 9ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ತತ್ವಗಳನ್ನು ಬೋಧಿಸಬೇಕಾಗಿದೆ. ಅದಕ್ಕಾಗಿ ನೀವು ಯಾವ ಬೋಧನಾ ವಿಧಾನವನ್ನು ಆಯ್ಕೆ ಮಾಡಿಕೊಳ್ಳುವಿರಿ? ನಿಮ್ಮ ಆಯ್ಕೆಯನ್ನು ಸಮರ್ಥಿಸಿ
2. ಸಮಸ್ಯಾ ಪರಿಹಾರ ವಿಧಾನವನ್ನು ವಿವರಿಸಿ. ಭೂಗೋಳ ಶಾಸ್ತ್ರ ಮತ್ತು ಇತಿಹಾಸದ ವಿಷಯಗಳಲ್ಲಿ ಯಾವ ಯಾವ ಶೀರ್ಷಿಕೆಗಳನ್ನು ಬೋಧಿಸಲು ಈ ವಿಧಾನ ಸೂಕ್ತವೆನಿಸುತ್ತದೆ ಎಂಬುದನ್ನು ತಿಳಿಸಿ.

**3.6.3.2. ರಾಜ್ಯಶಾಸ್ತ್ರ ಬೋಧನೆಯ ತಂತ್ರಗಳು**

**ಎ) ಪ್ರಶ್ನೋತ್ತರ ತಂತ್ರ**

ರಾಜ್ಯಶಾಸ್ತ್ರ ಬೋಧನೆಯಲ್ಲಿ ಪ್ರಶ್ನೆಗಳು ಬಹಳ ಮಹತ್ವಪೂರ್ಣ ಸ್ಥಾನವನ್ನು ಪಡೆದಿವೆ. ಪ್ರಶ್ನೆಗಳನ್ನು ಕೇಳುವುದರಿಂದ ವಿದ್ಯಾರ್ಥಿಗಳನ್ನು ಏಕಾಗ್ರ ಮನಸ್ಸುಳ್ಳವರನ್ನಾಗಿಯೂ ಕ್ರಿಯಾಶೀಲರನ್ನಾಗಿಯೂ ಮಾಡಬಹುದಾಗಿದೆ. ಶಿಕ್ಷಕರೂ ಸಹ ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡುವುದರಲ್ಲಿ ತಾನು ಸಫಲನಾಗಿದ್ದಾನೆಯೇ ಎಂದು ಪರೀಕ್ಷಿಸಿಕೊಳ್ಳಬಲ್ಲನು. ಅಂತೆಯೇ ವಿದ್ಯಾರ್ಥಿಗಳು ಬೋಧಿಸಿದ ಜ್ಞಾನವನ್ನು ವಾಸ್ತವವಾಗಿ ತಮ್ಮದಾಗಿಸಿಕೊಂಡಿದ್ದಾರೆಯೇ ಎಂದು ಬುಹುತೇಕ ಖಚಿತವಾಗಿ ಪರೀಕ್ಷಿಸಲು ಸಾಧ್ಯವಿದೆ.

**ಪ್ರಶ್ನೋತ್ತರ ತಂತ್ರದ ಪ್ರಾಧಾನ್ಯತೆ**

ಪ್ರಶ್ನೋತ್ತರ ತಂತ್ರದ ಮೂಲಕ ಈ ಕೆಳಗಿನವುಗಳನ್ನು ಸಾಧಿಸಬಹುದಾಗಿದೆ.

- ವಿದ್ಯಾರ್ಥಿಗಳ ಆಸಕ್ತಿ ಮತ್ತು ಕುತೂಹಲವನ್ನು ಜಾಗೃತಗೊಳಿಸುವುದು.
- ನಿಗದಿಪಡಿಸಿದ ಕಾಲಾವಧಿಯಲ್ಲಿ ತಮ್ಮ ಕಾರ್ಯವನ್ನು ಪೂರ್ಣಗೊಳಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ತರ್ಕಾಧಾರಿತ ಚಿಂತನೆ, ಕಲ್ಪನಾಶಕ್ತಿ ಮುಂತಾದ ವಿವಿಧ ಮಾನಸಿಕ ಶಕ್ತಿಗಳನ್ನು ಬೆಳೆಸುವುದು.

- ಸಂಶೋಧನೆ ಮತ್ತು ಹೊಸ ವಿಷಯಗಳ ಆವಿಷ್ಕಾರದಲ್ಲಿ ತೊಡಗುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ವಿಭಿನ್ನ ಸಮಸ್ಯೆಗಳ ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗುವ ರೀತಿಯಲ್ಲಿ ಅವುಗಳನ್ನು ಪ್ರಸ್ತುತಪಡಿಸುವ ಕೌಶಲ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
- ವಿದ್ಯಾರ್ಥಿಗಳ ಜ್ಞಾನವನ್ನು ಸಂರಕ್ಷಿಸುವುದರಲ್ಲಿ ನೆರವಾಗುವುದು.

**ಪ್ರಶ್ನೆಗಳ ವರ್ಗೀಕರಣ**
ಪ್ರಶ್ನೆಗಳು ಈ ಕೆಳಗೆ ತೋರಿಸಿರುವಂತೆ ವಿವಿಧ ರೂಪದ್ದಾಗಿರಬಹುಬಹುದು.

- ಸ್ಮರಣೆಯನ್ನು ಜಾಗೃತಗೊಳಿಸುವ ಮತ್ತು ಬೆಳೆಸುವ ಪ್ರಶ್ನೆಗಳು
- ತರ್ಕಾಧಾರಿತ ಪ್ರಶ್ನೆಗಳು
- ಸಂಘಟನಾತ್ಮಕ ಪ್ರಶ್ನೆಗಳು
- ಮಾಹಿತಿಪೂರ್ಣ ಪ್ರಶ್ನೆಗಳು
- ಮೌಲ್ಯಮಾಪನ ಮಾಡುವ ಪ್ರಶ್ನೆಗಳು
- ತೌಲನಿಕ ಪ್ರಶ್ನೆಗಳು
- ವಿಶ್ಲೇಷಣಾತ್ಮಕ ಪ್ರಶ್ನೆಗಳು
- ವಿಚಾರ ಪ್ರಚೋದಕ ಪ್ರಶ್ನೆಗಳು
- ವಿವರಣಾತ್ಮಕ ಪ್ರಶ್ನೆಗಳು
- ನಿರ್ಣಾಯಕ ಪ್ರಶ್ನೆಗಳು

**ಬಿ) ನಿದರ್ಶನಾತ್ಮಕ ತಂತ್ರ**

ನಿದರ್ಶನಾತ್ಮಕ ಬೋಧನಾ ತಂತ್ರದಲ್ಲಿ, ವಿದ್ಯಾರ್ಥಿಗಳ ಅರಿವಿಗೆ ಈಗಾಗಲೇ ಬಂದಿರುವ ವಾಸ್ತವಾಂಶಗಳ ಅಥವಾ ಅನುಭವಗಳ ಉದಾಹರಣೆಗಳನ್ನು ಕೊಡುವ ಮುಖಾಂತರ ಒಂದು ಪಠ್ಯವಿಷಯವನ್ನು ವಿಶದಪಡಿಸಲಾಗುತ್ತದೆ. ಈ ತಂತ್ರವು ಜ್ಞಾನದಿಂದ ಅಜ್ಞಾನದ ಕಡೆಗೆ ಹೋಗುವ ನಿಯಮವನ್ನು ಒಳಗೊಳ್ಳುತ್ತದೆ. ಬಹಳಷ್ಟು ಸಮಯ ಯಾವುದಾದರೊಂದು ಅಮೂರ್ತ ವಿಚಾರ ಅಥವಾ ಸಿದ್ಧಾಂತವನ್ನು ವಿಶದಪಡಿಸುವಾಗ ಮೂರ್ತರೂಪದ ನಿದರ್ಶನಗಳನ್ನು, ಉದಾಹರಣೆಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಸಂಕೀರ್ಣ ವಿವಾದಾಂಶದ ವಿವಿಧ ಮುಖಗಳ ನಡುವೆ ಸಂಬಂಧವನ್ನು ಮತ್ತು ಹೊಸ ಜ್ಞಾನವನ್ನು ಪ್ರಸ್ತುತಪಡಿಸಲು ಸೂಕ್ತ ಹಿನ್ನೆಲೆಯಲ್ಲಿ ಸೃಷ್ಟಿಸುವುದು ನಿದರ್ಶನವನ್ನು ಕೊಡುವುದರ ನಿಜವಾದ ಗುರಿಯಾಗಿದೆ.

**ಅನುಕೂಲಗಳು**
ಈ ತಂತ್ರದ ಬಳಕೆ ಈ ಕೆಳಗಿನ ಅನುಕೂಲಗಳನ್ನು ಹೊಂದಿದೆ.

**ಕ್ಲಿಷ್ಟತೆಯ ನಿವಾರಣೆ:** ನಿದರ್ಶನಗಳು ಮತ್ತು ಉದಾಹರಣೆಗಳು ವಿದ್ಯಾರ್ಥಿಗಳು ಪಠ್ಯವಿಷಯವೊಂದನ್ನು ಅರ್ಥಮಾಡಿಕೊಳ್ಳುವಾಗ ಎದುರಿಸುವ ಕ್ಲಿಷ್ಟತೆಗಳನ್ನು ದೂರಮಾಡುತ್ತವೆ. ಆತನ/ಆಕೆಯ ವಿಚಾರಗಳು ಸ್ಪಷ್ಟವಾಗುತ್ತವೆಯಲ್ಲದೆ ಕಠಿಣವಾದ ವಿಚಾರವನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಾಯಮಾಡುತ್ತವೆ.

**ವಿಷಯದ ವಿಶದವಾದ ನಿರೂಪಣೆಗೆ ನೆರವು:** ನಿದರ್ಶನಗಳು ಅಮೂರ್ತ ಪರಿಕಲ್ಪನೆಗಳ ಮತ್ತು ಹಲವು ವೈಜ್ಞಾನಿಕ ತತ್ವಗಳ ವಿವರಣೆ ಮತ್ತು ವಿಶದ ನಿರೂಪಣೆ(ವಿಸ್ತೃತ ನಿರೂಪಣೆ)ಗೆ ಸಹಾಯ ನೀಡುತ್ತವೆ. ಕಾರಣ, ಶಾಬ್ದಿಕ ವಿವರಣೆ ಹೆಚ್ಚು ಮೂರ್ತ ಸ್ವರೂಪದ್ದಾಗಿರುವುದರಿಂದ ಸಂಕೀರ್ಣ ವಿಷಯವನ್ನು ಇಲ್ಲಿ ಸರಳಗೊಳಿಸಲಾಗುತ್ತದೆ.

**ಆಸಕ್ತಿ ಮತ್ತು ಕುತೂಹಲಕ್ಕೆ ಪ್ರೋತ್ಸಾಹ:** ವಿಷಯದಲ್ಲಿ ವಿದ್ಯಾರ್ಥಿಗಳ ಆಸಕ್ತಿಯನ್ನು ಹೆಚ್ಚಿಸುವಲ್ಲಿ ಮತ್ತು ಅದರ ಬಗ್ಗೆ ಹೆಚ್ಚು ತಿಳಿಯುವ ಕುತೂಹಲವನ್ನು ಅಧಿಕಗೊಳಿಸುವುದರಲ್ಲಿ ನಿದರ್ಶನಗಳು ನೆರವಾಗುತ್ತವೆ. ಆಸಕ್ತಿಕರ ನಿದರ್ಶನಗಳು ಇಲ್ಲದೇ ಹೋದಲ್ಲಿ ಸಮಾಜ ವಿಜ್ಞಾನದ ಬೋಧನೆ ಏಕತಾನತೆಯುಳ್ಳದ್ದು ಆಗಿಬಿಡುತ್ತದೆ. ಕಲಿಕೆಯ ಪ್ರಕ್ರಿಯೆ ಆಸಕ್ತಿ ಪೂರಕವೂ ಗಮನವನ್ನು ಮತ್ತು ಮೆಚ್ಚುಗೆಯನ್ನು ತೀವ್ರವಾಗಿ ಮೂಡಿಸುವಂಥದ್ದಾಗಿ ಮಾಡುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತವಾದ ವಿನೋದಾತ್ಮಕತೆಯನ್ನು ಒದಗಿಸುತ್ತದೆ.

**ಕಂಠಪಾಠದಲ್ಲಿ ನೆರವು:** ನಿದರ್ಶನಗಳು ಬೋಧನೆ ಮತ್ತು ಅರ್ಥಮಾಡಿಕೊಳ್ಳುವಿಕೆಯಲ್ಲಿ ಮಾತ್ರವಷ್ಟೆ ಅಲ್ಲದೆ ಪಠ್ಯವಿಷಯವನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ನೆರವಾಗುತ್ತವೆ. ಮೂರ್ತರೂಪದ ವಾಸ್ತವಾಂಶಗಳು ಅಮೂರ್ತ ಪರಿಕಲ್ಪನೆಗಳಿಗಿಂತ ನೆನೆಪಿನಲ್ಲಿ ಇಟ್ಟುಕೊಂಡು ಬಳಿಕ ಗುರುತಿಸಲು ಸುಲಭ ಮಾಡುವಲ್ಲಿ ಸಹಾಯಕವಾಗುತ್ತವೆ.

**ವೀಕ್ಷಣೆ ಮತ್ತು ಪ್ರಯೋಗ ಪರೀಕ್ಷೆಗೆ ನೆರವು:** ಪಾಠದಲ್ಲಿ ಅನೇಕ ನಿದರ್ಶನಗಳಿದ್ದಾಗ ವಿದ್ಯಾರ್ಥಿಯ ವೀಕ್ಷಣೆ ಹರಿತವಾಗುತ್ತದೆ. ಅನೇಕ ವಿಜ್ಞಾನ ವಿಷಯಗಳ ಬೋಧನೆಯನ್ನು ನಿದರ್ಶನಗಳಂತೆ ಪ್ರಯೋಗಗಳ ಮೂಲಕ ಕೈಗೊಳ್ಳಲಾಗುತ್ತದೆ.

**ನಿದರ್ಶನಗಳ ವಿಧಗಳು**

- ಶಾಬ್ದಿಕೇತರ ಸಹಜ ವಸ್ತುನಿಷ್ಠ ಅಥವಾ ಮೂರ್ತ ನಿದರ್ಶನಗಳು
- ಶಾಬ್ದಿಕ ನಿದರ್ಶನಗಳು

ಶಾಬ್ದಿಕೇತರ ನಿದರ್ಶನವು ದೃಷ್ಟಾಂತಗಳನ್ನು ಮತ್ತು ಹೋಲಿಕೆಗಳನ್ನು ಒಳಗೊಳ್ಳುತ್ತವೆ. ಇದು ಈ ಕೆಳಗಿನವುಗಳನ್ನು ಅವಲಂಬಿಸಿದೆ.

- ಪಠ್ಯವಿಷಯದ ಸ್ವರೂಪ
- ವಿದ್ಯಾರ್ಥಿಯ ಬೆಳವಣಿಗೆಯ ಮಟ್ಟ

ಮೂರ್ತ ನಿದರ್ಶನಗಳು ಕೆಳಗಿನ ಹಂತದ ತರಗತಿಗಳಿಗೆ ಹೆಚ್ಚು ಲಾಭಕರವಾಗುತ್ತವೆ. ಮಗು ಬೆಳೆಯುತ್ತಾ ಹೋದಂತೆ ಅದರ ಬೌದ್ಧಿಕಮಟ್ಟವು ಹೆಚ್ಚುತ್ತದೆ. ಆಗ ಚಿತ್ರಗಳು, ರೇಖಾ ಚಿತ್ರಗಳು, ಸ್ಥೂಲ ಚಿತ್ರಗಳು, ಗ್ರಾಫ್‌ಗಳು ಇತ್ಯಾದಿಗಳನ್ನು ಉಪಯೋಗಿಸಬಹುದು. ದೃಷ್ಟಾಂತಗಳು ಮತ್ತು ಉಪಮೆ ಮುಂತಾದ ಶಾಬ್ದಿಕ ನಿದರ್ಶನಗಳನ್ನು ಅಧಿಕಮಟ್ಟದ ಬುದ್ಧಿಶಕ್ತಿಯುಳ್ಳ ಮಕ್ಕಳಿಗೆ ಬೋಧಿಸುವಾಗ ಉಪಯೋಗಿಸಬೇಕು. ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಹಂತದ ವಿದ್ಯಾರ್ಥಿಗಳಿಗೆ ಇವುಗಳನ್ನು ಉಪಯೋಗಿಸಬಹುದು.

**ಸಿ) ಪ್ರಸಕ್ತ ಅಥವಾ ಪ್ರಚಲಿತ ವಿದ್ಯಮಾನಗಳು**

ಶಾಲೆಯಲ್ಲಿ ಗುಣಾತ್ಮಕವಾದ ಪ್ರಸಕ್ತ (ಪ್ರಚಲಿತ) ವಿದ್ಯಮಾನಗಳ ಕಾರ್ಯಕ್ರಮವನ್ನು ಹೊಂದಿರುವುದು ಬಹಳ ಮುಖ್ಯವಾದುದು. ವಿಶ್ವದಲ್ಲಿ ಪ್ರತಿದಿನ, ಪ್ರತಿ ತಿಂಗಳು, ಪ್ರತಿವರ್ಷ ಅನೇಕ ಘಟನೆಗಳು ಸಂಭವಿಸುತ್ತಿರುತ್ತವೆ. ಇದೂ ಅಲ್ಲದೆ ತಮ್ಮ ಸುತ್ತಣ ಪ್ರಪಂಚದಲ್ಲಿ ವಿಶೇಷವಾಗಿ ಉಂಟಾಗುತ್ತಿರುವ ವಿವಾದಾಂಶಗಳನ್ನು ಮತ್ತು ಘಟನೆಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದ ಆವಶ್ಯಕತೆ ಇದೆ.

ಆಸಕ್ತಿಕರವಾದ ಘಟನೆಗಳು ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆಗಳ ಒಂದು ಭಾಗವಾಗುತ್ತಿರಬೇಕು. ವಿದ್ಯಾರ್ಥಿಗಳು ವಿವಿಧ ಘಟನೆಗಳು ಮತ್ತು ವಿದ್ಯಮಾನಗಳಿಗೆ ವಿವರಣೆಯನ್ನು ಹುಡುಕಬೇಕಾದರೆ ತಮ್ಮ ಸುತ್ತಮುತ್ತ ಏನು ನಡೆಯುತ್ತಿದೆ ಎಮಬುದನ್ನು ತಿಳಿದುಕೊಳ್ಳಲೇಬೇಕು. ಹೀಗಾದಲ್ಲಿ ಅವರು ಸುತ್ತಣ ಘಟನೆಗಳ ಸಕ್ರಿಯ ಸಹಭಾಗಿಗಳಾಗುತ್ತಾರೆ. ಮಾಸಿಕ, ಸಾಪ್ತಾಹಿಕ ಮತ್ತು ದೈನಿಕ ಪತ್ರಿಕೆಗಳು ವೈವಿಧ್ಯಮಯ ಮಹತ್ವವಿರುವ ಪ್ರಚಲಿತ ಆಗುಹೋಗುಗಳಿಂದ ತುಂಬಿ ಹೋಗಿರುತ್ತವೆ. ಉತ್ತೇಜನಕಾರಿಯಾದಂಥ ಘಟನೆಗಳು ಮತ್ತು

ಮೋಸ, ವಂಚನೆಯಂಥ ದುಷ್ಟ ಘಟನೆಗಳು ಇರುತ್ತವೆ. ಇತಿಹಾಸ ಬೋಧನೆಯಲ್ಲಿ ಬೋಧಿಸಲು ಉಪಯೋಗಿಸುವ ಪ್ರಚಲಿತ ವಿದ್ಯಮಾನಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಶಿಕ್ಷಕರು ಎಚ್ಚರದಿಂದರಬೇಕು.

ಪ್ರಚಲಿತ ವಿದ್ಯಮಾನಗಳನ್ನು ಬೋಧಿಸಲು ಮೂರು ಉಪಕ್ರಮಗಳಿವೆ:

- ಪ್ರತ್ಯೇಕ ವಿಷಯದ ಉಪಕ್ರಮ
- ಕೇವಲ ಶಾಲೆಯಲ್ಲಿ ಬೋಧಿಸುವ ಪಠ್ಯಕ್ರಮ ಆಧಾರಿತ ಉಪಕ್ರಮ
- ಶಿಕ್ಷಕರಿಂದ ಆಯ್ಕೆ ಮಾಡಿಕೊಂಡ ಘಟನೆಗಳ ಉಪಕ್ರಮ

**ಪ್ರಚಲಿತ ಘಟನೆಗಳನ್ನು ಬೋಧಿಸುವ ಉದ್ದೇಶಗಳು**

- ದೂರದರ್ಶನ, ವರ್ತಮಾನ ಪತ್ರಿಕೆಗಳು ಮತ್ತು ಇತರ ಪತ್ರಿಕೆಗಳು, ಸ್ವತಂತ್ರ ರೇಡಿಯೋ ಚಾನೆಲ್‌ಗಳು ಮುಂತಾದ ಬೇರೆ ಬೇರೆ ನಿಯೋಗಗಳಿಂದ ಪಡೆದುಕೊಳ್ಳುವ ಮಾಹಿತಿಗಳನ್ನು ವಿಮರ್ಶಾತ್ಮಕವಾಗಿ ಮೂಲ್ಯಾಂಕನ ಮಾಡುವುದನ್ನು ಅಭಿವೃದ್ಧಿಪಡಿಸುವುದು.
- ಮಾಹಿತಿಗಳ ಮೂಲಗಳು ಮತ್ತು ಲೇಖಕರ ಆಯ್ಕೆಯಲ್ಲಿ ವಿವೇಚನೆಯನ್ನು ಪ್ರೋತ್ಸಾಹಿಸುವುದು
- ಪಡೆದುಕೊಳ್ಳುವ ಮಾಹಿತಿಗಳು ಮತ್ತು ಅಂಕಿಅಂಶಗಳಲ್ಲಿ ಇರಬಹುದಾದ ಅಸಂಗತತೆಗಳು, ವಿರೋಧಾಭಾಸಗಳು ಮತ್ತು ತಪ್ಪುಗಳನ್ನು ಪರಿಹರಿಸಿಕೊಳ್ಳುವ ಕೌಶಲವನ್ನು ವಿಕಾಸಗೊಳಿಸುವುದು
- ತಥ್ಯಾಂಶಗಳು ಮತ್ತು ಅಭಿಪ್ರಾಯಗಳು ಹಾಗೂ ಪ್ರಧಾನ ಮತ್ತು ಗೌಣ ತಥ್ಯಾಂಶಗಳ ನಡುವೆ ' ವ್ಯತಾಸವನ್ನು ಕಾಣಬಲ್ಲ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಸಿಂಧುತ್ವಪೂರ್ಣ ಸಾಮಾನ್ಯೀಕರಣಗಳನ್ನು ಮಾಡುವ ಸಾಮರ್ಥ್ಯವನ್ನು ವಿಕಾಸಗೊಳಿಸುವುದು
- ಸಾಮಾನ್ಯ ತಿಳುವಳಿಕೆ ಮತ್ತು ಸಹಿಷ್ಣುತೆಯನ್ನು ಪ್ರೋತ್ಸಾಹಿಸುವುದು
- ಜನಗಳು ಮತ್ತು ರಾಷ್ಟ್ರಗಳ ಪಾರಸ್ಪರಿಕ ಅನ್ಯೋನ್ಯ ಅವಲಂಬನೆಯ ಮೌಲ್ಯವೇನೆಂದು ಗ್ರಹಿಸವಂತೆ ಮಾಡುವುದು.

**ಪ್ರಚಲಿತ ಘಟನೆಗಳ ಉದಾಹರಣೆಗಳು**

ಭೂಕಂಪಗಳು, ಸೈಕ್ಲೋನ್(ಚಂಡಮಾರುತ, ಹರಿಕೇನ್ ಅಂದರೆ ಸುಂಟರಗಾಳಿ), ಅತಿಯಾದ ಮಳೆ (ಅತಿವೃಷ್ಟಿ), ಜನಸಂಖ್ಯೆಯ ಸಮಸ್ಯೆ, ಮಾಲಿನ್ಯದ ಸಮಸ್ಯೆಗಳು, ನಿರುದ್ಯೋಗ, ಆರ್ಥಿಕ ಅಭಿವೃದ್ಧಿ, ಮಾರುಕಟ್ಟೆಯ ಪ್ರವೃತ್ತಿ ಮತ್ತು ಷೇರು ಪೇಟೆ, ಬೆಲೆ ಹೆಚ್ಚಳ, ಮುಷ್ಕರಗಳು, ಚುನಾವಣೆಗಳು: ಸರ್ಕಾರದ ಸಮಸ್ಯೆಗಳು ಮತ್ತು ಕಾಯ್ದೆಗಳು. ಯುದ್ಧದ ವಿವಾದಾಂಶಗಳು, ಆರ್ಥಿಕತೆಯ ಪ್ರವೃತ್ತಿಗಳು, ಸರ್ಕಾರೇತರ ಸಂಸ್ಥೆಗಳಿಂದ (ಎನ್.ಜಿ.ಒ) ತೆಗೆದುಕೊಂಡ ಆರಂಭಿಕ ಪ್ರಯತ್ನಗಳು, ಬಹು ಸಂಖ್ಯಿಕ ಅಭಿಪ್ರಾಯ, ಅಂತರರಾಷ್ಟ್ರೀಯ ವಿವಾದಾಂಶಗಳು ಇತ್ಯಾದಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ನಿಮ್ಮ ವಿದ್ಯಾರ್ಥಿಗಳಿಗೆ ಪ್ರಥಮ ಸ್ವಾತಂತ್ರ ಯುದ್ಧದ ಸ್ಪಷ್ಟ ಚಿತ್ರಣದ ತಿಳುವಳಿಕೆ ಇಲ್ಲ. ಅವರಿಗೆ ಅದರ ಸ್ಪಷ್ಟ ಚಿತ್ರಣ ನೀಡಲು ನೀವು ಯಾವ ತಂತ್ರ ನೀತಿಗಳನ್ನು ಉಪಯೋಗಿಸುವಿರಿ.
2. ಪ್ರಶ್ನೋತ್ತರ ಬೋಧನಾ ಕಾರ್ಯನೀತಿಯ ಅನುಕೂಲಗಳು ಮತು ಅನನುಕೂಲತೆಗಳನ್ನು ತುಲನೆ ಮಾಡಿ.

**3.6.4. ಸಾರಾಂಶಿಸೋಣ**

- ಚರ್ಚೆಯು ವಿದ್ಯಾರ್ಥಿಗಳಲ್ಲಿ ಮಾನಸಿಕ ಚಟುವಟಿಕೆ, ನಿರರ್ಗಳತೆ (ಪಟುತ್ವ), ಮತ್ತು ಸುಲಭ ಅಭಿವ್ಯಕ್ತಿ, ಚಿಂತನೆಯಲ್ಲಿ ವಿಚಾರಗಳ ಸ್ಪಷ್ಟತೆ ಮತ್ತು ತಥ್ಯಾಂಶಗಳನ್ನು ಪ್ರಸ್ತುತಗೊಳಿಸುವುದರಲ್ಲಿ ತರಬೇತಿ– ಇವುಗಳನ್ನು ವಿಕಾಸಗೊಳಿಸುತ್ತದೆ.

- ಸಮಸ್ಯಾಪರಿಹಾರ ವಿಧಾನ ಬೋಧನೆ– ಕಲಿಕೆಯ ಒಂದು ವಿಧಾನ. ಈ ವಿಧಾನದಲ್ಲಿ ಕೇಂದ್ರೀಯ ವಿವಾದಾಂಶವಾಗಿರುತ್ತದೆ. ಈ ವಿಧಾನದಲ್ಲಿ ವಿದ್ಯಾರ್ಥಿಗಳು ದತ್ತ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಹಿಡಿಯುವುದರಲ್ಲಿ ತೊಡಗಿಕೊಳ್ಳುತ್ತಾರೆ.
- ಒಂದು ಉತ್ತಮ ಸಮೀಕ್ಷೆ ನಿರ್ದಿಷ್ಟ ಸಮಸ್ಯೆಯನ್ನು ಮತ್ತು ಗುರಿಯನ್ನು ಹೊಂದಿರುತ್ತದೆ. ಅದು ಯೋಜಿಸುವಿಕೆ, ಎಚ್ಚರದಿಂದ ಮಾಡುವ ವಿಶ್ಲೇಷಣೆ ಮತ್ತು ದತ್ತಾಂಶಗಳ ವ್ಯಾಖ್ಯಾನ ಮತ್ತು ಕೌಶಲ್ಯ ಪೂರ್ಣವಾಗಿ ವರದಿ ಮಾಡುವಿಕೆ– ಇವುಗಳನ್ನು ಒಳಗೊಂಡಿರುತ್ತದೆ.
- ಪ್ರಶ್ನೋತ್ತರ ಬೋಧನಾ ವಿಧಾನ ವಿದ್ಯಾರ್ಥಿಗಳ ಜ್ಞಾನವನ್ನು ಪರೀಕ್ಷಿಸಲು ಸಹಾಯ ಮಾಡುತ್ತದೆ.
- ಗೊತ್ತಿರುವುದರಿಂದ ಗೊತ್ತಿಲ್ಲದ ಕಡೆಗೆ ಮುಂದುವರೆಯುವುದು ದೃಷ್ಟಾಂತ ಬೋಧನಾ ವಿಧಾನದ ತತ್ವವಾಗಿದೆ. ದೃಷ್ಟಾಂತಗಳು ಮತ್ತು ಉದಾಹರಣೆಗಳು ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಸಕ್ರಿಯ ಮತ್ತು ಆಸಕ್ತಿಕರಗೊಳಿಸುತ್ತವೆ.
- ಪ್ರಚಲಿತ ವಿದ್ಯಮಾನಗಳ ಬೋಧನೆ ಪಠ್ಯಕ್ರಮದ ಒಂದು ಮುಖ್ಯ ಅಂಶವಾಗಿರಬೇಕು. ಪ್ರಚಲಿತ ವಿದ್ಯಮಾನಗಳ ತಿಳುವಳಿಕೆಯಿಂದ ವಿದ್ಯಾರ್ಥಿಗಳು ತಮ್ಮ ಸುತ್ತಣ ಭೌತಿಕ ಮತ್ತು ಸಾಮಾಜಿಕ ಪರಿಸರ ಮತ್ತು ಇತರ ದೇಶಗಳೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುವ ತಿಳುವಳಿಕೆ ಪಡೆದುಕೊಳ್ಳುತ್ತಾರೆ.

### 3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಈ ಘಟಕದ ಉಪವಿಭಾಗ 3.6.3.1 ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಈ ಘಟಕದ ಉಪವಿಭಾಗ 3.6.3.2 ನೋಡಿ.

### 3.6.6. ಘಟಕಾಂತ್ಯ ಅಭ್ಯಾಸಗಳು

1. ರಾಜ್ಯಶಾಸ್ತ್ರ ವಿಷಯದ ಬೋಧನೆಯ ವಿವಿಧ ವಿಧಾನಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.
2. ರಾಜ್ಯಶಾಸ್ತ್ರದ ನಿರ್ದಿಷ್ಟ ವಿಷಯಗಳನ್ನು ಆಯ್ಕೆಮಾಡಿಕೊಂಡು ಅವುಗಳ ಬೋಧನೆಗೆ ಒಂದು ಯೋಜನೆ ತಯಾರಿಸಿ.

### 3.6.7. ಪರಾಮರ್ಶನ ಸೂಚಿ


1. Teaching of Social Studies, S.K Mangal &Uma Mangal, PHI Learning Private Limited, New Delhi, 2001.
2. Teaching of Social Studies, J C Aggarwal, Vikas Publishing House, New Delhi, 2008.
3. Modern Teaching of Civics/ Political Science, M.H. Syed, Anmol Publications, New Delhi, 2004.
4. Methods of Teaching Civics, J.P Kumar & D.B. Rao, Discovery Publishing House, New Delhi, 2004.
5. Teaching of Economics, Amita Yadav, Anmol Publications, New Delhi, 2004.
6. Teaching of History, S.K Kochhar, Sterling Publishers, New Delhi, 2003.
7. Teaching of History and Civics, Timmareddy, Vidyanidhi Prakashana, Gadag, 2000.

## ಬ್ಲಾಕ್ 4 : ಸಮಾಜ ವಿಜ್ಞಾನಗಳ ಪಠ್ಯಪುಸ್ತಕ ಮತ್ತು ಸಮಾಜ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಾಪನ

## ಘಟಕ 1 : ಸಮಾಜ ವಿಜ್ಞಾನದ ಪಠ್ಯಪುಸ್ತಕದ ಗುಣಲಕ್ಷಣಗಳು

**ಘಟಕದ ರಚನೆ**


4.1.1 ಕಲಿಕಾಉದ್ದೇಶಗಳು
4.1.2. ಪೀಠಿಕೆ
4.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.1.3.1. ಸಮಾಜ ವಿಜ್ಞಾನದಲ್ಲಿ ಪಠ್ಯಪುಸ್ತಕಗಳ ಮಹತ್ವ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
4.1.3.2. ಉತ್ತಮ ಸಮಾಜ ವಿಜ್ಞಾನ ಪಠ್ಯಪುಸ್ತಕದ ಗುಣಲಕ್ಷಣಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.1.4. ಸಾರಾಂಶಿಸೋಣ
4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
4.1.6. ಘಟಕಾಂತ್ಯ ಅಭ್ಯಾಸಗಳು
4.1.7. ಪರಾಮರ್ಶನ ಸೂಚಿ


### 4.1.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಸಮಾಜವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳ ಪ್ರಾಧಾನ್ಯತೆಯನ್ನು ವಿವರಿಸುವರು;
- ಸಮಾಜ ವಿಜ್ಞಾನದಲ್ಲಿನ ಪಠ್ಯಪುಸ್ತಕವೊಂದರ ಗುಣಲಕ್ಷಣಗಳನ್ನು ಗುರುತಿಸಿಕೊಳ್ಳುವರು; ಮತ್ತು
- ಸಮಾಜ ವಿಜ್ಞಾನದ ಪಠ್ಯಪುಸ್ತಕವನ್ನು ಸಿದ್ಧಪಡಿಸುವುದಕ್ಕೆ ಅಗತ್ಯವಾದ ಅರ್ಹತೆ ಮತ್ತು ಸಾಮರ್ಥ್ಯಗಳನ್ನು ವಿಶ್ಲೇಷಿಸುವರು.

### 4.1.2. ಪೀಠಿಕೆ

ಹಿಂದಿನ ಘಟಕಗಳಲ್ಲಿ, ನಾವು ಸಮಾಜ ವಿಜ್ಞಾನದ ವ್ಯಾಖ್ಯೆ, ಅರ್ಥ ಮತ್ತು ವ್ಯಾಪ್ತಿಯ ಬಗೆಗೆ ತಿಳಿದುಕೊಂಡೆವು. ಸಮಾಜ ವಿಜ್ಞಾನದ ವ್ಯಾಪ್ತಿ ಮತ್ತು ವಿವಿಧ ಆಯಾಮಗಳ ಮೌಲ್ಯವೇನೆಂದು ಅರ್ಥ ಮಾಡಿಕೊಂಡೆವು. ಇಂತಹ ವ್ಯಾಪಕ ಕ್ಷೇತ್ರದ ವ್ಯವಸ್ಥಿತ ಅಧ್ಯಯನಕ್ಕೆ ಅನೇಕ ಸಂಪನ್ಮೂಲಗಳ ಅಗತ್ಯವಿದೆ. ಅಂತಹ ಮುಖ್ಯವಾದ ಸಂಪನ್ಮೂಲಗಳಲ್ಲಿ ನಿರ್ದಿಷ್ಟ ಉದ್ದೇಶದೊಂದಿಗೆ ಸಿದ್ದಪಡಿಸಲಾಗುವ ಪಠ್ಯಪುಸ್ತಕವೂ ಒಂದು. ಮುಂದಿನ ಪುಟಗಳಲ್ಲಿ ಒಳ್ಳೆಯ ಪಠ್ಯಪುಸ್ತಕದ ಗುಣಲಕ್ಷಣಗಳನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಂಡು ಸಮಾಜ ವಿಜ್ಞಾನದಲ್ಲಿ ಪಠ್ಯಪುಸ್ತಕಗಳ ಮಹತ್ವದ ಕುರಿತಾಗಿ ವಿಚಾರಮಾಡೋಣ.

### 4.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 4.1.3.1. ಸಮಾಜ ವಿಜ್ಞಾನದಲ್ಲಿ ಪಠ್ಯಪುಸ್ತಕಗಳ ಮಹತ್ವ

ಯಾವುದೇ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಬಹಳ ಮುಖ್ಯವಾದ ಪರಾಮರ್ಶನ ಸಾಮಗ್ರಿ ಮತ್ತು ಸಂಪನ್ಮೂಲಗಳಲ್ಲಿ ಪಠ್ಯಪುಸ್ತಕವೂ ಒಂದು. ಇದಕ್ಕೆ ಕಾರಣ, ಬಹಳಷ್ಟು ಶೈಕ್ಷಣಿಕ ಚಟುವಟಿಕೆಗಳು ಪಠ್ಯಪುಸ್ತಕಗಳ ಚೌಕಟ್ಟಿನಲ್ಲಿಯೇ ನಡೆಯುತ್ತವೆ. ಬಹುಮಟ್ಟಿನ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಚಟುವಟಿಕೆಗಳು ಮತ್ತು ಶೈಕ್ಷಣಿಕ ಅನುಭವಗಳು ಪಠ್ಯಪುಸ್ತಕಗಳ ಚೌಕಟ್ಟಿನಲ್ಲಿಯೇ ಜರುಗುತ್ತವೆ.

ಪಠ್ಯಪುಸ್ತಕಗಳು ಬಹಳಷ್ಟು ಸಮಯ ಬೋಧನೆಯ ಒಂದು ಬಹುಮುಖ್ಯ ಉಪಕರಣವಾಗಿದೆ. ಇದಕ್ಕೆ ಕಾರಣ ಇದು ಏನನ್ನು ಬೋಧಿಸಬೇಕು ಎಂಬುದನ್ನು ನಿರ್ಧರಿಸುವುದಷ್ಟೇ ಅಲ್ಲದೆ, ಅದನ್ನು ಹೇಗೆ ಬೋಧಿಸಬೇಕು ಎಂಬುದನ್ನು ನಿಶ್ಚಯಿಸುತ್ತದೆ. ಟೆಲಿವಿಷನ್, ಕಂಪ್ಯೂಟರ್, ಇಂಟರ್‌ನೆಟ್ ಮತ್ತು ಇತರ

ಹೊಸ ಮಾಧ್ಯಮಗಳು ಮುದ್ರಿತ ಸಂವಹನ ಮಾಧ್ಯಮಗಳೊಂದಿಗೆ ಪೈಪೋಟಿಗೆ ಇಳಿದಿವೆಯಾದರೂ ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕಗಳು ಇಂದಿಗೂ ಒಂದು ಪ್ರಮುಖ ಸಂಪನ್ಮೂಲವಾಗಿ ಮುಂದುವರೆದಿದೆ. ಶಿಕ್ಷಕ ವಿದ್ಯಾರ್ಥಿಗಳಿಬ್ಬರಿಗೂ ಪಠ್ಯಪುಸ್ತಕವು ಅತ್ಯಂತ ಅಗ್ಗವೂ ಕೊಳ್ಳಲು ಸುಲಭವೂ ಆಗಿದೆ. ಪಠ್ಯಪುಸ್ತಕಗಳ ಮಹತ್ವವನ್ನು ತಿಳಿದುಕೊಳ್ಳುವದಕ್ಕೆ ಮುಂಚೆ ನಾವೀಗ ಪಠ್ಯಪುಸ್ತಕ ಎಂಬುದರ ಸಾಮಾನ್ಯ ಅರ್ಥವೇನೆಂದು ತಿಳಿದುಕೊಳ್ಳೋಣ.

ಪಠ್ಯಪುಸ್ತಕವೆಂದರೆ ಒಂದು ಆಯ್ದ ವಿಷಯ ಅಥವಾ ಕೋರ್ಸಿಗೆ ಸಂಬಂಧಿಸಿದ ಜ್ಞಾನ, ಪರಿಕಲ್ಪನೆ ಮತ್ತು ನಿಯಮಗಳ ಸಂಗ್ರಹ. ಆಯಾ ವಿಷಯ ಕ್ಷೇತ್ರದಲ್ಲಿ ತಜ್ಞರಾದ ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಇಂತಹ ಪಠ್ಯಪುಸ್ತಕವನ್ನು ರಚಿಸುತ್ತಾರೆ. ಹಲವು ಪಠ್ಯಪುಸ್ತಕಗಳು ಸಂಪೂರ್ಣ ಶೈಕ್ಷಣಿಕ ಕಾರ್ಯಕ್ರಮ ಪರ್ಯಂತ ಉಪಯೋಗಿಸಬೇಕಾದ ಪೂರಕ ಬೋಧನ ಸಾಮಗ್ರಿಗಳು, ವಿಚಾರಗಳು ಮತ್ತು ಚಟುವಟಿಕೆಗಳನ್ನು ಒದಗಿಸುವ ಶಿಕ್ಷಕ ಮಾರ್ಗದರ್ಶಿಯೊಂದಿಗೆ ಲಭ್ಯವಿರುತ್ತವೆ.

ನಾವೀಗ ಪಠ್ಯಪುಸ್ತಕಗಳ ಕೆಲವು ವ್ಯಾಖ್ಯೆಗಳ ಕಡೆಗೆ ಗಮನಹರಿಸೋಣ. ಪಠ್ಯಪುಸ್ತಕವನ್ನು ಬೋಧನೆ–ಕಲಿಕೆಯ ಪ್ರಕ್ರಿಯೆಯನ್ನು ಸುಗಮಗೊಳಿಸುವ ಬೋಧನೆಯ ಒಂದು ಉಪಕರಣವೆಂದು ವ್ಯಾಖ್ಯಾನಿಸಲಾಗಿದೆ. ಇದನ್ನು ನಿಗದಿಪಡಿಸಿದ ಪಠ್ಯಕ್ರಮವನ್ನು ಆಧಾರವಾಗಿಟ್ಟುಕೊಂಡು ರೂಪಿಸಲಾಗುತ್ತದೆಯಲ್ಲದೆ ಅದರಲ್ಲಿ ಪಠ್ಯವಿಷಯ ವಸ್ತುವಿನ ಮುಖ್ಯ ನಿಯಮಗಳನ್ನು ಆಯ್ಕೆ ಮಾಡಿ ಯುಕ್ತಾಯುಕ್ತವಾಗಿ ಸಂಗ್ರಹರೂಪದಲ್ಲಿ ವ್ಯವಸ್ಥಿತಗೊಳಿಸಲಾಗುತ್ತದೆ. ಬೋಧನೆಯನ್ನು ಸುಗಮಗೊಳಿಸುವುದಕ್ಕೋಸ್ಕರ ಅವುಗಳನ್ನು ವಿದ್ಯಾರ್ಥಿಗಳ ಮಾನಸಿಕ ಸಂರಚನೆ ಮತ್ತು ಮನೋವೈಜ್ಞಾನಿಕ ಆವಶ್ಯಕತೆಗಳಿಗೆ ತಕ್ಕಂತೆ ತರ್ಕಬದ್ಧವಾಗಿ ಸಂಯೋಜಿಸಲಾಗುತ್ತದೆ. ಕೆಲವು ವೇಳೆ ಪಠ್ಯಪುಸ್ತಕವನ್ನು " ಮುದ್ರಣ ರೂಪದ ಶಿಕ್ಷಕ" ಎಂದು ಕರೆಯುವುದುಂಟು.

ವೆಬ್‌ಸ್ಟರ್ ನಿಘಂಟು ಪಠ್ಯಪುಸ್ತಕವನ್ನು ಒಂದು ಕೈಪಿಡಿಯೆಂದೂ ಬೋಧನೆಗೆ ಆಧಾರವಾಗಿ ಬಳಸಲಾಗುವ, ಪಠ್ಯವಿಷಯವೊಂದರ ನಿಯಮಗಳನ್ನು ಪ್ರಸ್ತುತಪಡಿಸುವ ಪುಸ್ತಕವೆಂದೂ ವ್ಯಾಖ್ಯಾನಿಸುತ್ತದೆ.

ಎನ್‌ಸೈಕ್ಲೊಪಿಡಿಯ ಆಫ್ ಎಜುಕೇಷನಲ್ ರಿಸರ್ಚ್ (ಮೂರನೇ ಆವೃತ್ತಿ) ಎಂಬ ವಿಶ್ವಕೋಶದ ಪ್ರಕಾರ, ಆಧುನಿಕ ದೃಷ್ಟಿಯಲ್ಲಿ ಮತ್ತು ಸಾಮಾನ್ಯವಾಗಿ ಅರ್ಥಮಾಡಿಕೊಂಡಂತೆ ಹೇಳುವುದಾದರೆ, ಪಠ್ಯಪುಸ್ತಕ ಎಂಬುದು ಶಾಲಾ ಕಾಲೇಜುಗಳಲ್ಲಿ ಬೋಧನೆಯ ಕಾರ್ಯಕ್ರಮವನ್ನು ಬೆಂಬಲಿಸಲು ಉಪಯೋಗಿಸಲಾಗುವ ಒಂದು ಕಲಿಕೆಯ ಉಪಕರಣ. ಸಾಮಾನ್ಯವಾಗಿ ತಿಳಿದಿರುವ ಹಾಗೆ ಪಠ್ಯಪುಸ್ತಕವು ಮುದ್ರಿತವಾಗಿರುತ್ತದೆ, ಅದು ಎಲ್ಲರೂ ಓದುವುದಕ್ಕಾಗಿ ಅಲ್ಲ, ಅದನ್ನು ಗಟ್ಟಿ ರೊಟ್ಟಿನಿಂದ ಮಾಡಲಾಗಿರುತ್ತದೆ, ನಿರ್ದಿಷ್ಟ ಬೋಧನಾ ಉದ್ದೇಶಗಳನ್ನು ಈಡೇರಿಸುವಂಥದ್ದಾಗಿರುತ್ತದೆ ಮತ್ತು ಅದನ್ನು ಕಲಿಕಾರ್ಥಿಗೆ ನೀಡಲಾಗುತ್ತದೆ.

ಶಿಕ್ಷಣದ ನಿಘಂಟು ಪಠ್ಯಪುಸ್ತಕವನ್ನು ಬೋಧನೆಯ ಕೈಪಿಡಿ ಎಂದೂ ವ್ಯವಸ್ಥಿತವಾಗಿ ಜೋಡಿಸಿರುವ ಒಂದು ನಿರ್ದಿಷ್ಟ ಅಧ್ಯಯನದ ವಿಷಯವನ್ನು ಕುರಿತಾಗಿರುವ, ಒಂದು ನಿಗದಿತ ಬೋಧನೆಯ ಮಟ್ಟಕ್ಕೆಂದು ಬಳಸಲಾಗುವ ಹಾಗೂ ಒಂದು ಕೋರ್ಸಿಗೆ ಅಧ್ಯಯನದ ಪ್ರಮುಖ ಸಾಮಗ್ರಿಯಾಗಿ ಬಳಲಾಗುವ ಪುಸ್ತಕ ಎಂದೂ ವಿವರಿಸುತ್ತದೆ. ಮಾರ್ಷ್ ಎಂಬಾತ ಪಠ್ಯಪುಸ್ತಕವನ್ನು ವಿದ್ಯಾರ್ಥಿಗಳಿಗೆ ಅಭಿಪ್ರೇರಣೆಯನ್ನು ನೀಡಲು, ಅವರಿಗೆ ಒಂದು ವಿಷಯ ಅಥವಾ ಸಮಸ್ಯೆಯ ಬಗ್ಗೆ ಗರಿಷ್ಠಮಟ್ಟದ ಅರಿವನ್ನು ಒದಗಿಸಲು ಶಿಕ್ಷಕರು ಉಪಯೋಗಿಸುವ ಒಂದು ಉಪಕರಣವಾಗಿದೆ ಎಂದು ವ್ಯಾಖ್ಯಾನಿಸುತ್ತಾನೆ.

ಎಸ್.ಕೆ. ಕೊಚ್ಚರ್ ಪಠ್ಯಪುಸ್ತಕವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ– 'ಅಧ್ಯಯನ ವಿಷಯವೊಂದಕ್ಕೆ ಆಧಾರವಾಗಿ ಸಂಪೂರ್ಣವಾಗಿ ಅಥವಾ ಆಂಶಿಕವಾಗಿ ಉಪಯೋಗಿಸಲಾಗುವ ಪುಸ್ತಕವನ್ನು ಪಠ್ಯಪುಸ್ತಕ ಎನ್ನುತ್ತೇವೆ.' ಇದು ಆಯ್ಕೆಮಾಡಿದ ಮತ್ತು ವ್ಯವಸ್ಥಿತಗೊಳಿಸಿದ ಜ್ಞಾನವನ್ನು ಒಳಗೊಂಡಿರುವ ವಿಶೇಷವಾಗಿ

ಬರೆದ ಪುಸ್ತಕವಾಗಿರುತ್ತದೆ. ಪಠ್ಯಪುಸ್ತಕದಲ್ಲಿ ಸುಸಂಬದ್ಧತೆ ಮತ್ತು ಕ್ರಮಬದ್ಧತೆಯಿರುವಂತೆ ಎಚ್ಚರಿಕೆ ವಹಿಸಲಾಗುತ್ತದೆ. ಇದನ್ನು ಉದ್ದೇಶಿತ ಕಲಿಕಾರ್ಥಿಗೆ ತಕ್ಕಂತೆ ಸರಳವಾಗಿ ರಚಿಸಲಾಗಿರುತ್ತದೆ.

ಪಠ್ಯಪುಸ್ತಕದ ವ್ಯಾಖ್ಯಾನಗಳನ್ನು ನಾವು ವಿಶ್ಲೇಷಿಸಿದಾಗ ನಮಗೆ ಪಠ್ಯಪುಸ್ತಕದ ಕೆಲವು ಗುಣಲಕ್ಷಣಗಳು ಕಂಡುಬರುತ್ತವೆ;

- ಇದೊಂದು ಬೋಧನೆಯ ಕೈಪಿಡಿ.
- ವಿಷಯವೊಂದರ ಪ್ರಮಾಣಿತ ಪುಸ್ತಕ.
- ಇದು ಪಠ್ಯ ವಿಷಯವಸ್ತುವೂ ಹೌದು, ಬೋಧನೆಯ ತಂತ್ರವೂ ಹೌದು.
- ಇದು ಆಯ್ಕೆಗೊಂಡ ವಿಷಯವಸ್ತುವನ್ನು ಒಳಗೊಂಡಿರುತ್ತದೆ.
- ಇದು ವಿದ್ಯಾರ್ಥಿ ಮತ್ತು ಶಿಕ್ಷಕ– ಇವರಿಬ್ಬರನ್ನು ಉದ್ದೇಶಿತವಾಗಿಟ್ಟುಕೊಂಡು ಸಿದ್ಧಪಡಿಸಲಾಗಿರುತ್ತದೆ.
- ಇದು ಪಠ್ಯವಿಷಯವನ್ನು ಶ್ರೇಣಿಗತ ರೀತಿಯಲ್ಲಿ ಪ್ರಸ್ತುತಪಡಿಸುತ್ತದೆ.
- ಇದರ ಆಧಾರದ ಮೇಲೆ ಕೋರ್ಸನ್ನು ವಿನ್ಯಾಸಗೊಳಿಸಲಾಗಿರುತ್ತದೆ.
- ಇದನ್ನು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣಗಳೆರಡೆಲ್ಲಿಯೂ ಉಪಯೋಗಿಸಲಾಗುತ್ತದೆ.
- ಪಠ್ಯವಿಷಯವೊಂದರ ಬೋಧನೋದ್ದೇಶಗಳನ್ನು ಸಾಕಾರಗೊಳಿಸಲು ಇದೊಂದು ಉಪಕರಣವಾಗಿದೆ.
- ಒಂದು ನಿರ್ದಿಷ್ಟ ಕೋರ್ಸಿನ ಅಧ್ಯಯನ ಸಾಮಗ್ರಿಯ ಪ್ರಮುಖ ಆಕರವಾಗಿದೆ.
- ಲಭ್ಯವಿರುವ ಬೋಧನಾ ಸಾಮಗ್ರಿಗಳಲ್ಲಿ ಇದು ಅತ್ಯಂತ ಅಗ್ಗದ ಬೋಧನಾ ಸಾಮಗ್ರಿಯಾಗಿದೆ.

ಬಹಳ ಕಾಲದಿಂದಲೂ ಪಠ್ಯಪುಸ್ತಕಗಳು ಸಮಾಜ ವಿಜ್ಞಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತಲೇ ಬಂದಿವೆ. ಬಹುತೇಕ ಶಿಕ್ಷಕರು, ವಿಶೇಷವಾಗಿ ಮೂರನೆ ತರಗತಿ ಮತ್ತು ಮೇಲಿನ ತರಗತಿಯ ಶಿಕ್ಷಕರು, ಸಮಾಜ ವಿಜ್ಞಾನದ ಬೋಧನೆಯಲ್ಲಿ ಪಠ್ಯಪುಸ್ತಕಗಳು ಬಹುಮೂಲ್ಯ ಬೋಧನೋಪಕರಣವೆಂದು ಪರಿಗಣಿಸುತ್ತಾರೆ. ಬಹಳಷ್ಟು ಸಮಾಜ ವಿಜ್ಞಾನ ಕಾರ್ಯಕ್ರಮಗಳಲ್ಲಿ ಪಠ್ಯಪುಸ್ತಕಗಳು ಬೋಧನೆಯ ತಿರುಳಂತೆ ಇರುತ್ತವೆಯಲ್ಲದೆ ಅವುಗಳನ್ನು ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಲಾಗುತ್ತದೆ. ಕೆಲವು ಶಿಕ್ಷಕರು ಪಠ್ಯಪುಸ್ತಕವನ್ನು ಬೋಧನೆಯ ಆಧಾರದಂತೆ ಉಪಯೋಗಿಸುತ್ತಾ ಪಠ್ಯಪುಸ್ತಕದಲ್ಲಿನ ಬೋಧನಾ ಕ್ರಮಗಳನ್ನು ಅನುಸರಿಸುತ್ತಾರೆ. ಇನ್ನು ಕೆಲವು ಶಿಕ್ಷಕರು ಮೂಲಭೂತ ಪಠ್ಯವನ್ನು ಆಧಾರ ಮಾರ್ಗದರ್ಶಿಯಾಗಿ ಅಳವಡಿಸಿಕೊಳ್ಳುತ್ತಾರೆ. ಆದರೆ, ಪಠ್ಯದ ಬೇರೆ ಬೇರೆ ಅಧ್ಯಾಯಗಳಿಗೆ ಇನ್ನಿತರ ವಾಚನ ಸಾಮಗ್ರಿ ಮತ್ತು ಶ್ರವಣ ದೃಶ್ಯ ಸಾಮಗ್ರಿಗಳನ್ನು ಪೂರಕವಾಗಿ ಬಳಸುತ್ತಾರೆ. ಈ ಉಪಕ್ರಮ ಏಕಮೇವ ಪಠ್ಯಪುಸ್ತಕದ ಮೇಲಿನ ಸಂಪೂರ್ಣ ಅವಲಂಬನೆಗಿಂತ ಒಂದು ಹೆಜ್ಜೆ ಮುಂದಿನದು ಎನ್ನಬಹುದು.

ಸಮಾಜ ವಿಜ್ಞಾನದ ವಿಜ್ಞಾನದಲ್ಲಿ ಪಠ್ಯಪುಸ್ತಕದ ಪ್ರಾಧಾನ್ಯತೆಯನ್ನು ಅದು ಈಡೇರಿಸುವ ಮುಖ್ಯ ಉದ್ದೇಶಗಳಿಂದ ಅರ್ಥ ಮಾಡಿಕೊಳ್ಳಬಹುದು. ಈ ಕೆಳಗಿನ ಉದ್ದೇಶಗಳನ್ನು ಪಠ್ಯಪುಸ್ತಕವು ಈಡೇರಿಸುತ್ತದೆ.

- ಶಿಕ್ಷಕರಿಗೆ ನೆರವಾಗುವುದು: ಇದು ಅಗತ್ಯವಾದ ದೈನಂದಿನ ಬೋಧನೆಗೆ ಮಾರ್ಗದರ್ಶನಗಳನ್ನು, ಕಾರ್ಯಯೋಜನೆಗಳಿಗೆ ಸಲಹೆಗಳನ್ನು ಕೊಡುವುದಲ್ಲದೆ ಶಿಕ್ಷಕರಿಗೆ ಒಂದು ಪರಾಮರ್ಶನ ಗ್ರಂಥದಂತೆ ಕೆಲಸ ಮಾಡುತ್ತದೆ.
- ವಿದ್ಯಾರ್ಥಿಗಳಿಗೆ ನೆರವಾಗುವುದು: ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಅತಿ ಸುಲಭವಾಗಿ ಸಿಗುವ ಮಾರ್ಗದರ್ಶಿಯೂ ಪರಾಮರ್ಶನ ಗ್ರಂಥವೂ ಆಗಿ ಸದಾ ಲಭ್ಯವಾಗುವಂತಿರುತ್ತದೆ.
- ಒಂದೇ ಸ್ಥಳದಲ್ಲಿ ಆವಶ್ಯಕ ಜ್ಞಾನ ಒದಗಿಸುವುದು: ಪಠ್ಯಪುಸ್ತಕವು ಸಮಾಜ ವಿಜ್ಞಾನದ ಶಿಕ್ಷಕರಿಗೆ ಪರ್ಯಾಯವಾಗಿ ಇರಬಲ್ಲುದಲ್ಲದೆ, ಅತ್ಯಾವಶ್ಯಕ ಜ್ಞಾನವನ್ನು ಒಂದೆಡೆ ಒದಗಿಸುವುದು.

- ಸ್ವಯಂ ಬೋಧನೆಯಲ್ಲಿ ನೆರವಾಗುವುದು: ಮುದ್ರಿತ ಸಾಮಗ್ರಿಯ ಮೂಲಕ ಸ್ವಯಂ ಬೋಧನೆಯನ್ನು ಸಾಧ್ಯವಾಗಿಸಲು ಪಠ್ಯಪುಸ್ತಕ ಸಹಾಯಕವಾಗಿದೆ.
- ತರ್ಕಬದ್ಧ ಸಮಗ್ರ ಸಾಮಗ್ರಿಗಳನ್ನು ಒದಗಿಸುವುದು: ಒಳ್ಳೆಯ ಪಠ್ಯಪುಸ್ತಕ ಪಠ್ಯಸಾಮಗ್ರಿಯನ್ನು ತರ್ಕಬದ್ಧ, ವ್ಯವಸ್ಥಿತ ಮತ್ತು ಸಮಗ್ರರೂಪದಲ್ಲಿ ಒದಗಿಸುತ್ತದೆ.
- ಸಮಾನತೆ ಮತ್ತು ಶ್ರೇಷ್ಠ ಪ್ರಮಾಣಕವನ್ನು ಖಚಿತಪಡಿಸುವುದು: ಎಲ್ಲ ಶಾಲೆಗಳಿಗೂ ಉತ್ತಮ ಆಚರಣೆಗಳನ್ನು ಕೊಂಡೊಯ್ಯುವ ರಾಜಮಾರ್ಗದಂತೆ ವರ್ತಿಸುತ್ತದೆ. ಎಲ್ಲ ಶಾಲೆಗಳಲ್ಲಿ ಒಂದು ರೀತಿಯ ಸಮಾನತೆಯನ್ನು ತರಲು ಇದು ನೆರವಾಗುತ್ತದೆ.
- ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ಆರಂಭಿಸಿ ಮುಂದುವರೆಯಲು ಒಂದು ಆಧಾರವನ್ನು ಒದಗಿಸುತ್ತದೆ. ಶಿಕ್ಷಕರು, ವಿದ್ಯಾರ್ಥಿಗಳಿಬ್ಬರೂ ಒಟ್ಟಾಗಿ ಅನ್ವೇಷಿಸಲು ಸಾಧ್ಯವಾಗುವಂತೆ ಒಂದು ಸಾಮಾನ್ಯ ನೆಲೆಗಟ್ಟನ್ನು ಒದಗಿಸುತ್ತದೆ.
- ದೃಢೀಕರಣ ಮತ್ತು ಪಠ್ಯವಸ್ತುವನ್ನು ಒದಗಿಸುವುದು: ಪಠ್ಯಪುಸ್ತಕಗಳು ಬೇರೊಂದೆಡೆ ಲಭ್ಯವಾದ ಜ್ಞಾನವನ್ನು ದೃಢೀಕರಿಸಬಲ್ಲದು.
- ಬಹುಪಾಲು ಭಾರತೀಯ ಶಾಲೆಗಳಲ್ಲಿ ತರಗತಿಯ ಪರಿಸ್ಥಿತಿಯ ಮಿತಿಗಳನ್ನು ಸ್ಪಷ್ಟೀಕರಿಸುವುದು: ವಿದ್ಯಾರ್ಥಿಗಳ ಸಂಖ್ಯೆ, ದೀರ್ಘಾವಧಿಯ ಕೋರ್ಸುಗಳು, ವೈವಿಧ್ಯಮಯ ಅಭಿಮತಗಳು, ಇತರ ಬೋಧನಾ ಸಾಮಗ್ರಿಗಳ ಅಲಭ್ಯತೆ– ಇವೆಲ್ಲಾ ಅಂಶಗಳು ಪಠ್ಯಪುಸ್ತಕಗಳ ಬಳಕೆಯನ್ನು ಅನಿವಾರ್ಯವನ್ನಾಗಿಸಿದವು.
- ಕಲಿಕಾರ್ಥಿಗಳ ಮತ್ತು ಶಿಕ್ಷಕರ ನಡುವೆ ಬೌದ್ಧಿಕ ಮೈತ್ರಿಯನ್ನು ಖಚಿತಪಡಿಸುವುದು: ಇದು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಸಂಯೋಜಿಸುವುದು.

ಹೀಗೆ, ಪಠ್ಯಪುಸ್ತಕಗಳು ಪಠ್ಯವಿಷಯವೊಂದರ ಅಧ್ಯಯನ ಮತ್ತು ಬೋಧನೆಗೆ ಅತ್ಯಾವಶ್ಯಕವಾಗಿವೆ. ಶಿಕ್ಷಕರು ತಮ್ಮ ದೈನಂದಿನ ಬೋಧನೆಯನ್ನು ಯೋಜಿಸಲು ಉಪಯುಕ್ತ ಮಾರ್ಗದರ್ಶಿ ಸೂತ್ರಗಳನ್ನು ಪಠ್ಯಪುಸ್ತಕ ಒದಗಿಸುತ್ತದೆ; ತರಗತಿಯಲ್ಲಿ ಬೋಧನೆ ಕೈಗೊಳ್ಳುತ್ತಿರುವಾಗಲೇ ಇದು ಒಂದು ಪರಾಮರ್ಶನ ಗ್ರಂಥದಂತೆ ಕೆಲಸ ಮಾಡುತ್ತದೆ; ಕಾರ್ಯಯೋಜನೆಗೆ ಸಲಹೆ ಸೂಚನೆಗಳನ್ನು ಕೊಡುತ್ತದೆ; ತರಗತಿಯ ಒಳಗೆ ಮತ್ತು ಹೊರಗೆ ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುತ್ತದೆ. ವಿದ್ಯಾರ್ಥಿಗಳು ತರಗತಿಯ ಕಲಿಕೆಗೆ ಮುಂಚಿತವಾಗಿಯೇ ಸಿದ್ಧವಾಗಲು ಪಠ್ಯಪುಸ್ತಕವನ್ನು ಬಳಸುತ್ತಾರೆ; ತರಗತಿಯಲ್ಲಿ ಕಲಿಯುವಾಗ ಇದನ್ನು ಪರಾಮಶಿಸುತ್ತಾರೆ. ತರಗತಿಯ ಕಲಿಕೆಯನ್ನು ಇದರ ನೆರವಿನಿಂದ ಪರಿಷ್ಕರಿಸಿ ಪುನರ್ಬಲನಗೊಳಿಸುತ್ತಾರೆ; ಮನೆಯಲ್ಲಿ ಕೊಟ್ಟಿರುವ ಕಾರ್ಯಯೋಜನೆಯನ್ನು ಪೂರೈಸುತ್ತಾರೆ; ಪರೀಕ್ಷೆಗಾಗಿ ಸಿದ್ಧವಾಗುತ್ತಾರೆ; ಆನಂದಕ್ಕಾಗಿ ಓದುತ್ತಾರೆ; ಮುಂದಿನ ಅಧ್ಯಯನಗಳಿಗೆ ಅದರಿಂದ ಮಾರ್ಗದರ್ಶನವನ್ನು, ಪರಾಮರ್ಶನೆಯನ್ನು ಪಡೆಯುತ್ತಾರೆ. ಒಂದೇ ಸ್ಥಳದಲ್ಲಿ ಅತ್ಯಾವಶ್ಯಕ ಕನಿಷ್ಠ ಜ್ಞಾನವನ್ನು ಪಡೆಯುತ್ತಾನೆ. ಎಲ್ಲ ಶಿಕ್ಷಕರು ವಾಸ್ತವಾಂಶಗಳನ್ನು ಅರಿಸಿ ಹೊರತೆಗೆಯಲು ಸಮರ್ಥರಾಗಿರುವುದಿಲ್ಲ. ಕೆಲವು ಪ್ರಬುದ್ಧ, ಪ್ರಶಿಕ್ಷಿತ ಅನುಭವಿ ಶಿಕ್ಷಕರು ಪಠ್ಯಪುಸ್ತಕಗಳ ರೂಪುರೇಖೆಗಳನ್ನು ಅನುಸರಿಸಿ ಮೂಲ ಪಠ್ಯಪುಸ್ತಕದ ಅವಲಂಬನೆಯನ್ನು ಬಿಡಲು ಸಮರ್ಥರಾಗಬಲ್ಲರು. ಆದರೆ, ಬಹುಪಾಲು ಶಿಕ್ಷಕರು ಹೀಗೆ ಮಾಡಲಾರರು, ಮಾಡಲೂಬಾರದು.

ಸ್ವಯಂ ಬೋಧನೆಯಲ್ಲಿ ನೆರವು: ಉಪನ್ಯಾಸವೆಂಬ ಮಾಧ್ಯಮದ ಮುಖಾಂತರ ಶಿಕ್ಷಣವನ್ನು ನೀಡುವ ಪದ್ಧತಿಗೆ ಹೆಚ್ಚು ಮೌಲ್ಯವಿದೆ. ವಿಶೇಷವಾಗಿ, ಶಿಕ್ಷಕರಲ್ಲಿ ಪ್ರತಿಭಾವಂತರಿಗೆ ಸ್ಫೂರ್ತಿ ನೀಡುವಂತಹ ಮತ್ತು ಸಾಧಾರಣ ವಿದ್ಯಾರ್ಥಿಗಳಿಗೆ ಪ್ರೋತ್ಸಾಹನ ನೀಡುವಂತಹ ವಿಶೇಷ ಕುಶಲತೆಗಳು ಶಿಕ್ಷಕರು ಹೊಂದಿದ್ದಲ್ಲಿ ಇದು ಸುಸಂಗತ. ಅತ್ಯುತ್ತಮವಾಗಿ ಮಾತನಾಡಿ ರವಾನಿಸಿದ ಸಂದೇಶವೂ ಕ್ಷಣಿಕ ಸ್ವರೂಪದ್ದೇ ಆಗಿರುತ್ತವೆಯಲ್ಲದೆ, ಅತ್ಯಂತ ಏಕಾಗ್ರತೆಯಿಂದ ಕೇಳುವ ವಿದ್ಯಾರ್ಥಿಯೂ ಪಾಠದಲ್ಲಿನ ಸಹಜ ಸಂಬಂಧವನ್ನು ಗ್ರಹಿಸುವಲ್ಲಿ ವಿಫಲನಾಗುತ್ತಾನೆ ಎಂಬ ವಾಸ್ತವ ಸಂಗತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮುದ್ರಿತ ಸಾಮಗ್ರಿಗಳ ಮೂಲಕ ಸ್ವಯಂ ಬೋಧನೆಯು ಸಾಧ್ಯವಾಗಬಲ್ಲ ಒಂದು

ಕಾರ್ಯವನ್ನಾಗಿಸುವುದರಲ್ಲಿ ಪಠ್ಯಪುಸ್ತಕದ ಕೊಡುಗೆ ಇದೆ. ಈ ರೀತಿ ಒಳ್ಳೆಯ ಪಠ್ಯಪುಸ್ತಕವು ಮನೆಯಲ್ಲಿ ಅನಕ್ಷರಸ್ಥರ ರಕ್ಷಾ ಕವಚದಂತೆ ಇರುತ್ತದೆ.

ಒಳ್ಳೆಯ ಪಠ್ಯಪುಸ್ತಕವು ಪಠ್ಯಸಾಮಗ್ರಿಯನ್ನು ವ್ಯವಸ್ಥಿತವಾದ, ಸಮಗ್ರವಾದ ರೂಪದಲ್ಲಿ ಒದಗಿಸುತ್ತದೆ. ಆದ್ದರಿಂದಲೇ, ಇದು ಎಲ್ಲ ವರ್ಗಗಳ ವಿದ್ಯಾರ್ಥಿಗಳು ಗಳಿಸಬೇಕಾದ ಕನಿಷ್ಠವೂ ಅಗತ್ಯವೂ ಆದ ಮಾನದಂಡವನ್ನು ನಿರ್ಧರಿಸುತ್ತದೆ. ಪ್ರಾರಂಭಿಕ ವಿದ್ಯಾರ್ಥಿಗಳಿಗೆ ಹೊಸ ಪಠ್ಯವಿಷಯದ ಮೇಲೆ ಹಿಡಿತವನ್ನು ನೀಡುತ್ತದೆ. ಉತ್ಸಾಹಿ ವಿದ್ಯಾರ್ಥಿಗಳಿಗೆ ಮುಂದಿನ ಅಧ್ಯಯನಗಳಿಗೆ ದಾರಿ ತೋರುತ್ತದೆ. ಸಮಾನ ಮಾನದಂಡವನ್ನು ಖಾತ್ರಿಪಡಿಸುತ್ತದೆ. ವಾಚನ, ವಿಶ್ಲೇಷಣೆ, ರೂಪುರೇಖೆ ರಚಿಸುವಿಕೆ ಮತ್ತು ಸಾರಾಂಶೀಕರಣಗಳ ಪ್ರಕ್ರಿಯೆಗಳನ್ನು ಕರಗತ ಮಾಡಿಕೊಳ್ಳಲು ಪಠ್ಯಪುಸ್ತಕ ಒಂದು ಸಾಮಾನ್ಯ ಆಧಾರವನ್ನು ಒದಗಿಸುತ್ತದೆ. ಆದ್ದರಿಂದ, ಇದು ವಾಚನ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಒಂದು ಸಾಮಾನ್ಯ ಪ್ರಯೋಗಾಲಯವನ್ನು ಒದಗಿಸುತ್ತದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರೂ ಕಾರ್ಯಾರಂಭ ಮಾಡಿ ಅದನ್ನು ಮುಂದುವರೆಸಲು ಒಂದು ಸಾಮಾನ್ಯ ಆಧಾರ ಒದಗಿಸುವುದು; ಪಠ್ಯಪುಸ್ತಕವು ಕನಿಷ್ಠ, ಅತ್ಯಾವಶ್ಯಕ ಜ್ಞಾನವನ್ನು ಒಳಗೊಂಡಿರುತ್ತದೆಯಾದ್ದರಿಂದ ಮತ್ತಷ್ಟು ವ್ಯಾಪಕ ಸಂಬಂಧಿತ ಜ್ಞಾನಕ್ಕೆ ಪ್ರಾರಂಭ ಬಿಂದುವನ್ನು ಸೂಚಿಸಬಲ್ಲದು. ಅಲ್ಲದೆ, ವಿದ್ಯಾರ್ಥಿ ಮತ್ತು ಶಿಕ್ಷಕರು ಜೊತೆಗೂಡಿ ಅನ್ವೇಷಿಸಬಹುದಾದ ಸಾಮಾನ್ಯ ನೆಲೆಗಟ್ಟನ್ನು ಇದು ಒದಗಿಸುತ್ತದೆ. ಜೊತೆಗೆ, ಪಠ್ಯಪುಸ್ತಕವು ವಿವಾದಾಂಶಗಳಿಗೆ ಗಮನ ಕೊಡುತ್ತದೆ– ಘಟನೆ, ಕ್ರಮಾನುಸರಣೆ ಮತು ಸನ್ನಿವೇಶಗಳು ಇತ್ಯಾದಿ. ಅಲ್ಲದೆ, ಎಲ್ಲರೂ ಒಂದೇ ನೆಲೆಯಲ್ಲಿ ಮುಂದುವರಿಯಲು ನೆರವಾಗುತ್ತದೆ. ದೃಢೀಕರಣ ಮತ್ತು ಅನುಪಾಲನೆಗಳನ್ನು ಒದಗಿಸುತ್ತದೆ; ಪಠ್ಯಪುಸ್ತಕವು ಎಚ್ಚರಿಕೆಯಿಂದ ಶೋಧಿಸಿ ಪರೀಕ್ಷಿಸಿದಾಗ ವಾಸ್ತವಾಂಶಗಳನ್ನು ಮಾತ್ರ ಹೊಂದಿರಬೇಕು. ಆಗ ಅದು ಬೇರೆಡೆಯಿಂದ ಪಡೆದುಕೊಂಡ ಜ್ಞಾನವನ್ನು ದೃಢೀಕರಿಸಬಲ್ಲದು.

ಪಠ್ಯಕ್ರಮಕ್ಕೆ ಒಂದು ಮಾರ್ಗದರ್ಶಿಯಂತಿರುವುದರಿಂದ, ವಿಶೇಷವಾಗಿ, ಏನನ್ನು ಬೋಧಿಸಬೇಕೆಂಬುದನ್ನು ಸೂಚಿಸುವುದರಿಂದ ಉತ್ತಮ ಪಠ್ಯಪುಸ್ತಕವು ಅತ್ಯಂತ ಮುಖ್ಯ. ಪಠ್ಯಪುಸ್ತಕವು ಅಭ್ಯಾಸಗಳನ್ನು, ಚಟುವಟಿಕೆಗಳನ್ನು ಮತ್ತು ಹೆಚ್ಚಿನ ವಾಚನಕ್ಕಾಗಿ ಸಲಹೆ ಸೂಚನೆಗಳನ್ನು ಕೊಡುವುದರಿಂದ ಶಿಕ್ಷಕರು ಪಠ್ಯಸಾಮಗ್ರಿಯೊಂದಿಗೆ ಇತರ ಮೂಲಗಳಿಂದ ಪೂರಕವಾದ ಸಾಮಗ್ರಿಯನ್ನ ಬಳಸುವುದಕ್ಕೆ ಪ್ರೋತ್ಸಾಹಿತರಾಗುತ್ತಾರೆ. ಉತ್ತಮ ಪಠ್ಯಪುಸ್ತಕವು ತರಗತಿಯಲ್ಲಿ ಪಡೆದ ಬೋಧನೆಗೆ ಪೂರಕವಾಗಬಲ್ಲದು; ವಿದ್ಯಾರ್ಥಿಗಳು ನಿರ್ದಿಷ್ಟ ಮಾಹಿತಿಯನ್ನು ಅದರಿಂದ ಪಡೆಯಬಲ್ಲರು, ತರಗತಿಗೆ ಗೈರುಹಾಜರಿದ್ದಾಗ ತಪ್ಪಿದ ಪಾಠವನ್ನು ಅದರಿಂದ ಕಲಿತುಕೊಳ್ಳಬಹುದು ಮತ್ತು ಪ್ರತಿಯೊಂದು ಶಬ್ದವನ್ನೂ ನಕಲು ಮಾಡುವ ಬದಲು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚಿನ ಸಮಯವನ್ನು ಉಪಯೋಗಿಸುಬಹುದು. ಇದರಿಂದ ಜ್ಞಾನವೃದ್ಧಿಯಾಗುವುದು ಮಾತ್ರವಲ್ಲದೆ ತರಗತಿಯಲ್ಲಿನ ಮುಂದಿನ ಪಾಠಕ್ಕೆ ಮುಂಚಿತವಾಗಿ ಸಿದ್ಧತೆಯೂ ಆಗುತ್ತದೆ. ಇದರ ಜೊತೆಗೆ, ಈ ವಿಧಾನದಿಂದ ವಿದ್ಯಾರ್ಥಿಗಳು ಸ್ವತಂತ್ರ ಕಲಿಕಾರ್ಥಿಯಾಗಲು ಕಲಿತುಕೊಳ್ಳುತ್ತಾರೆ. ಪಠ್ಯಪುಸ್ತಕದಲ್ಲಿ ಪಾಠದ ಕಡೆಯಲ್ಲಿ ಕೊಡುವ ಅಭ್ಯಾಸಗಳು ವಿದ್ಯಾರ್ಥಿಗಳಿಗೆ ಅಭ್ಯಾಸವನ್ನು ಮಾಡಿಸಲು ನೆರವಾಗುವುದಲ್ಲದೆ, ಅವರು ಮಾಹಿತಿಯನ್ನು ತಮ್ಮಲ್ಲಿ ಉಳಿಸಕೊಂಡು ಅದನ್ನು ವಿಭಿನ್ನ ಪರಿಸ್ಥಿತಿಯಲ್ಲಿ ಅನ್ವಯಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಅದೇ ಅಭ್ಯಾಸಗಳು, ಗೃಹಕಾರ್ಯ, ಕಾರ್ಯಯೋಜನೆಗಳನ್ನು ಕೊಡುವುದಕ್ಕೆ ಮತ್ತು ಪುನರಾವರ್ತನೆ ಮಾಡುವುದಕ್ಕೆ ಶಿಕ್ಷಕರಿಗೆ ನೆರವಾಗುತ್ತವೆ. ಪಠ್ಯಪುಸ್ತಕಗಳಲ್ಲಿ ಆಕರ್ಷಕ ಲಕ್ಷಣಗಳಿರುವುದರಿಂದ ಮತ್ತು ವಾಚಕರ ಆಸಕ್ತಿ ಮತ್ತು ಮಟ್ಟಗಳಿಗೆ ತಕ್ಕುದಾಗಿರುವುದರಿಂದ ಅವು ವಿದ್ಯಾರ್ಥಿಗಳಿಗೆ ಅಭಿಪ್ರೇರಣೆಯನ್ನು ನೀಡಬಲ್ಲವು. ಪಠ್ಯಪುಸ್ತಕವು ಯಾವಾಗಲೂ ವಿದ್ಯಾರ್ಥಿಗಳ ಬಳಿಯೇ ಇರುವುದರಿಂದ ಯಾವಾಗ ಬೇಕೆಂದರೆ ಆಗ ಅದನ್ನು ಓದಲು ಸಾಧ್ಯವಾಗುತ್ತದೆ. ಶಿಕ್ಷಕರು ಪ್ರತಿ ವಿದ್ಯಾರ್ಥಿಗೆ ಅವರದೇ ವೇಗದಲ್ಲಿ ಓದಲು ಅವಕಾಶ ಮಾಡಿಕೊಡಲು ಸಾಧ್ಯವಿರುವುದರಿಂದ ಪಠ್ಯಪುಸ್ತಕವು ಬೋಧನೆಯನ್ನು ವ್ಯಕ್ತಿಗತವಾಗಿಸಲು ಶಿಕ್ಷಕರಿಗೆ ನೆರವಾಗುತ್ತದೆ. ವಿಧಾನದ ಕ್ರಮಾನುಸರಣೆ, ವಿಷಯದ ಸರಣಿಬದ್ಧತೆ ಮತ್ತು ಆವಶ್ಯಕವಾದ ಮಾನದಂಡಗಳನ್ನು ನಿಶ್ಚಿತಗೊಳಿಸುವುದು– ಈ ಕಾರ್ಯಗಳಿಗೂ ಪಠ್ಯಪುಸ್ತಕಗಳು ಉತ್ತಮ ಮಾಧ್ಯಮಗಳಾಗಿವೆ. ಈ ಅರ್ಥದಲ್ಲಿ ಅವು ಸಮಯ ಉಳಿತಾಯದ ಸಾಧನಗಳಾಗಿವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
**ಈ ಕೆಳಗಿನವುಗಳನ್ನು 'ಸರಿ' ಅಥವಾ 'ತಪ್ಪು' ಎಂದು ಗುರುತಿಸಿ.**

1. ಪಠ್ಯಪುಸ್ತಕ ಪರಾಮರ್ಶನ ಸಾಮಗ್ರಿಯಾಗಲು ಸಾಧ್ಯವಿಲ್ಲ.
2. ಪಠ್ಯಪುಸ್ತಕವು ಹೆಚ್ಚಾಗಿ ಬಳಸಲಾಗುವ ಬೋಧೋನೋಪಕರಣವಾಗಿದೆ.
3. ಪಠ್ಯಪುಸ್ತಕವನ್ನು ಯಾವಾಗಲೂ ಒಬ್ಬರೇ ರಚಿಸುತ್ತಾರೆ.
4. ಪಠ್ಯಪುಸ್ತಕವು ಅಂತಿಮ ಬೋಧೋನಪಕರಣವಾಗಿದೆ.
5. ಪಠ್ಯಪುಸ್ತಕವು ಬೋಧನೆಯ ಕೈಪಿಡಿಯಾಗಿದೆ.
6. ಪಠ್ಯಪುಸ್ತಕವನ್ನು 'ಮುದ್ರಿತ ರೂಪದ ಶಿಕ್ಷಕ' ಎಂದು ಕರೆಯಲಾಗುತ್ತದೆ.
7. ಪಠ್ಯಪುಸ್ತಕವು ಬೋಧನೋದ್ದೇಶಗಳನ್ನು ಈಡೇರಿಸಲು ಒಂದು ಉಪಕರಣ.

**4.1.3.2. ಉತ್ತಮ ಸಮಾಜ ವಿಜ್ಞಾನ ಪಠ್ಯಪುಸ್ತಕದ ಗುಣಲಕ್ಷಣಗಳು**

ಆವಶ್ಯಕ ಭೌತಿಕ ಮತ್ತು ಶೈಕ್ಷಣಿಕ ಮಾನದಂಡಗಳ ಲಕ್ಷಣಗಳನ್ನು ಪಠ್ಯಪುಸ್ತಕವು ಹೊಂದಿದ್ದರೆ ಆಗ ಅದು ಉತ್ತಮ ಪಠ್ಯಪುಸ್ತಕವೆನಿಸುವುದು. ಅಂದರೆ, ಆಂತರಿಕ ಮತ್ತು ಬಾಹ್ಯ ಮೌಲ್ಯಗಳನ್ನು ಹೊಂದಿರಬೇಕು. ಬಾಹ್ಯ ಮೌಲ್ಯಗಳು ಎಂದರೆ ಭೌತಿಕ ಲಕ್ಷಣಗಳು ಅಥವಾ ಬಾಹ್ಯ ಲಕ್ಷಣಗಳು ಹಾಗೂ ಆಂತರಿಕ ಮೌಲ್ಯಗಳು ಎಂದರೆ ಪಠ್ಯಪುಸ್ತಕ ಒಳಗೊಂಡಿರುವ ಪಠ್ಯವಿಷಯ ವಸ್ತು.

**A. ಪುಸ್ತಕದ ಭೌತಿಕ ಲಕ್ಷಣಗಳು:** ಪುಸ್ತಕದ ಮೊದಲಿನ ನೋಟದಿಂದ ಆ ಪುಸ್ತಕದ ಬಗೆಗಿನ ಅಭಿಪ್ರಾಯ ರೂಪಿತಗೊಳ್ಳುತ್ತದೆ. ಆದ್ದರಿಂದ, ಬಾಹ್ಯ ಅಂಶಗಳನ್ನೂ ಆದ್ಯತೆಯಾಗಿ ಪರಿಗಣಿಸಲಾಗುತ್ತದೆ. ಅವುಗಳನ್ನು ಈ ಕೆಳಗಿನಂತೆ ಸ್ಥೂಲವಾಗಿ ವಿಂಗಡಿಸಬಹುದು:

**1. ಪುಸ್ತಕದ ಗಾತ್ರ:**

- ಕಲಿಕಾರ್ಥಿಗೆ ಇದು ಸೂಕ್ತವಾಗಿದೆ.
- ಕೈಯಲ್ಲಿ ಹಿಡಿಯಲು ಮತ್ತು ಕೊಂಡೊಯ್ಯಲು ಅನುಕೂಲವಾಗಿದೆ.
- ಯಾವ ವಿದ್ಯಾರ್ಥಿಗಳಿಗೆ ಅದು ಉದ್ದೇಶಿತವಾಗಿದೆಯೋ ಅವರಿಗೆ ಇದು ಹೆಚ್ಚು ದೊಡ್ಡ ಗಾತ್ರದ್ದೂ ಆಗಿರಬಾರದು, ಅತಿ ಚಿಕ್ಕದೂ ಆಗಿರಬಾರದು.

**2. ಪುಸ್ತಕದ ಮುದ್ರಣ**

- ಮುದ್ರಣ ಅಚ್ಚುಕಟ್ಟಾಗಿ, ಶುದ್ಧವಾಗಿರಬೇಕು.
- ಯಾವುದೇ ರೀತಿಯ ತಪ್ಪುಗಳಿಂದ ಮುಕ್ತವಾಗಿರಬೇಕು.
- ಪದಗಳು, ವಾಕ್ಯಗಳು ಮತ್ತು ಪ್ಯಾರಾಗ್ರಾಫ್‌ಗಳ ನಡುವಣ ಜಾಗ ಸಮಾಂತರವಾಗಿದ್ದು ಸಮರ್ಪಕವಾಗಿರಬೇಕು.
- ಪುಟದ ನಾಲ್ಕೂ ಕಡೆ ಸಾಕಷ್ಟು ಮಾರ್ಜಿನ್ ಬಿಟ್ಟಿರಬೇಕು.
- ಪ್ರತಿಯೊಂದು ಅಧ್ಯಾಯವೂ ಹೊಸ ಪುಟದಿಂದ ಆರಂಭವಾಗಬೇಕು.
- ಪಠ್ಯದ ಸಾಲುಗಳ ಉದ್ದ ಮಗುವಿನ ದೃಷ್ಟಿವ್ಯಾಪ್ತಿಯೊಳಗಿರಬೇಕು.

**3. ಪಠ್ಯಪುಸ್ತಕದ ಅಕ್ಷರದ ಗಾತ್ರ**

- ಮುಖಪುಟದ ಮೇಲೆ ಹಾಗೂ ಶೀರ್ಷಿಕೆ, ಪಠ್ಯ ಮತ್ತು ಶಿರೋನಾಮೆಗಳಿಗೆ ಬೇರೆ ಬೇರೆ ಗಾತ್ರದ ಅಕ್ಷರಗಳನ್ನು ಬಳಸಬೇಕು.
- ಆಯಾ ವಯೋಮಾನಕ್ಕೆ ತಕ್ಕಂತೆ ಪಠ್ಯಪುಸ್ತಕದಲ್ಲಿನ ಅಕ್ಷರದ ಗಾತ್ರವನ್ನು ಬಳಸಬೇಕು.
- ಬಳಸಲಾಗುವ ವಿವಿಧ ಅಕ್ಷರದ ಗಾತ್ರಗಳ ನಡುವೆ ಸಮತೋಲನ ಕಾಪಾಡಬೇಕು.

- ಒಂದೇ ಥೀಮನ್ನು ಇಡೀ ಪುಸ್ತಕದಲ್ಲಿ ಬಳಸಬೇಕು.
- ವಿದ್ಯಾರ್ಥಿಗಳ ಕಣ್ಣಿನ ದೃಷ್ಟಿಗೆ ಆಯಾಸವಾಗದಂತಿರಬೇಕು.

**4. ಪಠ್ಯಪುಸ್ತಕದಲ್ಲಿ ಬಳಸಲಾಗುವ ಕಾಗದ**

- ಬಳಸಲಾಗುವ ಕಾಗದ ದಪ್ಪನಾಗಿರಬೇಕು.
- ಬಹುಕಾಲ ಬಾಳಕೆ ಬರುವಂತೆಯೂ ನಯವಾಗಿಯೂ ಇರಬೇಕು.
- ಗುಣಮಟ್ಟ ಉಳ್ಳದ್ದಾಗಿರಬೇಕು.

**5. ಪಠ್ಯಪುಸ್ತಕಗಳ ಬೈಂಡಿಗ್**

- ಪುಸ್ತಕದ ಬೈಂಡಿಂಗ್ ಸುದೃಢವಾಗಿರಬೇಕು.
- ತೆರೆದಾಗ ಸಮತಟ್ಟಾಗಿ ತೆರೆದುಕೊಳ್ಳುವಂತಿರಬೇಕು.
- ಪುಸ್ತಕದ ಅಂಚುಗಳು ಅಚ್ಚುಕಟ್ಟಾಗಿರಬೇಕು.
- ಪುಸ್ತಕದ ಮುಖಪುಟ ಬಾಳಿಕೆ ಬರುವಂತಿರಬೇಕು.

**6. ಪಠ್ಯಪುಸ್ತಕಗಳ ಬೆಲೆ**

- ಪಠ್ಯಪುಸ್ತಕದ ಬೆಲೆ ನ್ಯಾಯಯುತವಾಗಿರಬೇಕು. ಬಹುತೇಕ ಪೋಷಕರಿಗೆ ಸುಲಭವಾಗಿ ಕೊಳ್ಳುವಂತಿರಬೇಕು.

**7. ಪಠ್ಯಪುಸ್ತಕದ ಒಟ್ಟಾರೆ ಹೊರನೋಟ**

- ಪಠ್ಯಪುಸ್ತಕ ಹೊರಗಡೆಯಿಂದ ನೋಡುವುದಕ್ಕೆ ಚೆನ್ನಾಗಿರಬೇಕು.
- ಇದರ ಶೀರ್ಷಿಕೆಯ ಪುಟ ಆಕರ್ಷಕವಾಗಿರಬೇಕು.

**B. ಶೈಕ್ಷಣಿಕ ಗುಣಲಕ್ಷಣಗಳು**

**1. ಪುಸ್ತಕದ ವಿಷಯಾಧಾರಿತ ಪಠ್ಯವಿಷಯ/ ವಸ್ತು**

- ಪಠ್ಯವಿಷಯವಸ್ತು ಕಲಿಕಾರ್ಥಿಗಳ ಮಾನಸಿಕ ಮಟ್ಟಕ್ಕೆ ಅನುಸಾರವಾಗಿರಬೇಕು.
- ಕಲಿಕಾ ಉದ್ದೇಶಗಳನ್ನು ಈಡೇರಿಸುವಲ್ಲಿ ಪಠ್ಯಪುಸ್ತಕವು ಸಹಾಯ ಮಾಡುತ್ತದೆ.
- ವಿದ್ಯಾರ್ಥಿಗಳಲ್ಲಿ ಆಸಕ್ತಿಯು ಉಳಿದು ಬೆಳೆಯುವಂತೆ ಮಾಡಬೇಕು.
- ವಾಸ್ತವಾಂಶಗಳು ಸರಿಯಾಗಿಯೂ ಇತ್ತೀಚಿನದೂ ಆಗಿರಬೇಕು.
- ಇದು ವಿದ್ಯಾರ್ಥಿಗಳಿಗೆ ಹೊಸ ಮಾಹಿತಿಯನ್ನು ಒದಗಿಸಬೇಕು.
- ಮಕ್ಕಳ ಭಾವನೆಗಳಿಗೆ ನೋವುಂಟು ಮಾಡುವ ಘಟನೆಗಳಿಂದ, ಪರಾಮರ್ಶನಗಳಿಂದ ಪಠ್ಯಪುಸ್ತಕ ಮುಕ್ತವಾಗಿರಬೇಕು.

**2. ಪಠ್ಯವಿಷಯಗಳ ಸಂಘಟನೆ ಮತ್ತು ಪ್ರಸ್ತುತಿ**

- ಪಠ್ಯವಿಷಯಗಳು ಸೂಕ್ತ ಘಟಕಗಳಾಗಿ ವಿಂಗಡಣೆಯಾಗಿರಬೇಕು.
- ಪ್ರತ್ಯೇಕ ಪಾಠಗಳ ಉದ್ದ ವಿದ್ಯಾರ್ಥಿಗಳಿಗೆ ತಕ್ಕುದಾಗಿರಬೇಕು.
- ವಾಚನ ಸಾಮಗ್ರಿ ಕ್ಲಿಷ್ಟತೆಯ ಶ್ರೇಣಿಯನ್ನು ಅನುಸರಿಸಿರಬೇಕು.
- ಪ್ರಸ್ತುತಿಯ ಶೈಲಿ ಸರಳವೂ ಸ್ಪಷ್ಟವೂ ಆಗಿರಬೇಕು.

- ಪ್ರತ್ಯೇಕ ಪಾಠದ ಶೀರ್ಷಿಕೆ ಸಂಕ್ಷಿಪ್ತವೂ ಅರ್ಥಪೂರಿತವೂ ಸೂಕ್ತವೂ ಆಗಿರಬೇಕು.

**3. ಪಠ್ಯವಿಷಯದ ಭಾಷೆ**

- ಪಠ್ಯವಿಷಯದ ಭಾಷೆ ಕಲಿಕಾರ್ಥಿಯ ಮಾನಸಿಕ ಮಟ್ಟಕ್ಕೆ ಸೂಕ್ತವಾಗಿರಬೇಕು.
- ಭಾಷೆಯ ಬಳಕೆ ಶುದ್ಧವಾಗಿರಬೇಕು.
- ಸನ್ನಿವೇಶ, ಸಂದರ್ಭಗಳಿಗೆ ಸೂಕ್ತವಾಗಿರಬೇಕು.

**4. ಪಠ್ಯಪುಸ್ತಕದಲ್ಲಿ ಬಳಸಲಾಗುವ ಚಿತ್ರಗಳು (ದೃಶ್ಯ ಸಾಧನಗಳು)**

- ಪುಸ್ತಕದಲ್ಲಿ ಬರುವ ಅಮೂರ್ತ ಪರಿಕಲ್ಪನೆಗಳ್ನು ಚಿತ್ರಗಳು ಮತ್ತು ರೇಖಾಚಿತ್ರಗಳಿಂದ ವಿಶದೀಕರಿಸಬೇಕು. ಇದರಿಂದ ಪಠ್ಯವಿಷಯವನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ.
- ಪುಸ್ತಕದಲ್ಲಿ ಬಳಸಲಾಗಿರುವ ಚಿತ್ರವನ್ನು ಚೆನ್ನಾಗಿ ಬಿಡಿಸಿರಬೇಕು.
- ಪಠ್ಯವಿಷಯ ವಸ್ತುವು ಸೂಕ್ತ ಭೂಪಟಗಳಿಂದ ಮತ್ತು ರೇಖಾಚಿತ್ರಗಳಿಂದ ಬೆಂಬಲಿತವಾಗಿರಬೇಕು.
- ಅವು ವಾಸ್ತವವಾಗಿರಬೇಕು ಮತ್ತು ಪಠ್ಯಕ್ಕೆ ಸುಸಂಗತವಾಗಿರಬೇಕು.
- ಅವು ಕಲಿಕಾರ್ಥಿಯಲ್ಲಿ ಆಸಕ್ತಿ ಮೂಡಿಸಿ ಅಭಿಪ್ರೇರಣೆ ನೀಡುವಂತಿರಬೇಕು.
- ಪುಸ್ತಕದ ಆದ್ಯಂತವು ಸಮರ್ಪಕವಾಗಿ ವಿತರಿತಗೊಂಡಿರಬೇಕು.

**5. ಪುಸ್ತಕದಲ್ಲಿನ ಪಠ್ಯವಿಷಯ ಸಂಬಂಧಿತ ಅಭ್ಯಾಸಗಳು**

- ಪ್ರತಿಯೊಂದು ಪಾಠದ ಅಂತ್ಯದಲ್ಲಿ ಅಭ್ಯಾಸಗಳಿರಬೇಕು.
- ಅಭ್ಯಾಸಗಳನ್ನು ಬಿಡಿಸಲು ಕೊಡಲಾಗಿರುವ ಸೂಚನೆಗಳು ಸ್ಪಷ್ಟವಾಗಿರಬೇಕು.
- ಪ್ರತಿಯೊಂದು ಪಾಠಕ್ಕೆ ಸಂಬಂಧಿಸಿದ ಅಭ್ಯಾಸಗಳು ವೈವಿಧ್ಯಮಯವಾಗಿರಬೇಕು.
- ಪ್ರತಿಯೊಂದು ಪಾಠದ ಮೇಲಿರುವ ಅಭ್ಯಾಸಗಳು ಉದ್ದೇಶಪೂರಿತವಾಗಿಯೂ ತಕ್ಕಷ್ಟು ಪ್ರಮಾಣದಲ್ಲಿಯೂ ಇರಬೇಕು.
- ಇವುಗಳು ವಿದ್ಯಾರ್ಥಿಗಳ ಸಾಧನೆಗಳನ್ನು ಮೌಲ್ಯಮಾಪನ ಮಾಡಲು ಶಿಕ್ಷಕರಿಗೆ ನೆರವಾಗುತ್ತವೆ.

**ಇದರ ಜೊತೆಗೆ ಕೌಶಲ್ಯಗಳನ್ನು ಸೃಷ್ಟಿಸಿ ಬೆಳಸಲು ನೀಡಲು ಈ ಕೆಳಗಿನ ಗುಣಲಕ್ಷಣಗಳು ಪಠ್ಯಪುಸ್ತಕದಲ್ಲಿರಬೇಕು. ಅವು ಹೀಗಿವೆ:**

- ಇದು ಕಲಿಕಾರ್ಥಿ ಕೇಂದ್ರಿತವಾಗಿರಬೇಕು.
- ನಿರರ್ಗಳ ನಿರೂಪಣೆಯನ್ನು ಒಳಗೊಂಡಿರಬೇಕು.
- ಇದರಲ್ಲಿ ವಿಚಾರಗಳು/ಮಾಹಿತಿಯ ಪ್ರಸ್ತುತಿಯ ಕ್ರಮ ಸ್ವಕಲಿಕೆಗೆ ಅನುಗುಣವಾಗಿರಬೇಕು.
- ಇದು ವಿಭಿನ್ನ ಚಿಂತನಾ ಮಾರ್ಗಗಳ ಮತ್ತು ಅಧ್ಯಯನ ಪಥಗಳನ್ನು ತೆರೆಯುವಂತಿರಬೇಕು.
- ಭಾಷೆ ಕಲಿಕಾರ್ಥಿಯ ವಯೋಮಾನಕ್ಕೆ ತಕ್ಕಂತೆ ಇರುವುದರ ಜೊತೆಗೆ ಚೆನ್ನಾಗಿ ಚಿತ್ರಗಳೊಂದಿಗೆ ನಿರೂಪಿತಗೊಂಡಿರಬೇಕು.
- ಪ್ರತಿಯೊಂದು ಅಧ್ಯಾಯಕ್ಕೂ ಸೂಕ್ತವಾದ ಸಲಹೆಸೂಚನೆಗಳಿರಬೇಕು ಮತ್ತು ಅಭ್ಯಾಸಗಳಿರಬೇಕು.
- ಪಠ್ಯವಿಷಯವಸ್ತು ಇತ್ತೀಚಿನದಾಗಿರಬೇಕು ಮತ್ತು ಮುಂದಿನ ಅಧ್ಯಯನಕ್ಕೆ ಪರಾಮರ್ಶನ ಆಕರಗಳನ್ನು ಒದಗಿಸಬೇಕು.
- ತಂಡ ಪ್ರಯತ್ನವನ್ನು ಇದು ಪ್ರೋತ್ಸಾಹಿಸುವಂತಿರಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಒಂಭತ್ತನೆಯ ತರಗತಿಯ ಸಮಾಜ ವಿಜ್ಞಾನದ ಪಠ್ಯಪುಸ್ತಕದಲ್ಲಿ ಇರಬೇಕು ಎಂದು ನೀವು ಪರಿಗಣಿಸುವ ಕನಿಷ್ಠ ಹತ್ತು ಗುಣಲಕ್ಷಣಗಳನ್ನು ಪಟ್ಟಿಮಾಡಿ.

**4.1.4. ಸಾರಾಂಶಿಸೋಣ**

- ಯಾವುದೇ ಶೈಕ್ಷಣಿಕ ಚಟುವಟಿಕೆಯಲ್ಲಿ ಪಠ್ಯಪುಸ್ತಕಗಳು ಬೋಧನೆ–ಕಲಿಕೆಯಲ್ಲಿನ ಮುಖ್ಯ ಸಂಪನ್ಮೂಲಗಳಲ್ಲಿ ಒಂದಾಗಿವೆ.
- ಈಡೇರಿಸುವ ವಿವಿಧ ಉದ್ದೇಶಗಳಿಂದಾಗಿ ಪಠ್ಯಪುಸ್ತಕಗಳು ಪ್ರಾಧಾನ್ಯತೆಯನ್ನು ಪಡೆದುಕೊಳ್ಳುತ್ತವೆ.
- ಪಠ್ಯಪುಸ್ತಕಗಳು ಕಲಿಕಾರ್ಥಿಗಯ ಕಲಿಕೆಯ ವೇಗಕ್ಕೆ ಅನುಗುಣವಾಗಿ ಕಲಿಯಲು ನೆರವಾಗುತ್ತವೆ.

**4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
1. ತಪ್ಪು 2. ಸರಿ 3. ತಪ್ಪು 4. ಸರಿ 5. ತಪ್ಪು 6 ಸರಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಪಠ್ಯಪುಸ್ತಕದ 10 ಗುಣಲಕ್ಷಣಗಳನ್ನು ಬರೆಯಿರಿ.

**4.1.6. ಘಟಕಾಂತ್ಯ ಅಭ್ಯಾಸಗಳು**
ಕರ್ನಾಟಕ ಬೋರ್ಡ್‌ನ ಒಂಭತ್ತನೆಯ ತರಗತಿಯ ಪಠ್ಯಪುಸ್ತಕವನ್ನು ಆಯ್ಕೆ ಮಾಡಿ ಅದರಲ್ಲಿ ನೀವು ಕಾಣುವ ಒಳ್ಳೆಯ ಗುಣಲಕ್ಷಣಗಳನ್ನು ಪಟ್ಟಿಮಾಡಿ. ಅದರಲ್ಲಿರುವ ದೋಷಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಸೂಚಿಸಿ. ನಿಮ್ಮ ಸಲಹೆ ಸೂಚನೆಗಳನ್ನು ನಿಮ್ಮ ಮಿತ್ರರು ಮತ್ತು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ.

**4.1.7. ಪರಾಮರ್ಶನ ಸೂಚಿ**


1. https://www.slideshare.net/vineethamolr/vineetha-1-38608437
2. http://neenusmurali.blogspot.com/2014/09/assignment-theoretical-baseof-social.html
3. https://www.brightclassroomideas.com/good-Textbook-characteristis/
4. http://www.publishyourarticles.net/knowledge-hub/geography/15-importance-characteristics-and-qualities-of-a-good-text-books/5733/
5. https://www.jstor.org/stable/30179707?seq=1
6. https://dokumen.tips/education/features-of-good-social-science-text-book.html
7. https://www.zapmeta.ws/ws?q=Textbook%20social%20studies&asid=ws_gc12_06&mt=b&nw=g&de=c&ap=2o1&ac=1694&gclid=CjwKCAiA35rxBRAWEiwADqB376MkJ_CUsZVVmthfIbM_Ubn1dVNBDgOfATxmTPM-0uOsFQkynNJTFxoCwzAQAvD_BwE
8. UNESCO-World Social Science Report (2013)
9. Wagner, P. (1999). The Twentieth Century – the Century of the Social Sciences? World Social Science Report.
10. Wallerstein, I, et al., (1996). Open The Social Sciences: Report of the Gulbenkian commission on the Restructuring of the Social Sciences. Vistaar Publications, New Delhi.

**ಬ್ಲಾಕ್ 4 : ಸಮಾಜ ವಿಜ್ಞಾನಗಳ ಪಠ್ಯಪುಸ್ತಕ ಮತ್ತು ಸಮಾಜ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಾಪನ**

**ಘಟಕ 2 : ಸಮಾಜ ವಿಜ್ಞಾನದಲ್ಲಿ ಪಠ್ಯಪುಸ್ತಕಗಳ ಪುನರ್ವಿಮರ್ಶೆ: ಮಾನದಂಡಗಳು ಮತ್ತು ಕ್ರಮವಿಧಾನಗಳು**

**ಘಟಕದ ರಚನೆ**

4.2.1. ಕಲಿಕಾ ಉದ್ದೇಶಗಳು
4.2.2. ಪೀಠಿಕೆ
4.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.2.3.1. ಪಠ್ಯಪುಸ್ತಕ ಪುನರ್ವಿಮರ್ಶೆಯ ಪರಿಕಲ್ಪನೆ ಮತ್ತು ಅದರ ಪ್ರಾಮುಖ್ಯತೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
4.2.3.2. ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ಪುನರ್ವಿಮರ್ಶೆಯ ನಿರ್ಣಾಯಕ ಅಂಶಗಳು ಮತ್ತು ಕಾರ್ಯವಿಧಾನ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.2.4. ಸಾರಾಂಶಿಸೋಣ
4.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
4.2.6. ಘಟಕಾಂತ್ಯ ಅಭ್ಯಾಸಗಳು
4.2.7. ಪರಾಮರ್ಶನ ಸೂಚಿ

**4.2.1. ಕಲಿಕಾ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪಠ್ಯಪುಸ್ತಕ ಪುನರ್ವಿಮರ್ಶೆಗಳ ಅರ್ಥ ಮತ್ತು ಪ್ರಾಧಾನ್ಯತೆ;
- ಪುನರ್ವಿಮರ್ಶೆಯನ್ನು ಬರೆಯುವುದಕ್ಕೆ ಮುಂಚೆ ಅಗತ್ಯವಾದ ಅಂಶಗಳನ್ನು ಹೇಳುವರು
- ಮಾನದಂಡಗಳನ್ನು ಪಟ್ಟಿಮಾಡಿ ಪುನರ್ವಿಮರ್ಶೆಯ ಬರವಣಿಗೆಯಲ್ಲಿನ ವಿವಿಧ ಹಂತಗಳನ್ನು ವಿವರಿಸುವರು; ಮತ್ತು
- ತರಗತಿಯಲ್ಲಿ ಸಮಾಜ ವಿಜ್ಞಾನದ ಬೋಧನೆ–ಕಲಿಕೆಯಲ್ಲಿ ಸಮಾಜ ವಿಜ್ಞಾನದ ಪಠ್ಯಪುಸ್ತಕದ ಮೌಲ್ಯಮಾಪನದ ಲಾಭಗಳನ್ನು ವಿಶ್ಲೇಷಿಸುವರು.

**4.2.2. ಪೀಠಿಕೆ**

ಈ ಹಿಂದಿನ ಪಾಠದಲ್ಲಿ ಬೋಧನೆ–ಕಲಿಕೆ ಪ್ರಕ್ರಿಯೆಯಲ್ಲಿ ಸಮಾಜ ವಿಜ್ಞಾನದ ಪಠ್ಯಪುಸ್ತಕಗಳು ಒಂದು ಪ್ರಮುಖ ಉಪಕರಣವಾಗಿ ಪ್ರಾಧಾನ್ಯತೆ ಹೊಂದಿರುವುದನ್ನು ನೀವು ಅರ್ಥ ಮಾಡಿಕೊಂಡಿರುವಿರಿ. ಅವು ಶಾಲೆಯಲ್ಲಿನ ಪಠ್ಯಕ್ರಮದ ಪ್ರಧಾನ ಅಭಿವ್ಯಕ್ತಿ ಮತ್ತು ರಾಜನೈತಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಅಂಶಗಳ ಪ್ರತಿನಿಧಿಗಳಾಗಿವೆ. ಆಯಾ ವಿಷಯ ಕ್ಷೇತ್ರದಲ್ಲಿ ಒಳ್ಳೆಯ ಹಿನ್ನೆಲೆ ಜ್ಞಾನವುಳ್ಳ ವ್ಯಕ್ತಿಗಳು ಪಠ್ಯಪುಸ್ತಕದ ಕಲ್ಪನೆ, ವಿನ್ಯಾಸ ಮತ್ತು ರಚನೆಯನ್ನು ಕೈಗೊಳ್ಳುತ್ತಾರೆ. ಈ ಪಠ್ಯಪುಸ್ತಕಗಳನ್ನು ರಾಜಕೀಯ, ಮಾರುಕಟ್ಟೆ, ಸಂಪನ್ಮೂಲ ಹಾಗೂ ಅಧಿಕಾರಿಗಳ ಪರಿಮಿತಿಯೊಳಗೆ ಪ್ರಕಟಿಸಲಾಗುವುದು. ಸಮಾಜ ವಿಜ್ಞಾನದ ಪಠ್ಯಪುಸ್ತಕಗಳು ಗುರುತಿಸಿಕೊಂಡ ಮನೋಭಾವಗಳ ಪ್ರೋತ್ಸಾಹ, ಐತಿಹಾಸಿಕ ಸ್ಮರಣೆಗಳ ನಿರ್ಮಾಣದ ಮುಖಾಂತರ ಸಾಂಸ್ಕೃತಿಕ ಸಮರೂಪತೆಯನ್ನು ಜಾರಿಗೊಳಿಸಿ ಪುನರ್ಬಲನಗೊಳಿಸುತ್ತವೆ. ಪಠ್ಯಪುಸ್ತಕಗಳು ಪ್ರಧಾನ ಸಾಂಸ್ಕೃತಿಕ ರೂಪಗಳನ್ನು ಪ್ರಸಾರ ಮಾಡಿ ಪುನರ್ಬಲನಗೊಳಿಸುವ ಪ್ರಯತ್ನಗಳನ್ನು ಕೈಗೊಳ್ಳಲು ನೆರವಾಗುವ ಸಾಧನಗಳಾಗಿವೆ. ಶಿಕ್ಷಣದಲ್ಲಿ ಅಧಿನಾಯಕತ್ವವನ್ನು ಸಾಧಿಸಲು ಸಹಜ ಮಾಧ್ಯಮವನ್ನು ಒದಗಿಸುತ್ತವೆ. ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಗ್ರಂಥಕರ್ತರು ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿರುತ್ತಾರೆ. ಆದಾಗ್ಯೂ ಅದಕ್ಕೆ ಸಂಬಂಧಪಟ್ಟ ಮತ್ತೊಬ್ಬ ವ್ಯಕ್ತಿ ಹಲವರು ಸೇರಿ ರೂಪಿಸಿದ ಪಠ್ಯಪುಸ್ತಕವನ್ನು ಕೂಲಂಕಷವಾಗಿ ವಿಮರ್ಶಿಸಿ ಹಿಮ್ಮಾಹಿತಿ ನೀಡುವುದು ಅತ್ಯಂತ ಉಪಯುಕ್ತವಾದ ಅಂಶವಾಗಿರುತ್ತದೆ. ಈ ಸಂದರ್ಭದಲ್ಲಿಯೇ ನಮಗೆ ಪಠ್ಯಪುಸ್ತಕದ ವಿಶ್ಲೇಷಣೆ, ಪುನರ್ವಿಮರ್ಶೆ

ಮೌಲ್ಯಮಾಪನ ಇತ್ಯಾದಿಗಳ ಪಾತ್ರ ನಮ್ಮ ಅರಿವಿಗೆ ಬರುವುದು. ಈ ಘಟಕದಲ್ಲಿ ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ಪುನರ್ವಿಮರ್ಶೆ ಮತ್ತು ಅದರಲ್ಲಿ ಒಳಗೊಳ್ಳುವ ನಿಯಮಗಳು, ಮಾನದಂಡಗಳು ಮತ್ತು ಕ್ರಮಗಳನ್ನು ವಿಚಾರಮಾಡೋಣ.

### 4.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 4.2.3.1. ಪಠ್ಯಪುಸ್ತಕ ಪುನರ್ವಿಮರ್ಶೆಯ ಪರಿಕಲ್ಪನೆ ಮತ್ತು ಅದರ ಪ್ರಾಮುಖ್ಯತೆ

ಪಠ್ಯಪುಸ್ತಕ ಪುನರ್ವಿಮರ್ಶೆಯನ್ನು ಮೂರು ಶೀರ್ಷಿಕೆಯಡಿ ಅರ್ಥಮಾಡಿಕೊಳ್ಳಬಹುದು– ಪುನರ್‌ವಿಮರ್ಶೆ, ಪುಸ್ತಕ ಪುನರ್‌ವಿಮರ್ಶೆ ಮತ್ತು ಪಠ್ಯಪುಸ್ತಕ ಪುನರ್ವಿಮರ್ಶೆ. ಸ್ಥೂಲವಾಗಿ ಹೇಳುವುದಾದರೆ, ಪುನರ್ವಿಮರ್ಶೆ ಎಂದರೆ ಮತ್ತೊಮ್ಮೆ ನೋಡುವುದು ಅಥವಾ ಒಂದು ಚಟುವಟಿಕೆ ಇಲ್ಲವೆ ಘಟನೆಯನ್ನು ಮತ್ತೊಮ್ಮೆ ಪರಿಗಣಿಸುವುದು. ಅಗತ್ಯಬಿದ್ದಲ್ಲಿ ಬದಲಾವಣೆಗಳನ್ನು ಮಾಡುವ ಉದ್ದೇಶದಿಂದ ಏನಾದರೊಂದನ್ನು ಔಪಚಾರಿಕವಾಗಿ ಮೌಲ್ಯಮಾಪನ/ಮೂಲ್ಯಾಂಕನ ಮಾಡುವುದು. ಪುಸ್ತಕದ ವಿಷಯದ ಬಲಾಬಲಗಳನ್ನು ಮತ್ತು ಸಂದರ್ಭವನ್ನು ಒಳಗೊಳ್ಳುವ ಪುಸ್ತಕವೊಂದರ ವಿಶ್ಲೇಷಣೆಗೆ ಪುಸ್ತಕ ಪುನರ್ವಿಮರ್ಶೆ ಎನ್ನುವರು. ಪುಸ್ತಕವೊಂದರ ಗುಣಾತ್ಮಕತೆ, ಅರ್ಥ ಮತ್ತು ಮಹತ್ವಗಳ ಆಮೂಲಾಗ್ರ ವಿವರಣೆ, ವಿಮರ್ಶಾತ್ಮಕ ವಿಶ್ಲೇಷಣೆ ಮತ್ತು / ಅಥವಾ ಮೌಲ್ಯಮಾಪನವು ಪುಸ್ತಕ ಪುನರ್ವಿಮರ್ಶೆಯಲ್ಲಿ ಒಳಗೊಳ್ಳುತ್ತದೆ. ಸಾಮಾನ್ಯವಾಗಿ ಹೀಗೆ ಪುನರ್‌ವಿಮರ್ಶೆಗೆ ಒಳಪಡುವ ಪುಸ್ತಕಗಳನ್ನು ಆ ಹಿಂದೆ ಮಾಡಿದ ಪಠ್ಯಪುಸ್ತಕ ವಿಮರ್ಶೆಗಳ ಹಿಮ್ಮಾಹಿತಿಯ ಆಧಾರದ ಮೇಲೆಯೇ ರಚಿಸಲಾಗಿರುತ್ತದೆ. ಸಾಮಾನ್ಯವಾಗಿ ವಿಮರ್ಶೆಯು 500 ರಿಂದ 2000 ಪದಗಳಲ್ಲಿರುವುದಾದರೂ ವಿಮರ್ಶೆಗೆ ಒಳಪಡುತ್ತಿರುವ ಪುಸ್ತಕದ ಗಾತ್ರ ಮತ್ತು ಸಂಕೀರ್ಣತೆ, ಪುನರ್ವಿಮರ್ಶೆಯ ಒಟ್ಟಾರೆ ಉದ್ದೇಶ ಮತ್ತು ಒಂದೇ ವಿಷಯವನ್ನು ಕುರಿತ ಒಂದಕ್ಕಿಂತ ಹೆಚ್ಚು ಪುಸ್ತಕಗಳನ್ನು ಪುನರ್ವಿಮರ್ಶೆಯೊಳಗೆ ಪರೀಕ್ಷಿಸಲಾಗುತ್ತಿದೆಯೇ ಎಂಬ ಅಂಶಗಳನ್ನು ಅವಲಂಬಿಸಿ ದೀರ್ಘವಾಗಿ ಇಲ್ಲವೇ ಸಂಗ್ರಹವಾಗಿ ಇರಬಹುದಾಗಿದೆ.

ಪುನರ್ವಿಮರ್ಶೆಯು ಪುಸ್ತಕವೊಂದಕ್ಕೆ ಪುನರ್ವಿಮರ್ಶಕನ ವೈಯಕ್ತಿಕ ಅಭಿಪ್ರಾಯದ ರೂಪದಲ್ಲಿರುವ ಪ್ರತಿಕ್ರಿಯೆಯಾಗಿದ್ದು ಅದರ ಮೂಲಕ ಆತ/ಆಕೆ ಓದುಗರೊಂದಿಗೆ ಸಂವಹನ ಕೈಗೊಳ್ಳುವರು; ಉದಾಹರಣೆಗೆ, ಪುಸ್ತಕ ಉತ್ತಮವಾಗಿದೆಯೇ, ಓದಲು ತಕ್ಕುದಾಗಿದೆಯೇ? ಚಿಂತನಶೀಲರನ್ನಾಗಿಸುವಂತೆ, ಸಮಗ್ರ ಮಾಹಿತಿಯೊಂದಿಗೆ ರಚಿಸಲಾಗಿದೆಯೇ? ಇದು ಯಾರಿಗಾಗಿ (ಉದ್ದೇಶಿತ ಓದುಗ) ರಚಿತವಾಗಿದೆ ಇತ್ಯಾದಿ ಅಂಶಗಳು ಇಲ್ಲಿ ಚರ್ಚೆಯಾಗುತ್ತವೆ.

ಪುಸ್ತಕ ಪುನರ್‌ವಿಮರ್ಶೆ ಕೇವಲ ಪುಸ್ತಕ ಯಾವುದನ್ನು ಕುರಿತದ್ದಾಗಿದೆ ಎಂದು ಮಾತ್ರವಷ್ಟೇ ಹೇಳುವುದಲ್ಲದೆ, ಅದು ಯಾವ ಉದ್ದೇಶವನ್ನು ಸಾಧಿಸಲು ಹೊರಟಿದೆಯೋ ಅದರಲ್ಲಿ ಯಶಸ್ವಿಯಾಗಿದೆಯೇ ಎಂದೂ ಹೇಳುತ್ತದೆ. ಉತ್ತಮ ಪುಸ್ತಕ ಪುನರ್ವಿಮರ್ಶೆಯು ಪುಸ್ತಕವೊಂದನ್ನು ಕುರಿತ ವ್ಯಾಖ್ಯಾನವೇ ಹೊರತು ಅದರ ಸಾರಾಂಶವಲ್ಲ. ಆದ್ದರಿಂದ, ಪುನರ್ವಿಮರ್ಶಕ/ಕಿ ಪುಸ್ತಕದ ಅಂತರ್ವಸ್ತುವಿನ ವಿಸ್ತೃತ ವಿವರಣೆಯನ್ನು ಕೊಡುವುದರ ಬದಲು ಪುಸ್ತಕವನ್ನು ಕುರಿತಾದ ತನ್ನ ಅಭಿಪ್ರಾಯ ಮತ್ತು ಚಿಂತನೆಗಳನ್ನು ಕೊಡುವತ್ತ ಗಮನ ಕೇಂದ್ರೀಕರಿಸಬೇಕು. ಪರಿಣಾಮಕಾರಿ ಪುನರ್ವಿಮರ್ಶೆಯು ಶೈಕ್ಷಣಿಕವಾಗಿಯೂ ಆಕರ್ಷಕವಾಗಿಯೂ ಇದ್ದು ಅಭಿಪ್ರಾಯಗಳನ್ನು ಒಳಗೊಂಡಿರುವಂಥದ್ದೂ ಆಗಿರಬೇಕು. ವಾಸ್ತವವಾಗಿ, ಪುಸ್ತಕ ಪುನರ್‌ವಿಮರ್ಶೆಯನ್ನು ತಜ್ಞರು ಕೈಗೊಳ್ಳುವರಾದರೂ ಪುಸ್ತಕ ಒಳಗೊಂಡಿರುವ ವಿಷಯವನ್ನು ಕುರಿತ ಮೂಲಭೂತ ಜ್ಞಾನವಿರುವ ಯಾರಾದರೂ ವಿಮರ್ಶೆಯ ಕೆಲಸವನ್ನು ಮಾಡಬಹುದು. ಪಠ್ಯಪುಸ್ತಕ ಪುನರ್ವಿಮರ್ಶೆಯಲ್ಲಿ ಪುನರ್‌ವಿಮರ್ಶಕನು ಸುಗಮವೂ ಸುಲಭವೂ ಆದ ಭಾಷೆಯನ್ನು ಬಳಸಿ ಪಠ್ಯಪುಸ್ತಕದ ಪ್ರತಿಯೊಂದು ಭಾಗವನ್ನೂ ವಿವರಿಸುತ್ತಾನೆ. ಪಠ್ಯಪುಸ್ತಕ ಅಂತರ್ವಸ್ತುವಿನ ವಿವರಣೆ ಮಾತ್ರವಷ್ಟೇ ಅಲ್ಲದೆ ಕೆಲವು ನಿರ್ದಿಷ್ಟ ಉದ್ದೇಶಿತ ಸಮೂಹಕ್ಕೆ ಪಠ್ಯಪುಸ್ತಕದ ಮಹತ್ವ ಮತ್ತು ಅದರ ಉಪಯುಕ್ತತೆಗಳ ಬೆಲೆಯನ್ನು ಕಟ್ಟುತ್ತಾನೆ. ಪಠ್ಯಪುಸ್ತಕ ಓದುಗರಿಗೆ ಸಹಾಯಕವಾಗಿದೆಯೇ ಎಂಬುದನ್ನು ತೋರಿಸುವುದೇ ಪಠ್ಯಪುಸ್ತಕ

ಪುನರ್ವಿಮರ್ಶೆಯ ಮುಖ್ಯ ಉದ್ದೇಶವಾಗಿದೆ. ಸಾಧಾರಣವಾಗಿ ನಿಯಮದ ಪ್ರಕಾರ ಪಠ್ಯಪುಸ್ತಕದ ಗುಣಾತ್ಮಕತೆಯನ್ನು ನಿರ್ಧರಿಸುವ ಮಾನದಂಡಗಳ ಪಟ್ಟಿಯನ್ನು, ಮೌಲ್ಯಮಾಪನವನ್ನು ಪಠ್ಯಪುಸ್ತಕ ಪುನರ್ವಿಮರ್ಶೆ ಒಳಗೊಳ್ಳುತ್ತದೆ. ಒಂದು ನಿರ್ದಿಷ್ಟ ಶೈಕ್ಷಣಿಕ ಸಂಸ್ಥೆಯ ಒಂದು ನಿಶ್ಚಿತ ಕೋರ್ಸಿಗೆ ಪಠ್ಯಪುಸ್ತಕವು ತಕ್ಕುದಾಗಿದೆಯೇ ಎಂಬುದನ್ನು ಪುನರ್‌ವಿಮರ್ಶಕ ಕಂಡುಹಿಡಿಯಬಲ್ಲನು. ಇದಲ್ಲದೆ, ಸಕಾರಾತ್ಮಕ ಪುನರ್ವಿಮರ್ಶೆ ಬಂದರೆ ಪಠ್ಯಪುಸ್ತಕದ ಮುಖಬೆಲೆ, ಬೋಧಿಸಲು ಶಿಕ್ಷಕರ ಆಸಕ್ತಿ ಮತ್ತು ವಿದ್ಯಾರ್ಥಿಗಳಿಗೆ ಕಲಿಯುವಲ್ಲಿ ಆಸಕ್ತಿ ಹೆಚ್ಚುತ್ತದೆ. ಪುನವಿಮರ್ಶೆಯಲ್ಲಿ ಸಲಹೆ ಸೂಚನೆಗಳು ಏನಾದರೂ ಇದ್ದಲ್ಲಿ ಮುಂದೆ ಬರುವ ಪರಿಷ್ಕೃತ ಮುದ್ರಣಗಳಲ್ಲಿ ಬರುವ ಪುಸ್ತಕದ ಗುಣಮಟ್ಟವನ್ನು ಸುಧಾರಿಸಲು ಸಹಾಯವಾಗುತ್ತದೆ.

ಪಠ್ಯಪುಸ್ತಕ ಪುನರ್ವಿಮರ್ಶೆ ಎಂದರೆ ಪಠ್ಯಪುಸ್ತಕದಲ್ಲಿ ಪ್ರಸ್ತುತಪಡಿಸಿರುವ ಪಠ್ಯವಿಷಯದ ಗುಣಮಟ್ಟದ ಮೌಲ್ಯಮಾಪನ. ಈ ಪುನರ್ವಿಮರ್ಶೆಯು ಹೆಚ್ಚು ಕಡಿಮೆ ಸಾಮಾನ್ಯ ಪುಸ್ತಕಗಳ ವಿಮರ್ಶೆಯಲ್ಲಿ ಅನುಸರಿಸುವ ಮಾರ್ಗದರ್ಶಿಗಳನ್ನೇ ಅನುಸರಿಸುತ್ತದೆ. ಇದನ್ನು ಕುರಿತು ಮುಂಬರುವ ಪುಟಗಳಲ್ಲಿ ಹೆಚ್ಚಾಗಿ ಅಧ್ಯಯನ ಮಾಡೋಣ. ಪಠ್ಯಪುಸ್ತಕವು ತರಗತಿಯ ಸಮಯದಲ್ಲಿ ಕೊಡಲಾಗುವ ಮಾಹಿತಿಯ ರೂಪುರೇಖೆಗೆ ಪೂರಕವಾಗಿ ಕೆಲಸಮಾಡಿ ಅದನ್ನು ವಿಸ್ತೃತವಾಗಿಯೂ ಆಳವಾಗಿಯೂ ಅಧ್ಯಯನ ಮಾಡುತ್ತದೆಯಲ್ಲದೆ ವಿದ್ಯಾರ್ಥಿಗಳು ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯ ಮಾಡುತ್ತದೆ.

ಪುಸ್ತಕ ಪುನರ್ವಿಮರ್ಶೆಗಳು ವಿವಿಧ ಧ್ವನಿ, ವಿಷಯ ಮತ್ತು ಶೈಲಿಯದ್ದಾಗಿರುತ್ತವೆ. ಆದರೆ, ಅವೆಲ್ಲದರಲ್ಲೂ ಒಂದು ಸಾಮಾನ್ಯ ಗುಣಲಕ್ಷಣಗಳಿರುತ್ತವೆ. ಅವು ಹೀಗಿವೆ:

1. ಅವುಗಳನ್ನು ಪೂರ್ವಾಗ್ರಹ ಮುಕ್ತವಾಗಿ ವಿವೇಚನೆಯಿಂದೊಡಗೂಡಿ ವೃತ್ತಿಪರತೆಯಿಂದ ಬರೆಯಲಾಗುತ್ತದೆ.
2. ಅವು ರಚನಾತ್ಮಕ ಹಿಮ್ಮಾಹಿತಿ ಕೊಡುತ್ತವೆ.
3. ಪುಸ್ತಕದ ಸಂಭಾವ್ಯ ಓದುಗರಲ್ಲಿ ಆಸಕ್ತಿ ಮೂಡಿಸುತ್ತದೆ.
4. ಸರಳ ಭಾಷೆಯಲ್ಲಿ ಬರೆಯಲಾಗಿರುತ್ತದೆ.
5. ನಿರೂಪಣೆಯಲ್ಲಿ ನಿರ್ದಿಷ್ಟತೆಯಿರುತ್ತದೆ.
6. ಓದುಗರ ಸಮಯ ಪರಿಮಿತವಾಗಿರುವುದರಿಂದ ಹೆಚ್ಚು ದೀರ್ಘವಾಗಿರುವುದಿಲ್ಲ.
7. ಪುಸ್ತಕದ ಒಟ್ಟಾರೆ ಮೌಲ್ಯ, ಅದರಲ್ಲಿ ಚರ್ಚಿಸಿರುವ ವಿಷಯ ಮತ್ತು ಕೊರತೆಗಳು– ಇವುಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ.
8. ಪುಸ್ತಕದ ಬಲಾಬಲಗಳನ್ನು ವಿಶ್ಲೇಷಿಸುವುದರ ಜೊತೆಗೆ, ವಿದ್ವತ್ಪೂರ್ಣವಾಗಿರುವ ಪುನರ್ವಿಮರ್ಶೆಯು ಓದುಗರು ಪುಸ್ತಕದ ಪ್ರಾಮಾಣಿಕತೆ ಮತ್ತು ಒಟ್ಟಾರೆ ಗುಣಮಟ್ಟಗಳ ದೃಷ್ಟಿಯಿಂದ ಮೌಲ್ಯಯುತವಾದುದು ಎಂದು ಪರಿಗಣಿಸುವರೇ ಇಲ್ಲವೇ ಎಂದು ಹೇಳುತ್ತದೆ. ಗುಣಮಟ್ಟದ ಈ ಮಾಪನವು ಲೇಖಕನ ವಿಚಾರಗಳು ಮತ್ತು ವಾದಗಳನ್ನು ಒಳಗೊಂಡಿದ್ದು ಸುಲಭಗ್ರಾಹ್ಯತೆ ಮತ್ತು ಭಾಷೆ, ಸಂಘಟನೆ ಮತ್ತು ರಚನೆ, ಸೂಚಿ ಹಾಗೂ ಅಗತ್ಯ ಬಿದ್ದಲ್ಲಿ ಪಠ್ಯೇತರ ಅಂಶಗಳನ್ನೂ ಒಳಗೊಳ್ಳುತ್ತದೆ.

ಪುಸ್ತಕವೊಂದನ್ನು ಪುನರ್ವಿಮರ್ಶಿಸಲು ಎರಡು ಸಾಮಾನ್ಯ ಉಪಕ್ರಮಗಳಿವೆ:

- **ವಿವರಣಾತ್ಮಕ ಪುನರ್ ವಿಮರ್ಶೆ:** ಈ ಉಪಕ್ರಮದಲ್ಲಿ ಪುಸ್ತಕದ ಅಂತರ್ವಸ್ತು ಮತ್ತು ರಚನೆಯನ್ನು ಸಾಧ್ಯವಾದಷ್ಟು ವಸ್ತುನಿಷ್ಠವಾಗಿ ಪ್ರಸ್ತುತಪಡಿಸಲಾಗುತ್ತದೆ. ಇದರಲ್ಲಿ ಪುಸ್ತಕದ ಉದ್ದೇಶ ಮತ್ತು ಪ್ರಾಮಾಣಿಕತೆಗಳನ್ನು ಕುರಿತ ಮುಖ್ಯ ಮಾಹಿತಿಯನ್ನು ವಿವರಿಸಲಾಗುತ್ತದೆ. ಅಧ್ಯಯನದ ಇಚ್ಛಿತ ಗುರಿಗಳು ಮತ್ತು ಉದ್ದೇಶಗಳನ್ನು ಹೇಳುವುದರ ಮೂಲಕ ಇದನ್ನು ಕೈಗೊಳ್ಳಲಾಗುತ್ತದೆ. ಸಾಮಾನ್ಯವಾಗಿ, ಇದರಲ್ಲಿ ಆ ಕೃತಿಯ ಮುಖ್ಯಾಂಶಗಳನ್ನು ಒತ್ತಿ ಹೇಳುವ ಪುಸ್ತಕದ ಪ್ಯಾರಾಗಳನ್ನು ಸೇರಿಸಲಾಗುತ್ತದೆ. ಜೊತೆಗೆ, ಅದನ್ನು ಓದಬಹುದಾದ ವಾಚಕ, ವಾಚನ ಮಟ್ಟದ ಕೆಲವು ಸೂಚನೆಯೂ ಇರಬಹುದು.

- **ವಿಮರ್ಶಾತ್ಮಕ ಪುನರ್ವಿಮರ್ಶೆ:** ಈಗಾಗಲೇ ಅಂಗೀಕೃತವಾಗಿರುವ ಸಾಹಿತ್ಯಿಕ ಹಾಗೂ ಐತಿಹಾಸಿಕ ಮಾನದಂಡಗಳನ್ನು ಗಮನದಲ್ಲಿರಿಸಿ ತತ್ಸಂಬಂಧಿತವಾಗಿ ಪುಸ್ತಕದ ವಿವರಣೆ ಮತ್ತು ಮೌಲ್ಯಮಾಪನ ಕೈಗೊಳ್ಳಲಾಗುತ್ತದೆಯಲ್ಲದೆ ಈ ಮೌಲ್ಯಮಾಪನಕ್ಕೆ ಪ್ರಮಾಣಗಳನ್ನು ಪಠ್ಯಪುಸ್ತಕಗಳಿಂದಲೇ ತೆಗೆದುಕೊಳ್ಳಲಾಗುತ್ತದೆ. ಬಹಳಷ್ಟು ವೇಳೆ ಇತರರು ಕೈಗೊಂಡ ಸಂಶೋಧನೆಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಮತ್ತು ಹೋಲಿಕೆಗಳನ್ನು ಇದರಲ್ಲಿ ಉಲ್ಲೇಖಿಸಲಾಗುತ್ತದೆ. ಗ್ರಂಥಕರ್ತ ಏನು ಮಾಡಲು ಪ್ರಯತ್ನಿಸಿದ್ದಾನೆ ಎಂಬುದನ್ನು ಕುರಿತ ಹೇಳಿಕೆಯು ಇದರಲ್ಲಿ ಒಳಗೊಳ್ಳಬೇಕಲ್ಲದೆ ಅಧ್ಯಯನದ ಗುರಿಗಳನ್ನು ಸಾಧಿಸುವಲ್ಲಿ ಗ್ರಂಥಕರ್ತ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದಾನೆ ಎಂಬುದನ್ನು ಕುರಿತ ಮೌಲ್ಯಮಾಪನವೂ ಇದರಲ್ಲಿ ಒಳಗೊಳ್ಳುತ್ತದೆ. ಈ ಮೌಲ್ಯಮಾಪನವನ್ನು ಸಮರ್ಥಿಸಲು ಬೇಕಾದ ಪುರಾವೆಗಳನ್ನು ಪ್ರಸ್ತುತಪಡಿಸಲಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

**ಈ ಕೆಳಗಿನವುಗಳನ್ನು 'ಸರಿ' ಅಥವಾ 'ತಪ್ಪು' ಎಂದು ಗುರುತಿಸಿ.**

1. ಪುಸ್ತಕ ವಿಮರ್ಶೆಯು ಪುಸ್ತಕದ ಅಂತರ್ವಸ್ತುವಿನ ಬಗ್ಗೆ ಮಾತ್ರ ಹೇಳುತ್ತದೆ.
2. ಪಠ್ಯಪುಸ್ತಕ ಪುನರ್ವಿಮರ್ಶೆ ಬಳಕೆದಾರರನ್ನು  ಪರಿಗಣಿಸುವುದಿಲ್ಲ.
3. ಪುನರ್ವಿಮರ್ಶೆಯು ಬೋಧಕ ಮತ್ತು ವಿದ್ಯಾರ್ಥಿಗಳಿಬ್ಬರಿಗೂ ನೆರವಾಗುತ್ತದೆ
4. ಪಠ್ಯಪುಸ್ತಕ ಪುನರ್ವಿಮರ್ಶೆ ಪುಸ್ತಕದ ಗುಣಮಟ್ಟವನ್ನು ಸುಧಾರಿಸಲು ನೆರವಾಗುತ್ತದೆ.

### 4.2.3.2.ಸಮಾಜ ವಿಜ್ಞಾನದ ಪಠ್ಯಪುಸ್ತಕಗಳ ಪುನರ್ವಿಮರ್ಶೆಯ ನಿರ್ಣಾಯಕ ಅಂಶಗಳು ಮತ್ತು ಕಾರ್ಯವಿಧಾನ

ಸಮಾಜ ವಿಜ್ಞಾನದ ಪಠ್ಯಪುಸ್ತಕಗಳಿಗೆ ಅಥವಾ ಸಮಾಜ ವಿಜ್ಞಾನವನ್ನು ಕುರಿತ ಪುಸ್ತಕಗಳಿಗೆ ಪನರ್ವಿಮರ್ಶೆ ಬರೆಯಲು ಇದಮಿತ್ಥಂ ಎಂಬಂತೆ ನಿಶ್ಚಿತವಾದ ಕ್ರಮಶಾಸ್ತ್ರೀಯ ವಿಧಾನವಿಲ್ಲ. ಆದ್ದರಿಂದ, ವಿಮರ್ಶೆಯ ಗಮನಕೇಂದ್ರವು ಪುನರ್ವಿಮರ್ಶೆಯ ಉದ್ದೇಶವೇನು ಎಂಬುದರ ಮೇಲೆ ಅಥವಾ ಪರಿಗಣಿಸಲಾಗಿರುವ ಪಠ್ಯಪುಸ್ತಕದಲ್ಲಿ ಕೊರತೆಗಳಿದ್ದಲ್ಲಿ, ಅವುಗಳ ಮೇಲೆ ಇರುತ್ತದೆ. ಪುನರ್ವಿಮರ್ಶೆಯನ್ನು ಎಷ್ಟು ಸಾಧ್ಯವೋ ಅಷ್ಟು ವಿಸ್ತಾರಗೊಳಿಸಲು ಕ್ಷೇತ್ರದ ಪರಿಣತರು ಕೊಟ್ಟ ಮತ್ತು ಅವರು ಉಪಯೋಗಿಸುವ ಕೆಲವು ಸಲಹೆ ಸೂಚನೆಗಳು ಈ ಕೆಳಗಿನಂತಿವೆ.

**ಎ) ಪುನರ್ವಿಮರ್ಶೆಗಾಗಿ ಮಾನದಂಡಗಳು**

**ಉದ್ದೇಶಗಳ ಸ್ಪಷ್ಟತೆ:** ಪಠ್ಯಪುಸ್ತಕದ ಉದ್ದೇಶಗಳನ್ನು ಸ್ಪಷ್ಟಪಡಿಸಲಾಗಿದೆಯೇ ಅಥವಾ ಪುನರ್ವಿಮರ್ಶೆಯ ಉದ್ದೇಶವನ್ನು ಸಮರ್ಪಕವಾಗಿ ಹೇಳಲಾಗಿದೆಯೇ?

**ಸಮಗ್ರತೆ:** ಪಠ್ಯಪುಸ್ತಕವು ಪಠ್ಯವಿಷಯದ ಸಮಸ್ತ ಕ್ಷೇತ್ರಗಳನ್ನು ಹಾಗೂ ವಿಚಾರಗಳನ್ನು ಸೂಕ್ತ ರೀತಿಯಲ್ಲಿ ಒಳಗೊಂಡಿದೆಯೇ?

**ಅಂತರ್ವಿಷಯದ ನಿಖರತೆ:** ಚಿತ್ರಗಳು ಹಾಗೂ ಇನ್ನಿತರ ಪೂರಕ ಸಾಮಗ್ರಿಗಳು ಒಳಗೊಂಡಂತೆ ಅಂತರ್ವಿಷಯ ವಸ್ತುವನ್ನು ನಿಖರವಾಗಿಯೂ ದೋಷಮುಕ್ತವಾಗಿಯೂ  ಪಕ್ಷಪಾತರಹಿತವಾಗಿಯೂ ನಿರೂಪಿಸಲಾಗಿದೆಯೇ?

**ಸುಸಂಬದ್ಧತೆ/ದೀರ್ಘಕಾಲ ಇರುವಿಕೆ:** ವಿಷಯವು ನವೀಕೃತವಾಗಿರುವುದು. ಆದರೆ, ಸ್ವಲ್ಪ ಕಾಲಾವಧಿಯಲ್ಲಿಯೇ ಪಠ್ಯವನ್ನು ಬಳಸಲಾಗದಂತೆ ಮಾಡುವ ರೀತಿಯಲ್ಲಿ ಅಲ್ಲ. ಅಗತ್ಯವಿರುವ ನವೀಕರಣ ಮಾಡಲು ಸುಲಭವಾಗುವ ರೀತಿಯಲ್ಲಿ, ಕಾರ್ಯರೂಪಕ್ಕೆ ತರಲು ಸರಳವಾಗಿರುವಂತಹ ರೀತಿಯಲ್ಲಿ ಪಠ್ಯಪುಸ್ತಕವನ್ನು ರೂಪಿಸಲಾಗಿದೆಯೇ?

**ಸುಸಂಗತತೆ:** ಪಠ್ಯಪುಸ್ತಕವು ಆಂತರಿಕವಾಗಿ ಪರಿಭಾಷೆ ಮತ್ತು ಚೌಕಟ್ಟುಗಳ ದೃಷ್ಟಿಯಿಂದ ಸುಸಂಗತವಾಗಿದೆಯೇ?

**ಸ್ವಯಂಪೂರ್ಣ ಘಟಕ:** ಕೋರ್ಸಿನ ಅವಧಿಯಲ್ಲಿ ಬೇರೆ ಬೇರೆ ಸಮಯದಲ್ಲಿ ಸಣ್ಣ ಸಣ್ಣ ಭಾಗಗಳಾಗಿ ನಿಯೋಜಿಸಲು ಸಾಧ್ಯವಾಗುವ ರೀತಿಯಲ್ಲಿ ಪಠ್ಯಪುಸ್ತಕದ ಅಂತರ್ವಿಷಯವನ್ನು ಸರಳವಾಗಿ, ಸಹಜವಾಗಿ ವಿಭಾಗ ಮಾಡಲಾಗಿದೆಯೇ?

ಸಂಘಟನೆ / ಸಂರಚನೆ / ನಿರಂತರತೆ: ಪಠ್ಯಪುಸ್ತಕದಲ್ಲಿರುವ ವಿಷಯಗಳನ್ನು ತಾರ್ಕಿಕ, ಸ್ಪಷ್ಟ ಶೈಲಿಯಲ್ಲಿ ಪ್ರಸ್ತುತಪಡಿಸಲಾಗಿದೆಯೇ?

**ಇಂಟರ್‌ಫೇಸ್(ಅಂತರಮುಖ):** ವಿಷಯಗಳು ಸುಗಮವಾಗಿ ಒಂದಕ್ಕೊಂದು ಹೊಂದಿಕೊಂಡು ನಿರೂಪಿತವಾಗಿವೆಯೇ? ಓದುಗರ ಏಕಾಗ್ರತೆಯನ್ನು ವಿಚಲಿತಗೊಳಿಸುವ ಅಂಶಗಳಿಂದ ಮುಕ್ತವಾಗಿದೆಯೇ?

**ಚಟುವಟಿಕೆಗಳು:** ಪಠ್ಯಪುಸ್ತಕದಲ್ಲಿ ವಿದ್ಯಾರ್ಥಿಗೆ ಕಲಿಯಲು ಅಭಿಪ್ರೇರಣೆ ನೀಡಲು ಸಾಕಷ್ಟು ಚಟುವಟಿಕೆಗಳು ಇವೆಯೇ?

**ಅಂದಚಂದ:** ಪುಸ್ತಕ ಒಟ್ಟಾರೆ ಅಂದವಾಗಿದೆಯೇ?

**ವ್ಯಾಕರಣ/ಅಕ್ಷರ ದೋಷಗಳು:** ಪಠ್ಯಪುಸ್ತಕ ವ್ಯಾಕರಣ ದೋಷ ಮತ್ತು ಅಕ್ಷರ ದೋಷಗಳಿಂದ ಮುಕ್ತವಾಗಿದೆಯೇ?

**ವೈವಿಧ್ಯತೆ ಮತ್ತು ಒಳಗೊಳ್ಳುವಿಕೆ:** ಪಠ್ಯಪುಸ್ತಕವು ಲಿಂಗ, ಜನಾಂಗೀಯತೆ, ರಾಷ್ಟ್ರೀಯ ಮೂಲ, ವಯೋಮಾನ, ಅಸಾಮರ್ಥ್ಯತೆ, ಶಿಕ್ಷಣ, ಧರ್ಮ ಮುಂತಾದುವುಗಳನ್ನು ಪ್ರತಿಬಿಂಬಿಸುವುದರ ಜೊತೆಗೆ, ಈ ಕ್ಷೇತ್ರಗಳಿಗೆ ಸಂಬಂಧಿಸದಂತೆ ಬಳಸಿದ ಭಾಷೆ ಸಂವೇದನಾ ರಹಿತವಾಗಿದೆಯೇ?

**ಉದ್ದೇಶಗಳ ಈಡೇರುವಿಕೆ:** ಪಠ್ಯಪುಸ್ತಕವು ಉದ್ದೇಶಿತ ಗುರಿಗಳನ್ನು ಈಡೇರಿಸುವಂತಿದೆಯೇ?

**ಸಲಹೆಗಳು:** ಪಠ್ಯಪುಸ್ತಕ ಸುಧಾರಣೆಗೆ ಸಲಹೆ ಸೂಚನೆಗಳಿವೆಯೇ?

**ಶಿಫಾರಸುಗಳು:** ಈ ಪುಸ್ತಕವನ್ನು ಶಿಫಾರಸು ಮಾಡುವ ಅಥವಾ ನಿರಾಕರಿಸುವ ಅಥವಾ ಉತ್ತಮಪಡಿಸಬೇಕಾದ ಸೂಚನೆಗಳಿವೆಯೇ?

ವಿವಿಧ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿನ ಅಂತರ್ವಸ್ತು ಮತ್ತು ಹಾಸ್ಯಚಿತ್ರಗಳನ್ನು ಪುನರ್ವಿಮರ್ಶಿಸುವುದಕ್ಕಾಗಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕ ಪುನರ್ವಿಮರ್ಶನಾ ಕಮಿಟಿ ಈ ಕೆಳಗಿನ ಮಾರ್ಗದರ್ಶಿಯನ್ನು ಉಪಯೋಗಿಸುತ್ತದೆ.

**ಒಮ್ಮುಖತೆ:** ಪಠ್ಯಪುಸ್ತಕಗಳನ್ನು ವಿಮರ್ಶಿಸುವಾಗ ಕಮಿಟಿಯು ಲಿಖಿತ ಪಠ್ಯ ಅಥವಾ ವಿಷಯವಸ್ತು ನಿರೂಪಣೆಗಳಿಗೆ ಅನುಗುಣವಾಗಿದೆಯೇ ಎಂದು ಪರೀಕ್ಷಿಸುತ್ತದೆ.

**ವ್ಯಕ್ತಿಗಳನ್ನು ಅಥವಾ ವ್ಯಕ್ತಿ ಸಮೂಹಗಳನ್ನು ಗುರಿಯಾಗಿಟ್ಟುಕೊಳ್ಳುವಿಕೆ:**

ಪಠ್ಯಪುಸ್ತಕದಲ್ಲಿರುವ ಶಾಬ್ದಿಕ ಮತ್ತು ಅಶಾಬ್ದಿಕ ಅಂಶಗಳು ಎರಡೂ ಸೇರಿದಂತೆ ವಿಷಯವಸ್ತು ಮತ್ತು ಉದಾಹರಣೆಗಳು ವ್ಯಕ್ತಿಗಳಿಗೆ ಅಥವಾ ವ್ಯಕ್ತಿಸಮೂಹಕ್ಕೆ ಉದ್ದೇಶಿತವಾಗಿವೆಯೇ ಅಥವಾ ಪರಿಕಲ್ಪನೆ ಮತ್ತು ವಿಷಯವಸ್ತುವನ್ನು ಸ್ಪಷ್ಟೀಕರಿಸುವುದಕ್ಕಾಗಿ ಕೊಡಲಾಗಿದೆಯೇ ಎಂಬೀ ಅಂಶಗಳನ್ನು

ಗಮನದಲ್ಲಿರಿಸಿ ಪಾಠಗಳನ್ನು ಪುನರ್ವಿಮರ್ಶಿಸಲಾಗುತ್ತದೆ. ವಿವರಣೆಗಳಲ್ಲಿ ಮತ್ತು ಅರ್ಥೈಸುವಿಕೆಯಲ್ಲಿ ಏನಾದರೂ ವಿರೂಪತೆಗಳಿವೆಯೇ? ಕೊಡಲಾಗಿರುವ ನಿರೂಪಣೆಗಳು ಅಥವಾ ಚಿತ್ರಗಳು ಆಯಾ ಸನ್ನಿವೇಶಕ್ಕೆ, ಆಯಾ ವ್ಯಕ್ತಿಗೆ ಸೂಕ್ತವಾಗಿವೆಯೇ" ಎಂದು ನೋಡಲಾಗುತ್ತದೆ.

**ಪ್ರಸ್ತುತಿಯಲ್ಲಿ ಸಮಂಜಸತೆ:** ವಸ್ತುವಿಷಯದಲ್ಲಿ ನಿರೂಪಣೆ, ದೃಶ್ಯಗಳು, ವ್ಯಂಗ್ಯಚಿತ್ರಗಳು ಮತ್ತು ಇತರ ದೃಶ್ಯಾವಳಿಗಳು ಮುಂತಾದುವುಗಳಲ್ಲಿ ಸಮತೋಲನವಿದೆಯೇ ಎಂದು ಪರೀಕ್ಷಿಸಲಾಗುತ್ತದೆ.

**ವಿಶ್ಲೇಷಣಾತ್ಮಕ ಮತ್ತು ಸಂಯೋಜನಾತ್ಮಕ ವಿಧ:** ಪಾಠಗಳ ವಿಷಯವಸ್ತು ಕೇವಲ ವಿಶ್ಲೇಷಣೆಯ ಮೇಲೆ ಗಮನ ಕೇಂದ್ರೀಕರಿಸಿದೆಯೋ ಅಥವಾ ಸಂಯೋಜನೆಯ ಮೇಲೂ ಗಮನಹರಿಸಿದೆಯೋ ಎಂದು ಪರೀಕ್ಷಿಸಲಾಗುವುದು.

**ವಿಡಂಬನೆಯ ಮಟ್ಟ:** ಪ್ರಸ್ತುತಿಪಡಿಸಲಾಗಿರುವ ವಿಡಂಬನೆ ಆಯಾ ವಿದ್ಯಾರ್ಥಿಗಳ ವಯೋಮಾನಕ್ಕೆ ತಕ್ಕಂತೆ ಇದೆಯೇ? ವಿಡಂಬನೆ ಸೂಕ್ಷ್ಮವಾಗಿದೆಯೇ ಅಥವಾ ಒರಟಾಗಿದೆಯೇ;

**ಸಕಾರಾತ್ಮಕ ಮತ್ತು ನಕಾರಾತ್ಮಕ ಉದಾಹರಣೆಗಳು:** ಕೇಸ್ ಅಧ್ಯಯನಗಳು, ವ್ಯಂಗ್ಯಚಿತ್ರಗಳು, ದೃಶ್ಯಗಳು, ಅಂಟುಚಿತ್ರಣ ಕಲೆ (ಕೊಲೆಜ್) ಇತ್ಯಾದಿಗಳಿಗೆ ಸಂಬಂಧಿಸಿದಂತೆ ಇರುವ ಉದಾಹರಣೆಗಳು ಸಮರ್ಪಕವಾಗಿವೆಯೇ?

**ನಿರೂಪಣೆಯ ಮಟ್ಟ:** ನಿರೂಪಣೆಯ ಗುಣಮಟ್ಟವು ಕಣ್ಣಿಗೆ ಆಕರ್ಷಕವಾಗಿ ಕಲ್ಪನೆಯನ್ನು ಉತ್ತೇಜಿಸುವಂತೆ ಇದೆಯೇ?

**ಸಂವೇದನಾಶೀಲತೆ:** ವ್ಯಂಗ್ಯಚಿತ್ರಗಳು ಮತ್ತು ನಿರೂಪಣೆಗಳು ಸಮುದಾಯ, ಜಾತಿ, ಜನಾಂಗೀಯತೆ, (Ethnicity), ಧರ್ಮ, ಮಹಿಳೆ, ಭಾಷೆ ಮತ್ತು ಇತರ ಗುಂಪು ಮತ್ತು ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಎಷ್ಟರ ಮಟ್ಟಿಗೆ ಸಂವೇದನಾಶೀಲವಾಗಿದೆ? ಭಾರತದಂತಹ ವೈವಿಧ್ಯತೆಯಿಂದ ಕೂಡಿರುವ ದೇಶದಲ್ಲಿ ಮೇಲಿನ ಅಂಶಗಳನ್ನು ನಿರ್ಲಕ್ಷಿಸುವಂತಿಲ್ಲ.

**ವ್ಯಂಗ್ಯಚಿತ್ರಗಳ ಪುನರ್ವಿಮರ್ಶೆಗೆ ಮಾರ್ಗದರ್ಶಿ ಸೂಚಿ:**

- ನೋಟಕ್ಕೆ ವಿರಾಮ ನೀಡುವಂತೆ, ಮೋಜಿಗಾಗಿ ವ್ಯಂಗ್ಯಚಿತ್ರಗಳಿರಬೇಕು.
- ಬೋಧನೆ ಮತ್ತು ಕಲಿಕೆಯನ್ನು ಸುಧಾರಿಸುವಂತಿರಬೇಕು.
- ತಲುಪಿಸಬೇಕಾಗಿರುವ ಸಂದೇಶದ ಮೌಲ್ಯವನ್ನು ಮನಗಾಣಲು ವಿದ್ಯಾರ್ಥಿಗಳಿಗೆ ನೆರವಾಗುವಂತೆ ಪಠ್ಯದಲ್ಲಿ ಹಿನ್ನೆಲೆ ಮಾಹಿತಿಯನ್ನು ಒದಗಿಸಬೇಕು.
- ವಿದ್ಯಾರ್ಥಿಗಳ ಕಲ್ಪನೆಯನ್ನು ವಿಶಾಲಗೊಳಿಸುವಂತಿರಬೇಕು.
- ಜಾತಿ, ಜನಾಂಗೀಯತೆ, ಧರ್ಮ, ಲಿಂಗ ಮತ್ತು ಪ್ರಾದೇಶಿಕ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಸಂವೇದನಾಶೀಲತೆ ಇರಬೇಕು.
- ಜನರಿಗೆ ಮತ್ತು ರಾಜನ್ಯೆತಿಕ ಸಂಸ್ಥೆಗಳಿಗೆ ವ್ಯಂಗ್ಯಚಿತ್ರಗಳು ಕೊಡುವ ಸಂದೇಶ.

**ಪಠ್ಯಪುಸ್ತಕ ಪುನರ್ವಿಮರ್ಶೆಯ ಕಾರ್ಯವಿಧಾನ**

ಯಾರು ಪಠ್ಯಪುಸ್ತಕವನ್ನು ಪುನರ್ವಿಮರ್ಶಿಸುತ್ತಿದ್ದಾರೆ ಎಂಬುದು ಪಠ್ಯಪುಸ್ತಕ ವಿಮರ್ಶೆಯನ್ನು ಕೈಗೆತ್ತಿಕೊಳ್ಳುವಾಗ ಪ್ರಪ್ರಥಮವಾಗಿ ಪರಿಗಣಿಸಬೇಕಾದ ಸಂಗತಿ. ಅದು ವ್ಯಕ್ತಿಯಾದರೆ ಆತ/ಆಕೆ ಸಾಧಾರಣವಾಗಿ ಅನುಸರಿಸಲಾಗುವ ಕಾರ್ಯವಿಧಾನಕ್ಕೆ ಅನುಸಾರವಾಗಿ ಮುಂದುವರೆಯಲು ಸ್ವತಂತ್ರರಾಗಿರುತ್ತಾರೆ. ಪುನರ್ವಿಮರ್ಶೆ ಮಾಡುವುದು ಒಂದು ಕಾರ್ಪೊರೆಟ್ ಅಂಗ ಅಥವಾ ಈ ಉದ್ದೇಶಕ್ಕೆ ನೇಮಕವಾದ ಕಮಿಟಿಯಾಗಿದ್ದರೆ, ಕಮಿಟಿಯು ಸರಣಿ ಸಭೆಗಳನ್ನು ಕೈಗೊಳ್ಳುವುದರ ಮೂಲಕ

ಕಾರ್ಯವಿಧಾನವನ್ನು ನಿರ್ಧರಿಸಬೇಕಾಗುತ್ತದೆ. ಅದರಲ್ಲಿ ಈ ಕೆಳಗೆ ಕೊಟ್ಟಿರುವ ಕಾರ್ಯವಿಧಾನವು ವ್ಯಕ್ತಿಯೋರ್ವ ಕೈಗೊಳ್ಳುವ ಪುನರ್ವಿಮರ್ಶೆಗೆ ಗಮನ ಕೇಂದ್ರೀಕರಿಸುತ್ತದೆ.

ಮೇಲೆ ಹೇಳಿದಂತೆ ಪಠ್ಯಪುಸ್ತಕ ಪುನರ್ವಿಮರ್ಶೆಗೆ ಒಂದು ನಿರ್ದಿಷ್ಟ ಕಾರ್ಯವಿಧಾನವನ್ನು ಗುರುತಿಸಿಲ್ಲ. ತಜ್ಞರು ಈ ಕ್ಷೇತ್ರದಲ್ಲಿ ಅನುಸರಿಸುವ ಸಾಮಾನ್ಯ ಕಾರ್ಯವಿಧಾನವನ್ನು ಈ ಕೆಳಗೆ ಕೊಡಲಾಗಿದೆ.

ಪುನರ್‌ವಿಮರ್ಶೆಯನ್ನು ಗುರುತಿಸಿ ಈ ಕೆಳಗಿನ ಮಾಹಿತಿಯನ್ನು ಆತ/ಆಕೆಯಿಂದ ಸಂಗ್ರಹಿಸಿ. ಪುನರ್‌ವಿಮರ್ಶಕನಿಗೆ ಈ ಕೆಳಗಿನ ಮಾಹಿತ ಉಪಯುಕ್ತವಾಗಬಲ್ಲದು:

- ಪುನರ್ವಿಮರ್ಶೆ ಮಾಡಲಾಗುವ ಪುಸ್ತಕದ ಹೆಸರು
- ಪಠ್ಯಪುಸ್ತಕವು ಯಾವ ಕೋರ್ಸಿನ ಮಟ್ಟಕ್ಕೆ ಅತ್ಯಂತ ಸೂಕ್ತವಾಗಿದೆ
- ಪುನರ್‌ವಿಮರ್ಶಕನ ಮೊದಲ ಮತ್ತು ಕಡೆಯ ನಾಮ
- ಪುನರ್‌ವಿಮರ್ಶಕ ಇ–ಮೇಲ್ (ಸಂಸ್ಥೆಯ ಇ–ಮೇಲ್ ಉತ್ತಮ)
- ಪುನರ್‌ವಿಮರ್ಶಕನ ವಿಳಾಸ (ಗೌರವಧನ ಕಳಿಸಲು)
- ಪುನರ್ವಿಮರ್ಶಕನ ಹುದ್ದೆ/ ಟೈಟಲ್
- ಪುನರ್ವಿಮರ್ಶಕನ ಮೂಲ ಸಂಸ್ಥೆ
- ಪ್ರಶ್ನೆ: ಈ ಪುನರ್ವಿಮರ್ಶೆ ಇನ್ನಿತರ ಮಾಧ್ಯಮಿಕ ಸ್ತರದ ನಂತರದ ಬೋಧಕರ ಸಹಯೋಗದಿಂದ ಆಗುತ್ತಿದೆಯೇ?
- ಸಹಯೋಗಿಯ ನಾಮ(ಗಳು)
- ಸಹಯೋಗಿಯ ಸಂಸ್ಥೆ(ಗಳು)

ಪುನರ್ವಿಮರ್ಶೆ ಕೆಳಗಿನ ಹಂತಗಳನ್ನು ಒಳಗೊಳ್ಳುತ್ತದೆ:

**1. ಬರೆಯುವ ಮುಂಚೆ ಓದಿ:**

ಈ ಕೆಳಗಿನ ಪ್ರಶ್ನೆಗಳ ಪಟ್ಟಿಯು ಓದುವಾಗ ನೀವು ಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯ ಅಂಶಗಳನ್ನು ಗುರುತಿಸಲು ನಿಮಗೆ ನೆರವಾಗುತ್ತದೆ. ನೀವು ಪಠ್ಯಪುಸ್ತಕವನ್ನು ಓದುವಾಗ ನೀವು ಆ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋಗಬಹುದು ಮತ್ತು ನೀವು ಪುನರ್‌ವಿಮರ್ಶೆಯಲ್ಲಿ ಸೇರಿಸಿಕೊಳ್ಳಬೇಕಾದ ಅಂಶಗಳನ್ನು ಉಲ್ಲೇಖಿಸುತ್ತಾ ಹೋಗಬಹುದು.

- ಪುಸ್ತಕದ ಶೀರ್ಷಿಕೆಯನ್ನು ಓದಿದ ಬಳಿಕ ಆ ಪಠ್ಯಪುಸ್ತಕ ಏನನ್ನು ಒಳಗೊಂಡಿರಬೇಕು ಎಂದು ನಿರೀಕ್ಷಿಸಿದ್ದಿರಿ?
- ಗ್ರಂಥಕರ್ತರು ಯಾರು? ಆ ಪಠ್ಯಪುಸ್ತಕವನ್ನು ಬರೆಯಲು ಅವರು ಸಾಕಷ್ಟು ಅರ್ಹರೇ?
- ಪಠ್ಯಪುಸ್ತಕಕ್ಕೆ ಹೆಚ್ಚುವರಿ ಸಾಮಗ್ರಿಗಳು ಬೇಕೇ?
- ಪಠ್ಯಪುಸ್ತಕ ಉತ್ತಮವಾಗಿ ಸಂರಚನೆಗೊಂಡಿದೆಯೇ? ಪಠ್ಯಪುಸ್ತಕ ಓದಲು ಸುಲಭವಾಗಿದೆಯೇ?
- ಯಾರನ್ನು ಉದ್ದೇಶಿಸಿಟ್ಟುಕೊಂಡು ಅದು ರಚಿತವಾಗಿದೆಯೋ ಅವರು ಅದನ್ನು ಕೊಳ್ಳಲು ಸಾಧ್ಯವಾಗುವಂತೆ ಇದೆಯೇ?
- ಪಠ್ಯಪುಸ್ತಕ ಯಾವ ವಿಧದ ಓದುಗರನ್ನು ಗುರಿಯಾಗಿಟ್ಟುಕೊಂಡಿದೆ?
- ವಿಷಯ ವಸ್ತು ನಿಖರವಾಗಿದೆಯೇ? ಏನಾದರೂ ತಪ್ಪುಗಳು ಗೋಚರವಾಯಿತೇ?
- ಪಠ್ಯಪುಸ್ತಕವು ನಿರೂಪಣೆ, ಕೋಷ್ಟಕ, ರೇಖಾಚಿತ್ರ ಇತ್ಯಾದಿಗಳನ್ನು ಒಳಗೊಂಡಿದೆಯೇ?
- ಕೊಟ್ಟಿರುವ ಅಭ್ಯಾಸಗಳು ಮತ್ತು ಪ್ರಾಯೋಗಿಕ ಕಾರ್ಯಗಳು ನಿರ್ವಹಿಸುವಂತೆ ಇವೆಯೇ?

- ಪಠ್ಯಪುಸ್ತಕದಲ್ಲಿ ಗ್ಲಾಸರಿ ಇವೆಯೇ? ಮುಖ್ಯವಾದ ಪರಿಭಾಷೆಗಳಿಗೆ ವ್ಯಾಖ್ಯಾನವಿದೆಯೇ?
- ಸೈದ್ಧಾಂತಿಕ ಮಾಹಿತಿಯು ಆಸಕ್ತಿಕರ ಮಾಹಿತಿಗಳಿಂದ ಅಥವಾ ಉದಾಹರಣೆಗಳಿಂದ ಬೆಂಬಲಿತವಾಗಿದೆಯೇ?
- ಪಠ್ಯಪುಸ್ತಕದಲ್ಲಿ ಏನಾದರೂ ಸಾದೃಶ್ಯಗಳು ಇವೆಯೇ? ಈ ಪಠ್ಯಪುಸ್ತಕ ಇತರ ಪಠ್ಯಪುಸ್ತಕಗಳಿಗಿಂತ ಹೇಗೆ ಭಿನ್ನವಾಗಿದೆ?
- ಪಠ್ಯಪುಸ್ತಕದ ವಿಷಯವಸ್ತು ನಿಮ್ಮನ್ನು ತೃಪ್ತಿಪಡಿಸಿತೇ?
- ಅಕ್ಷರದ ಗಾತ್ರ ಓದುವಂತಿದೆಯೇ? ಅಕ್ಷರದ ಗಾತ್ರ ಸೂಕ್ತವಾಗಿದೆಯೇ?
- ಗ್ರಂಥಕರ್ತರು ವಿವಾದಾತ್ಮಕ ವಿಷಯಗಳನ್ನು ಹೇಗೆ ನಿರ್ವಹಿಸಿದ್ದಾರೆ?
- ಪಠ್ಯಪುಸ್ತಕ ಹಳೆಯ ಮಾಹಿತಿಯನ್ನು ಒಳಗೊಂಡಿದೆಯೇ?
- ಪಠ್ಯಪುಸ್ತಕವು ಎಲೆಕ್ಟ್ರಾನಿಕ್ ರೂಪದಲ್ಲಿದ್ದರೆ ಅದು ಯಾವ ರೂಪವನ್ನು ಬೆಂಬಲಿಸುತ್ತದೆ?
- ಪಠ್ಯಪುಸ್ತಕದಲ್ಲಿ ಕುಲ, ಜನಾಂಗೀಯತೆ ಅಥವಾ ಲಿಂಗಕ್ಕೆ ಸಂಬಂಧಿಸಿದಂತೆ ಅಪಮಾನಕರ ಅಥವಾ ಸಂವೇದನಾರಹಿತ ಭಾಷೆಯ ಬಳಕೆಯಾಗಿದೆಯೇ?

**2. ಮುಂದಿನ ಮತ್ತು ಹಿಂದಿನ ಸಾಮಗ್ರಿಗೆ ತಕ್ಕ ಮಹತ್ವವನ್ನು ಕೊಡಿರಿ:**

ಮುಂದಿನ ಸಾಮಗ್ರಿ ಎಂದರೆ ಪುಸ್ತಕದ ಮೊದಲನೆ ಅಧ್ಯಾಯಕ್ಕಿಂತ ಮೊದಲು ಬರುವ ಎಲ್ಲ ವಿಷಯವಸ್ತು. ಹಿಂದಿನ ಸಾಮಗ್ರಿ ಎಂದರೆ ಪುಸ್ತಕದ ಕೊನೆಯ ಅಧ್ಯಾಯದ ಬಳಿಕ ಬರುವ ಎಲ್ಲ ವಿಷಯವಸ್ತು.

ಮುಂದಿನ ಸಾಮಗ್ರಿಯನ್ನು ಸಾಮಾನ್ಯವಾಗಿ ಪಠ್ಯಪುಸ್ತಕದ ಇತರ ವಿಷಯವಸ್ತುಗಳಿಗಿಂತ ಬೇರೆಯಾಗಿ ಸಣ್ಣ ರೋಮನ್ ಅಂಕೆಗಳನ್ನು ಬಳಸಿ ಸಂಖ್ಯಾನುಕ್ರಮಣಿಕೆಯಿಂದ ಸೂಚಿಸಲಾಗಿರುತ್ತದೆ (ಅಂದರೆ i-xi). ಒಟ್ಟಾರೆ, ಪುಸ್ತಕದ ಗುಣಮಟ್ಟವನ್ನು ತಗ್ಗಿಸುವಂಥದ್ದು ಇದೆ ಎಂದು ನಿಮಗೆ ಅನಿಸಿದರೆ ಮಾತ್ರ ಮುಂದಿನ ಅಥವಾ ಹಿಂದಿನ ಸಾಮಗ್ರಿಯನ್ನು ಕುರಿತ ವಿಮರ್ಶಾತ್ಮಕ ಟಿಪ್ಪಣಿ ಸಾಮಾನ್ಯವಾಗಿ ಅವಶ್ಯಕವಾಗುತ್ತದೆ [ಉದಾಹರಣೆಗೆ, ಸೂಚಿಯು(Index) ಉತ್ತಮವಾಗಿರದಿದ್ದರೆ] ಅಥವಾ ಪುಸ್ತಕದ ವಿಷಯವಸ್ತುವನ್ನು ಅರ್ಥಮಾಡಿಕೊಳ್ಳಲು ವಿಶೇಷವಾಗಿ ನೆರವಾಗುವಂತಿದ್ದರೆ [ಉದಾ: ಮುನ್ನುಡಿ ಪುಸ್ತಕದ ಮೌಲ್ಯವನ್ನು ಹೆಚ್ಚಿಸುತ್ತದೆ]. ಅಂಥದ್ದನ್ನು ಸೇರಿಸುವುದು ಅವಶ್ಯಕ.

**ಮುಂದಿನ ಸಾಮಗ್ರಿ:** ಇದು ಸ್ಪಷ್ಟವಾಗಿದೆಯೆ? ವಿವರವಾಗಿದೆಯೇ? ಅಥವಾ ಸಾಮಾನ್ಯವಾಗಿದೆಯೇ? ಅದು ಪುಸ್ತಕದ ವಾಸ್ತವ ಅಂತರ್ವಸ್ತುವನ್ನು ಪ್ರತಿಬಿಂಬಿಸುತ್ತಿದೆಯೇ? ಅಂತರ್ವಸ್ತುವಿನ ತಾರ್ಕಿಕ ಕ್ರಮಾನುಗತತೆ (Sequence)ಯನ್ನು ಅರ್ಥ ಮಾಡಿಕೊಳ್ಳಲು ಇದು ನೆರವಾಗುತ್ತದೆಯೇ?
**ಪರಿವಿಡಿ/ವಿಷಯಾನುಕ್ರಮಣಿಕೆ:** ಇದು ಸ್ಪಷ್ಟವಾಗಿದೆಯೇ? ಇದು ವಿವರವಾಗಿದೆಯೇ ಅಥವಾ ಸಾಮಾನ್ಯವಾಗಿದೆಯೇ?

**ಗ್ರಂಥಕರ್ತರ ಜೀವನ ಪರಿಚಯ:** ಹಿಂದಿನ ಸಾಮಗ್ರಿಯಲ್ಲಿ ಸಾಮಾನ್ಯವಾಗಿ ಕಂಡುಬರುವ ಗ್ರಂಥಕರ್ತೃ/ಕರ್ತೃಗಳ ಜೀವನ ಪರಿಚಯವಿದ್ದಲ್ಲಿ ಬರಹಗಾರರ ಅಧಿಕಾರ (ಪುಸ್ತಕ ಬರೆಯುವಲ್ಲಿ) ಏನೆಂದು ನಿಶ್ಚಯಿಸಲು ಉಪಯೋಗವಾಗುತ್ತದೆಯಲ್ಲದೆ ಪುಸ್ತಕವನ್ನು ಈ ಹಿಂದೆ ಆದ ಸಂಶೋಧನೆಗಳನ್ನು ಆಧರಿಸಿದೆಯೇ ಅಥವಾ ಹೊಸ ಸಂಶೋಧನೆಯನ್ನು ಪ್ರತಿನಿಧಿಸುತ್ತದೆಯೇ ಎಂಬುದನ್ನು ನಿರ್ಧರಿಸಲು ಸಹಾಯಕವಾಗುತ್ತದೆ. ವಿದ್ವತ್ಪೂರ್ಣ ಪುನರ್ವಿಮರ್ಶೆಗಳಲ್ಲಿ, ಗ್ರಂಥಕರ್ತರ ಸಂಬಂಧ ಯಾವ ಸಂಸ್ಥೆಯೊಂದಿಗಿದೆ ಎನ್ನುವುದರ ಬಗ್ಗೆ ಮತ್ತು ಅವರ ಈ ಹಿಂದಿನ ಪ್ರಕಾಶನಗಳ ಬಗ್ಗೆ ತಿಳಿಯುವುದರಿಂದ ಪಠ್ಯಪುಸ್ತಕದ ಒಟ್ಟಾರೆ ಪ್ರಾಮಾಣಿಕತೆಯನ್ನು ನಿರ್ಧರಿಸಲು ಪುನರ್ವಿಮರ್ಶಕನಿಗೆ ಸಾಧ್ಯವಾಗುತ್ತದೆ (ಅಂದರೆ, ಗ್ರಂಥಕರ್ತ ಅನ್ವೇಷಣೆಗಾಗಿ ಕೈಗೆತ್ತಿಕೊಂಡಿರುವ ವಿಷಯದ ಬಗ್ಗೆ ಸಂಶೋಧನೆ ನಡೆಸುವ ಸಂಶೋಧನಾ ಕೇಂದ್ರದೊಂದಿಗೆ ಸಂಬಂಧ ಹೊಂದಿದ್ದಾರೆಯೇ?)

**ಮುನ್ನುಡಿ:** ಓದುಗರಿಗೆ ಗ್ರಂಥಕರ್ತೃವನ್ನು ಮತ್ತು ಪುಸ್ತಕವನ್ನು ಪರಿಚಯಿಸುವುದು ಹಾಗೂ ಇವೆರಡರ ವಿಶ್ವಾಸಾರ್ಹತೆಯನ್ನು ಸ್ಥಿರೀಕರಿಸುವುದು ಮುನ್ನುಡಿಯ ಉದ್ದೇಶವಾಗಿದೆ. ಮುನ್ನುಡಿಯು ಪುಸ್ತಕದ ವಿಷಯ ವಸ್ತುವಿಗೆ ಹೆಚ್ಚುವರಿಯಾಗಿ ಯಾವ ಮಾಹಿತಿಯನ್ನು ಸೇರಿಸದೆ ಇರಬಹುದಾದರೂ ಪುಸ್ತಕದ ಅಸ್ತಿತ್ವವನ್ನು ಪ್ರಮಾಣೀಕರಿಸುವ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ನಂತರ ಬರುವ ಪುಸ್ತಕದ ಆವೃತ್ತಿಗಳು ಹಳೆಯ ಮುನ್ನುಡಿಗೆ (ಹಳೆಯ ಮುನ್ನುಡಿ ಇದ್ದರೆ) ಮುಂಚೆ ಹೊಸ ಮುನ್ನುಡಿಯನ್ನು ಹೊಂದಿದ್ದು ಹೊಸ ಆವೃತ್ತಿ ಹಳೆಯ ಆವೃತ್ತಿಗಿಂತ ಹೇಗೆ ಭಿನ್ನ ಎಂಬುದನ್ನು ವಿವರಿಸುವ ಸಲುವಾಗಿ ಸೇರಿಸಬಹುದಾಗಿದೆ.

**ಕೃತಜ್ಞತೆಗಳು:** ಸಾಧಾರಣವಾಗಿ, ಸಮಾಜ ವಿಜ್ಞಾನಗಳಲ್ಲಿನ ವಿದ್ವತ್ಪೂರ್ಣ ಅಧ್ಯಯನಗಳನ್ನು ರಚಿಸಲು ಅನೇಕ ವರ್ಷಗಳು ಹಿಡಿಯುತ್ತವೆಯಾದ್ದರಿಂದ ಗ್ರಂಥಕರ್ತರು ಆಗಾಗ ತಮ್ಮ ಸಂಶೋಧನೆ ಪ್ರಕಟವಾಗಲು ನೆರವಾದ, ಬೆಂಬಲಿಸಿದ ಇತರರನ್ನು ಸ್ಮರಿಸುತ್ತಾರೆ. ಆದರೆ, ಗ್ರಂಥಕರ್ತೃ ಪ್ರಮುಖ ಪಂಡಿತರು ಅಥವಾ ವಿಷಯತಜ್ಞರು ಸಂಶೋಧನಾ ಕೇಂದ್ರಗಳಲ್ಲಿನ ಮುಖ್ಯ ಸಿಬ್ಬಂದಿ, ಮುಖ್ಯವಾದ ಪುರಾತನ ಸಂಗ್ರಹಗಳ ಪಾಲನೆ ಮಾಡುವ ವ್ಯಕ್ತಿಗಳು ಅಥವಾ ಸಂಶೋಧನೆಗೆ ಧನಸಹಾಯ ಮಾಡಿದ ಸಂಸ್ಥೆ– ಇವರೆಲ್ಲರನ್ನೂ ಗ್ರಂಥಕರ್ತೃ ಸ್ಮರಿಸಬಹುದಾಗಿದೆ. ಈ ಎಲ್ಲ ನಿರ್ದಿಷ್ಟ ಸಂದರ್ಭಗಳಲ್ಲಿ ನಿಮ್ಮ ಪುನರ್ವಿಮರ್ಶೆಯಲ್ಲಿ ಈ ಎಲ್ಲ ನೆರವುಗಳ ಬಗ್ಗೆ ಉಲ್ಲೇಖಿಸುವುದು, ಅದರಲ್ಲೂ ಧನಸಹಾಯ ಒದಗಿಸಿದ ಸಂಸ್ಥೆ ತನ್ನದೇ ಆದ ನಿರ್ದಿಷ್ಟ ವಿಚಾರಧಾರೆಯನ್ನು ಪ್ರೋತ್ಸಾಹಿಸುವ ಗುರಿ ಹೊಂದಿದ್ದರೆ, ಬಹಳ ಉಚಿತ.

**ಪೀಠಿಕೆ:** ಪೀಠಿಕೆಯು ಸಾಮಾನ್ಯವಾಗಿ ಹುಟ್ಟು, ಉದ್ದೇಶ, ಪರಿಮಿತಿಗಳು ಮತ್ತು ವ್ಯಾಪ್ತಿಯ ಬಗ್ಗೆ ವಿವರಿಸುತ್ತದೆ. ಜೊತೆಗೆ, ಗ್ರಂಥಕರ್ತೃವಿಗೆ ತನ್ನ ಅಧ್ಯಯನವನ್ನು ಪೂರ್ಣಗೊಳಿಸಲು ಸಹಾಯ ನೀಡಿದ ವ್ಯಕ್ತಿಗಳಿಗೆ ಲೇಖಕನು ತೋರುವ ಕೃತಜ್ಞತೆಗಳನ್ನು ಒಳಗೊಂಡಿರಬಹದು. ಪೀಠಿಕೆ ಅಧ್ಯಯನವನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗಿದೆಯೇ? ಮುಂದೆ ಬರಬಹುದಾದದ್ದರ ಬಗ್ಗೆ ಅರಿವು ಮೂಡಿಸುವಂತಹ ಪರಿಣಾಮಕಾರಿ ಚೌಕಟ್ಟನ್ನು ಇದು ಒದಗಿಸುತ್ತದೆಯೇ?

**ಕಾಲಾನುಕ್ರಮ:** ಇದನ್ನು ಹಿಂದಿನ ಸಾಮಗ್ರಿಯಲ್ಲಿ ಕಾಣಬಹುದು. ಕಾಲಾನುಕ್ರಮದಲ್ಲಿ ಪುಸ್ತಕದ ವಿಷಯ ವಸ್ತುವಿಗೆ ಸಂಬಂಧಿಸಿದ ಪ್ರಮುಖ ಘಟನೆಗಳನ್ನು ಒತ್ತಿ ಹೇಳಲಾಗಿರುತ್ತದೆ. ಇಲ್ಲಿ ಸೇರಿಸಲಾಗಿರುವುದೆಲ್ಲಾ ಒಟ್ಟಾರೆ ಪುಸ್ತಕಕ್ಕೆ ಕೊಡುಗೆ ನೀಡುವಂತಿದೆಯೇ? ಇದು ವಿವರವಾಗಿದೆಯೇ ಅಥವಾ ಬಹಳ ಸಾಮಾನ್ಯವಾಗಿದೆಯೇ?

**ಪತ್ಯೇತರ ಅಂಶಗಳ ಪಟ್ಟಿ:** ಹಲವಾರು ಚಾರ್ಟುಗಳು, ಛಾಯಾಚಿತ್ರಗಳು, ನಕ್ಷೆಗಳು, ಕೋಷ್ಠಕಗಳು ಇತ್ಯಾದಿಗಳನ್ನು ಒಳಗೊಂಡಿರುವ ಪುಸ್ತಕವು ಇವೆಲ್ಲವನ್ನೂ ಪುಸ್ತಕದಲ್ಲಿ ಅವು ಬರುವ ಕ್ರಮದಲ್ಲಿಯೆ ವಿಷಯಾನುಕ್ರಮಣಿಕೆ ನಂತರ ಪಟ್ಟಿ ಮಾಡುತ್ತದೆ. ಇದು ಉಪಯುಕ್ತವಾಗಿದೆಯೇ?

**ಹಿಂದಿನ ಸಾಮಗ್ರಿ:** ಪುಸ್ತಕದ ಒಟ್ಟಾರೆ ಗುಣಮಟ್ಟವನ್ನು ಪುನರ್ವಿಮರ್ಶಿಸುವಾಗ ಇದನ್ನು ಮೌಲ್ಯಮಾಪನಕ್ಕೆ ಕೈಗೆತ್ತಿಕೊಳ್ಳಬಹುದು.

**ಹಿನ್ನುಡಿ:** ಇದು ಲೇಖಕರು ಬರೆಯುವ ಸಂಕ್ಷಿಪ್ತ ಪ್ರತಿಫಲನಾತ್ಮಕ ವಾಕ್ಯಗುಚ್ಛವಾಗಿದ್ದು ತೀರ್ಮಾನವನ್ನು ಹೇಳುವ ಭಾಗವಾಗಿರುತ್ತದೆ ಅಥವಾ ಅಂತಿಮ ವ್ಯಾಖ್ಯಾನ ಇಲ್ಲವೆ ಮುಕ್ತಾಯದ ಹೇಳಿಕೆಯಾಗಿರುತ್ತದೆ. ಈ ಭಾಗ ಪುಸ್ತಕದ ಉದ್ದೇಶದ ಬಗ್ಗೆ ಮಾಹಿತಿ ಕೊಡುತ್ತಿದ್ದರೆ, ಕ್ರಿಯಾಶೀಲತೆಯನ್ನು ಪ್ರೇರೇಪಿಸುವಂತಿದ್ದರೆ, ಪ್ರಮುಖ ಶಿಫಾರಸುಗಳನ್ನು ಅಥವಾ ಮುಂದಿನ ಹಂತಗಳನ್ನು ಸಂಕ್ಷೇಪಿಸುವಂತಿದ್ದರೆ ಅಥವಾ ಓದುಗರಿಗೆ ಪುಸ್ತಕದಲ್ಲಿ ಮುಖ್ಯ ಅಂಶಗಳನ್ನು ಪರಿಗಣಿಸಿ ಎಂದು ಹೇಳುವಂತಿದ್ದರೆ ಇದನ್ನು ಉಲ್ಲೇಖಿಸುವುದು ಸೂಕ್ತ.

**ಅನುಬಂಧ:** ಅನುಬಂಧ ಅಥವಾ ಅನುಬಂಧಗಳಲ್ಲಿ ಕೊಟ್ಟಿರುವ ಪೂರಕ ಸಾಮಗ್ರಿ ಚೆನ್ನಾಗಿ ಸಂಘಟಿತವಾಗಿದೆಯೇ? ಅವು ಪುಸ್ತಕದ ವಿಷಯವಸ್ತುವಿಗೆ ಸಂಬಂಧಿತವಾಗಿದೆಯೇ ಅಥವಾ ಹೆಚ್ಚುವರಿ ಎನಿಸುತ್ತದೆಯೇ? ಪಠ್ಯಪುಸ್ತಕದಲ್ಲಿ ಸಮಗ್ರವಾಗಿ ಸೇರಿಸಿದ್ದರೆ ಸೂಕ್ತವಾಗಿರುತ್ತಿತ್ತು ಎಂಬ ಯಾವುದೇ ಮುಖ್ಯ ಮಾಹಿತಿಯನ್ನು ಇದು ಒಳಗೊಂಡಿದೆಯೇ?

**ಸೂಚಿ:** ಹೆಸರು ಮತ್ತು ವಿಷಯಗಳಿಗೆ ಪ್ರತ್ಯೇಕವಾದ ಸೂಚಿಗಳಿವೆಯೇ ಅಥವಾ ಎಲ್ಲವನ್ನೂ ಒಂದೇ ಸೂಚಿಯಲ್ಲಿ ಸೇರಿಸಲಾಗಿದೆಯೇ? ಸೂಚಿಯು ನಿಖರವಾಗಿಯೂ ವಿಸ್ತೃತವಾಗಿಯೂ ಇದೆಯೆ? ಬಳಸಲಾಗಿರುವ ದಪ್ಪ ಅಕ್ಷರಗಳು ಅಥವಾ ಓರೆ ಅಕ್ಷರಗಳು ಮುಂತಾದ ಅಂಶಗಳು ಪುಸ್ತಕದಲ್ಲಿ ನಿರ್ದಿಷ್ಟ ಸ್ಥಳವನ್ನು ಗುರುತಿಸಲು ಸಹಾಯಕವಾಗುವಂತಿವೆಯೇ?

**ಶಬ್ದಸಂಗ್ರಹ (ಗ್ಲಾಸರಿ ಆಫ್ ಟರ್ಮ್ಸ್):** ವ್ಯಾಖ್ಯಾನಗಳನ್ನು ಸ್ಪಷ್ಟವಾಗಿ ಬರೆಯಲಾಗಿದೆಯೇ? ಶಬ್ದಸಂಗ್ರಹವು ವ್ಯಾಪಕವಾಗಿದೆಯೇ ಅಥವಾ ಪ್ರಧಾನ ಪರಿಭಾಷಾ ಶಬ್ದಗಳು(ಕೀಟರ್ಮ್ಸ್) ಬಿಟ್ಟು ಹೋಗಿವೆಯೇ? ಪಠ್ಯಪುಸ್ತಕದಲ್ಲಿ ಉಲ್ಲೇಖಿಸಲಾದ ಪರಿಭಾಷೆಗಳು ಅಥವಾ ಪರಿಕಲ್ಪನೆಗಳು ಸೇರಿಸಬೇಕಾಗಿದ್ದರೂ ಕೈಬಿಟ್ಟು ಹೋಗಿವೆಯೇ?

**ಅಂತಿಮ ಟಿಪ್ಪಣಿ (ಎಂಡ್ ನೋಟ್ಸ್):** ಅಧ್ಯಾಯದಿಂದ ಅಧ್ಯಾಯಕ್ಕೆ ಓದುತ್ತಾ ಹೋದಂತೆ ಅಂತಿಮ ಟಿಪ್ಪಣಿ ಏನಾದರೂ ಇದ್ದರೆ ಅದನ್ನು ಪರೀಕ್ಷಿಸಿ. ಅವು ಮುಖ್ಯವಾದ ಹೆಚ್ಚುವರಿ ಮಾಹಿತಿಯನ್ನು ಒದಗಿಸುತ್ತದೆಯೇ? ಪಠ್ಯದಲ್ಲಿ ಹೇಳಲಾಗಿರುವ ಅಂಶಗಳನ್ನು ಅವು ಸ್ಪಷ್ಟಪಡಿಸುತ್ತವೆಯೇ ಅಥವಾ ವಿಸ್ತಾರಗೊಳಿಸುತ್ತವೆಯೇ? ಟಿಪ್ಪಣಿಗಳನ್ನು ಪ್ರತ್ಯೇಕವಾಗಿ ಕೊಡುವ ಬದಲು ಪಠ್ಯದಲ್ಲಿಯೇ ಸಮಗ್ರವಾಗಿ ಸೇರಿಸಿದ್ದರೆ ಉತ್ತಮವಾಗಿರುತ್ತಿತ್ತೇ? ಅಡಿ ಟಿಪ್ಪಣಿ ಬಳಸಿದ್ದರೆ ಇದೇ ಕ್ರಮವನ್ನು ಅನುಸರಿಸಿ.

**ಗ್ರಂಥಸೂಚಿ/ಪರಾಮರ್ಶನ ಗ್ರಂಥಗಳು/ ಮುಂದಿನ ಅಧ್ಯಯನ:** ಯಾವುದೇ ಗ್ರಂಥಸೂಚಿ ಆಕರಗ್ರಂಥಗಳ ಉಲ್ಲೇಖದ ಪಟ್ಟಿ ಮತ್ತು/ಅಥವಾ ಮತ್ತಷ್ಟು ಅಧ್ಯಯನ– ಇವುಗಳು ಲೇಖಕರು ಸೇರಿಸಿದ್ದಲ್ಲಿ ಅವುಗಳನ್ನು ಪುನರ್ವಿಮರ್ಶಿಸಿ. ಯಾವ ವಿಧದ ಆಕರಗಳನ್ನು [ಉದಾ; ಮೂಲ ಅಥವಾ ಮೂಲದಿಂದ ಬಂದ ಆಕರಗಳು, ಇತ್ತೀಚಿನದು ಅಥವಾ ಹಳೆಯ ಆಕರಗಳು, ವಿದ್ವತ್ಪೂರ್ಣ ಅಥವಾ ಜನಪ್ರಿಯ ಆಕರಗಳು ಇತ್ಯಾದಿ] ಕಾಣಬರುತ್ತಿವೆ? ಗ್ರಂಥಕರ್ತ ಅವುಗಳನ್ನು ಹೇಗೆ ಉಪಯೋಗಿಸಿಕೊಂಡಿದ್ದಾನೆ? ಉಪಯೋಗಿಸಿಕೊಳ್ಳಬಹುದಾಗಿತ್ತು ಎಂದು ನಿಮಗೆ ಅನಿಸುವ, ಬಿಟ್ಟು ಹೋಗಿರುವ ಆಕರಗಳನ್ನು , ಮುಖ್ಯವಾದ ಡಿಜಿಟಲ್ ಅಥವಾ ಪುರಾತನ ಸಂಗ್ರಹಗಳು ಸೇರಿದಂತೆ, ಮರೆಯದೆ ಗುರುತು ಮಾಡಿಕೊಳ್ಳಿ.

**3. ಬರೆಯುವುದಕ್ಕೆ ಈ ಹಂತಗಳನ್ನು ಅನುಸರಿಸಿ:**

- ಓದುಗರಿಗೆ ಪಠ್ಯಪುಸ್ತಕವನ್ನು ಪರಿಚಯಿಸುವ ಕಾರಣದಿಂದ ಪ್ರಾರಂಭಿಸಿ. ಪಠ್ಯಪುಸ್ತಕದ ಶೀರ್ಷಿಕೆ ಮತ್ತು ಅದರ ರಚನೆಯಲ್ಲಿ ಭಾಗವಹಿಸಿದ ಗ್ರಂಥಕರ್ತರನ್ನು ಉಲ್ಲೇಖಿಸಿ. ಅಲ್ಲದೆ, ಪಠ್ಯಪುಸ್ತಕದ ಘಟಕಗಳು ಹಾಗೂ ಅಂಶಗಳನ್ನು ಪಟ್ಟಿಮಾಡಿ ಮತ್ತು ಪಠ್ಯಪುಸ್ತಕದ ಇತರ ಭಾಗಗಳು, ಕಾರ್ಯಪುಸ್ತಕಗಳು, ಸೇರ್ಪಡೆಗಳು ಇವೆಯೇ ಎಂದೂ ಪಟ್ಟಿಮಾಡಿ. ಪಠ್ಯಪುಸ್ತಕದ ಗಾತ್ರ ಮತ್ತು ಪ್ರಾರೂಪವನ್ನು ಮೌಲ್ಯಮಾಪನ ಮಾಡಿ. ಇದನ್ನು ಸಾಧಾರಣವಾದ ವಿದ್ಯಾರ್ಥಿಗಳು ಬಳಸುವ ಬೆನ್ನು ಚೀಲದಲ್ಲಿ ಸುಲಭವಾಗಿ ಕೊಂಡೊಯ್ಯಬಹುದೇ? ಇದರ ಹೊದಿಕೆ ಸುಲಭವಾಗಿ ಹಾನಿಗೆ ಒಳಗಾಗುವಂತೆ ಇದೆಯೇ?

- **ಪುಸ್ತಕದ ವಿಷಯವಸ್ತುವಿನ ಗುಣಮಟ್ಟವನ್ನು ವಿವರಿಸಿ:** ಸೈದ್ಧಾಂತಿಕ ಮಾಹಿತಿಯ ವ್ಯಾಪ್ತಿ, ಅಭ್ಯಾಸಗಳ ಗುಣಾತ್ಮಕತೆ, ಪುಸ್ತಕ ಒಳಗೊಂಡಿರುವ ವಿಷಯಗಳ ಸಂಖ್ಯೆ ಮತ್ತು ಗ್ರಂಥಕರ್ತರ ಭಾಷೆ ಮತ್ತು ಶೈಲಿ– ಇವುಗಳನ್ನು ವಿಶ್ಲೇಷಿಸಿ. ಹೆಚ್ಚುವರಿ ಸಾಮಗ್ರಿ ಮತ್ತು ಬೆಂಬಲಿಸುವ ಚಿತ್ರಗಳನ್ನು (ಫೋಟೋಗಳು, ಕೋಷ್ಟಕಗಳು, ಚಿತ್ರಗಳು ಇತ್ಯಾದಿ) ಮೌಲ್ಯಮಾಪನ ಮಾಡಿ. ಕಲಿಕಾ ಸಾಮಗ್ರಿಯನ್ನು ಪಠ್ಯಪುಸ್ತಕದ ಸಂರಚನೆ ಹೇಗೆ ಬೆಂಬಲಿಸುತ್ತದೆ ಎಂಬುದನ್ನು ವಿವರಿಸಿ. ನಿಮ್ಮ ದೃಷ್ಟಿಕೋನವನ್ನು ಬೆಂಬಲಿಸಲು ಪಠ್ಯಪುಸ್ತಕದಿಂದಲೇ ಉದಾಹರಣೆಗಳನ್ನು ಕೊಡಿ.

ನಿರ್ದಿಷ್ಟವಾಗಿ ಹೇಳುವುದಾದರೆ, ಈ ಕೆಳಗಿನ ಅಂಶಗಳನ್ನು ಪುಸ್ತಕದ ವಿಷಯವಸ್ತುವನ್ನು ವಿಶ್ಲೇಷಿಸಲು ಅಳವಡಿಸಿಕೊಳ್ಳಬಹುದು.

- ✓ ಪುಸ್ತಕದ ಉದ್ದೇಶ ಸಾಧಿತವಾಗಿದೆಯೇ?
- ✓ ವಿಷಯಕ್ಷೇತ್ರಕ್ಕೆ ಪುಸ್ತಕ ಏನು ಕೊಡುಗೆಯನ್ನು ಕೊಟ್ಟಿದೆ?
- ✓ ವಿಷಯವಸ್ತುವಿನ ಪ್ರಸ್ತುತಿ ವಸ್ತುನಿಷ್ಠವಾಗಿದೆಯೇ ಅಥವಾ ಕನಿಷ್ಠಪಕ್ಷ ಚರ್ಚೆಯ ಎಲ್ಲ ಮುಖಗಳನ್ನು ವಿವರಿಸುವಲ್ಲಿ ಸಮತೋಲನ ಕಾಪಾಡಲಾಗಿದೆಯೇ?
- ✓ ಗ್ರಂಥಕರ್ತರ ಪ್ರೌಢಪ್ರಬಂಧ ಹೇಳಿಕೆಯನ್ನು ಸಮರ್ಥಿಸಲು ಯಾವ ರೀತಿಯ ದತ್ತಾಂಶಗಳನ್ನು, ದತ್ತಾಂಶಗಳು ಇದ್ದ ಪಕ್ಷದಲ್ಲಿ, ಬಳಸಲಾಗಿದೆಯೇ?
- ✓ ವಾಸ್ತವಾಂಶಗಳನ್ನು ಮತ್ತು ಸಾಕ್ಷ್ಯಗಳನ್ನು ಕೈಬಿಡಲಾಗಿದೆಯೇ?
- ✓ ಪರ್ಯಾಯ ಫಲಿತಗಳನ್ನು ಅದೇ ದತ್ತಾಂಶಗಳನ್ನು ಅರ್ಥೈಸಿ ವಿವರಿಸಬಹುದೇ?
- ✓ ಬರವಣಿಗೆಯ ಶೈಲಿ ಸ್ಪಷ್ಟವಾಗಿಯೂ ಪರಿಣಾಮಕಾರಿಯಾಗಿಯೂ ಇದೆಯೇ?
- ✓ ಪುಸ್ತಕವು ಚರ್ಚೆಗಾಗಿ ಮುಖ್ಯವಾದ ಅಥವಾ ಪ್ರಚೋದನಕಾರಿ ವಿವಾದಾಂಶಗಳನ್ನು ಇಲ್ಲವೇ ವಿಷಯಗಳನ್ನು ಕೈಗೆತ್ತಿಕೊಳ್ಳುತ್ತದೆಯೇ?
- ✓ ಪುಸ್ತಕವು ಮುಂದಿನ ಸಂಶೋಧನೆಯ ಅಗತ್ಯದ ಬಗ್ಗೆ ಗಮನ ಸೆಳೆಯುತ್ತದೆಯೇ?
- ✓ ಏನು ಬಿಟ್ಟು ಹೋಗಿದೆ?

- ಉದ್ದೇಶಿತ ಓದುಗರ ದೃಷ್ಟಿಯಿಂದ ಬರೆಯಿರಿ ಮತ್ತು ಪುಸ್ತಕವು ಅವರಿಗೆ ಹೇಗೆ ಸಹಾಯಕಾರಿಯಾಗಿದೆ ಎಂಬುದನ್ನು ವಿವರಿಸಿ. ನಿಮ್ಮ ನಂತರ ಕೋರ್ಸ್‌ನ್ನು ಪ್ರಾರಂಭಿಸುವ ಹೊಸಬರಿಗೆ ಅಥವಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಪಟ್ಟಿ ಮಾಡಿಕೊಡಿ ಎಂದು ನಿಮ್ಮನ್ನು ಕೇಳಲಾಗಿದೆ ಎಂದು ಭಾವಿಸಿಕೊಳ್ಳಿ ಪಠ್ಯಪುಸ್ತಕದ ಬಲಾಬಲಗಳನ್ನು ವಿಶ್ಲೇಷಿಸಿ. ಪಠ್ಯಪುಸ್ತಕದಲ್ಲಿರುವ ಕನಿಷ್ಠ ಮೂರು ಪ್ರಬಲ ವೈಶಿಷ್ಟ್ಯಗಳನ್ನು ಮತ್ತು ಬಿಟ್ಟು ಹೋಗಿರುವ ಮೂರು ವೈಶಿಷ್ಟ್ಯಗಳನ್ನು ಗುರುತಿಸಿ. ಯಾವ ಅಂಶಗಳನ್ನು ಚರ್ಚಿಸಿಲ್ಲ ಅಥವಾ ಯಾವ ಅಂಶಗಳಿಗೆ ಹೆಚ್ಚುವರಿ ಉದಾಹರಣೆಗಳು ಬೇಕು ಎಂಬುದನ್ನು ವಿವರಿಸಿ. ಸಂರಚನೆ, ವಿಷಯವಸ್ತುವಿನ ನಿಖರತೆ, ಸ್ಪಷ್ಟತೆ, ಸಂಘಟನೆ ಮತ್ತು ದೋಷಗಳು– ಇವುಗಳನ್ನು ಪರಿಗಣಿಸಿ. ಪಠ್ಯಪುಸ್ತಕವು ಒಂದು ನಿರ್ದಿಷ್ಟ ಕೋರ್ಸ್‌ಗೆ ಅನ್ವಯವಾಗಿದೆಯೇ ಎಂದೂ ಅದರ ಭಾಗಗಳು ತರಗತಿಗಳಿಗೆ ಸುಲಭವಾಗಿ ನಿಯೋಜಿಸಬಹುದೇ ಎಂದೂ ಖಾತ್ರಿಪಡಿಸಿಕೊಳ್ಳಿ.

- ಇದರ ಜೊತೆಗೆ, ತೀರ್ಮಾನದಲ್ಲಿ ನಿಮ್ಮ ಬರಹದ ಸಾರಾಂಶವನ್ನು ಸೇರಿಸಿ ಹಾಗೂ ಪಠ್ಯಪುಸ್ತಕವು ಉದ್ದೇಶಿತ ಓದುಗರಿಗೆ ಉಪಯುಕ್ತವಾಗಿದೆಯೇ ಎಂದೂ ಹೇಳಿರಿ. ಸಮಗ್ರತೆ, ವಿಷಯವಸ್ತು, ಪ್ರಸ್ತುತತೆ, ಸ್ಪಷ್ಟತೆ, ಸಂರಚನೆ ಮತ್ತು ಅಂತರಮುಖ– ಈ ಅಂಶಗಳಿಗೆ ಶ್ರೇಯಾಂಕಗಳನ್ನು ನೀಡಿ. ನಿಮ್ಮ ನಿರೀಕ್ಷೆಗಳ ಬಗ್ಗೆ ಮತ್ತು ಅವು ಈಡೇರಿಕೆಯಾಗಿವೆಯೇ ಎಂಬುದರ ಬಗ್ಗೆ ಹೇಳಿರಿ. ಪಠ್ಯಪುಸ್ತಕವನ್ನು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗಿಸಲು ಮತ್ತು ಮಾಹಿತಿಯನ್ನು ಹೆಚ್ಚು ದಕ್ಷವಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯವಾಗುವ ನಿಮ್ಮ ವಾಚನ ತಂತ್ರಗಳನ್ನು ಹಂಚಿಕೊಳ್ಳಿ.

- ಮೊದಲನೆಯ ಕರಡನ್ನು ಪೂರೈಸಿದ ಬಳಿಕ ಅದರಲ್ಲಿರುವ ದೋಷಗಳನ್ನು ಗುರುತಿಸಿ. ನಿಮ್ಮ ಬರಹ ತಾರ್ಕಿಕವೂ ಓದಿಸಿಕೊಂಡು ಹೋಗುವಂತೆಯೂ ಇದೆಯೇ ಎಂದು ಖಾತ್ರಿಪಡಿಸಿಕೊಳ್ಳಿ. ಎಲ್ಲ ಪ್ರಶ್ನೆಗಳನ್ನು ನೀವು ಉತ್ತರಿಸಿದ್ದೀರಾ ಎಂದು ಖಾತ್ರಿಪಡಿಸಿಕೊಳ್ಳಿ.

ಈ ಘಟಕದ ಕೊನೆಯಲ್ಲಿ, ಅನುಬಂಧದಲ್ಲಿ ಪಠ್ಯಪುಸ್ತಕದ ಪುನರ್ವಿಮರ್ಶೆಯ ಎರಡು ಉದಾಹರಣೆಗಳನ್ನು ಕೊಡಲಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಪಠ್ಯಪುಸ್ತಕ ಪುನರ್ವಿಮರ್ಶೆಗೆ ಬಳಸಲಾಗುವ ಯಾವುದಾದರೂ ನಾಲ್ಕು ಮಾನದಂಡಗಳನ್ನು ಪಟ್ಟಿಮಾಡಿ.
2. ಪುನರ್ವಿಮರ್ಶೆಗಾಗಿ ಪಠ್ಯಪುಸ್ತಕವನ್ನು ಓದುವಾಗ ನೀವು ಪರಿಗಣಿಸುವ ಪ್ರಮುಖ ಅಂಶಗಳಾವುವು? ಪ್ರಮುಖವಾದುವು ಎಂದು ನೀವು ಪರಿಗಣಿಸುವ ಯಾವುದಾದರೂ ನಾಲ್ಕು ಅಂಶಗಳನ್ನು ಉಲ್ಲೇಖಿಸಿ.
3. ಪಠ್ಯಪುಸ್ತಕ ಪುನರ್ವಿಮರ್ಶೆಯ ಮೊದಲನೆಯ ಹಂತ ಯಾವುದು?

**4.2.4. ಸಾರಾಂಶಿಸೋಣ**

- ಪಠ್ಯಪುಸ್ತಕ ಪುನರ್ವಿಮರ್ಶೆ ಎಂದರೆ ಪಠ್ಯಪುಸ್ತಕದಲ್ಲಿ ಪ್ರಸ್ತುತಪಡಿಸಲಾಗಿರುವ ಸಾಮಗ್ರಿಯ ಗುಣಾತ್ಮಕತೆಯ ಮೌಲ್ಯಮಾಪನ.
- ಪಠ್ಯಪುಸ್ತಕ ಓದುಗರಿಗೆ ಉಪಯುಕ್ತವಾಗುವುದೇ ಎಂದು ತೋರಿಸಿಕೊಡುವುದೇ ಪಠ್ಯಪುಸ್ತಕ ಪುನರ್ವಿಮರ್ಶೆಯ ಪ್ರಮುಖ ಉದ್ದೇಶವಾಗಿದೆ.
- ಪುಸ್ತಕ ಪುನರ್ವಿಮರ್ಶೆಗೆ ಮುಖ್ಯವಾಗಿ ಎರಡು ಸಾಮಾನ್ಯ ಉಪಕ್ರಮಗಳಿವೆ– ಒಂದು ವಿವರಣಾತ್ಮಕ ಮತ್ತೊಂದು ವಿಮರ್ಶಾತ್ಮಕ.
- ಪಠ್ಯಪುಸ್ತಕ ಪುನರ್ವಿಮರ್ಶೆ ಬರೆಯಲು ನಿಗದಿತ ಮಾನದಂಡ ಅಥವಾ ಕಾರ್ಯವಿಧಾನಗಳಿಲ್ಲ. ಇದು ಪಠ್ಯಪುಸ್ತಕದ ಸ್ವರೂಪ ಮತ್ತು ಪುನರ್ವಿಮರ್ಶೆಗಳ ಉದ್ದೇಶಗಳನ್ನು ಅವಲಂಬಿಸಿದೆ.
- ಉದ್ದೇಶಗಳ ಸ್ಪಷ್ಟತೆ, ಸಮಗ್ರತೆ, ವಿಷಯವಸ್ತು, ಸುಸಂಬದ್ಧತೆ/ದೀರ್ಘಕಾಲೀನತೆ ಇತ್ಯಾದಿಗಳು ಪಠ್ಯಪುಸ್ತಕ ಪುನರ್ವಿಮರ್ಶೆಯ ಕೆಲವು ಮಾನದಂಡಗಳು.
- ಆಯಾ ಕ್ಷೇತ್ರದ ತಜ್ಞರು ಸಾಮಾನ್ಯವಾಗಿ ಅನುಸರಿಸುವ ಹಂತಗಳನ್ನು ಗುರುತಿಸಿಕೊಂಡು ಮುಂದುವರಿಯಬಹುದಾಗಿದೆ.

**4.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಉತ್ತರಕ್ಕಾಗಿ ಈ ಸ್ವ ಕಲಿಕಾ ಅಧ್ಯಯನ ಸಾಮಗ್ರಿಯ ಭಾಗ 4.2.3.1 ನ್ನು ಪರಿಶೀಲಿಸಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಉತ್ತರಕ್ಕಾಗಿ ಈ ಸ್ವ ಕಲಿಕಾ ಅಧ್ಯಯನ ಸಾಮಗ್ರಿಯ ಭಾಗ 4.2.3.2 ನ್ನು ಪರಿಶೀಲಿಸಿ.

**4.2.6. ಘಟಕಾಂತ್ಯ ಅಭ್ಯಾಸಗಳು**
ನಿಮ್ಮ ಆಯ್ಕೆಯ ಪಠ್ಯಪುಸ್ತಕವೊಂದನ್ನು ಪರಿಗಣಿಸಿ ಅದಕ್ಕೆ ನಿಮ್ಮ ಪುನರ್ವಿಮರ್ಶೆಯನ್ನು ಬರೆಯಿರಿ.

**ಅನುಬಂಧ**
**ಸಂಪೂರ್ಣ ಬಿಸ್ವಾಸ್ ಅವರಿಂದ ಎನ್‌ಸಿಇಆರ್‌ಟಿ ಪ್ರಕಟಿಸಿರುವ ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ಪುನರ್ವಿಮರ್ಶೆ (Review of new NCERT Social Science Textbooks by Sampoorna Biswas -https://www.eklavya.in/pdfs/Sandarbh/Sandarbh_60/01-04_Review_Social_Science_Textbook_Eng.PDF)**

ಹೊಸ ಸಮಾಜ ವಿಜ್ಞಾನಗಳ ಪಠ್ಯಪುಸ್ತಕಗಳು ಮುಂಚಿನವುಗಳಿಗಿಂತ ಖಂಡಿತವಾಗಿ ಸುಧಾರಣೆಗೊಂಡಿವೆ. ಸದ್ಯದಲ್ಲಿ ನಾನೀಗ ಹತ್ತನೆಯ ತರಗತಿಯ ಪುಸ್ತಕದ ಪುನರ್‌ವಿಮರ್ಶೆ ಕೈಗೊಳ್ಳುತ್ತಿದ್ದೇನೆ. ಈ ತರಗತಿಯ ಹೊಸ ನವೀಕೃತ ಪುಸ್ತಕ ಮತ್ತು 9 ನೇ ತರಗತಿಯ ಪುಸ್ತಕ ನೋಡಬೇಕಿದೆ. ಅತ್ಯಂತ ಹೆಚ್ಚಿನ ವ್ಯತ್ಯಾಸ ಕಾಣಿಸುತ್ತಿರುವುದು ಪುಸ್ತಕದ ಗುಣಮಟ್ಟ ಮತ್ತುವಿನ್ಯಾಸಗಳಲ್ಲಿ ಹೆಚ್ಚು ಬಣ್ಣಗಳನ್ನು ಉಪಯೋಗಿಸಲಾಗಿದೆಯಲ್ಲದೆ ಹೆಚ್ಚು ಚಿತ್ರಗಳು ಮತ್ತು ವ್ಯಂಗ್ಯಚಿತ್ರಗಳಿವೆ. ನಿರೂಪಣೆಗಳು ಉತ್ತಮ ಗುಣಮಟ್ಟದ್ದಾಗಿವೆ. ಇವೆಲ್ಲವನ್ನೂ ವಿಷಯವಸ್ತುವನ್ನು ಕೈಬಿಡದೆ ಮಾಡಲಾಗಿದೆ. ಕಾಣಬರುವ ಈ ಬದಲಾವಣೆ ಕೇವಲ ಮೇಲ್ನೋಟದ್ದಲ್ಲವೇ ಅಲ್ಲ. ಹೆಚ್ಚಿನ ಚಿತ್ರಗಳು ಮತ್ತು ಬಣ್ಣಗಳು ಉತ್ತಮ ಕಲಿಕೆಗೆ ನೆರವಾಗುತ್ತವೆ ಎಂಬುದು ಸರ್ವವಿದಿತ. ಕಾರಣ, ಅವು ಮೆದುಳಿನ ಕ್ಷೇತ್ರಗಳನ್ನು ಪ್ರೇರೇಪಿಸುತ್ತವೆ. ಇದಲ್ಲದೆ, ಪುಸ್ತಕವು ಹೆಚ್ಚು ಆಕರ್ಷಣೀಯವಾಗಿದ್ದು, ಆ ಕಾರಣದಿಂದ ಜನರು ತಮಗೆ ಚೆನ್ನಾಗಿ ಕಾಣುವ ಪುಸ್ತಕವನ್ನು ಬಳಸಲು ಹೆಚ್ಚು ಒಲವು ತೋರುತ್ತಾರೆ. 8 ನೇ ತರಗತಿಯ ಇತಿಹಾಸದ ಪುಸ್ತಕ ನಿಜವಾಗಿಯೂ ಬೇಸರ ಹಿಡಿಸುವಂತಹದ್ದಾಗಿದೆ. ಅದರಲ್ಲಿ ಕೇವಲ ಎರಡೇ ಬಣ್ಣಗಳು– ಕಪ್ಪು ಮತ್ತು ಬಿಳಿ. 9 ಮತ್ತು 10 ನೇ ತರಗತಿಯ ಇತಿಹಾಸ ಪಠ್ಯಪುಸ್ತಕಗಳು ಚೆನ್ನಾಗಿ ಮೂಡಿಬಂದಿವೆ.

ನಿಮಗೆ ಮೊದಲು ಗಮನಕ್ಕೆ ಬರುವುದೇನೆಂದರೆ ಇತಿಹಾಸ ಪುಸ್ತಕವು ಇತಿಹಾಸದ ಒಂದು ಪಠ್ಯ ಎಂಬಂತೆ ಕಾಣದೇ ಬೇರೊಂದು ದೃಷ್ಟಿಕೋನದಲ್ಲಿ ಪೀಠಿಕೆ ನೀಡುವುದು. ಚಿತ್ರಿಸಲಾಗಿರುವ ಕಾಲಘಟ್ಟಕ್ಕೆ ಅನುಗುಣವಾಗಿ ಓದುಗರಿಗೆ ಬರೆಯಲು ಮತ್ತು ಆಲೋಚಿಸಲು ಅವಶ್ಯಕವಿರುವ ಆಸಕ್ತಿದಾಯಕ ಅಭ್ಯಾಸದ ಒಂದು ಪ್ರಶ್ನೆ ಹೀಗಿದೆ: ಉದಾ; ಪುಟ 144 ರಲ್ಲಿ, 10 ನೆಯ ತರಗತಿಯ ಎನ್‌ಸಿಇಆರ್‌ಟಿ ಪುಸ್ತಕ " ನೀವು ಪಟ್ಟಣವೊಂದರ ವಠಾರದಲ್ಲಿ ವಾಸಿಸುತ್ತಿರುವ ಓರ್ವ ಯುವ ವ್ಯಕ್ತಿ ಎಂದು ಭಾವಿಸಿಕೊಳ್ಳಿ. ನಿಮ್ಮ ಒಂದು ದಿನದ ಜೀವನವನ್ನು ವಿವರಿಸಿ. ಮತ್ತೊಂದು ಪ್ರಶ್ನೆ ವಾಸ್ತವಾಂಶಗಳನ್ನು ಅರ್ಥೈಸುವುದರ ಬಗೆಗೆ ಇದೆ (ಉದಾಹರಣೆ, ಎನ್‌ಸಿಇಆರ್‌ಟಿ 10 ನೇ ತರಗತಿಯ ಪುಸ್ತಕದ 24 ನೇ ಪುಟದಲ್ಲಿ, "ಚಿತ್ರ 17 ರಲ್ಲಿ ನೀವೇನು ಕಾಣುವಿರಿ ಎಂದು ವಿವರಿಸಿ. ರಾಷ್ಟ್ರದ ರೂಪಕದಲ್ಲಿ ಹುಬ್ನರ್ ಯಾವ ಐತಿಹಾಸಿಕ ಘಟನಾವಳಿಯನ್ನು ಕುರಿತು ಉಲ್ಲೇಖಿಸುತ್ತಿದ್ದಾನೆ?". ಇವುಗಳಲ್ಲಿದೆ ಆಯಾ ಐತಿಹಾಸಿಕ ಕಾಲದ ವರ್ಣಚಿತ್ರಗಳಂತಹ ಹೆಚ್ಚುವರಿ ಮಾಹಿತಿ ಹಾಗೂ ಅವು ಏನನ್ನು ಚಿತ್ರಿಸುತ್ತವೆ ಎಂಬುದು ಅಥವಾ ಆ ಕಾಲದ ಅಕ್ಷರಗಳು ಇತರ ಮೂಲಗಳು ಅಧ್ಯಯನದ ವಿಷಯದಲ್ಲಿ ಆಸಕ್ತಿ ಮೂಡಿಸುತ್ತವೆ. ಬಾಕ್ಸ್‌ಗಳಲ್ಲಿರುವುದರ ಕುರಿತು, ಮೂಲಗಳನ್ನು ಕುರಿತು ಯಾವ ಪರೀಕ್ಷೆಯನ್ನು ಮಾಡದಿದ್ದರೂ ಅವು ನಾವು ಚರ್ಚಿಸುತ್ತಿರುವ ಕಾಲಘಟ್ಟದ ಉತ್ತಮ ಚಿತ್ರಣವನ್ನು ನಮಗೆ ಕೊಡುವುದರಲ್ಲಿ ನೆರವಾಗುತ್ತವೆ. ವಾಸ್ತವವಾಗಿ, ಅವುಗಳನ್ನು ಕುರಿತು ಪ್ರಶ್ನೆ ಕೇಳುವುದಿಲ್ಲವಾದರೂ ನಾವು ಅವುಗಳೇನು ಎಂದು ತಿಳಿಯಲು ಓದಿದೆ, ಅದನ್ನು ಕರಗತ ಮಾಡಿಕೊಳ್ಳುವುದಕ್ಕಾಗಿ ಅಲ್ಲ. 8 ನೇ ತರಗತಿಯ ಪುಸ್ತಕ ಮತ್ತು ನಂತರದ ಪುಸ್ತಕಗಳ ನಡುವೆ ಭಾಷೆಯಲ್ಲಿ ವ್ಯತ್ಯಾಸವಿದೆ.

ಹೊಸ ಪುಸ್ತಕಗಳು ಕಥೆಯನ್ನು ನಿರೂಪಿಸುವಂತೆ ಬಹಳ ಸ್ವಚ್ಛವಾದ ಶೈಲಿಯನ್ನು ಅಳವಡಿಸಿಕೊಳ್ಳುತ್ತವೆ. ಉದಾಹರಣೆಗೆ, ಎನ್‌ಸಿಇಆರ್‌ಟಿ 10 ನೇ ತರಗತಿಯ ಪುಸ್ತಕದ ಎರಡನೇ ಅಧ್ಯಾಯದ ಒಂದು ವಾಕ್ಯಗುಚ್ಛವನ್ನು ಗಮನಿಸಿ. 'ದಿ ನ್ಯಾಷನಲಿಸ್ಟ್ ಮೂವ್‌ಮೆಂಟ್ ಇನ್ ಇಂಡೋಚೈನಾ' (ಇಂಡೋಚೈನಾದಲ್ಲಿ ರಾಷ್ಟ್ರೀಯ ಆಂದೋಳನ): '1962ರಲ್ಲಿ ಸೈಗೊನ್ ನೇಟಿವ್ ಬಾಲಕಿಯರ ಶಾಲೆಯಲ್ಲಿ ಒಂದು ಬೃಹತ್ ಪ್ರತಿಭಟನೆ ಭುಗಿಲೆದ್ದವು. ಓರ್ವ ಸ್ಥಳೀಯ ಫ್ರೆಂಚ್ ವಿದ್ಯಾರ್ಥಿಗೆ ಮುಂದಿನ ಬೆಂಚ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ಮಾಡಲೆಂದು ಅಲ್ಲಿ ಕುಳಿತಿದ್ದ ವಿಯಟ್ನಾಮಿನ ಬಾಲಕಿಯನ್ನು ಹಿಂದಿರುವ ಬೆಂಚಿಗೆ ಹೋಗಿ ಕುಳಿತುಕೊಳ್ಳುವಂತೆ ಹೇಳಲಾಯಿತು. ಆ ಬಾಲಕಿ ಹೋಗಲು ನಿರಾಕರಿಸಿದಳು. ಫ್ರೆಂಚ್‌ನವನೇ ಆಗಿದ್ದ ಪ್ರಾಂಶುಪಾಲ ಆ ಬಾಲಕಿಯನ್ನು ಹೊರಹಾಕಿದ. (ವಸಾಹತುಗಳಲ್ಲಿನ ಫ್ರೆಂಚ್ ಜನರನ್ನು ಕೊಲೊನ್ ಎನ್ನುವರು). ಇದರಿಂದ ಕುಪಿತರಾಗಿ ಪ್ರತಿಭಟನೆ ನಡೆಸಿದ ಇತರ ವಿದ್ಯಾರ್ಥಿಗಳನ್ನು ಹೊರಹಾಕಲಾಯಿತು. ಇದರಿಂದ ಪ್ರತಿಭಟನೆ ಮತ್ತಷ್ಟು ವಿಸ್ತೃತವಾಗಿ ಹರಡಿತು. ಪರಿಸ್ಥಿತಿ ಕೈಮೀರಿ ಹೋಗುತ್ತಿದೆ ಎಂದು ತಿಳಿದಾಗ ಸರ್ಕಾರ ಶಾಲೆಗೆ ವಿದ್ಯಾರ್ಥಿಗಳನ್ನು ಮತ್ತೆ ಶಾಲೆಗೆ ಸೇರಿಸಿಕೊಳ್ಳಬೇಕೆಂದು ಒತ್ತಾಯಿಸಿತು. ಪ್ರಾಂಶುಪಾಲ ಮನಸ್ಸಿಲ್ಲದೆ ಇದಕ್ಕೆ ಒಪ್ಪಿದ. ಆದರೆ, ವಿದ್ಯಾರ್ಥಿಗಳಿಗೆ ಹೀಗೆ ಎಚ್ಚರಿಸಿದ–'ನಾನು ವಿಯಟ್ನಾಮೀಯರನ್ನು ನನ್ನ ಕಾಲಿನ ಕೆಳಗೆ ತುಳಿದು

ಹಾಕುತ್ತೇನೆ. ಓ! ನೀವು ನನ್ನ ಹೊರದೂಡುವಿಕೆಯನ್ನು ಇಚ್ಛಿಸುತ್ತಿರುವಿರಿ ಅಲ್ಲವೆ. ಇದನ್ನು ತಿಳಿದುಕೊಳ್ಳಿ. ಕೊಚಿನ್‌ಚೈನಾದಲ್ಲಿ ಯಾವ ವಿಯಟ್ನಾಮೀಯನು ವಾಸಿಸುತ್ತಿಲ್ಲ ಎಂದು ಖಾತ್ರಿಪಡಿಸಿಕೊಂಡೇ ನಾನು ಈ ದೇಶ ಬಿಟ್ಟುಹೋಗುತ್ತೇನೆ'. ಹೆಚ್ಚೆಂದರೆ ಇದೊಂದು ಕಥೆ. ಇದರಿಂದ ಪರೀಕ್ಷೆಗಾಗಿ ಕಲಿಯಬೇಕಾದ್ದು ಏನೂ ಇಲ್ಲ. ಆದರೆ, ಇದು ವಿಯಟ್ನಾಮಿನಲ್ಲಿ ಆಗ ಇದ್ದ ಪರಿಸ್ಥಿತಿಯನ್ನು ವಿವರಿಸಲು ನೆರವಾಗುತ್ತದೆ.

ಮತ್ತೊಂದೆಡೆ, 8 ನೇ ತರಗತಿಯ ಪುಸ್ತಕ ವಾಸ್ತವಾಂಶ ಸಂಗ್ರಹಣೆಯಾಗಿತ್ತು. ಆಂಗ್ಲರ ಆಳ್ವಿಕೆಯನ್ನು ಕುರಿತ ವಿಸ್ತೃತವಾದ ಎಲ್ಲ ಮಾಹಿತಿ ನಿಮಗೆ ಬೇಕಾದಲ್ಲಿ ಇದು ಖಂಡಿತವಾಗಿಯೂ ಒಳ್ಳೆಯ ಪುಸ್ತಕ. ಆದರೆ, ನಿಮಗೆ ಆಸಕ್ತಿಕರವಾದದ್ದು ಏನಾದರೂ ಬೇಕಾದಲ್ಲಿ, ವಿಷಯವನ್ನು ಕುರಿತು ಮತ್ತಷ್ಟು ಸಂಶೋಧನೆ ಮಾಡುವಂತೆ ನಿಮ್ಮನ್ನು ಪ್ರೇರೇಪಿಸುವಂಥಾದ್ದು ಬೇಕಾದಲ್ಲಿ ಈ ಪುಸ್ತಕ ಉತ್ತಮವಾದ ಉಪಕರಣವಲ್ಲ. ಒಟ್ಟಾರೆ, ಹೇಳುವುದಾದರೆ, ಹೊಸ ಪುಸ್ತಕಗಳು ಕಲಿಕೆಯನ್ನು ಸುಗಮಗೊಳಿಸುತ್ತವೆ. ಏಕೆಂದರೆ, ಅವು ವಿಷಯದಲ್ಲಿ ಆಸಕ್ತಿ ಮೂಡಿಸುತ್ತವೆ. ಹಳೆಯ ಪುಸ್ತಕವು ನೀವು ವಿಷಯದ ಬಗ್ಗೆ ಬಹಳ ಗಂಭೀರ ಅಧ್ಯಯನ ಕೈಗೊಂಡು ಮತ್ತು ಅದರ ಮೇಲಿನ ಪರೀಕ್ಷೆಗಳನ್ನು ಎದುರಿಸಬೇಕಾದರೆ ಉತ್ತಮವಾದದ್ದು.

**ಶಾಲಾ ಪಠ್ಯಪುಸ್ತಕ:ಭೂಗೋಳ ಶಾಸ್ತ್ರ, ಇತಿಹಾಸ ಮತ್ತು ಸಮಾಜ ವಿಜ್ಞಾನಗಳು: ವಿಲಿಯಂ ಇ. ಮಾರ್ಸ್‌ಡೆನ್, ವೊಬರ್ನ್ ಎಜುಕೇಷನ್ ಸೀರಿಸ್, ಲಂಡನ್ 2001 .312 pp.ISBN; 0713002212 (hbk) 45 Pounds (59.50Dollars): ISBN: 0713040432 (pbk)18.50 Pounds (26.50 Dollars)**

ಶಾಲೆಯ ಪಠ್ಯಕ್ರಮದ ಮುಖ್ಯ ವ್ಯಾಖ್ಯಾನವೆಂದರೆ ಶಾಲಾಪಠ್ಯಪುಸ್ತಕಗಳು. ಅವು ರಾಜನೈತಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜನೈತಿಕ ಹೋರಾಟ ಮತ್ತು ಸಂಧಾನಗಳ ಪ್ರತಿನಿಧಿಗಳು. ಪಠ್ಯಪುಸ್ತಕಗಳನ್ನು ಪರಿಕಲ್ಪಿಸಿಕೊಳ್ಳಲಾಗುತ್ತದೆ, ಬಳಿಕ ವಿನ್ಯಾಸಗೊಳಿಸಲಾಗುತ್ತದೆ. ತದನಂತರ ನಿಜವಾದ ಆಸಕ್ತಿಯುಳ್ಳವರು ಅವುಗಳನ್ನ ಬರೆಯುತ್ತಾರೆ. ನಂತರ ರಾಜನೈತಿಕ ಪರಿಮಿತಿಗಳೊಳಗೆ ಹಾಗೂ ಮಾರುಕಟ್ಟೆ, ಸಂಪನ್ಮೂಲಗಳು ಮತ್ತು ಅಧಿಕಾರಗಳ ಪರಿಧಿಯೊಳಗೆ ಅವುಗಳನ್ನು ಪ್ರಕಟಿಸಲಾಗುತ್ತದೆ. ಶಾಲಾಪಠ್ಯಪುಸ್ತಕಗಳು ಪ್ರಭಾವಿ ಸಮುದಾಯಗಳ ಸಾಂಸ್ಕೃತಿಕ, ವೈಚಾರಿಕ ಮತ್ತು ರಾಜನೈತಿಕ ಅಧಿಕಾರಗಳನ್ನು ಅವಲಂಬಿಸಿರುತ್ತದೆ. ಅಲ್ಲದೆ, ಹಂಚಿಕೊಂಡ ಅಭಿಪ್ರೇರಣೆಗಳನ್ನು ಪ್ರೋತ್ಸಾಹಿಸುವ ಮೂಲಕ ಮತ್ತು ಹಂಚಿಕೊಂಡ ಐತಿಹಾಸಿಕ ಸ್ಮರಣರಗಳ ನಿರ್ಮಾಣದ ಮೂಲಕ ಸಾಂಸ್ಕೃತಿಕ ಏಕರೂಪತೆಯನ್ನು ಜಾರಿಗೊಳಿಸಿ ಪುನರ್ಬಲನಗೊಳಿಸುವಂತಿರುತ್ತವೆ. ಪಠ್ಯಪುಸ್ತಕ ಜ್ಞಾನ ನಿರ್ಮಾಣ ಒಂದು ತೀವ್ರವಾದ ರಾಜನೈತಿಕ ಚಟುವಟಿಕೆಯಾಗಿದೆಯಲ್ಲದೆ ಚರ್ಚೆಯೂ, ಜನಪ್ರಿಯ ನೆನಪುಗಳ ನಿರ್ಮಾಣ ಮತ್ತು ನಿಯಂತ್ರಣದ ವಿಷಯಗಳನ್ನು ಒಳಗೊಳ್ಳುವಂತಹ ಅವುಗಳ ನಿರ್ಮಾಣಕ್ಕೆ ಸಂಬಂಧಿಸಿದ ವಿವಾದಗಳು ಮತ್ತು ಬಿಗುವೂ ಆಗಿದೆ. ಪ್ರಬಲ ಸಾಂಸ್ಕೃತಿಕ ರೂಪಗಳ ಪ್ರಸಾರ ಮತ್ತು ಪುನರ್ಬಲನಗಳ ಪ್ರಯತ್ನವನ್ನು ಕೈಗೊಳ್ಳಲು ಪಠ್ಯಪುಸ್ತಕಗಳು ಒಂದು ಉಪಕರಣದಂತಿವೆ. ಶಿಕ್ಷಣದಲ್ಲಿ ಅಧಿನಾಯಕತ್ವವನ್ನು ಸಾಧಿಸುವ ಸ್ವಾಭಾವಿಕವಾದ ಮಾಧ್ಯಮವನ್ನು ಪಠ್ಯಪುಸ್ತಕಗಳು ನಮ್ಮ ಮುಂದಿಡುತ್ತವೆ. ರಾಷ್ಟ್ರ ರಾಜ್ಯಗಳೂ (ನೇಷನ್ ಸ್ಟೇಟ್ಸ್) ತಮ್ಮ ಬಗ್ಗೆ ಹೇಳಿಕೊಳ್ಳುವುದಕ್ಕೆ ಆಯ್ಕೆ ಮಾಡುವ ನಿರೂಪಣೆಗಳನ್ನು, ಕಥಾನಕಗಳನ್ನು ಶಾಲೆಯಲ್ಲಿ ಬೋಧಿಸುವ ಇತಿಹಾಸ, ಭೂಗೋಳ ಶಾಸ್ತ್ರ ಮತ್ತು ಸಮಾಜ ವಿಜ್ಞಾನಗಳ ಪಠ್ಯಪುಸ್ತಕಗಳು ಒಳಗೊಂಡಿರುತ್ತವೆ. ಜೊತೆಗೆ, ಮುಂದಿನ ಪೀಳಿಗೆಗಳು ಸ್ವಾಂಗೀಕರಿಸಿಕೊಂಡು ಬೆಂಬಲಿಸಬೇಕು ಎಂದು ಮೂಲಭೂತ ಸಾಂಸ್ಕೃತಿಕ ಜ್ಞಾನವನ್ನು ಮುಂದಿನ ಪೀಳಿಗೆ ವಿಚಾರಶೀಲರಾಗಬೇಕಾದಂತಹ ಪಠ್ಯಪುಸ್ತಕ ವಿಷಯವಸ್ತುವನ್ನು ಒಳಗೊಂಡಿರುತ್ತವೆ. ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳು ಎಷ್ಟು ಪ್ರಾಬಲ್ಯ ಹೊಂದಿವೆ ಎಂದರೆ ಶಾಲೆಯಲ್ಲಿ ಏನನ್ನು ಬೋಧಿಸಬೇಕು ಎಂಬ ವ್ಯವಸ್ಥಿತ ಚರ್ಚೆಯಷ್ಟೆ ಪಠ್ಯಪುಸ್ತಕದ ಆಯ್ಕೆ ಮತ್ತು ಬಳಕೆಯೂ ಗಂಭೀರವಾದ ಚರ್ಚೆಯಾಗಿರುತ್ತದೆ. ಅಧಿಕೃತ ವಿಚಾರಧಾರೆಗಳು ಮತ್ತು ನಂಬಿಕೆಗಳನ್ನು ನಿರ್ಮಿಸುವ ಪ್ರಕ್ರಿಯೆಯಲ್ಲಿ ಪಠ್ಯಪುಸ್ತಕಗಳು ನಿರ್ಣಾಯಕ ಅಂಗಗಳಾಗಿವೆಯಲ್ಲದೆ, ಸಮಾಜದ ಪ್ರಬಲ ಸಮುದಾಯಗಳು ಮುಖ್ಯವಾದುವು ಎಂದು ಪರಿಗಣಿಸುವ ಇತಿಹಾಸ, ಜ್ಞಾನ ಮತ್ತು ಮೌಲ್ಯಗಳು ಪ್ರತಿಬಿಂಬಿತವಾಗಿವೆ. ಅನೇಕ ರಾಷ್ಟ್ರಗಳಲ್ಲಿ ವಿವಾದವು ಬಹಳಷ್ಟು ರಾಜನೈತಿಕ ಮತ್ತು ಶೈಕ್ಷಣಿಕ ತಾಕಲಾಟಕ್ಕೆ ಕಾರಣವಾಗಿದೆ. ವಿಶ್ವದಾದ್ಯಂತದ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಗಳಲ್ಲಿ ಸಿಗುವ ಪುರಾವರಗಳಿಂದ ನಿಶ್ಚಿತ ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಅತ್ಯಗತ್ಯತೆಗಳನ್ನು

ಪೂರೈಸಲು ವಿನ್ಯಾಸಗೊಳಿಸಿದ ಸಾಂಘಿಕ ರಾಷ್ಟ್ರೀಯ ನೆನಪುಗಳ ಸೃಷ್ಟಿಗೆ ಪಠ್ಯಪುಸ್ತಕದ ವಿಷಯ ವಸ್ತು ಬಹಳ ಮುಖ್ಯ ಎಂದು ಪರಿಗಣಿಸುವ ಪ್ರಬಲ ಗುಂಪುಗಳ ನಡುವಣ ಸ್ಪರ್ಧೆಯ ಫಲಿತಾಂಶವೇ ಪಠ್ಯಪುಸ್ತಕದಲ್ಲಿರುವ ಅಂತರ್ವಸ್ತು ಎಂದು ತಿಳಿದುಬರುತ್ತದೆ.

ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪ್ರಧಾನ ಸ್ಥಾನವನ್ನು ಪಠ್ಯಪುಸ್ತಕಗಳು ಹೊಂದಿದ್ದರೂ ಅವುಗಳನ್ನು ಹೇಗೆ ರಚಿಸಲಾಗುತ್ತದೆ ಎಂಬುದರ ಬಗ್ಗೆ ಮತ್ತು ಅವುಗಳನ್ನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೇಗೆ ಬಳಸುತುಯ್ತಾರೆ ಎಂಬುದರ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ. ಅಷ್ಟೇನೂ ಸೈದ್ಧಾಂತೀಕರಣವಾಗಿಲ್ಲದ , ಉಪೇಕ್ಷಿಸಲಾದ ಈ ಕ್ಷೇತ್ರದ ಬಗ್ಗೆ ನಮ್ಮ ಆಳವೂ ವಿಶಾಲವೂ ಆದ ಅರಿವನ್ನು ಕೊಡುವಲ್ಲಿ ಬಿಲ್‌ಮಾರ್ಸ್‌ಡೆನ್‌ನ ಪುಸ್ತಕ ಒಂದು ಕೊಡುಗೆಯಾಗಿದೆ. ಪ್ರಬಲ ಗುಂಪುಗಳು ಶಾಲಾ ಜ್ಞಾನವನ್ನು ಆಯ್ಕೆ ಮಾಡುವ ರೀತಿಯನ್ನು ಈ ಪುಸ್ತಕವು ಅನ್ವೇಷಿಸುತ್ತದೆ. ಪ್ರಬಲ ಗುಂಪು ಎಂದರೆ ಸರ್ಕಾರಗಳು, ರಾಜಕೀಯ ವ್ಯಕ್ತಿಗಳು ಮತ್ತು ಒತ್ತಡ ಹೇರುವ ಗುಂಪುಗಳು. ಗ್ರಂಥಕರ್ತರು ಮತ್ತು ಪ್ರಕಾಶಕರು ಆ ಜ್ಞಾನವನ್ನು ಹೇಗೆ ಪುನರ್ ರಚಿಸಿ ಪ್ರಸ್ತುತ ಪಡಿಸುತ್ತಾರೆ ಎಂಬುದರ ಬಗ್ಗೆಯೂ ಈ ಪುಸ್ತಕ ಸಂಶೋಧಿಸುತ್ತದೆ; ಜೊತೆಗೆ, ಯಾವ ಜ್ಞಾನವನ್ನು ಸ್ವೀಕರಿಸಲಾಗಿಎದೆ ಮತ್ತು ತ್ಯಜಿಸಲಾಗಿದೆ ಎಂದೂ ವೇಗವಾಗಿ ಬದಲಾಗುತ್ತಿರುವ ಪ್ರಪಂಚದಲ್ಲಿ ರಾಷ್ಟ್ರೀಯ ನೆನಪುಗಳು ಮತ್ತು ರಾಷ್ಟ್ರೀಯ ಗುರುತು (ಐಡೆಂಟಿಟಿ)ಗಳ ರೂಪದಲ್ಲಿ ಶಿಕ್ಷಣದ ಗುರಿ ಮತ್ತು ಉದ್ದೇಶಗಳ ಬಗ್ಗೆ ಏನು ಹೇಳಲಾಗಿದೆ ಎಂದೂ ಈ ಪುಸ್ತಕ ಅನ್ವೇಷಿಸುತ್ತದೆ. ಸಂಯುಕ್ತ ಸಂಸ್ಥಾನ ಮತ್ತು ಯುನೈಟೆಡ್ ಕಿಂಗ್‌ಡಮ್ ರಾಷ್ಟ್ರಗಳ ಶಾಲಾ ಪಠ್ಯಪುಸ್ತಕಗಳ ಸಾಮಾಜಿಕ ನಿರ್ಮಾಣದತ್ತ ಗಮನ ಹರಿಸುತ್ತಾ ಮಾರ್ಸ್‌ಡೆನ್ 20 ನೇ ಶತಮಾನದ ಪಠ್ಯಪುಸ್ತಕ ಜ್ಞಾನದ ಐತಿಹಾಸಿಕ ಬೆಳವಣಿಗೆಯನ್ನು ಅನ್ವೇಷಿಸುತ್ತಾನೆ; ನಿರೂಪಣೆ ಚೆನ್ನಾಗಿ ನಿರ್ಮಾಣಗೊಂಡಿದೆಯಲ್ಲದೆ ಸಂಬಂಧಿತ ಸಾಹಿತ್ಯದ ನಿರೂಪಣೆ, ಪರಾಮಶ್ನೆಯೊಂದಿಗೆ ಸಮರ್ಥನೆಗೊಂಡಿದೆ; ಮಾರ್ಸ್‌ಡೆನ್ ಮುಖ್ಯ ವಿಷಯ ಏನೆಂದರೆ ಸಮಾಜ ವಿಜ್ಞಾನಗಳಲ್ಲಿನ ಶಾಲಾ ಪಠ್ಯಪುಸ್ತಕ ಜ್ಞಾನ ನಿರ್ಮಾಣವನ್ನು ವಿಶಾಲವಾದ ಸಾಮಾಜಿಕ–ಆರ್ಥಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಇದನ್ನು ಪುಸ್ತಕ ಅಧ್ಯಾಯಗಳು ಚೆನ್ನಾಗಿ ನಿರೂಪಿಸುತ್ತವೆ.

ಸಾಂಸ್ಕೃತಿಕ ಬದಲಾವಣೆಯ ಹಿನ್ನೆಲೆಯಲ್ಲಿ ಪಠ್ಯಪುಸ್ತಕ ಜ್ಞಾನದ ಬೆಳವಣಿಗೆಯಾಗುವ ಬಗೆಯನ್ನು ಅನ್ವೇಷಿಸುವುದರ ಜೊತೆಗೆ ಮಾಸ್‌ಡೆನ್ ರಾಷ್ಟ್ರೀಯ ಪಠ್ಯಕ್ರಮದಲ್ಲಿ ಪ್ರಕಟಗೊಳ್ಳುವ ಕೇಂದ್ರಿತ ಶಿಕ್ಷಣ ವ್ಯವಸ್ಥೆಯು ಪಠ್ಯಕ್ರಮ ಪ್ರಕಟಣೆಯ ರಾಜನೈತಿಕ ಆರ್ಥಿಕತೆಯ ಒಳಗೆ ಬೆಳಕು ಕಾಣುವ ಪಠ್ಯಪುಸ್ತಕಗಳ ವಿಧವನ್ನು ಆಳವಾಗಿ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಅನ್ವೇಷಿಸುತ್ತಾನೆ. ಇದಲ್ಲದೆ, ಬೋಧಕರು ಮತ್ತು ವಿದ್ಯಾರ್ಥಿಗಳು ಪಠ್ಯಪುಸ್ತಕಗಳನ್ನು ಬಳಸುವ ರೀತಿಯನ್ನು ಕುರಿತಾದ ಪರಿಮಿತ ಪ್ರಮಾಣದಲ್ಲಿ ಲಭ್ಯವಿರುವ ಸಾಹಿತ್ಯವನ್ನು ವಿಮರ್ಶಾತ್ಮಕವಾಗಿ ಮಾರ್ಸ್‌ಡೆನ್ ಅನ್ವೇಷಿಸುತ್ತಾನೆ. ಈ ಕ್ಷೇತ್ರದಲ್ಲಿ ಯಾವ ಯಾವ ಪ್ರಾಯೋಗಿಕ ಸಂಶೋಧನೆಗಳು ಲಭ್ಯವಿವೆ ಎಂದು ತಿಳಿಸುವಾಗ ತರಗತಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪಠ್ಯಪುಸ್ತಕವನ್ನು ಉಪಯೋಗಿಸುತ್ತಾ ಮುಂದೆ ಸಾಗುವಾಗ ವಾಸ್ತವವಾಗಿ ಏನು ಘಟಿಸುತ್ತದೆ ಎಂಬುದರ ಬಗೆಗೆ ಇನ್ನೂ ಸಾಕಷ್ಟು ಅರಿತುಕೊಳ್ಳುವುದಿದೆ ಎಂದು ಮಾರ್ಸ್‌ಡೆನ್ ಸರಿಯಾಗಿಯೇ ಹೇಳಿದ್ದಾನೆ. ಇಂಗ್ಲೆಂಡಿನ ಲಿವರ್ ಪೂಲ್ ವಿಶ್ವವಿದ್ಯಾನಿಲಯದ ಶಿಕ್ಷಣ ಶಾಸ್ತ್ರದಲ್ಲಿ ಎಮಿರೆಟಸ್ ಪ್ರೊಫ಼ೆಸರ್ ಆಗಿರುವ ಬಿಲ್ ಮಾರ್ಸ್‌ಡೆನ್ ಶೈಕ್ಷಣಿಕ ಇತಿಹಾಸದ ಕ್ಷೇತ್ರದಲ್ಲಿ ವಿಸ್ತೃತವಾದ ಪ್ರಕಟಣೆಗಳನ್ನು ಹೊರತಂದಿದ್ದಾರೆ ಹಾಗೂ ಪುಸ್ತಕವನ್ನು ಈ ಅಂಶವನ್ನು ಪ್ರತಿಬಿಂಬಿಸುವ ನಿರೂಪಣಾತ್ಮಕ ಮತ್ತು ಬಹುತೇಕ ವಿವರಣಾತ್ಮಕ ಶೈಲಿಯಲ್ಲಿ ಬರೆಯಲಾಗಿದೆ.

ಈ ಪುಸ್ತಕದ ಮಹತ್ವಪೂರ್ಣ ಅಂಶವೇನೆಂದರೆ ಈ ಪುಸ್ತಕ ಈ ಹಿಂದೆ ಯಾರೂ ಪ್ರಯತ್ನಿಸದಂತಹ ರೀತಿಯಲ್ಲಿ ಪಠ್ಯಪುಸ್ತಕ ವಿಶ್ಲೇಷಣೆಯ ಕ್ಷೇತ್ರವನ್ನು ಅನ್ವೇಷಿಸಿದೆ. ಅಷ್ಟೇ ಅಲ್ಲ, ಇದು ಉತ್ತರಿಸಿರುವ ಪ್ರಶ್ನೆಗಳಿಗಿಂತ ಇನ್ನೂ ಹೆಚ್ಚಿನ ಸಂಖ್ಯೆಯ ಪ್ರಶ್ನೆಗಳನ್ನು ಎತ್ತಿದೆ; ಇದು ಪುಸ್ತಕದ ಒಂದು ವೈಶಿಷ್ಟ್ಯವಾಗಿದ್ದು ಇದರೊಂದಿಗಿನ ವಿಸ್ತೃತ ಗ್ರಂಥಸೂಚಿಯು ಪಠ್ಯಪುಸ್ತಕ ಜ್ಞಾನದ ಸಾಮಾಜಿಕ ನಿರ್ಮಾಣದ ಬಗೆಗೆ ಸಮಾಜ ವಿಜ್ಞಾನಗಳ ಬೋಧನೆ ಮತ್ತು ಕಲಿಕೆಯ ಮೇಲೆ ಇದರ ಪ್ರಭಾವಗಳ ಬಗೆಗೆ ಅನ್ವೇಷಣೆಯಲ್ಲಿ ಆಸಕ್ತರಾಗಿರುವವರಿಗೆ ಒಳ್ಳೆಯ ಉಪಯುಕ್ತ ಪ್ರಾರಂಭಿಕ ನೆಲೆಯನ್ನು ಇದು ಒದಗಿಸುತ್ತದೆ.

**4.2.7. ಪರಾಮರ್ಶನ ಸೂಚಿ**


1. https://answershark.com/writing/non-fiction-review/how-to-write-Textbook-review.html
2. https://bookriot.com/2019/02/14/how-to-write-a-book-review/
3. https://www.researchgate.net/publication/332447215_How_to_write_a_Book_Review
4. http://www.collegeofthedesert.edu/students/asc/SiteAssets/Pages/Research-and-Study-Skills/Book%20Review.pdf
5. https://www.eklavya.in/pdfs/Sandarbh/Sandarbh_60/01-4_Review_Social_Science_Textbook_Eng.PDF
6. http://www.ncert.nic.in/announcements/notices/pdf_files/NECERT_SKT_(final).pdf

## ಬ್ಲಾಕ್ 4 : ಸಮಾಜ ವಿಜ್ಞಾನಗಳ ಪಠ್ಯಪುಸ್ತಕ ಮತ್ತು ಸಮಾಜ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಾಪನ

## ಘಟಕ 3 : ಸಮಾಜ ವಿಜ್ಞಾನಗಳಲ್ಲಿ ಪಠ್ಯಪುಸ್ತಕಗಳ ವಿಶ್ಲೇಷಣೆ

**ಘಟಕ ರಚನೆ**

4.3.1. ಕಲಿಕಾ ಉದ್ದೇಶಗಳು
4.3.2. ಪೀಠಿಕೆ
4.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.3.3.1. ಸಮಾಜ ವಿಜ್ಞಾನ ಪಠ್ಯಪುಸ್ತಕದ ಲಕ್ಷಣಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
4.3.3.2. ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ವಿಶ್ಲೇಷಣೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.3.4. ಸಾರಾಂಶಿಸೋಣ
4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳುಲು ಉತ್ತರಗಳು - 1 ಮತ್ತು 2
4.3.6. ಘಟಕಾಂತ್ಯ ಅಭ್ಯಾಸಗಳು
4.3.7. ಪರಾಮರ್ಶನ ಸೂಚಿ

### 4.3.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಸಮಾಜ ವಿಜ್ಞಾನ ಪುಸ್ತಕದ ಪ್ರಮುಖ ಲಕ್ಷಣಗಳನ್ನು ವಿವರಿಸುವರು; ಮತ್ತು
- ವಿವಿಧ ತರಗತಿಗಳ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸುವರು.

### 4.3.2. ಪೀಠಿಕೆ

ನೀವು ವಿದ್ಯಾರ್ಥಿಯಾಗಿ ಮತ್ತು ಶಿಕ್ಷಕರಾಗಿ ಅನೇಕ ಪಠ್ಯಪುಸ್ತಕಗಳನ್ನು ಉಪಯೋಗಿಸಿದ್ದೀರಿ. ಆದ್ದರಿಂದ, ನಿಮಗೆ ಪಠ್ಯಪುಸ್ತಕಗಳ ಅನುಕೂಲತೆಗಳ ಪರಿಚಯ ಆಗಿದೆ. ಅವುಗಳಲ್ಲಿ ನೀವು ಕೆಲವನ್ನು ಇಷ್ಟಪಟ್ಟಿದ್ದೀರಿ ಮತ್ತು ಕೆಲವನ್ನು ಇಷ್ಟಪಟ್ಟಿಲ್ಲ. ನೀವು ವಿದ್ಯಾರ್ಥಿಯಾಗಿ ಮತ್ತು ಶಿಕ್ಷಕರಾಗಿ ಇಷ್ಟಪಟ್ಟಿರುವ ಪಠ್ಯಪುಸ್ತಕಗಳ ಪುನರಾವಲೋಕನ ಮಾಡಿ.ಖಂಡಿತವಾಗಿಯೂ ಈ ಲಕ್ಷಣಗಳಲ್ಲಿ ವ್ಯತ್ಯಾಸವಿರುತ್ತದೆ. ವಾಸ್ತವಾಂಶವೆಂದರೆ, ನೀವು ವಿದ್ಯಾರ್ಥಿಯಾಗಿ ಮತ್ತು ಶಿಕ್ಷಕರಾಗಿ ಇಷ್ಟಪಟ್ಟಿರುವ ಈ ಲಕ್ಷಣಗಳು ಪಠ್ಯಪುಸ್ತಕಕ್ಕೆ ಮುಖ್ಯವಾಗಿರುತ್ತವೆ.

ಇಡೀ ಅಧ್ಯಯನದ ಕೋರ್ಸ್‌ನಲ್ಲಿ ಸಮಾಜವಿಜ್ಞಾನ ಪಠ್ಯಪುಸ್ತಕಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ಐತಿಹಾಸಿಕ ಜ್ಞಾನವನ್ನು ಮತ್ತು ಗತಕಾಲವನ್ನು ಸ್ಪಷ್ಟತೆಯಿಂದ, ಅನುಕಂಪದಿಂದ, ಕಲ್ಪನಾಶೀಲತೆಯಿಂದ ಮತ್ತು ನಿಖರತೆಯಿಂದ ವ್ಯಾಖ್ಯಾನಿಸಲು ಅಗತ್ಯವಾದ ಕೌಶಲಗಳನ್ನು ವಿಕಾಸಗೊಳಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಅವು ಸಹಾಯ ಮಾಡುತ್ತವೆ.

ವಿದ್ಯಾರ್ಥಿಗಳು ಅಪೇಕ್ಷಿತ ಪೌರ ಗುಣಲಕ್ಷಣಗಳನ್ನೂ,ದೇಶಭಕ್ತಿಯನ್ನು, ಜಾಗತಿಕ ಪೌರತ್ವವನ್ನು ಮತ್ತು ವೈಯಕ್ತಿಕ ಚಾರಿತ್ರ್ಯವನ್ನು ವಿಕಾಸಗೊಳಿಸಿಕೊಳ್ಳಲು ಸಹಾಯ ಮಾಡುತ್ತವೆ.

ಕೆಲವು ನಿರ್ದಿಷ್ಟ ಲಕ್ಷಣಗಳೂ ಎಲ್ಲಾ ಪಠ್ಯಪುಸ್ತಕಗಳಿಗೂ ಒಂದೇ ಆಗಿರುತ್ತವೆ ಮತ್ತು ಕೆಲವು ಲಕ್ಷಣಗಳು ಪ್ರತಿ ವಿಷಯದ ಪಠ್ಯ ಪುಸ್ತಕಕ್ಕೆ ಅಪೂರ್ವವಾಗಿರುತ್ತವೆ. ನೀವು ಘಟಕ 4.1 ರಲ್ಲಿ ಆ ಲಕ್ಷಣಗಳನ್ನು ಆಗಲೇ ಅಧ್ಯಯನ ಮಾಡಿದ್ದೀರಿ.ಈ ಘಟಕದಲ್ಲಿ ನಾವು ಈ ಸಾಮಾನ್ಯ ಲಕ್ಷಣಗಳನ್ನು

ಮತ್ತು ಒಂದು ಇತಿಹಾಸ ಪಠ್ಯಪುಸ್ತಕದ ನಿರ್ದಿಷ್ಟ ಲಕ್ಷಣಗಳನ್ನು ಪುನರಾವಲೋಕನ ಮಾಡೋಣ ಮತ್ತು ಒಂದು ಇತಿಹಾಸ ಪಠ್ಯಪುಸ್ತಕವನ್ನು ವಿಶ್ಲೇಷಿಸುವುದು ಹೇಗೆ ಎಂಬುದನ್ನು ಕಲಿಯೋಣ.

ವಿಮರ್ಶೆ ಮತ್ತು ವಿಶ್ಲೇಷಣೆಯ ಕೆಲವು ಅಂಶಗಳು ಸಮಾನವಾಗಿರುತ್ತವೆ. ವಿಮರ್ಶೆ ಪರಿಣತರಿಂದ ಮಾಡುವ ಕಾರ್ಯವಾದರೆ, ವಿಶ್ಲೇಷಣೆ ನಿರ್ದಿಷ್ಟ ಮಾನದಂಡಗಳಿಗನುಗುಣವಾಗಿ ವಿದ್ಯಾರ್ಥಿಗಳು ಕೈಗೊಳ್ಳುವ ಆ ಮೂಲಕ ಪಠ್ಯಪುಸ್ತಕಗಳ ಹಾಗೂ ಅವುಗಳ ಬಳಕೆಯ ಕುರಿತಾಗಿ ತಿಳಿದುಕೊಳ್ಳುವ ಚಟುವಟಿಕೆಯಾಗುತ್ತದೆ.

### 4.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 4.3.3.1. ಸಮಾಜ ವಿಜ್ಞಾನ ಪಠ್ಯಪುಸ್ತಕದ ಲಕ್ಷಣಗಳು

ಸಮಾಜ ವಿಜ್ಞಾನದ ಒಂದು ಉತ್ತಮ ಪಠ್ಯಪುಸ್ತಕದ ಸಾಮಾನ್ಯ ಲಕ್ಷಣಗಳು ಮತ್ತು ವಿಶಿಷ್ಟ ಲಕ್ಷಣಗಳು– ಈ ಎರಡನ್ನೂ ಹೊಂದಿರಬೇಕು. ಘಟಕ 4.1 ರಲ್ಲಿ ನಾವು ಚರ್ಚಿಸಿದ ಲಕ್ಷಣಗಳನ್ನು ನೆನೆಪಿಸಿಕೊಳ್ಳೋಣ. ಸಮಾಜ ವಿಜ್ಞಾನದ ಪಠ್ಯಪುಸ್ತಕಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ನ ಆ ಲಕ್ಷಣಗಳನ್ನು ಪುನಃ ಸ್ಪಷ್ಟಪಡಿಸಲಾಗಿದೆ.

**ಇತಿಹಾಸ ಪಠ್ಯಪುಸ್ತಕದ ಲಕ್ಷಣಗಳು**

**ಸಾಮಾನ್ಯ ಲಕ್ಷಣಗಳು**

- ಶಿಶು–ಕೇಂದ್ರಿತ
- ಉತ್ತಮ ಮುದ್ರಣ ಮತ್ತು ಒಳ್ಳೆಯ ಹೊರನೋಟ
- ಮನೋವೈಜ್ಞಾನಿಕ ಮತ್ತು ವೈಜ್ಞಾನಿಕ
- ವಿಷಯ ವಸ್ತು ಸೂಚಿ ಮತ್ತು ಗ್ರಂಥಸೂಚಿ
- ನ್ಯಾಯಯುತ ಬೆಲೆ
- ಪ್ರತಿಘಟಕದ ಅಂತ್ಯದಲ್ಲಿ ಪ್ರಶ್ನೆಗಳು ಮತ್ತು ನಿಯೋಜಿತ ಕಾರ್ಯಗಳು
- ಪ್ರಾಯೋಗಿಕ ಕಾರ್ಯ ಮತ್ತು

**ನಿರ್ದಿಷ್ಟ ಲಕ್ಷಣಗಳು**

- ಕಾರಣ–ಪರಿಣಾಮ ಸಂಬಂಧವನ್ನು ತೋರಿಸಿರಬೇಕು
- ಒಳ್ಳೆಯ ಚಿತ್ರಗಳನ್ನು ಹೊಂದಿರಬೇಕು
- ಪಕ್ಷಪಾತದಿಂದ ಮುಕ್ತವಾಗಿರಬೇಕು
- ಅಂತರರಾಷ್ಟ್ರೀಯತೆ ಮತ್ತು ವಿಶ್ವಭ್ರಾತೃತ್ವದ ಸ್ಫೂರ್ತಿಯನ್ನು ಉಂಟು ಮಾಡಬೇಕು
- ಆಯ್ಕೆಯ ಅಂಶವಿರಬೇಕು, ತಥ್ಯಾಂಶಗಳನ್ನು ಸೇರಿಸಿರಬೇಕು,ವಿವಿಧತೆಯನ್ನು ಪ್ರಶಂಸಿಸಬೇಕು
- ಐತಿಹಾಸಿಕ ಚಿಂತನೆಯನ್ನು ಪುನರ್ವಿಮರ್ಶೆಯನ್ನು ಬೆಳೆಸಬೇಕು
- ಪೂರಕ ಸಾಮಗ್ರಿಯನ್ನು ಹೊಂದಿರಬೇಕು

**ಎ) ಸಾಮಾನ್ಯ ಲಕ್ಷಣಗಳು**

**1. ಶಿಶು ಕೇಂದ್ರಿತ**

ಪಠ್ಯಪುಸ್ತಕದ ಭಾಷಾ ಶೈಲಿ ವಿದ್ಯಾರ್ಥಿಗಳ ವಯಸ್ಸು ಮತ್ತು ಅವರಿರುವ ತರಗತಿಗೆ ಅನುಗುಣವಾಗಿರಬೇಕು. ಒಳ್ಳೆಯ ಸಮಾಜ ವಿಜ್ಞಾನ ಪಠ್ಯಪುಸ್ತಕ ಅದನ್ನು ಯಾರಿಗೆ

ಬರೆಯಲಾಗುತ್ತದೆಯೋ ಆ ವಿದ್ಯಾರ್ಥಿಗಳ ವಯಸ್ಸು, ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಹೊಂದಿಕೆಯಾಗುವಂತೆ ಇರಬೇಕು.ಅಂದರೆ, ಪಠ್ಯಪುಸ್ತಕ ಶಿಶು–ಕೇಂದ್ರಿತವಾಗಿರಬೇಕು ಮತ್ತು ವಿದ್ಯಾರ್ಥಿ ತಲುಪಿರುವ ವಯಸ್ಸನ್ನು ಪ್ರತಿಬಿಂಬಿಸುವಂತಿರಬೇಕು. ಪಠ್ಯಪುಸ್ತಕಗಳನ್ನು ಸ್ಪಷ್ಟವಾದ ಮತ್ತು ಸರಳವಾದ ಭಾಷೆಯಲ್ಲಿ ಬರೆಯಬೇಕು. ಬರೆಯಲು ಉಪಯೋಗಿಸಿರುವ ಭಾಷೆಯ ಶೈಲಿ ಅರ್ಥವಾಗುವಂತಿರಬೇಕು.

**2. ಉತ್ತಮ ಮುದ್ರಣ ಮತ್ತು ಒಳ್ಳೆಯ ಹೊರನೋಟ**

ಸಮಾಜ ವಿಜ್ಞಾನ ಪಠ್ಯಪುಸ್ತಕ ಸ್ಪಷ್ಟವಾದ ಮತ್ತು ಸೂಕ್ತವಾದ ಫಾಂಟ್‌ಗಳಲ್ಲಿ ಮುದ್ರಿಸಿರಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನ ಓದಲು ಸುಲಭವಾಗುತ್ತದೆ. ಸಂಬಂಧಿತ ಚಿತ್ರಗಳಿಂದ ಪುಸ್ತಕದ ಮುಖಪುಟವನ್ನು ಆಕರ್ಷಕಗೊಳಿಸಬೇಕು ಮತ್ತು ಪುಸ್ತಕದ ಹೊರನೋಟ ಅದನ್ನು ಉಪಯೋಗಿಸಲು ಪ್ರೇರಣೆ ನೀಡುವಂತೆ ಇರಬೇಕು. ಇತಿಹಾಸದ ಪಠ್ಯಪುಸ್ತಕದ ಮುದ್ರಣ ಮತ್ತು ಹೊರನೋಟವು ಚೆನ್ನಾಗಿರಬೇಕು, ಅದು ದಪ್ಪನಾಗಿರಬೇಕು ಮತ್ತು ಪುಸ್ತಕದ ಗಾತ್ರ ಹಿಡಿದಾಡುವಂತೆ ಹಿತಮಿತವಾಗಿರಬೇಕು.

**3. ಮನೋವೈಜ್ಞಾನಿಕ ಮತ್ತು ವೈಜ್ಞಾನಿಕ**

ಸಮಾಜ ವಿಜ್ಞಾನದ ಪಠ್ಯಪುಸ್ತಕಗಳನ್ನು ಮನೋವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಬರೆಯಬೇಕು. ಅವುಗಳನ್ನು ವೈಜ್ಞಾನಿಕವಾಗಿ ಯೋಜಿಸಬೇಕು ಮತ್ತು ಬರೆಯಬೇಕು. ಅದು ಸರಳವಾದ ವಿವರಣೆಗಳಿಂದ ಆರಂಭವಾಗಿ, ಹೆಚ್ಚು ಸಂಕೀರ್ಣವಾದ ವಿಚಾರಗಳತ್ತ ಮುಂದುವರೆಯಬೇಕು. ವಿಷಯದ ಪ್ರಸ್ತುತೀಕರಣ ತಾರ್ಕಿಕ ವ್ಯವಸ್ಥೆಯನ್ನು ಅನುಸರಿಸಿರಬೇಕು.

**4. ವಿಷಯ ವಸ್ತು ಸೂಚಿ ಮತ್ತು ಗ್ರಂಥಸೂಚಿ**

ಪುಸ್ತಕದ ಪ್ರಾರಂಭದಲ್ಲಿಯೇ ವಿಷಯ ವಸ್ತು ಸೂಚಿ ಇರಬೇಕು ಮತ್ತು ಪುಸ್ತಕದ ಅಂತ್ಯದಲ್ಲಿ ಗ್ರಂಥಸೂಚಿ ಇರಬೇಕು. ವಿಷಯ ವಸ್ತು ಸೂಚಿ ಓದಬೇಕಾದ ವಿಷಯವನ್ನು ಹುಡುಕಿಕೊಳ್ಳಲು ವಿಷಯ ವಸ್ತು ಸೂಚಿ ಸಹಾಯ ಮಾಡುತ್ತದೆ. ಇದರಿಂದ ಅವರಿಗೆ ಕಾಲ ವ್ಯರ್ಥವಾಗುವುದಿಲ್ಲ. ಗ್ರಂಥಸೂಚಿ ವಿಷಯದ ಮುಂದುವರೆದ ಅಧ್ಯಯನಕ್ಕೆ ಸಹಾಯಕವಾಗುತ್ತದೆ.

**5. ಸಾಮಾನ್ಯ ಜನರಿಗೆ ನಿಲುಕುವಂಥ ನ್ಯಾಯಯುತ ಬೆಲೆ ಹೊಂದಿರಬೇಕು**

ಪಠ್ಯಪುಸ್ತಕಗಳು ನ್ಯಾಯಯುತವಾದ ಬೆಲೆಯನ್ನು ಹೊಂದಿರಬೇಕು. ಅಂತಹ ನ್ಯಾಯಯುತ ಬೆಲೆ ಇದ್ದಲ್ಲಿ ಸಾಮಾನ್ಯ ಜನರು ಅದನ್ನು ಕೊಳ್ಳಲು ಸುಲಭವಾಗುತ್ತದೆ.

**6. ಪ್ರತಿ ಘಟಕದ (ಅಧ್ಯಾಯದ) ಕೊನೆಯಲ್ಲಿ ಪ್ರಶ್ನೆಗಳು, ಪ್ರಾಯೋಜನೆಗಳು ಮತ್ತು ಪ್ರಾಯೋಗಿಕ ಕಾರ್ಯಗಳಿರಬೇಕು**

ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಅದಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳಿರಬೇಕು. ಈ ಪ್ರಶ್ನೆಗಳು ವಿದ್ಯಾರ್ಥಿಗಳು ಓದಿದ್ದನ್ನು (ಅಧ್ಯಯನ ಮಾಡಿದ್ದನ್ನು) ಪುನಃ ಸ್ಮರಿಸಿಕೊಳ್ಳಲು ಸಹಾಯಕವಾಗುವಂತಿರಬೇಕು. ವೈಯಕ್ತಿಕ ಕಾರ್ಯಕ್ಕೆ ಮತ್ತು ಸಮೂಹ ಕಾರ್ಯಕ್ಕೆ ಅವಕಾಶವಿರಬೇಕು. ವೈಯಕ್ತಿಕ ಮತ್ತು ಸಮೂಹ ಪ್ರಾಯೋಜನೆಗಳ ವಿಷಯಗಳನ್ನು ಪಟ್ಟಿ ಮಾಡಿರಬೇಕು. ಪ್ರಾಯೋಗಿಕ ಕಾರ್ಯಕ್ಕೆ ಮುಂದುವರೆಯಲು ಸೂಚನೆಗಳನ್ನು ಸ್ಪಷ್ಟವಾಗಿ ಕೊಟ್ಟಿರಬೇಕು.

ಬಿ) ವಿಶಿಷ್ಟ ಲಕ್ಷಣಗಳು

**7. ಚಾರಿತ್ರಿಕ ಘಟನೆಗಳ ಕಾರಣ–ಪರಿಣಾಮಗಳನ್ನು ಸ್ಪಷ್ಟಪಡಿಸಿರಬೇಕು**

ಇತಿಹಾಸವೆಂದರೆ ಘಟನೆಗಳ ನಿರೂಪಣೆ. ಕಾರಣ–ಪರಿಣಾಮಗಳ ಸಂಬಂಧಗಳ ಸರಪಳಿಯ ವಿವರವೇ ನಿರೂಪಣೆ. ಈ ಸಂಬಂಧವನ್ನು ಐತಿಹಾಸಿಕ ಘಟನೆಗಳ ಪ್ರತಿಯೊಂದು ಹಂತದ ಪ್ರಸ್ತುತೀಕರಣದಲ್ಲಿ ಸ್ಪಷ್ಟಗೊಳಿಸಿರಬೇಕು. ಸಮಾಜ ವಿಜ್ಞಾನದ ಒಳ್ಳೆಯ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ತಾವು ಕಾಲ, ಅವಧಿ ಮತ್ತು ಸಮಾಜಕ್ಕೆ ಸಂಬಂಧಿಸಿದಂತೆ ಎಲ್ಲಿದ್ದೇವೆ ಎನ್ನುವುದನ್ನು ಸ್ಪಷ್ಟಗೊಳಿಸಬೇಕು. ಅವು ಭೂತಕಾಲ ಮತ್ತು ವರ್ತಮಾನ ಕಾಲ, ಸ್ಥಳೀಯತೆ ಮತ್ತು ದೂರವಿರುವಂಥದ್ದು ಮತ್ತು ವೈಯಕ್ತಿಕ ಮತ್ತು ರಾಷ್ಟ್ರೀಯ ಜೀವನವನ್ನು ದೂರದ ದೇಶಗಳಲ್ಲಿನ ಜನರ ಜೀವನ ಮತ್ತು ಸಂಸ್ಕೃತಿಗಳು– ಇವುಗಳ ನಡುವೆ ಇರುವ ಸಂಬಂಧಗಳ ಸರಪಣಿಯನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟಗೊಳಿಸಿರಬೇಕು.

**8. ಒಳ್ಳೆಯ ಚಿತ್ರಗಳನ್ನು ಹೊಂದಿರಬೇಕು**

ಪುಸ್ತಕದಲ್ಲಿನ ಚಿತ್ರ, ನಕ್ಷೆ ಮುಂತಾದುವುಗಳು ಪರಿಕಲ್ಪನೆಗಳ ಸ್ಪಷ್ಟತೆಗೆ ತಮ್ಮ ಕೊಡುಗೆ ನೀಡುತ್ತವೆ. ಅವುಗಳ ಪಠ್ಯಪುಸ್ತಕವನ್ನು ಆಕರ್ಷಕವನ್ನಾಗಿಸುತ್ತವೆ. ಆದ್ದರಿಂದಲೇ, ಸಮಾಜ ವಿಜ್ಞಾನದ ಪಠ್ಯಪುಸ್ತಕಗಳು ಚಿತ್ರಗಳು, ಭೂಪಟಗಳು,ಚಾರ್ಟುಗಳು, ಕಾಲರೇಖೆಗಳು, ನಕ್ಷೆಗಳು (ಗ್ರಾಫ್‌ಗಳು) ಮತ್ತು ಇತರ ಆವಶ್ಯಕ ಚಾರಿತ್ರಿಕ ರೂಪರೇಖೆಗಳನ್ನು ಹೊಂದಿರಬೇಕು. ಇವುಗಳು ವಿಷಯ ವಸ್ತುವನ್ನು ಅರ್ಥ ಮಾಡಿಕೊಳ್ಳಲು ಮತ್ತು ವಿದ್ಯಾರ್ಥಿಗಳು ಪುಸ್ತಕದಲ್ಲಿ ಆಸಕ್ತಿಯನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತವೆ.

**9. ಪಕ್ಷಪಾತದಿಂದ ಮುಕ್ತವಾಗಿರಬೇಕು**

ಸಮಾಜ ವಿಜ್ಞಾನ ಪಠ್ಯಪುಸ್ತಕವೊಂದರ ಪ್ರಪ್ರಥಮ ಮತ್ತು ಅತ್ಯಂತ ಆವಶ್ಯಕ ಲಕ್ಷಣ ಅದು ಘಟನೆಗಳನ್ನು ಪ್ರಸ್ತುತಪಡಿಸುವುದರ ಸಿಂಧುತ್ವದಲ್ಲಿದೆ. ಪುಸ್ತಕ ಲೇಖಕ/ಲೇಖಕರು ಯಾವುದೇ ರೀತಿಯ ಪಕ್ಷಪಾತ ಪಠ್ಯಪುಸ್ತಕದಲ್ಲಿ ತಲೆ ಹಾಕಲು ಅವಕಾಶ ಕೊಡಬಾರದು. ಪಠ್ಯಪುಸ್ತಕ ತಥ್ಯ(ವಾಸ್ತವವನ್ನು ) ಮತ್ತು ತಥ್ಯವನ್ನಲ್ಲದೆ ಅದರಾಚೆಗಿನ ಏನನ್ನೂ ಪ್ರಸ್ತುತಪಡಿಸಬಾರದು. ಇದು ಪುಸ್ತಕದ ಲೇಖಕ ಐತಿಹಾಸಿಕ ಘಟನೆಗಳನ್ನು ಪ್ರಸ್ತುತಪಡಿಸುವಾಗ ಅತ್ಯಂತ ವಸ್ತುನಿಷ್ಠನಾಗಿರಲು ಬಾಧ್ಯನನ್ನಾಗಿಸುತ್ತದೆ. ಸಮಾಜ ವಿಜ್ಞಾನ ಪಠ್ಯಪುಸ್ತಕ ಪಕ್ಷಪಾತವನ್ನು ಸೂಚಿಸುವ ಯಾವುದೇ ರೀತಿಯ ಗುಣವಾಚಕಗಳಿಂದ, ಕ್ರಿಯಾವಿಶೇಷಣಗಳಿಂದ ಅಥವಾ ಗುಣಾತ್ಮಕ ಸೂಚಕಗಳಿಂದ ಮುಕ್ತವಾಗಿರಬೇಕು.

**10. ಅಂತರರಾಷ್ಟ್ರೀಯತೆಯ ಮತ್ತು ವಿಶ್ವಭ್ರಾತೃತ್ವದ ಚೇತನವನ್ನು ಉಂಟುಮಾಡಲು ಸಾಧ್ಯವಾಗಬೇಕು:**

ಜಾಗತಿಕ ಪೌರತ್ವವನ್ನು ನಿರ್ಮಾಣ ಮಾಡುವುದು ಇತಿಹಾಸದ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.ಅದು ಪ್ರೀತಿವಿಶ್ವಾಸವನ್ನು, ಪ್ರಶಂಸೆ ಮತ್ತು ಸಕಾರಾತ್ಮಕ ಮನೋಭಾವವನ್ನು ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡುತ್ತಿರುವ ಜನಗಳ ಬಗ್ಗೆ ಹೊಂದುವುದನ್ನು ವಿಕಾಸಗೊಳಿಸುವಂತಿರಬೇಕು. ರಾಷ್ಟ್ರೀಯ ಸಮಗ್ರತೆಯೊಂದಿಗೆ ಪುಸ್ತಕ ಅಂತರರಾಷ್ಟ್ರೀಯತಾ ಮನೋಭಾವವನ್ನು ಮತ್ತು ವಿಶ್ವಭ್ರಾತೃತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಗುರಿಯನ್ನು ಹೊಂದಿರಬೇಕು. ಇತಿಹಾಸದ ಪುಸ್ತಕಗಳು ವಿದ್ಯಾರ್ಥಿಗಳಲ್ಲಿ ಸಂಕುಚಿತ ದೃಷ್ಟಿಕೋನವನ್ನು ವಿಕಾಸಗೊಳಿಸಬಾರದು.

**11. ಆಯ್ಕೆಯ ಅಂಶ**

ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಮತ್ತು ಪ್ರಗತಿಯತ್ತ ಹೆಜ್ಜೆ ಇಡಲು ಪೂರಕವಾದ ಘಟನೆಗಳನ್ನು ಮತ್ತು ತಥ್ಯಾಂಶಗಳನ್ನು ಪುಸ್ತಕದಲ್ಲಿ ಸೇರಿಸಬೇಕು. ಸಮಾಜ ವಿಜ್ಞಾನದ

ಪಠ್ಯಪುಸ್ತಕಗಳನ್ನ ಬರೆಯುವಾಗ ಈ ನಿಯಮವನ್ನು ಗಮನದಲ್ಲಿಟ್ಟಿರಬೇಕು. ಮಾನವಕುಲವನ್ನು ಹೆಚ್ಚು ಹೆಚ್ಚು ಪ್ರಭಾವಗೊಳಿಸಿರುವಂತಹ ಘಟನೆಗಳಿಗೆ ಮಾತ್ರ ಒತ್ತು ಕೊಡಬೇಕು.

ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ತಥ್ಯಾಂಶಗಳನ್ನು ಸೇರಿಸಿರಬೇಕು ತಿಳಿಸುತ್ತವೆ. ವಿಷಯ ಯಾವುದೇ ಆಗಿರಲಿ ಅಥವಾ ಪುಸ್ತಕ ಎಷ್ಟೇ ದೊಡ್ಡದಾಗಿರಲಿ, ಯಾವ ಐತಿಹಾಸಿಕ ತಥ್ಯಾಂಶಗಳನ್ನು ಪುಸ್ತಕದಲ್ಲಿ ಸೇರಿಸಬೇಕು ಎಂಬುದರ ಬಗ್ಗೆ ಇತಿಹಾಸಜ್ಞರು ಆಯ್ಕೆ ಮಾಡುವವರಾಗಿರುತ್ತಾರೆ. ಒಂದು ತೃಪ್ತಿಕರ ಇತಿಹಾಸ ಪುಸ್ತಕ ಆಯ್ಕೆಯ ಮುಖ್ಯ ನಿರ್ಣಾಯಕಾಂಶಗಳನ್ನು ವಿವರಿಸುತ್ತದೆ. ಇದರಿಂದಾಗಿ ಆ ಪುಸ್ತಕವನ್ನು ಉಪಯೋಗಿಸುವವರು ಆಯ್ಕೆಯ ಸಿಂಧುತ್ವವನ್ನು ಮತ್ತು ಅಲ್ಲಲ್ಲಿ ಉಳಿದುಕೊಂಡಿರುವ ಅರ್ಥಪೂರ್ಣ ಅಪೂರ್ಣತೆಗಳ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ತಥ್ಯಾಂಶಗಳ ಪೂರೈಕೆ ಕಾಲಾನುಕ್ರಮಕ್ಕೆ ಮತು ಕಾಲಕಾಲಕ್ಕೆ ಉಂಟಾದ ಪರಿವರ್ತನೆಗಳಿಗೆ ಸ್ಪಷ್ಟವಾದ ಗಮನ ನೀಡಬೇಕು. ಅಂದರೆ, ಗತಕಾಲ ಮತ್ತು ವರ್ತಮಾನದ ನಡುವೆ ಇರುವ ಸಮಾನತೆಗಳು ಮತ್ತು ವ್ಯತ್ಯಾಸಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ ಮತ್ತು ಸಮಯದ ಕಾಲಾನುಕ್ರಮವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ತಥ್ಯಾಂಶಗಳನ್ನು ನಿಯಮಿತವಾಗಿ ಕಾಲ ಕಾಲಕ್ಕೆ ಬೋಧನೆ ಮತ್ತು ಕಲಿಕೆಯ ಪಾಂಡಿತ್ಯ ಪಡೆದವರಿಂದ ಮಾಡಲಾದ ಹೊಸ ಹೊಸ ಐತಿಹಾಸಿಕ ಸಂಶೋಧನೆಗಳ ಬೆಳಕಿನಲ್ಲಿ ಪರಿವರ್ಧಿಸಬೇಕು ಮತ್ತು ಪರಿಷ್ಕರಿಸಬೇಕು.

**12. ವೈವಿಧ್ಯತೆಯನ್ನು ಪ್ರಶಂಸಿಸಲು ಅವಕಾಶವಿರಬೇಕು**

ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ತಥ್ಯಾಂಶಗಳ ವ್ಯಾಪ್ತಿ ಸಮಾಜದ ವಿವಿಧ ಗುಂಪುಗಳ ಅನುಭವಗಳನ್ನು ಪ್ರತಿಬಿಂಬಿಸಬೇಕು. ಐತಿಹಾಸಿಕವಾಗಿ ಜನಾಂಗ

**13. ವ್ಯಾಪಕತೆ**

ಯಾವುದೇ ಘಟನೆ ಪ್ರತ್ಯೇಕವಾಗಿ ಘಟಿಸುವುದಿಲ್ಲ. ತಥ್ಯಾಂಶಗಳನ್ನು ಮಾನವ ಅನುಭವಗಳ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳ ವಿವರಗಳನ್ನು ಮಾನವರ ಅನುಭವಗಳೊಂದಿಗಿನ ಪಾರಸ್ಪರಿಕ ಸಂಬಂಧಗಳೊಂದಿಗೆ ವಿವರಿಸಬೇಕು. ಒಂದು ಕೋರ್ಸಿಗೆ (ಪಠ್ಯ ವಿಷಯಕ್ಕೆ) ಸೂಕ್ತವಾಗಿದ್ದಲ್ಲಿ ಜಾಗತಿಕ ದೃಕ್‌ಪಥಗಳನ್ನು ವಿವರಿಸುವುದು ಪಯಾಪ್ತವಾದ ಪಠ್ಯಪುಸ್ತಕಗಳ ವಿವರಣಾತ್ಮಕ ಲಕ್ಷಣವೆನಿಸುತ್ತದೆ.

**14. ಐತಿಹಾಸಿಕ ಚಿಂತನೆಯನ್ನು ವಿಕಾಸಗೊಳಿಸಬೇಕು**

ಪಠ್ಯಪುಸ್ತಕಗಳಲ್ಲಿ ಸಾಕ್ಷ್ಯಾಧಾರಗಳ ಪ್ರಸ್ತುತೀಕರಣ ವಿವಿಧ ರೂಪದ ಐತಿಹಾಸಿಕ ಸಾಕ್ಷ್ಯಾಧಾರಗಳನ್ನು ಒಪ್ಪಿಕೊಳ್ಳಬೇಕು. ಅರ್ಥೈಸುವಿಕೆ ಮತ್ತು ಈ ಸಾಕ್ಷ್ಯಾಧಾರಗಳನ್ನು ಅಪರೂಪವಾಗಿ ನೇರವಾಗಿರುತ್ತವೆ ಎನ್ನುವುದನ್ನೂ ಒಪ್ಪಿಕೊಳ್ಳಬೇಕು. ತೃಪ್ತಿಕರವಾದ ಸಮಾಜ ವಿಜ್ಞಾನ ಪಠ್ಯಪುಸ್ತಕಗಳು ಕೇವಲ ನೆನಪಿನಲ್ಲಿಡುವಿಕೆಯನ್ನು ಮೀರಿದಂತಹ ಐತಿಹಾಸಿಕ ಚಿಂತನೆಯನ್ನು ಮತ್ತು ಮನಸ್ಸಿನ ಐತಿಹಾಸಿಕ ಸ್ವಭಾವವನ್ನು ವಿಕಾಸಗೊಳಿಸಲು ಸಕ್ರಿಯವಾಗಿ ಪ್ರೋತ್ಸಾಹಿಸಬೇಕು.ತೃಪ್ತಿಕರವಾದ ಇತಿಹಾಸದ ಪಠ್ಯಪುಸ್ತಕವು ವೈವಿಧ್ಯಪೂರ್ಣ ಐತಿಹಾಸಿಕ ಆಕರಗಳನ್ನು (ಮೂಲಗಳನ್ನು)ಆಧರಿಸಿದ ಐತಿಹಾಸಿಕ ಕಥನವನ್ನು ಮತ್ತು ಇತ್ತೀಚಿನ ಪಾಂಡಿತ್ಯವನ್ನು ಒದಗಿಸುವುದೇ ಅಲ್ಲದೆ, ಸಂಕೀರ್ಣವಾದ ಐತಿಹಾಸಿಕ ದಾಖಲೆಗಳನ್ನು ವಿಸಂಕೇತಗೊಳಿಸುವ ಅಥವಾ ವ್ಯಾಖ್ಯಾನಿಸುವ (ಅರ್ಥೈಸುವ) ವಿವಿಧ ಕೌಶಲಗಳನ್ನು ಅನ್ವಯಿಸಲು ಮತ್ತು ಐತಿಹಾಸಿಕ ವಾದ–ವಿವಾದಗಳನ್ನು ಮತ್ತು ಕಥನಗಳನ್ನು ಸೃಷ್ಟಿಸಲು ಪ್ರೋತ್ಸಾಹಿಸುತ್ತದೆ.

ಉತ್ತಮ ರೀತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಗಳು ಬೇರೆ ಕೆಲವು ರೀತಿಗಳಲ್ಲಿ ಐತಿಹಾಸಿಕ ಚಿಂತನೆಯನ್ನು ಪ್ರೋತ್ಸಾಹಿಸುತ್ತವೆ. ಸಾಕ್ಷ್ಯಾಧಾರಗಳ ನಿರ್ದಿಷ್ಟ ಅಂಶಗಳನ್ನು ಕಟ್ಟುನಿಟ್ಟಾಗಿ ವಿಶ್ಲೇಷಣೆ ಮಾಡಲು ಮತ್ತು ಕಾಲ ಕಳೆದಂತೆ ಬದಲಾವಣೆಯ ಹಾಗೂ ನಿರಂತರತೆಯ ವಿಸ್ತೃತ ವಿನ್ಯಾಸಗಳನ್ನು ಗುರುತಿಸಿ,ವಿವರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಇಂಥ ಪಠ್ಯಪುಸ್ತಕಗಳು ಪ್ರಯತ್ನಿಸುತ್ತವೆ. ವಿದ್ಯಾರ್ಥಿಗಳ ಐತಿಹಾಸಿಕ ಜ್ಞಾನವನ್ನು ಮತ್ತು ಐತಿಹಾಸಿಕ ಚಿಂತನೆಯನ್ನು ಸಮಕಾಲೀನ ವಿವಾದಾಂಶಗಳಿಗೆ ಅನ್ವಯಿಸಲು ಸಹ ಅವು ಪ್ರೋತ್ಸಾಹಿಸುತ್ತವೆ. ಕಡೆಯದಾಗಿ, ಪಠ್ಯಪುಸ್ತಕಗಳು ಪಾಂಡಿತ್ಯ ಮತ್ತು ಬೋಧನೆ–ಕಲಿಕೆ ಪ್ರಕ್ರಿಯೆಯನ್ನು ಉಪಯೋಗಿಸಿಕೊಂಡು ಐತಿಹಾಸಿಕ ಚಿಂತನೆಯನ್ನು ವಿವಿಧ ಮೂಲ್ಯಾಂಕನದ ಸಂದರ್ಭಗಳಲ್ಲಿ ಐತಿಹಾಸಿಕ ಚಿಂತನೆಯನ್ನು ಮತ್ತು ಸಕ್ರಿಯ ಕಲಿಕೆಯನ್ನು ಪ್ರೋತ್ಸಾಹಿಸುತ್ತವೆ.

**15. ಪುನರ್ವಿಮರ್ಶೆ ಮತ್ತು ಮೌಲ್ಯಮಾಪನ**

ಪ್ರಕಟಣೆಗೆ ಮುಂಚೆ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಸಂಶೋಧಕರಿಂದ ಮತ್ತು ಸಕ್ರಿಯ ಶಿಕ್ಷಕರಿಂದ ಪುನರ್ವಿಮರ್ಶೆ ಮಾಡಿಸಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಪಠ್ಯಪುಸ್ತಕಗಳನ್ನು ರೂಪಿಸುವ ಕಾರ್ಯ ಪ್ರಸಿದ್ಧಿ ಪಡೆದಿರುವ ಸಂಶೋಧಕರನ್ನು ಮತ್ತು ಅಧ್ಯಾಪಕರನ್ನು ಮತ್ತು ಸಮುದಾಯ ಕಾಲೇಜುಗಳ ಶಿಕ್ಷಕರನ್ನು ಮತ್ತು ಸಾರ್ವಜನಿಕ ಚರಿತ್ರಕಾರರನ್ನು ಒಳಗೊಂಡಿರಬೇಕು. ಏಕೆಂದರೆ, ಈ ಶಿಕ್ಷಕರು ಬಹಳಷ್ಟು ಮಟ್ಟಿಗೆ ತಮ್ಮ ಬೋಧನೆಗೆ ಈ ಪಠ್ಯಪುಸ್ತಕಗಳನ್ನು ಅವಲಂಬಿಸಿರುತ್ತಾರೆ.ಒಮ್ಮೆ ಪಠ್ಯಪುಸ್ತಕಗಳನ್ನು ಬೋಧನೆಗೆ ಅಳವಡಿಸಿಕೊಂಡರೆ, ಅವುಗಳನ್ನು ನಿಯಮಿತವಾಗಿ ಮೌಲ್ಯಮಪನ ಮಾಡಬೇಕು, ಪರಿಶೋಧಿಸಬೇಕು ಮತ್ತು ನವೀಕೃತಗೊಳಿಸಬೇಕು. ಇದರಿಂದ ಅವುಗಳ ಪರಿಣಾಮಕಾರಿತ್ವ ಉಳಿದುಕೊಳ್ಳುತ್ತದೆ.

**16. ಪೂರಕ ಸಾಮಗ್ರಿಗಳನ್ನು ಸೂಚಿಸಬೇಕು**

ಸಾಧ್ಯವಾದಾಗಲೆಲ್ಲಾ ಪಠ್ಯಪುಸ್ತಕಗಳು ಪೂರಕ ವಾಚನ ಸಾಮಗ್ರಿಗಳನ್ನು ಸೂಚಿಸಬೇಕು. ಈ ಸಾಮಗ್ರಿಗಳು ಮುದ್ರಿತವಾದವುಗಳಾಗಿರಬಹುದು ಅಥವಾ ವಿದ್ಯುನ್ಮಾನ (ಡಿಜಿಟಲ್) ರೂಪಗಳದ್ದಾಗಿರಬಹುದು. ಪಠ್ಯಪುಸ್ತಕಗಳನ್ನು ವಿವಿಧ ವಿಧಗಳ ಶಾಲೆಗಳ ಪರಿಸ್ಥಿತಿಗಳಲ್ಲಿ ಮತ್ತು ವಿವಿಧ ಸಾಂಧರ್ಭಿಕ ಮಟ್ಟಗಳಲ್ಲಿನ ಶಾಲೆಗಳಲ್ಲಿ ಅಳವಡಿಕೆಯ ಸೂಕ್ತತೆಯ ದೃಷ್ಟಿಯಿಂದಲೂ ಮೌಲ್ಯಮಾಪನ ಮಾಡಬೇಕು. ವಿಸ್ತೃತ ವ್ಯಾಪ್ತಿಯ ಪೂರಕ ಸಾಮಗ್ರಿಗಳನ್ನು ಒದಗಿಸುವುದು, ಅವುಗಳ ಮುದ್ರಿತವಾದುವುಗಳಾಗಿರಲಿ ಅಥವಾ ಡಿಜಿಟಲ್ ರೂಪದವುಗಳಾಗಿರಲಿ, ಪರಾಮರ್ಶನ ಮಟ್ಟಗಳಲ್ಲಿನ, ವ್ಯತ್ಯಾಸವನ್ನು ನಿವಾರಿಸಲು ಸಹಾಯಕವಾಗುತ್ತವೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಒಂದು ಉತ್ತಮ ಸಮಾಜ ವಿಜ್ಞಾನ ಪಠ್ಯಪುಸ್ತಕದ ಲಕ್ಷಣಗಳನ್ನು ಪಟ್ಟಿ ಮಾಡಿ ಮತ್ತು ಅವುಗಳಲ್ಲಿ ನಿಮಗೆ ಸಾಧ್ಯವಾದಷ್ಟು ಲಕ್ಷಣಗಳ ಬಗ್ಗೆ ಪ್ರತಿಯೊಂದರ ಬಗ್ಗೆ ಎರಡು ವಾಕ್ಯಗಳನ್ನು ಬರೆಯಿರಿ.

**4.3.3.2. ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ವಿಶ್ಲೇಷಣೆ**

ಪ್ರತಿಯೊಬ್ಬ ಶಿಕ್ಷಕ/ಶಿಕ್ಷಕಿಯೂ ಸಮಾಜ ವಿಜ್ಞಾನದ ಒಂದು ಪಠ್ಯಪುಸ್ತಕವನ್ನು ಮೌಲ್ಯಮಾಪನ ಮಾಡುವುದು ಹೇಗೆ ಎಂದು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ. ತಮ್ಮ ಮೌಲ್ಯಮಪನ ಅವಲೋಕನಗಳನ್ನು ಪ್ರಾಧಿಕಾರಗಳಿಗೆ ತಿಳಿಸುವುದು ಸಮಾಜ ವಿಜ್ಞಾನದ ಪ್ರತಿಯೊಬ್ಬ ಶಿಕ್ಷಕ/ಶಿಕ್ಷಕಿಯ ಜವಾಬ್ದಾರಿಯಾಗುತ್ತದೆ. ಇದರಿಂದ ಅವರು ಸೂಚಿಸುವ ಅಂಶಗಳಿಗೆ ಪಠ್ಯಪುಸ್ತಕದ ಮುಂದಿನ ಪರಿಷ್ಕರಣದಲ್ಲಿ ಗಮನ ನೀಡುವುದು ಸಾಧ್ಯವಾಗುತ್ತದೆ. ಮೇಲೆ ತಿಳಿಸಿದ ಪ್ರತಿಯೊಂದು ಸಾಮಾನ್ಯ ಹಾಗೂ ವಿಶಿಷ್ಟ ಲಕ್ಷಣಕ್ಕೆ ಸಂಬಂಧಿಸಿದ ಅವಲೋಕನವನ್ನು ದಾಖಲಿಸಬೇಕು, ಬೇರೆ ಶಾಲೆಗಳ ಸಮಾಜ ವಿಜ್ಞಾನ ಶಿಕ್ಷಕರೊಂದಿಗೆ ಮತ್ತು ಪರಿಣತರೊಂದಿಗೆ ಚರ್ಚಿಸಬೇಕು ಹಾಗೂ ಈ ಚರ್ಚೆಯ ಫಲಿತಾಂಶಗಳನ್ನು ಪಠ್ಯಪುಸ್ತಕ ಪ್ರಕಟಣೆ ಪ್ರಾಧಿಕಾರಗಳಿಗೆ ತಿಳಿಸಬೇಕು.

ಸಮಾಜ ವಿಜ್ಞಾನದ ಒಂದು ಪಠ್ಯಪುಸ್ತಕವನ್ನು ವಿಶ್ಲೇಷಣೆ ಮಾಡುವುದು ಹೇಗೆ ಎನ್ನುವುದನ್ನು ನಾವು ಕಲಿತುಕೊಳ್ಳೋಣ. ಉದಾಹರಣೆಗೆ, ನೀವು 8ನೇ ತರಗತಿಯ ಸಮಾಜವಿಜ್ಞಾನದ ಪಠ್ಯಪುಸ್ತಕವನ್ನು ವಿಶ್ಲೇಷಣೆ ಮಾಡುತ್ತಿದ್ದೀರಿ ಎಂದು ಊಹಿಸಿಕೊಳ್ಳಿ

**ಶಿಕ್ಷಕ/ಶಿಕ್ಷಕಿಯ ಹೆಸರು:** ______________
**ಶಾಲೆಯ ಹೆಸರು:** ______________

**ಸೂಚನೆ:** 8ನೇ,9ನೇ ಅಥವಾ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವೊಂದನ್ನು ಆಯ್ಕೆ ಮಾಡಿಕೊಳ್ಳಿ. ಮೊದಲು ನೀವು ಆ ಪಠ್ಯಪುಸ್ತಕವನ್ನು ಚೆನ್ನಾಗಿ ಓದಿಕೊಳ್ಳುವುದು ಅಗತ್ಯವಾಗುತ್ತದೆ. ಆ ನಂತರವೇ ಆ ಪುಸ್ತಕದ ಬಗ್ಗೆ ನಿಮ್ಮ ಅವಲೋಕನವನ್ನು ದಾಖಲಿಸುವುದು (ಹೇಳುವುದು) ಸಾಧ್ಯವಾಗುತ್ತದೆ. ನೀವು ಬೋಧನೆಗೆ ಸಿದ್ಧಪಡಿಸಿಕೊಳ್ಳುವಾಗ ಅಥವಾ ಬೋಧನೆ ಮಾಡುವ ಸಮಯದಲ್ಲಿನ ನಿಮ್ಮ ಅನುಭವವನ್ನು ಪಠ್ಯಪುಸ್ತಕದ ವಿಶ್ಲೇಷಣೆಯ ಸಮಯದಲ್ಲಿ ನೆನಪು ಮಾಡಿಕೊಳ್ಳಬಹುದು.

ಈ ಕೆಳಗಿನ ಸಾಧನ (ತಾಲಿಕೆ)ವನ್ನು ಉಪಯೋಗಿಸಿ.

ಪ್ರತಿಯೊಂದು ಲಕ್ಷಣವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿ ಮತ್ತು ನಿಮ್ಮ ಬೋಧನಾನುಭವ ಮತ್ತು ಅವಲೋಕನದ ಪ್ರಕಾರ ಸೂಕ್ತ ಕಾಲಂನಲ್ಲಿ (☑) ಈ ಗುರುತನ್ನು ಮಾಡಿ. 'ಅತ್ಯಂತ ತೃಪ್ತಿಕರ' ಮತ್ತು 'ತೃಪ್ತಿಕರ', 'ತೃಪ್ತಿಕರವಾಗಿಲ್ಲ' ಎನ್ನುವ ಕಾಲಂಗಳ 'ಮೌಲ್ಯ' ಗಳಿಗೆ ಹಾಗೆ ಗುರುತು ಮಾಡಲು ಕಾರಣಗಳೇನು ಎಂದು ಸಂಕ್ಷಿಪ್ತವಾಗಿ ಬರೆಯಿರಿ.

| ಕ್ರ. ಸಂ. | ಲಕ್ಷಣಗಳು | ಅತ್ಯಂತ ಹೆಚ್ಚು ತೃಪ್ತಿಕರ | ತೃಪ್ತಿಕರ | ತೃಪ್ತಿಕರವಾಗಿಲ್ಲ | ಕಾರಣಗಳು |
|---|---|---|---|---|---|
| 1 | ಶಿಶುಕೇಂದ್ರಿತ ಉದಾಹರಣೆ | | | ☑ | ಪರಿಕಲ್ಪನೆಗಳನ್ನು ವಿವರಿಸಲು ಬಳಸಿರುವ ಹಲವಾರು ಪದಗಳು ವಿದ್ಯಾರ್ಥಿಗಳ ಅರಿವಿಗೆ ಮೀರಿದ್ದಾಗಿವೆ. ಭಾಷೆಯ ವಿಷಯದಲ್ಲಿ ಇನ್ನೂ ಸರಳತೆಯ ಅಗತ್ಯವಿದೆ. |
| 2 | ಉತ್ತಮ ಮುದ್ರಣ ಮತ್ತು ಒಳ್ಳೆಯ ಹೊರನೋಟ | | | | |
| 3 | ಮನೋವೈಜ್ಞಾನಿಕ ಮತ್ತು ವೈಜ್ಞಾನಿಕ | | | | |
| 4 | ವಿಷಯ ವಸ್ತು ಸೂಚಿ ಮತ್ತು ಗ್ರಂಥಸೂಚಿ | | | | |
| 5 | ನ್ಯಾಯಯುತ ಬೆಲೆ | | | | |
| 6 | ಘಟಕದ ಅಂತ್ಯದಲ್ಲಿ ಪ್ರಶ್ನೆಗಳು ಮತ್ತು ನಿಯೋಜಿತ ಕಾರ್ಯಗಳು | | | | |

| | | | | | |
|---|---|---|---|---|---|
| 7 | ಕಾರಣ–ಪರಿಣಾಮ ಸಂಬಂಧ ಸ್ಪಷ್ಟತೆ | | | | |
| 8 | ಚೆನ್ನಾಗಿ ಚಿತ್ರಗಳಿಂದ ಕೂಡಿರಬೇಕು | | | | |
| 9 | ಪಕ್ಷಪಾತದಿಂದ ಮುಕ್ತವಾಗಿರಬೇಕು | | | | |
| 10 | ಅಂತರರಾಷ್ಟ್ರೀಯ ಸ್ಫೂರ್ತಿಯನ್ನು ಬೆಳೆಸಬೇಕು | | | | |
| 11 | ಆಯ್ಕೆಯ ಅಂಶ | | | | |
| 12 | ತಥ್ಯಾಂಶಗಳ ವ್ಯಾಪ್ತಿ | | | | |
| 13 | ವೈವಿಧ್ಯತೆಯ ಪ್ರಶಂಸೆಗೆ ಅವಕಾಶ | | | | |
| 14 | ವ್ಯಾಪಕವಾಗಿದೆ | | | | |
| 15 | ಐತಿಹಾಸಿಕ ಚಿಂತನೆಯನ್ನು ಬೆಳೆಸಬೇಕು | | | | |
| 16 | ಪುನರಾವಲೋಕನ ಮತ್ತು ಮೌಲ್ಯಮಾಪನ | | | | |
| 17 | ಪೂರಕ ಸಾಮಗ್ರಿಗಳ ಬಗ್ಗೆ ಸಲಹೆಸೂಚನೆಗಳು | | | | |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ನೀವು ಉಪಯೋಗಿಸಿದ ಸಾಧನ(ತಾಲಿಕೆ)ವನ್ನು ನಿಮ್ಮ ಶಾಲೆಯಲ್ಲಿ ಸಮಾಜ ವಿಜ್ಞಾನವನ್ನು ಬೋಧಿಸುತ್ತಿರುವ ಮತ್ತೊಬ್ಬ ಶಿಕ್ಷಕ/ಶಿಕ್ಷಕಿಗೆ ಕೊಟ್ಟು ನೀವು ಮೌಲ್ಯಮಾಪನ ಮಾಡಿದ ಪಠ್ಯಪುಸ್ತಕವನ್ನು ಮೌಲ್ಯಮಾಪನ ಮಾಡುವಂತೆ ಮತ್ತು ಅವರ ಅವಲೋಕನವನ್ನು ದಾಖಲಿಸುವಂತೆ ಅವರನ್ನು ಕೋರಿಕೊಳ್ಳಿ. ನಿಮ್ಮ ಮತ್ತು ಆತನ/ಆಕೆಯ ಮೌಲ್ಯಮಾಪನವನ್ನು ಪರಸ್ಪರ ಹೋಲಿಸಿ ಸಮಾನತೆ ಮತ್ತು ವ್ಯತ್ಯಾಸಗಳ ಬಗ್ಗೆ ಚರ್ಚಿಸಿ.

**4.3.4. ಸಾರಾಂಶಿಸೋಣ**

1. ಎಲ್ಲಾ ಪಠ್ಯಪುಸ್ತಕಗಳಿಗೂ ಅನ್ವಯವಾಗುವ ಕೆಲವು ಸಾಮಾನ್ಯ ಲಕ್ಷಣಗಳಿರುತ್ತವೆ. ಆದರೆ, ಕೆಲವು ಲಕ್ಷಣಗಳು ಪ್ರತಿಯೊಂದು ವಿಷಯದ ಪಠ್ಯಪುಸ್ತಕಕ್ಕೂ ವಿಶಿಷ್ಟವಾದುವುಗಳಾಗಿರುತ್ತವೆ.

2. ಸಮಾಜ ವಿಜ್ಞಾನದ ಒಳ್ಳೆಯ ಪಠ್ಯಪುಸ್ತಕ ಸಾಮಾನ್ಯ ಮತ್ತು ವಿಶಿಷ್ಟ ಲಕ್ಷಣಗಳೆರಡನ್ನೂ ಹೊಂದಿರಬೇಕು. ಶಿಶು–ಕೇಂದ್ರಿತ, ಒಳ್ಳೆಯ ಮುದ್ರಣ ಹಾಗೂ ಹೊರನೋಟ (ಉಜ್ಞಾ–ಣಾ) ಮನೋವೈಜ್ಞಾನಿಕ ಮತ್ತು ವಿಜ್ಞಾನದ ತತ್ವಗಳ ಅನುಸರಣೆ, ವಿಷಯವಸ್ತು ಸೂಚಿ ಮತ್ತು ಗ್ರಂಥಸೂಚಿಯನ್ನು ಕೊಡುವುದು, ಸೂಕ್ತವಾದ ಬೆಲೆಯನ್ನು ಇಡುವುದು, ಪ್ರತಿಯೊಂದು ಅಧ್ಯಾಯದ ಅಂತ್ಯದಲ್ಲಿ ಪ್ರಶ್ನೆಗಳ ಮತ್ತು ಅಭ್ಯಾಸಗಳ (ನಿಯೋಜಿತ ಕಾರ್ಯಗಳ ಪಟ್ಟಿಯನ್ನು ಕೊಡುವುದು) ಮತ್ತು ಪ್ರತಿ ಅಧ್ಯಾಯದ (ಘಟಕದ) ಕೊನೆಯಲ್ಲಿ ಪ್ರಾಯೋಗಿಕ ಮತ್ತು ಪ್ರಾಯೋಜನಾ ಕಾರ್ಯಗಳನ್ನು ಕೊಡುವುದು– ಇವು ಒಂದು ಒಳ್ಳೆಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಸಾಮಾನ್ಯ ಲಕ್ಷಣಗಳಾಗಿರುತ್ತವೆ.

3. ಘಟನೆಗಳ (ಚಾರಿತ್ರಿಕ) ನಡುವಣ ಕಾರಣ–ಪರಿಣಾಮ ಸಂಬಂಧವನ್ನು ಸ್ಪಷ್ಟಗೊಳಿಸುವುದು, ಒಳ್ಳೆಯ ಚಿತ್ರಗಳನ್ನು, ನಕ್ಷೆಗಳನ್ನು ಕೊಡುವುದು, ಪಕ್ಷಪಾತದಿಂದ ಮುಕ್ತವಾಗಿರುವುದು, ಅಂತರರಾಷ್ಟ್ರೀಯ ಸ್ಫೂರ್ತಿಯನ್ನು ಮತ್ತು ವಿಶ್ವಭ್ರಾತೃತ್ವವನ್ನು ಬೆಳೆಸುವುದು, ಆಯ್ಕೆಯ

ಅಂಶವಿರುವುದು, ತಥ್ಯಾತ್ಮಕ ವ್ಯಾಪಕತೆ ಇರುವುದು, ಸಾಮಾಜಿಕ ವೈವಿಧ್ಯತೆಯ ಪ್ರಶಂಸೆಗೆ ಅವಕಾಶ ಕಲ್ಪಿಸಿರುವುದು, ಐತಿಹಾಸಿಕ ಚಿಂತನೆಯನ್ನು ವಿಕಾಸಗೊಳಿಸುವುದು, ಆಗಾಗ್ಗೆ (ಕೆಲವು ವರ್ಷಗಳ ನಂತರ)ಪುಸ್ತಕವನ್ನು ಪುನರ್ವಿಮರ್ಶಿಸಿ ಮೌಲ್ಯಮಾಪನ ಮಾಡುವುದು, ಪೂರಕ ಪಠಣ ಸಾಮಗ್ರಿಗಳನ್ನು ಸೂಚಿಸುವುದು ಮತ್ತು ತಥ್ಯಾಂಶಗಳ ಪ್ರಸ್ತುತೀಕರಣದಲ್ಲಿ ವ್ಯಾಪಕತೆಯಿರುವುದು–ಇವು ಒಂದು ಒಳ್ಳೆಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ವಿಶಿಷ್ಟ ಲಕ್ಷಣಗಳಾಗಿವೆ.

### 4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಈ ಘಟಕದ ಭಾಗ 4.5.3.1 ನ್ನು ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಈ ಘಟಕದ ವಿಭಾಗ 4.5.3.2 ನ್ನು ನೋಡಿ.

### 4.3.6. ಘಟಕಾಂತ್ಯ ಅಭ್ಯಾಸಗಳು

ನಿಮ್ಮ ಆಯ್ಕೆಯ ಒಂದು ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ತೆಗೆದುಕೊಂಡು ಅದನ್ನು ಆಳವಾಗಿ ಅಭ್ಯಾಸ ಮಾಡಿ ಮತ್ತು ಈ ಘಟಕದಲ್ಲಿ ನೀವು ಅಧ್ಯಯನ ಮಾಡಿರುವ ಒಳ್ಳೆಯ ಪಠ್ಯಪುಸ್ತಕದ ಸಾಮನ್ಯ ಮತ್ತು ವಿಶಿಷ್ಟ ಲಕ್ಷಣಗಳ ದೃಷ್ಟಿಯಿಂದ ಆ ಪುಸ್ತಕದ ಗುಣಮಟ್ಟವನ್ನು ವಿಶ್ಲೇಷಣೆ ಮಾಡಿ.

### 4.3.7. ಪರಾಮರ್ಶನ ಸೂಚಿ


1. https://www.historians.org/jobs-and-professional-development/statements-standards-and-guidelines-of-the-discipline/guidelines-for-the-preparation-evaluation-and-selection-of-history-textbooks
2. https://www.slideshare.net/vineethamolr/vineetha-1-38608437
3. https://www.historydiscussion.net/history/a-good-text-book-on-history-qualities-and-characteristics/497

## ಬ್ಲಾಕ್4 : ಸಮಾಜ ವಿಜ್ಞಾನಗಳ ಪಠ್ಯಪುಸ್ತಕ ಮತ್ತು ಸಮಾಜ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಾಪನ

## ಘಟಕ 4 : ಸಮಾಜ ವಿಜ್ಞಾನ ಸಾಧನಾ ಮಾಪನಕ್ಕಾಗಿ ಉಪಕರಣಗಳು

**ಘಟಕದ ರಚನೆ**

4.4.1. ಕಲಿಕಾ ಉದ್ದೇಶಗಳು
4.4.2. ಪೀಠಿಕೆ
4.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.4.3.1. ಮಾಪನದ ಪರಿಕಲ್ಪನೆ, ನಿಯಮಗಳು ಮತ್ತು ಕಾರ್ಯೋದ್ದೇಶಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
4.4.3.2. ಮಾಪನದ ಉಪಕರಣಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
4.4.4. ಸಾರಾಂಶಿಸೋಣ
4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
4.4.6. ಘಟಕಾಂತ್ಯ ಅಭ್ಯಾಸಗಳು
4.4.7. ಪರಾಮರ್ಶನ ಸೂಚಿ

### 4.4.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಬೋಧನೆ ಕಲಿಕೆಯ ಪ್ರಕ್ರಿಯೆಯಲ್ಲಿ ಪಠ್ಯಕ್ರಮಗಳ ಮಾಪನದ ಪರಿಕಲ್ಪನೆ ಮತ್ತು ಅದರ ಪ್ರಾಮುಖ್ಯತೆಗಳನ್ನು ವಿವರಿಸುತ್ತಾರೆ;
- ಉತ್ತಮ ಮಾಪನ ಉಪಕರಣದ ಗುಣಲಕ್ಷಣಗಳನ್ನು ಮತ್ತು ನಿರ್ಣಾಯಕ ಅಂಶಗಳನ್ನು ವಿವರಿಸುತ್ತಾರೆ;
- ಸಮಾಜ ವಿಜ್ಞಾನ ಕಲಿಕೆಯ ಮಾಪನದಲ್ಲಿ ಬರುವ ಹಂತಗಳನ್ನು ಉಲ್ಲೇಖಿಸಿ; ಮತ್ತು
- ಸಾಮಾಜಿಕ ಕ್ಷೇತ್ರದಲ್ಲಿ ಕಲಿಕಾರ್ಥಿಯ ಸಾಧನೆಯನ್ನು ಪರಿಣಾಮಕಾರಿಯಾಗಿ ಮಾಪನ ಮಾಡುತ್ತಾರೆ.

### 4.4.2. ಪೀಠಿಕೆ

ಮಾಪನವು ಬೋದನೆ – ಕಲಿಕೆಯ ಪ್ರಕ್ರಿಯೆಯ ಒಂದು ಮುಖ್ಯ ಘಟಕವೆಂದೂ ಬೋಧನೆಯ ಅವಿಭಾಜ್ಯ ಅಂಗವೆಂದೂ ಈ ಹಿಂದಿನ ಘಟಕದ ಅಧ್ಯಯನದಿಂದ ಅರ್ಥಮಾಡಿಕೊಂಡಿದ್ದೇವೆ. ಇದು ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ನೆರವಾಗುತ್ತದೆ. ಮಾಪನವು ವಿದ್ಯಾರ್ಥಿಗಳಿಗೆ ಅಭಿಪ್ರೇರಣೆಯನ್ನು ನೀಡುತ್ತದೆ. ಶಿಕ್ಷಣದ ಗುರಿ ಸಾಧಿತವಾಯಿತೋ ಅಥವಾ ಇಲ್ಲವೋ ಎಂದೂ ನಿಶ್ಚಯಿಸುತ್ತದೆ. ಶ್ರೇಣಿಗಳು, ನಿಯೋಜನೆ ಬಡ್ತಿ, ಬೋಧನೆಯ ಅಗತ್ಯಗಳು, ಪಠ್ಯಕ್ರಮ ಮತ್ತು ಕೆಲವು ಸಂದರ್ಭಗಳಲ್ಲಿ ಧನಸಹಾಯ ಇವೆಲ್ಲವುಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಮಾಪನ ಪ್ರಭಾವಿಸುತ್ತದೆ. ಮಾಪನವು ಕೆಲವು ದಿಟ್ಟ ಪ್ರಶ್ನೆಗಳನ್ನು ಕೇಳುವಂತೆ ನಮ್ಮನ್ನು ಪ್ರೇರೇಪಿಸುತ್ತದೆ; "ನಾವು ಏನನ್ನು ಬೋಧಿಸುತ್ತಿದ್ದೇವೆ ಎಂದು ಕೊಂಡಿದ್ದೇವೆಯೋ ಅದನ್ನೇ ಬೋಧಿಸುತ್ತಿದ್ದೇವೆಯೇ?" "ವಿದ್ಯಾರ್ಥಿಗಳು ಏನು ಕಲಿಯಬೇಕೋ ಅದನ್ನೇ ಕಲಿಯುತ್ತಿದ್ದಾರೆಯೇ?" "ವಿಷಯವನ್ನು ಇನ್ನೂ ಉತ್ತಮವಾಗಿ ಬೋಧಿಸಿ ತನ್ಮೂಲಕ ಕಲಿಕೆಯನ್ನು ಉತ್ತಮವಾಗಿಸಲು ಮಾರ್ಗವಿದೆಯೇ?. ಮಾಪನದ ಪ್ರಕ್ರಿಯೆ ಕೈಗೊಳ್ಳುವಾಗ ಮೂರು ಪ್ರಮುಖ ಪ್ರಶ್ನೆಗಳನ್ನು ಉತ್ತರಿಸಬೇಕಾಗುತ್ತದೆ. ಅವುಗಳೆಂದರೆ ಮಾಪನ ಏನು, ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳು. ಹೇಗೆ ಎಂಬ ಪ್ರಶ್ನೆ ಬಹಳ ಸವಾಲನ್ನೊಡ್ಡುವಂಥದ್ದಾಗಿದ್ದು ಮೂಲಭೂತ ಆಧಾರ ಮಾಪನಕ್ಕೆ ಬೇಕಾಗುತ್ತದೆ. ಇದನ್ನು ನಾವು ಸ್ಥೂಲವಾಗಿ ಮಾಪನದ ಉಪಕರಣ ಎನ್ನಬಹುದು. ಮಾಪಕನಕ್ಕೆ ಅಗತ್ಯವಿರುವ

ಉಪಕರಣಗಳ ಬಗ್ಗೆ ತಿಳಿಯಬೇಕಾದರೆ ಮಾಪನದ ಹಿಂದಿರುವ ಪರಿಕಲ್ಪನೆ, ನಿಯಮಗಳು ಮತ್ತು ಕಾರ್ಯಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈ ಘಟಕದಲ್ಲಿ ಸಮಾಜ ವಿಜ್ಞಾನವನ್ನು ವಿಶೇಷವಾಗಿ ಗಮನದಲ್ಲಿರಿಸಿ ಮಾಪನದ ಉಪಕರಣಗಳ ವಿವಿಧ ಮುಖಗಳನ್ನು ಅಧ್ಯಯನ ಮಾಡೋಣ.

**4.4.3. ಕಲಿಕಾ ಅಂಶಗಳು ಕಲಿಕಾ ಚಟುವಟಿಕೆಗಳು**

ಕಳೆದ ಹಲವಾರು ವರ್ಷಗಳಲ್ಲಿ, ಸಮಾಜ ಅಧ್ಯಯನಗಳು ಹೆಚ್ಚು ಪ್ರಮುಖವಾಗಿ ಕಾಣುವ ಶಾಲಾ ಪಠ್ಯವಿಷಯವಾಗಿದೆ. ಸಮಾಜ ಅಧ್ಯಯನಗಳ ಕಲಿಕೆಯ ಪರಿಕಲ್ಪನೆ "ಮಾಡುವುದು ಮತ್ತು ತಿಳಿಯುವುದು" ಗಳಿಂದ ಪ್ರಾರಂಭಗೊಂಡು 'ಅನುಭವಕ್ಕೆ ತಂದುಕೊಳ್ಳುವುದು ಮತ್ತು ಅರ್ಥವನ್ನು ಕಂಡುಹಿಡಿಯುವುದು' ರವರಗೆ ವಿಕಸಿತಗೊಂಡಿದೆ.. ಗುರಿಯತ್ತ ಅಭಿಮುಖವಾಗಿರುವ ಈ ಉಪಕ್ರಮವು ಕಲಿಕಾರ್ಥಿಯ ಫಲಿತಗಳ ಮೇಲೆ ಒತ್ತನ್ನು ನೀಡುತ್ತವೆ. ಫಲಿತಗಳೆಂದರೆ ಜ್ಞಾನ, ಕೌಶಲಗಳು, ಮೌಲ್ಯಗಳು ಮತ್ತು ವಿದ್ಯಾರ್ಥಿಗಳಲ್ಲಿ ಶಿಕ್ಷಕರು ಬೆಳೆಸಬೇಕೆಂದು ಇಚ್ಚಿಸುವ ಕ್ರಿಯಾತ್ಮಕತೆಗೆ ಒಲವು. ಆದರ್ಶವಾಗಿ ಹೇಳುವುದಾದರೆ ಈ ಗುರಿಗಳು ಪಠ್ಯಕ್ರಮ ಯೋಜನೆ ಮತ್ತು ಅನ್ವಯನ ನಿರ್ಧಾರಗಳಿಗೆ ಮಾರ್ಗದರ್ಶಿಗಳಾಗುತ್ತವೆ. ಇದರಿಂದ ಈ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಘಟಕವೂ ಒಳಗೊಳ್ಳಲು ಸಾಧ್ಯವಾಗುತ್ತದೆ.

ವಿದ್ಯಾರ್ಥಿಗಳ ಪ್ರಗತಿಯನ್ನು ದಾಖಲಿಸಲು ಸೂಕ್ತವಾದ ವಿಧಾನಗಳನ್ನು ವಿನ್ಯಾಸಗೊಳಿಸಿ ಜಾರಿಗೊಳಿಸುವುದು, ಹಿಮ್ಮಾಹಿತಿ ಒದಗಿಸುವುದು ಎಲ್ಲ ಶಿಕ್ಷಕರಿಗೂ ಇಂದು ಸಂಕೀರ್ಣ ಕಾರ್ಯವಾಗಿದೆ. ಆದರೆ ಸಮಾಜ ಅಧ್ಯಯನಗಳು ಮಾಪನ ಮತ್ತು ಮೌಲ್ಯಮಾಪನಗಳನ್ನು ಕುರಿತಂತೆ ಅಪೂರ್ವ ಸವಾಲುಗಳನ್ನು ಒಡ್ಡುತ್ತದೆ. ಸಮಾಜ ಅಧ್ಯಯನಗಳ ಅಧ್ಯಯನಕ್ಕೆ ಅನೇಕ ವಿಧದ ಚಿಂತನೆಯ ದಾರಿ ಮತ್ತು ತಿಳಿಯುವ ಮಾರ್ಗಗಳಿವೆ. ಇತಿಹಾಸದ ನಿರೂಪಣೆಯಿಂದ ಹಿಡಿದು ಆರ್ಥಿಕತೆಯ ಗಣತೀಯ ಮತ್ತು ಸಾಂಖಿಕ ತರ್ಕ, ಭೂಗೋಳಶಾಸ್ತ್ರದ ದೃಶ್ಯ ಮತ್ತು ಚಿತ್ರಗಳ ಫಲಕಗಳು ಹಾಗೂ ಸಾರ್ವಜನಿಕ ವಿವಾದಾಂಶಗಳ ಮತ್ತು ವರ್ತಮಾನ ಸಂಗತಿಗಳ ಅಧ್ಯಯನದ ಹಿಂದಿರುವ ವಿವಿಧ ದೃಷ್ಟಿಕೋನಗಳು, ನಂಬಿಕೆಗಳು, ಆಳವಾದ ಗ್ರಹಿಕೆ, ಈ ಪಠ್ಯವಿಷಯವನ್ನು ಸಂಕೀರ್ಣವಾಗಿಸಿವೆ. ಸಮಾಜ ವಿಜ್ಞಾನ ವಿಷಯದ ಈ ಅಂಶಗಳು ಕಲಿಕೆ, ಬೋಧನೆ ಮತ್ತು ಮಾಪನ ಈ ಎಲ್ಲವನ್ನೂ ಸಂಕೀರ್ಣವಾಗಿಸಿವೆ.

ಇತರ ಪಠ್ಯವಿಷಯಗಳಿಗೆ ಹೋಲಿಸಿದಾಗ ವಿಮರ್ಶಾತ್ಮಕ ಚಿಂತನೆ, ಸಾಮಾಜಿಕ ಜವಾಬ್ದಾರಿ ಮತ್ತು ಮಾಹಿತಿ ಬೆಂಬಲಿತ ನಿರ್ಧಾರ ಕೈಗೊಳ್ಳುವಿಕೆ ಮುಂತಾದ ಸಮಾಜ ಅಧ್ಯಯನಗಳ ಪ್ರಮುಖ ಫಲಿತಗಳನ್ನು ವ್ಯಾಖ್ಯಾನಿಸುವುದು ಕಷ್ಟಕರ. ಅಷ್ಟೆ ಅಲ್ಲದೆ, ಜವಾಬ್ದಾರಿಯುತ ಪೌರತ್ವದ ಬೆಳವಣಿಗೆಯಂತಹ ಕೆಲವು ಸಂಕೀರ್ಣ ಗುರಿಗಳು ವಿದ್ಯಾರ್ಥಿಗಳು ಶಾಲೆ ಶಿಕ್ಷಣ ಮುಗಿಸಿ ಹೊರಹೋಗಿ ಮಾಹಿತಿ ಬೆಂಬಲಿತ ಮತದಾನ, ಸಾಮಾಜಿಕ ಕಾಳಜಿ ಹಾಗೂ ಇನ್ನಿತರ ಸಾರ್ವಜನಿಕ ಸಹಭಾಗಿತ್ವದ ಚಟುವಟಿಕೆಗಳಲ್ಲಿ ತೊಡಗಿಕೊಂಡ ನಂತರವೇ ಬೆಳಕಿಗೆ ಬರುತ್ತವೆ. ಇಂತಹ ವೈವಿಧ್ಯಮಯ ಚರ್ಚಾಸ್ಪದ ಫಲಿತಗಳ ಪರಿಣಾಮವಾಗಿ ಸಮಾಜ ಅಧ್ಯಯನದ ಕ್ಷೇತ್ರ ಶ್ರೇಷ್ಟವಾದ ಮಾಪನ ಮತ್ತು ಮೌಲ್ಯಮಾಪನ ಎಂದರೆ ಯಾವುದು ಎಂಬ ವಿಷಯವು ಒಳಗೊಂಡಂತೆ ಅದರ ಪ್ರಮುಖ ಪರಿಕಲ್ಪನೆಗಳನ್ನು ಮತ್ತು ಉದ್ದೇಶಗಳನ್ನು ಕುರಿತು ಒಂದು ಸಹಮತಕ್ಕೆ ಬರುವಲ್ಲಿ ಅಧಿಕ ತೊಡಕುಗಳನ್ನು ಎದುರಿಸುತ್ತಾ ಬಂದಿದೆ. ಇದಕ್ಕೆ ಕಾರಣ ಸಮಾಜ ಅಧ್ಯಯನಗಳು ವಾಸ್ತವಿಕ ಪ್ರಪಂಚದ ಆಗುಹೋಗುಗಳನ್ನು ಕುರಿತದ್ದಾಗಿದೆಯಾದ್ದರಿಂದ, ಈ ಕ್ಷೇತ್ರ ಅನೇಕ ದಿಕ್ಕುಗಳಿಂದ ಒತ್ತಡಕ್ಕೆ ಒಳಗಾಗುತ್ತಲೇ ಬಂದಿದೆ. ಈ ಸಂಗತಿ ಸಮಾಜ ವಿಜ್ಞಾನಗಳ ಮಾಪನವನ್ನು ಒಂದು ದೊಡ್ಡ ಸವಾಲನ್ನಾಗಿಸಿದೆ.

#### 4.4.3.1. ಮಾಪನದ ಪರಿಕಲ್ಪನೆ, ನಿಯಮಗಳು ಮತ್ತು ಕಾರ್ಯೋದ್ದೇಶಗಳು

ಮಾಪನ ಎನ್ನುವುದಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಅಸೆಸ್‌ಮೆಂಟ್ (Assessment) ಎನ್ನುತ್ತಾರೆ. 'Assess' ಎಂಬ ಪದ ಲ್ಯಾಟಿನ್ ಭಾಷೆಯ ಧಾತುವಾದ 'Assidere' ಎಂಬುದರಿಂದ ಬಂದಿದೆ ಎಂದರೆ **'ಜೊತೆಗೆ ಕುಳಿತುಕೊಳ್ಳುವುದು'** ಎಂದರ್ಥ. Assessment ಅಥವಾ ಮಾಪನ ಮಾಡುವಾಗ ನಾವು ಕಲಿಕಾರ್ಥಿಯ ಜೊತೆಗೆ ಕುಳಿತುಕೊಳ್ಳಬೇಕು. ಅಂದರೆ ನಾವು ವಿದ್ಯಾರ್ಥಿಯೊಂದಿಗೆ ಮತ್ತು ವಿದ್ಯಾರ್ಥಿಗಾಗಿ ಮಾಡುವುದನ್ನು ಸೂಚಿಸುತ್ತದೆ. ವಿದ್ಯಾರ್ಥಿಗೆ ಮಾಡುವುದನ್ನು ಸೂಚಿಸುವುದಿಲ್ಲ

ಮಾಪನ ಎಂದರೆ ಸಾಮರ್ಥ್ಯವನ್ನು ಸಾಧಿಸಲಾಗಿದೆಯೇ ಎಂಬುದರ ಕುರಿತು ಮತ್ತು ಒಬ್ಬ ವಿದ್ಯಾರ್ಥಿ ತನ್ನ ಕೆಲಸದ ಸ್ಥಳದಲ್ಲಿ ಅಗತ್ಯವಿರುವ ಮಾನದಂಡಗಳಿಗೆ ತಕ್ಕಂತೆ ಕಾರ್ಯಮಾಡಬಲ್ಲ ಎಂದು ಖಾತ್ರಿಪಡಿಸಿಕೊಳ್ಳಲು ಪುರಾವೆಗಳ ಸಂಗ್ರಹಣೆ ಮಾಡುವ ಮತ್ತು ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಮಾಪನ ವ್ಯವಸ್ಥೆಯು ದಾಖಲಿತ ನೀತಿ ಮತ್ತು ಕಾರ್ಯವಿಧಾನಗಳ ನ್ನೊಳಗೊಂಡ ಚಟುವಟಿಕೆಯಾಗಿದ್ದು, ಇದರಲ್ಲಿ ಮಾಪನವು ಸಮಂಜಸ ಆಗಿದೆ ಎಂದೂ ಮಾಪನದ ಆಧಾರ ತತ್ವಗಳ ಮತ್ತು ಸಾಕ್ಷ್ಯಾಧಾರಗಳ ನಿಯಮಗಳ ಮೇಲೆ ಆಧಾರಗೊಂಡಿದೆಯೆಂದು ಖಚಿತಪಡಿಸಿಕೊಳ್ಳುವ ಮಾಪನದ ಸಾಮಾಗ್ರಿಗಳನ್ನು ಮತ್ತು ಉಪಕರಣಗಳನ್ನು ಒಳಗೊಳ್ಳುತ್ತದೆ. ವಿದ್ಯಾರ್ಥಿಗಳ ಕಲಿಕೆಯನ್ನು ಮತ್ತು ಬೋಧಕನ ಬೋಧನೆಯನ್ನು ಸುಧಾರಿಸುವುದು ಮಾಪನದ ಮೂಲಭೂತ ಉದ್ದೇಶ. ಇದರಿಂದ ಮಾಪನ ಒದಗಿಸುವ ಮಾಹಿತಿಗೆ ಶಿಕ್ಷಕ ವಿದ್ಯಾರ್ಥಿಗಳಿರ್ವರೂ ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ.

ಮಾಪನ ಔಪಚಾರಿಕ ಅಥವಾ ಅನೌಪಚಾರಿಕ ಆಗಿರಬಹುದು. ಸಾಧಾರಣವಾಗಿ ಅನೌಪಚಾರಿಕ ಮಾಪನವು ನಿರ್ದಿಷ್ಟ ಪಠ್ಯವಿಷಯದಲ್ಲಿ ವಿದ್ಯಾರ್ಥಿಯ ಸಾಧನೆಯ ಬಗ್ಗೆ ಅಷ್ಟೇನೂ ವ್ಯವಸ್ಥಿತವಲ್ಲದ ಅವಲೋಕನದ ನೆರವಿನಿಂದ ಶಿಕ್ಷಕ ಕೈಗೊಳ್ಳುವ ತಿರ್ಮಾನಗಳಾಗಿರುತ್ತವೆ. ಅನೌಪಚಾರಿಕ ಮಾಪನವು ಪರಿಶೋಧನೆ, ಪ್ರಗತಿ ಮೇಲ್ವಿಚಾರಣೆ, ಕಾರಣ ನಿರೂಪಣೆ ಅಥವಾ ಮೌಲ್ಯಮಾಪನ ಇವುಗಳನ್ನು ಮಾಡುವುದರ ಮೂಲಕ ವಿದ್ಯಾರ್ಥಿಗಳ ಸಾಧನೆಯ ವಸ್ತುನಿಷ್ಠ ಮಾಪನ ಮಾಡಲು ಸಮರ್ಥವಾಗುತ್ತದೆ. ಔಪಚಾರಿಕ ಮತ್ತು ಅನೌಪಚಾರಿಕ ಮಾಪನಗಳೆರಡೂ ಮುಖ್ಯವೇ, ಆದರೆ ಕೇವಲ ಔಪಚಾರಿಕ ಮಾಪನವು ಸಂಶೋಧನೆ ಅಥವಾ ಸಾಕ್ಷ್ಯಾಧಾರಗಳನ್ನು ಆಧರಿಸಿದುದು. ಶಿಕ್ಷಕರು ವಿದ್ಯಾರ್ಥಿಗಳ ಕಲಿಕೆಯನ್ನು ವರ್ಧಿಸಲು, ಕಾರ್ಯನೀತಿಯನ್ನು ಕುರಿತು ಮಾಹಿತಿ ಬೆಂಬಲಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಮಾಪನ ಉಪಕರಣಗಳನ್ನು ಉಪಯೋಗಿಸುತ್ತಾರೆ.

ಮಾಪನವು ಪಠ್ಯಕ್ರಮ ಮತ್ತು ಬೋಧನೆಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಅಗತ್ಯವಾದ ಸಮರ್ಥ ನಿಹಿತಾರ್ಥಗಳನ್ನುಳ್ಳ ಹಿಮ್ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು. ಕಾರ್ಯಕ್ರಮದ ಎಲ್ಲಾ ಅಂಶಗಳು – ಅದರ ಅಂತರ್ವಸ್ತು, ಅದರ ಬೋಧನಾ ವಿಧಾನಗಳು, ಅದರ ಚಟುವಟಿಕೆಗಳು ಮತ್ತು ನಿಯೋಜಿತ ಕಾರ್ಯಗಳು ಹಾಗೂ ಅದರ ಮಾಪನ ಪದ್ಧತಿಗಳು – ಇವೆಲ್ಲವೂ ಕಾರ್ಯಕ್ರಮದ ಗುರಿಗಳತ್ತ ನಿರ್ದೇಶಿತಗೊಂಡಿರಬೇಕು. ಆದಾಗ್ಯೂ ಘಟಕಗಳನ್ನೇ ನಾವು ಗುರಿಗಳೆಂದು ಪರಿಗಣಿಸತೊಡಗಿದರೆ ಕಾರ್ಯಕ್ರಮದ ಘಟಕಗಳ ನಡುವಣ ಆದರ್ಶ ಸಂಬಂಧ ಮುರಿದುಬೀಳುವುದು. ಸಾಮಾನ್ಯವಾಗಿ ಪ್ರಮುಖ ನಿರ್ಧಾರಗಳಿಗೆ ಆಧಾರವಾಗುವ ಪರೀಕ್ಷಾ ಪದ್ಧತಿಗಳು ಬಳಕೆಗೆ ಬಂದಾಗ ಮಾಪನದ ಘಟಕಗಳಿಗೆ ಈ ಪರಿಸ್ಥಿತಿ ಒದಗಿಬರುತ್ತದೆ. ಸೈದ್ಧಾಂತಿಕವಾಗಿ, ಪಠ್ಯಕ್ರಮಕ್ಕೆ ಪ್ರೇರಕವಾಗಿ ಮಾಪನ (ಗುರಿಗಳ ಬದಲಾಗಿ) ಕ್ರಮಗಳನ್ನು ಪರಿಗಣಿಸುವುದು ಒಳ್ಳೆಯ ವಿಚಾರವಲ್ಲ.

ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಕುರಿತಂತೆ ಸಲಹೆ ನೀಡುವ ಸಲಹಾ ಸಮಿತಿಯು ಮಾಪನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಳಗಿನ ಮಾರ್ಗದರ್ಶಿಯನ್ನು ನೀಡಿದೆ:

- ಮೌಲ್ಯಮಾಪನ ಉಪಕರಣಗಳು ಪಠ್ಯಕ್ರಮದ ಗುರಿ ಮತ್ತು ಉದ್ದೇಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಪಠ್ಯಕ್ರಮ ಮತ್ತು ಬೋಧನೆಯ ಸುಧಾರಣೆಗಾಗಿ ಅವು ಬಳಕೆಯಾಗಬೇಕು. ಪಠ್ಯ ವಿಷಯದ ಕಲಿಕೆ ಮತ್ತು ಕಲಿತ ಪ್ರಕ್ರಿಯೆ – ಇವೆರಡನ್ನೂ ಮಾಪನ ಮಾಡಬೇಕು.
- ಬೋಧನೆ ಮತ್ತು ಕಲಿಕೆಯನ್ನು ಸುಧಾರಿಸುವುದಕ್ಕೆ ಮಾತ್ರವೇ ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯ ಮಾಪನವನ್ನು ಉಪಯೋಗಿಸಬೇಕು; ಈ ಮಾಪನವು ಜ್ಞಾನ, ಕೌಶಲಗಳು ಮತ್ತು ಅಭಿವ್ಯಕ್ತಿಗಳನ್ನು ಅಳೆಯಲು ಬೇಕಾದ ವಿವಿಧ ಉಪಕರಣಗಳನ್ನು ಮತ್ತು ಉಪಕ್ರಮಗಳನ್ನು ಒಳಗೊಳ್ಳುತ್ತದೆ; ಈ ಮಾಪನವು ಪರೀಕ್ಷೆಗೆ ಒಳಪಡಿಸಲಾಗುತ್ತಿರುವ ವಿದ್ಯಾರ್ಥಿಗಳ ತರಗತಿಯ ಅನುಭವಗಳು ಮತ್ತು ಉದ್ದೇಶಗಳಿಗೆ ಅನುರೂಪವಾಗಿರಬೇಕು ಮತ್ತು ಕ್ರಮಾನುಗತವಾಗಿ ಸಾಮರ್ಥ್ಯಗಳ ಮಾಪನದ ಪ್ರಕ್ರಿಯೆ ಮುಂದುವರಿಯಬೇಕು.
- ರಾಜ್ಯ ಮತ್ತು ಸ್ಥಳೀಯ ಏಜೆನ್ಸಿಗಳು ಮೌಲ್ಯಮಾಪನ ಕಾರ್ಯಕ್ರಮಗಳನ್ನು ಜಾರಿಗೊಳಿಸಲು, ಅದನ್ನು ಬೆಂಬಲಿಸಲು ಅವಶ್ಯಕವಾದ ಸೂಕ್ತ ಧನಸಹಾಯವನ್ನು ಪಡೆದುಕೊಳ್ಳಬೇಕು; ಮಾಪನ ಉಪಕರಣಗಳ ಆಯ್ಕೆ, ವಿಕಾಸ ಮತ್ತು ಬಳಕೆಗಳಲ್ಲಿ ಶಿಕ್ಷಕರ ಶಿಕ್ಷಣವನ್ನು ಬೆಂಬಲಿಸಬೇಕು; ಉದ್ದೇಶಗಳ ಸೂತ್ರೀಕರಣ, ಬೋಧನೆ ಮತ್ತು ಮೌಲ್ಯಮಾಪನಗಳ ಯೋಜನೆ, ಮಾಪನ ಉಪಕರಣಗಳ ವಿನ್ಯಾಸ ಮತ್ತು ಆಯ್ಕೆ ಈ ಕಾರ್ಯಗಳಲ್ಲಿ ಶಿಕ್ಷಕರನ್ನು ಮತ್ತು ಇತರ ಸಮಾಜ ಅಧ್ಯಯನ ಕ್ಷೇತ್ರದ ವೃತ್ತಿಪರರನ್ನು ಸಹಭಾಗಿಗಳನ್ನಾಗಿ ಮಾಡಿಕೊಳ್ಳಬೇಕು.
- ಹೊಸ ಕಲಿಕಾ ಸಂಸ್ಕೃತಿಯ ಉದಯವಾಗಬೇಕು ಮತ್ತು ಪರ್ಯಾಯ ಮಾಪನ ಉಪಕರಣಗಳನ್ನು ರೂಪಿಸಿಕೊಳ್ಳುತ್ತಿರಬೇಕು. ಇಂದಿನ ಕಲಿಕಾ ಸಿದ್ಧಾಂತಗಳು ಮತ್ತು ಸಾಂಪ್ರದಾಯಿಕ ಮಾಪನ ಸಿದ್ಧಾಂತಗಳ ನಡುವೆ ವ್ಯತ್ಯಾಸವಿದೆ.

ಬೋಧನೆ ಮತ್ತು ಕಲಿಕೆಗಳನ್ನು ಕುರಿತ ದೃಷ್ಟಿಕೋನಗಳು ಬದಲಾಗುತ್ತಿರುವ ಕಾರಣ ಮಾಪನ ಕ್ಷೇತ್ರದಲ್ಲೂ ಪುನರ್‌ರಚನೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ಈ ಹಿಂದೆ ಮಾಪನವು ಪ್ರಮಾಣೀಕರಣ ಮತ್ತು ಉತ್ತರದಾಯಿತ್ವಕ್ಕೆ ಒಂದು ಮಾಧ್ಯಮವಾಗಿತ್ತು. ಆದರೆ, ಈಗ ಮಾಪನವು ವ್ಯಾಪಕ ಉದ್ದೇಶಗಳನ್ನು ಹೊಂದಿರುತ್ತದೆ. ಈಗಿನ ಪದ್ಧತಿಯಲ್ಲಿ ಕಲಿಕೆ ಮತ್ತು ಮಾಪನಗಳೆಡೂ ಜೊತೆಜೊತೆಯಲ್ಲೇ ಸಾಗುತ್ತವೆ. ಮಾಪನ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪಾತ್ರಗಳ ಪುನರ್ ವ್ಯಾಖ್ಯಾನವಾಗಿದೆ. ಈಗಿನ ಮಾಪನ ವಿಧಾನವು ಹೊಸದಾದ ಕಲಿಕಾ ಸಂಸ್ಕೃತಿಯನ್ನು ಒಳಗೊಳ್ಳಬೇಕಾದ ಕಾರಣದಿಂದಲೇ ಪರಿವರ್ತನೆಗೊಂಡಿದೆ. ಸಾಂಪ್ರದಾಯಿಕ ಮಾಪನವು ಹೊಸ ಕಲಿಕಾ ಸಂಸ್ಕೃತಿಯನ್ನು ಒಳಗೊಳ್ಳದ ಕಾರಣ ಸಮರ್ಪಕವಲ್ಲ. ಇದರ ಪರಿಣಾಮವಾಗಿ ಪರ್ಯಾಯ ಅಥವಾ ಅಧಿಕೃತ ಮಾಪನಗಳೆಂದು ಕರೆಯಲಾಗುವ ಹೊಸ ಮಾಪನ ವಿಧಾನಗಳು ಉದಯವಾಗಿವೆ. ಈ ಮಾಪನ ವಿಧಾನವು ಹೆಚ್ಚು ಸಮಗ್ರವೂ ಪ್ರಾಯೋಗಿಕವೂ ಆದ ಉಪಕ್ರಮವಾಗಿದ್ದು ಕೆಲವು ಅತ್ಯುತ್ತಮ ಫಲಿತಾಂಶಗಳನ್ನು ಕೊಟ್ಟಿದೆ. ಈ ಹೊಸ ವಿಧಾನದ ಬಗ್ಗೆ ಇನ್ನಷ್ಟು ವಿವರಣಾವಾಗಿ ತಿಳಿಯೋಣ.

**ಅಧಿಕೃತ ಮಾಪನ**

ಸಾಧಾರಣವಾಗಿ ಲೇಖನಿ ಮತ್ತು ಕಾಗದಗಳ ಬಳಕೆಯ ಮೂಲಕ ಬಹುಆಯ್ಕೆಯ ಪ್ರಶ್ನೆಗಳು, ಸರಿ–ತಪ್ಪು ರೂಪದ ಪ್ರಶ್ನೆಗಳು ಅಥವಾ ಹೊಂದಿಸಿ ಬರೆಯಿರಿ ರೂಪದ ಪ್ರಶ್ನೆಗಳುಳ್ಳ ಪ್ರಮಾಣೀಕರಿಸಿದ ಪರೀಕ್ಷಾ ವಿಧಾನಗಳಿಗೆ ಸಾಂಪ್ರದಾಯಿಕ ಮಾಪನ ಎನ್ನುವರು. ಕಲಿಕೆಯ ಅರ್ಥಪೂರ್ಣ ಅನ್ವಯನವನ್ನು ಪ್ರದರ್ಶಿಸುವ ವಾಸ್ತವ – ಪ್ರಪಂಚದ ಕಾರ್ಯವನ್ನು ಕೈಗೊಳ್ಳುವ ಕಲಿಕಾರ್ಥಿಗಳ ಸಾಮರ್ಥ್ಯ ಮಾಪನಕ್ಕೆ ಅಧಿಕೃತ ಮಾಪನ ಎನ್ನುವರು. ಸಾಂಪ್ರದಾಯಿಕ ಮತ್ತು ಅಧಿಕೃತ ಮಾಪನಗಳ ನಡುವೆ ಹೋಲಿಕೆ ಮಾಡಿ ನೋಡುವುದರಿಂದ ಇವೆರಡೂ ಉಪಕ್ರಮಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು.

| ಸಾಂಪ್ರದಾಯಿಕ ಮಾಪನ | ಅಧಿಕೃತ ಮಾಪನ |
|---|---|
| ಉದ್ದೇಶ: ವಿದ್ಯಾರ್ಥಿಗಳು ಪಠ್ಯ ವಿಷಯವಸ್ತುವನ್ನು ಕಲಿತಿದ್ದಾರೆಯೇ ಎಂದು ಮಾಪನ ಮಾಡುವುದು, ವಿದ್ಯಾರ್ಥಿಗಳು ಜ್ಞಾನಾರ್ಜನೆಯಲ್ಲಿ ಸಫಲರಾಗಿದ್ದಾರೆಯೆ ಎಂದು ನಿರ್ಧರಿಸುವುದು, ಅವರಿಗೆ ಗ್ರೇಡುಗಳನ್ನು ಕೊಡುವುದು ಅವರನ್ನು ಶ್ರೇಣಿಗತಗೊಳಿಸಿ ಮಾನದಂಡಗಳೊಂದಿಗೆ ಅಥವಾ ಇತರ ಕಲಿಕಾರ್ಥಿಗಳೊಂದಿಗೆ ಹೋಲಿಕೆ ಮಾಡುವುದು. | ಉದ್ದೇಶ: ವಾಸ್ತವಿಕ ಜೀವನದ ಕಾರ್ಯವನ್ನು ಮಾಡಿಸಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಮಾಪನ ಮಾಡುವುದು; ಮುಂದಿನ ಕಲಿಕೆಗಾಗಿ ಅಥವಾ ಉದ್ದೇಶಿತ ಕಲಿಕೆಗೆ ಹಲವು ಮಾರ್ಗಗಳನ್ನು ಒದಗಿಸುವುದು ಮತ್ತು ತೋರಿಸುವುದು; ಹಿಮ್ಮಾಹಿತಿಯ ಮೂಲಕ ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ನಿರ್ವಹಿಸಿಕೊಳ್ಳಲು ನೆರವಾಗುವುದು; ವಿದ್ಯಾರ್ಥಿಗಳ ದಕ್ಷತೆಯನ್ನು ಮಾಪನ ಮಾಡುವುದು. |
| ಶಿಕ್ಷಕರಿಗೆ ವಿದ್ಯಾರ್ಥಿಗಳು ಏನನ್ನು ತಿಳಿದಿದ್ದಾರೆ ಎಂಬುದರ ಒಂದು ಇಣುಕು ನೋಟವನ್ನು ಒದಗಿಸುತ್ತದೆ | ಶಿಕ್ಷಕರಿಗೆ ವಿದ್ಯಾರ್ಥಿ ಏನನ್ನು ತಿಳಿದಿದ್ದಾರೆ ಎಂಬುದರ ಸಂಪೂರ್ಣ ಚಿತ್ರಣವನ್ನು ಮತ್ತು ಆ ತಿಳುವಳಿಕೆಯಿಂದ ಅವರು ಏನು ಮಾಡಬಲ್ಲರು ಎಂಬುದರ ಚಿತ್ರಣವನ್ನು ಒದಗಿಸುತ್ತದೆ. |
| ವಿದ್ಯಾರ್ಥಿಗಳ ಪಠ್ಯವಸ್ತುವಿನ ಜ್ಞಾನ ಎಷ್ಟಿದೆ ಎಂದು ಅಳೆಯುತ್ತದೆ. | ವಾಸ್ತವಿಕ ಜೀವನದ ಪರಿಸ್ಥಿತಿಗಳಲ್ಲಿ ತಮಗೆ ತಿಳಿದಿರುವ ಜ್ಞಾನವನ್ನು ಅನ್ವಯಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಹೊಂದಿದ್ದಾರೆ ಎಂಬುದನ್ನು ಅಳೆಯುತ್ತದೆ; ಅರ್ಥಪೂರ್ಣ ರೀತಿಯಲ್ಲಿ ಅವರಿಗೆ ತಿಳಿದಿರುವುದನ್ನು ಬಳಸುವ ಅನ್ವಯಿಸುವ ಸಾಮರ್ಥ್ಯವನ್ನು ಅಳೆಯುತ್ತದೆ. |
| ಈ ವಿಧಾನದಲ್ಲಿ ವಿದ್ಯಾರ್ಥಿಗಳು ಸರಿಯಾದ ಪ್ರತಿಕ್ರಿಯೆಯನ್ನು / ಉತ್ತರಗಳನ್ನು ಕೊಡುವ ಮೂಲಕ ತಮ್ಮ ಜ್ಞಾನವನ್ನು ಪ್ರದರ್ಶಿಸುವ ಅಗತ್ಯವಿದೆ; ಸಾಧಾರಣವಾಗಿ ಈ ಮೂಲಕ ಪೇಪರ್ ಮತ್ತು ಪೆನ್ಸಿಲ್ ಬಳಸಿ ಮಾಡುವ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳನ್ನು ಪರೀಕ್ಷಿಸಲಾಗುತ್ತದೆ. ಪ್ರಶ್ನೆಗಳ ಸಮೂಹದಿಂದ (ಸರಿ/ತಪ್ಪು; ಬಹು ಆಯ್ಕೆ ಪ್ರಶ್ನೆ) ಒಂದು ಉತ್ತರವನ್ನು ಆಯ್ಕೆ ಮಾಡುವಂತೆ ವಿದ್ಯಾರ್ಥಿಗಳಿಗೆ ಹೇಳಿ ತನ್ಮೂಲಕ ಜ್ಞಾನವನ್ನು ಪರೀಕ್ಷಿಸಲಾಗುತ್ತದೆ. | ಈ ವಿಧಾನದಲ್ಲಿ ವಿದ್ಯಾರ್ಥಿಗಳು ತಾವು ಕಲಿತಿರುವುದರ ಅನ್ವಯನವನ್ನು ತೋರಿಸುವುದು ಸುಸಂಗತ ಕಾರ್ಯಗಳನ್ನು ಕೈಗೊಂಡು ತಮ್ಮ ದಕ್ಷತೆಯನ್ನು ಪ್ರದರ್ಶಿಸುತ್ತಾರೆ. |
| ಕಲಿಕೆಯ ಪರೋಕ್ಷ ಸಾಕ್ಷ್ಯಾಧಾರಗಳನ್ನು ಒದಗಿಸುತ್ತದೆ | ಕಲಿಕೆಯ/ದಕ್ಷತೆಯ ನೇರ ಸಾಕ್ಷ್ಯಾಧಾರಗಳನ್ನು ಒದಗಿಸುತ್ತದೆ; ಸುಸಂಗತ ಕಾರ್ಯಗಳನ್ನು ಮಾಡುವುದರ ಮೂಲಕ ಜ್ಞಾನ ಮತ್ತು ಕೌಶಲ್ಯಗಳ ನೇರ ಪ್ರದರ್ಶನ ಮಾಡಿಸುತ್ತದೆ. |
| ಇಲ್ಲಿ ವಿದ್ಯಾರ್ಥಿಗಳು ಬೋಧಿಸಲಾಗಿರುವ ಜ್ಞಾನರಾಶಿಯನ್ನು ಸ್ಮರಿಸಲು/ ಗುರುತಿಸಲು/ ಪುನರ್ರಚಿಸಲು ಸಂಜ್ಞಾನಾತ್ಮಕ ಸಾಮರ್ಥ್ಯವನ್ನು ಅಭ್ಯಾಸ ಮಾಡಬೇಕಾಗುತ್ತದೆ | ಬೋಧಿಸಲಾಗಿರುವುದರಿಂದ ಅರ್ಥವನ್ನು ನಿರ್ಮಿಸಲು / ಹೊಸ ಜ್ಞಾನವನ್ನು ನಿರ್ಮಾಣ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಒದಗಿಸುತ್ತದೆ. |
| ಪಠ್ಯವಿಷಯ ವಸ್ತುವನ್ನು ನೆನೆಪಿಸಿಕೊಳ್ಳುವ/ | ಸಂಪಾದಿಸಿರುವ ಜ್ಞಾನವನ್ನು ತರ್ಕಿಸಿ |

| | |
|---|---|
| ಗುರುತಿಸುವ ಮತ್ತು ಅರ್ಥಮಾಡಿಕೊಳ್ಳುವ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಪರೀಕ್ಷಿಸಿ ಅರಿವನ್ನು ಬಲಗೊಳಿಸುತ್ತದೆ. ಆದರೆ ತಾವು ಪಡೆದುಕೊಂಡಿರುವ ಜ್ಞಾನದಿಂದ ವಿದ್ಯಾರ್ಥಿಗಳು ಏನು ಮಾಡಬಲ್ಲರು ಎಂಬುದರಲ್ಲಿ ವಿದ್ಯಾರ್ಥಿಯ ನಿಜಪ್ರಗತಿ ಏನೆಂದು ತೋರಿಸಿ ಕೊಡುವುದಿಲ್ಲ. ವಿದ್ಯಾರ್ಥಿಗಳ ಕೇವಲ ಕೆಳಮಟ್ಟದ ಚಿಂತನೆಯ ಕೌಶಲ್ಯಗಳನ್ನು (ಜ್ಞಾನ ಮತ್ತು ಅರ್ಥಮಾಡಿಕೊಳ್ಳುವಿಕೆ) ಪರೀಕ್ಷಿಸುತ್ತದೆ. | ವಿಶ್ಲೇಷಿಸುವಲ್ಲಿ, ಸಂಯೋಜಿಸುವಲ್ಲಿ ಮತ್ತು ಅನ್ವಯಿಸುವಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಪರೀಕ್ಷಿಸಿ ಹೆಚ್ಚಿಸುತ್ತದೆ; ವಿದ್ಯಾರ್ಥಿಗಳ ಮೇಲ್ಮಟ್ಟದ ಸಂಜ್ಞಾನಾತ್ಮಕ ಕೌಶಲ್ಯಗಳು (ಜ್ಞಾನ, ಅರ್ಥ ಮಾಡಿಕೊಳ್ಳುವಿಕೆಯಿಂದ ಹಿಡಿದು ವಿಶ್ಲೇಷಿಸಿ ಸಂಯೋಜನೆ, ಅನ್ವಯನ ಮತ್ತು ಮೌಲ್ಯಮಾಪನದವರೆಗೆ) ಅನೇಕ ರೂಪಗಳಲ್ಲಿ ಪ್ರದರ್ಶನಗೊಳ್ಳಲು ಅವಕಾಶಮಾಡಿಕೊಡುತ್ತದೆ. |
| ಬೋಧಕರು ಮೌಲ್ಯಮಾಪಕರಾದರೆ ವಿದ್ಯಾರ್ಥಿಗಳು ಮೌಲ್ಯಮಾಪನ ಮಾಡಿಸಿಕೊಳ್ಳುವರಾಗಿರುತ್ತಾರೆ. ಇದು ಶಿಕ್ಷಕರನ್ನು ಆಧರಿಸಿ ರಚಿತವಾಗಿರುವಂಥದ್ದಾಗಿರುತ್ತದೆ. | ಬೋಧನೆ, ಕಲಿಕೆ ಮತ್ತು ಮಾಪನ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಭಾಗಿಯನ್ನಾಗಿ ಮಾಡಿಕೊಂಡು ಅದರಲ್ಲಿ ತೊಡಗಿಸುತ್ತದೆ; ವಿದ್ಯಾರ್ಥಿಗಳನ್ನು ಆಧರಿಸಿ ರಚಿತವಾಗಿರುತ್ತದೆ. |
| ಮಾಪನ, ಬೋಧನೆ ಮತ್ತು ಕಲಿಕೆಗಳಿಂದ ಬೇರ್ಪಟ್ಟಿರುತ್ತದೆ; ಸಾಧಾರಣವಾಗಿ, ಬೋಧನೆಯ ನಂತರ ವಿದ್ಯಾರ್ಥಿಗಳು ಪಠ್ಯವಸ್ತುವನ್ನು ಯಶಸ್ವಿಯಾಗಿ ಕಲಿತಿರುವರೇ ಎಂದು ತಿಳಿಯಲು ಪರೀಕ್ಷೆಯನ್ನು ನೀಡಲಾಗುತ್ತದೆ. | ಮಾಪನ ಬೋಧನೆಯೊಂದಿಗೆ ಏಕೀಕೃತಗೊಂಡಿರುತ್ತದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಸುಧಾರಿಸಿಕೊಳ್ಳಲು ಮತ್ತು ಬೋಧಕರು ತಮ್ಮ ಬೋಧನೆಯನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುವಂತೆ ಮಾಪನ ಚಟುವಟಿಕೆಗಳ ಬೋಧನೆಯ ಉದ್ದಕ್ಕೂ ಜರುಗುತ್ತವೆ. |
| ತಾವು ಕಲಿತಿರುವುದನ್ನು ವಿದ್ಯಾರ್ಥಿಗಳು ಪ್ರದರ್ಶಿಸುವುದಕ್ಕೆ ಸೀಮಿತಮಾರ್ಗಗಳನ್ನು ಒದಗಿಸುತ್ತದೆ. | ತಾವು ಕಲಿತಿರುವುದನ್ನು ಉತ್ತಮವಾಗಿ ಪ್ರದರ್ಶಿಸಲು ವಿಭಿನ್ನ ಮಾರ್ಗಗಳನ್ನು ಒದಗಿಸುತ್ತದೆ. |
| ಅನಮ್ಯ ಮತ್ತು ನಿಶ್ಚಿತ | ನಮ್ಯವಾಗಿರುವ ಈ ವಿಧಾನವು ಕಲಿಕೆಯ ಪುರಾವೆಯ ರೂಪದಲ್ಲಿ ಉತ್ಪನ್ನಗಳನ್ನು ಅಥವಾ ಕಾರ್ಯಸಾಧನೆಯನ್ನು ನಿರ್ಮಾಣ ಮಾಡಲು ಸ್ವೀಕಾರ್ಯವಾದ ಅನೇಕ ಮಾರ್ಗಗಳನ್ನು ಒದಗಿಸುತ್ತದೆ. |
| ಪ್ರಮಾಣೀಕೃತ, ನ್ಯಾಯಸಮ್ಮತ ಮತ್ತು ವಿಶ್ವಾಸಾರ್ಹ. | ವಿಶ್ವಾಸಾರ್ಹತೆ ಮತ್ತು ನ್ಯಾಯಸಮ್ಮತೆಯನ್ನು ಸಾಧಿಸಬೇಕಾದರೆ ಚೆನ್ನಾಗಿ ವ್ಯಾಖ್ಯಾನಿಸಿದ ಮಾನದಂಡಗಳು/ರುಬ್ರಿಕ್‌ಗಳು(Rubrics) ಮತ್ತು ಪ್ರಮಾಣಗಳು ಅವಶ್ಯಕವಾಗುತ್ತದೆ. |
| ಮೂಲ್ಯಾಂಕನಕ್ಕೆ ಪಠ್ಯಕ್ರಮವೇ ಆಧಾರ | ಮೂಲ್ಯಾಂಕನವೇ ಪಠ್ಯಕ್ರಮ ಮತ್ತು ಬೋಧನೆಗೆ ಆಧಾರ |
| **ಉದಾಹರಣೆಗಳು:**<br>ಸರಿ ಅಥವಾ ತಪ್ಪು; ಬಹು ಆಯ್ಕೆ ಪರೀಕ್ಷೆಗಳು ಪ್ರಮಾಣೀಕೃತ ಪರೀಕ್ಷೆಗಳು, ಸಾಧನಾ ಪರೀಕ್ಷೆಗಳು; ಬುದ್ಧಿಶಕ್ತಿ ಪರೀಕ್ಷೆಗಳು; ಯೋಗ್ಯತಾ ಪರೀಕ್ಷೆಗಳು ಇತ್ಯಾದಿ. | **ಉದಾಹರಣೆಗಳು:**<br>ಪ್ರಾತ್ಯಕ್ಷಿಕೆಗಳು, ನೇರ ಅನುಭವ ಕೊಡುವ ಪ್ರಯೋಗಗಳು, ಕಂಪ್ಯೂಟರ್ ಸಿಮ್ಯುಲೇಷನ್; ಪೋರ್ಟ್‌ಫೋಲಿಯೊಗಳು; ಪ್ರಾಯೋಜನೆಗಳು ಬಹುಮಾಧ್ಯ ಪ್ರಸ್ತುತಿಗಳು; ಪಾತ್ರ ಅಭಿನಯ; ಪ್ರೇರಣೆ; ನಾಟಕಗಳು; ಪ್ರದರ್ಶನಗಳು |

ಅಧಿಕೃತ ಮಾಪನ ಮತ್ತು ಸಾಂಪ್ರದಾಯಿಕ ಮಾಪನಗಳನ್ನು ಪರಸ್ಪರ ಹೋಲಿಸಿ ನೋಡಿದಾಗ ಬೇರೆ ಬೇರೆ ಉದ್ದೇಶಗಳು ಅವುಗಳಿಂದ ಸಾಧಿತವಾಗುವುದು ಕಂಡುಬರುತ್ತವೆ. ಈ ಸಂಗತಿ ಮಾಪನ ಸ್ವರೂಪ ಮತ್ತು ಅಂಶ ಅನುಕ್ರಿಯೆ ಪ್ರಾರೂಪನ ಸ್ವರೂಪಗಳಿಂದ ಬೆಳಕಿಗೆ ಬರುತ್ತದೆ. ನಾವು ವಿದ್ಯಾರ್ಥಿಗಳಿಗೆ ಗಣಿತವನ್ನು ತಿಳಿಸುವುದು ಹೇಗೆ ಎಂದು ಮಾತ್ರವಲ್ಲದೆ ಇತಿಹಾಸ ವಿಜ್ಞಾನಗಳನ್ನು ಕಲಿಯುವುದು ಹೇಗೆ ಎಂದು ಹೇಳಿಕೊಡಬಲ್ಲೆವು. ಆಗ ನಮ್ಮ ವಿದ್ಯಾರ್ಥಿಗಳು ಏನನ್ನು ಕಲಿತಿದ್ದಾರೆ ಎಂದು ಮಾಪನ ಮಾಡಲು ಗಣಿತವನ್ನು ಬಳಸುತ್ತಿರುವ, ಇತಿಹಾಸವನ್ನು ಕಲಿತಿರುವ, ವೈಜ್ಞಾನಿಕ ಪ್ರಯೋಗವನ್ನು ಕೈಗೊಳ್ಳುತ್ತಿರುವ ವಿದ್ಯಾರ್ಥಿಗಳು ಎದುರಿಸಬಹುದಾದ ಸವಾಲುಗಳನ್ನು ಪ್ರತಿಬಿಂಬಿಸುವ ಕಾರ್ಯಗಳನ್ನು ಮಾಡುವಂತೆ ವಿದ್ಯಾರ್ಥಿಗಳಿಗೆ ಹೇಳಬಹುದು.

| ಸಾಂಪ್ರದಾಯಿಕ ಮಾಪನ | ಪರ್ಯಾಯ ಮಾಪನ |
|---|---|
| • ಉತ್ಪನ್ನಾಭಿಮುಖ | * ಪ್ರಕ್ರಿಯಾಭಿಮುಖ |
| • ಪ್ರಾಯೋಗಿಕ | * ಹೆಚ್ಚು ಸಮಯ ಬೇಕಾಗುವಂಥದ್ದು |
| • ವಿಶ್ವಾಸಾರ್ಹ | * ಅಧಿಕೃತ |
| • ಪ್ರಾಮಾಣಿಕ | * ವೈಯಕ್ತಿಕ ಹಿಮ್ಮಾಹಿತಿ |
| • ಸಂಕಲನಾತ್ಮಕ | * ರೂಪಣಾತ್ಮಕ |
| • ಬಾಹ್ಯ ಅಭಿಪ್ರೇರಣೆಯನ್ನು ಬೆಳೆಸುತ್ತದೆ | * ಆಂತರಿಕ ಅಭಿಪ್ರೇರಣೆಯನ್ನು ಬೆಳೆಸುತ್ತದೆ. |

ಸಾಂಪ್ರದಾಯಿಕ ಮಾಪನ ಪದ್ಧತಿಯು ಕಲಿಕಾರ್ಥಿಗಳು ಅನುಕ್ರಿಯೆ(Response) ಗಳಿಂದ ಆಯ್ಕೆ ಮಾಡಲು ನಿರ್ದೇಶಿಸಿದರೆ, ಅಧಿಕೃತ ಮಾಪನ ವಿದ್ಯಾರ್ಥಿಗಳು ಕಲಿತ ಅಂಶಗಳನ್ನು ಆಧರಿಸಿ ಒಂದು ಕಾರ್ಯವನ್ನು ಕೈಗೊಳ್ಳುವಂತೆ ಅವರನ್ನು ತೊಡಗಿಸುತ್ತದೆ. ಸಾಂಪ್ರದಾಯಿಕ ಮಾಪನವು ಒಬ್ಬರಿಂದ ರಚನೆಗೊಳ್ಳುವಂಥದ್ದು. ಸಾಂಪ್ರದಾಯಿಕ ಮಾಪನಕ್ಕೆ ಸ್ಮರಣೆ ಅಥವಾ ಗುರುತಿಸುವಿಕೆಯ ಅಗತ್ಯವಿದೆ, ಇದು ಶಿಕ್ಷಕರಿಂದ ಸಂರಚನೆಗೊಳ್ಳುತ್ತದೆ ಮತ್ತು ಪರೋಕ್ಷವಾದ ಸಾಕ್ಷ್ಯಾಧಾರಗಳನ್ನು ಬಳಸಿಕೊಳ್ಳುತ್ತದೆ. ಅಧಿಕೃತ ಮಾಪನವು ಸನ್ನಿವೇಶಾತ್ಮಕವಾಗಿ ಅಧ್ಯಾಪಕರಿಂದ ಅಥವಾ ವಿದ್ಯಾರ್ಥಿಗಳಿಂದ ನಿರ್ಮಿತಗೊಳ್ಳುವಂಥದ್ದು ಅಥವಾ ಅನ್ವಯನ ಸ್ವರೂಪವುಳ್ಳದ್ದು ಹಾಗೂ ವಿದ್ಯಾರ್ಥಿಯನ್ನು ಆಧರಿಸಿ ಸಂರಚಿತಗೊಳ್ಳುವಂಥದ್ದು, ಇಲ್ಲಿ ನೇರ ಸಾಕ್ಷ್ಯಾಧಾರಗಳನ್ನು ಮುಂದಿಡಲಾಗುತ್ತದೆ.

**ಶಿಕ್ಷಕರಿಗೆ ಅಧಿಕೃತ ಮಾಪನದಿಂದ ಆಗುವ ಅನುಕೂಲಗಳು**

- ವಿದ್ಯಾರ್ಥಿಗಳ ಚಿಂತನಾಧಾಟಿ ಏನೆಂದು ಗೊತ್ತಾಗುತ್ತದೆ.
- ವಿವರಣೆಯನ್ನು ಹೊರಗೆಡಹುವಂತಹ ಮತ್ತು ತಪ್ಪು ಕಲ್ಪನೆಗಳನ್ನು ತೋರಿಸಿಕೊಡುವ, ಪ್ರಶ್ನೆಗಳನ್ನು ಕೇಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
- ಕಲಿಕಾ ಕೌಶಲ್ಯಗಳನ್ನು ಬಲಪಡಿಸುತ್ತದೆ, ಸರಿ–ತಪ್ಪುಗಳನ್ನು ಕಂಡುಹಿಡಿಯಲು ಹೋಗದೆ ತಮ್ಮ ವಿದ್ಯಾರ್ಥಿಗಳಿಗೆ ಗೌರವವನ್ನು ತೋರಲು ಸಾಧ್ಯವಾಗುತ್ತದೆ.
- ವೈವಿಧ್ಯತೆಗೆ ಗೌರವ ತೋರುವುದನ್ನು ಪ್ರೋತ್ಸಾಹಿಸುತ್ತದೆ.
- ವಿದ್ಯಾರ್ಥಿಗಳು ತಮ್ಮ ತಿಳಿವನ್ನು ತಾವೇ ನಿರ್ಮಿಸಿಕೊಳ್ಳಲು ಮತ್ತು ಹಂಚಿಕೊಳ್ಳಲು ಅವರನ್ನು ಪ್ರೋತ್ಸಾಹಿಸುವಂತಹ ಪ್ರಶ್ನೆಗಳನ್ನು ಮುಂದಿಡುತ್ತದೆ.
- "ಬೋಧನೆ ಎಂದರೆ ಹೇಳುವುದು" ಎಂಬುದನ್ನು ಕೈಬಿಡುವುದಕ್ಕೆ ಪುನರ್ಬಲನವನ್ನು ನೀಡುತ್ತದೆ.

**ಮಾಪನದ ಉದ್ದೇಶಗಳು ಮತ್ತು ಕಾರ್ಯಗಳು**

ತರಗತಿಯಲ್ಲಿನ ಮಾಪನದಲ್ಲಿ ಮೂರು ಭಿನ್ನವಾದ ಆದರೆ ಪರಸ್ಪರ ಸಂಬಂಧವುಳ್ಳ ಉದ್ದೇಶಗಳಿವೆ; ಕಲಿಕೆಗಾಗಿ ಮಾಪನ, ಕಲಿಕೆಯಾಗಿ ಮಾಪನ ಮತ್ತು ಕಲಿಕೆಯ ಮಾಪನ. ಈ ಅಂಶವನ್ನು 'ಕಲಿಕೆಗಾಗಿ ಮಾಪನ' ಪತ್ರಿಕೆಯಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಗಮನಿಸಿ.

ಮಾಪನವು ಈ ಕೆಳಗಿನ ಚಟುವಟಿಕೆಗಳಲ್ಲಿ ನೆರವಾಗುತ್ತದೆ:

**ವಿಶ್ಲೇಷಣಾತ್ಮಕ ಹಿನ್ನುಣಿಕೆಯನ್ನು ಒದಗಿಸುತ್ತದೆ**

- ವಿದ್ಯಾರ್ಥಿಯ ಜ್ಞಾನಾಧಾರ ಏನು?
- ವಿದ್ಯಾರ್ಥಿಯ ಕಾರ್ಯ ನಿಕ್ಷಮತೆಯ ಆಧಾರವೇನು?
- ವಿದ್ಯಾರ್ಥಿಯ ಅವಶ್ಯಕತೆಗಳೇನು?
- ಏನನ್ನು ಬೋಧಿಸಬೇಕು?

**ಮಾನದಂಡಗಳನ್ನು ನಿರ್ಧರಿಸಲು ಶಿಕ್ಷಕರಿಗೆ ನೇರವಾಗುತ್ತದೆ**

- ಯಾವ ಕಾರ್ಯನಿರ್ವಹಣೆ ಅರ್ಥಮಾಡಿಕೊಳ್ಳುವಿಕೆಯನ್ನು ತೋರ್ಪಡಿಸುತ್ತದೆ?
- ಯಾವ ಕಾರ್ಯ ನಿರ್ವಹಣೆ ಜ್ಞಾನವನ್ನು ತೋರ್ಪಡಿಸುತ್ತದೆ?
- ಯಾವ ಕಾರ್ಯನಿರ್ವಹಣೆ ಪ್ರಭುತ್ವವನ್ನು ತೋರ್ಪಡಿಸುತ್ತದೆ?

**ಪ್ರಗತಿಯನ್ನು ಮೌಲ್ಯಮಾಪನ ಮಾಡುತ್ತದೆ**

- ವಿದ್ಯಾರ್ಥಿ ಹೇಗೆ ಮುಂದುವರೆಯುತ್ತಿದ್ದಾನೆ?
- ಯಾವ ಬೋಧನಾ ವಿಧಾನಗಳು ಅಥವಾ ಉಪಕ್ರಮಗಳು ಅತಿ ಹೆಚ್ಚು ಪರಿಣಾಮಕಾರಿ?
- ವಿದ್ಯಾರ್ಥಿಗೆ ನೆರವಾಗಲು ಪಾಠವೊಂದರಲ್ಲಿ ಯಾವ ಯಾವ ಬದಲಾವಣೆ ಅಥವಾ ಮಾರ್ಪಾಡುಗಳು ಅಗತ್ಯ?

**ವಿದ್ಯಾರ್ಥಿಯ ಪ್ರಗತಿಗೆ ಸಂಬಂಧಿಸಿರುತ್ತದೆ**

- ವಿದ್ಯಾರ್ಥಿ ಏನನ್ನು ಕಲಿತಿದ್ದಾನೆ?
- ವಿದ್ಯಾರ್ಥಿ ಹೊಸಜ್ಞಾನದ ಬಗ್ಗೆ ಮಾತನಾಡಬಲ್ಲನೇ?

**ಕಾರ್ಯ ನಿರ್ವಹಣೆಗೆ ಪ್ರೇರೇಪಿಸುತ್ತದೆ**

ವಿದ್ಯಾರ್ಥಿಯ ಸ್ವಯಂ ಮೌಲ್ಯಮಾಪನಕ್ಕಾಗಿ:

- ನಾನೀಗ ನನ್ನ ಕಲಿಕೆಯಲ್ಲಿ ತೊಡಗಿದ್ದೇನಾದ್ದರಿಂದ ನಾನು ಹೇಗೆ ಪ್ರಗತಿ ಹೊಂದುತ್ತಿದ್ದೇನೆ?
- ನಾನೀಗ ಹೇಗೆ ಪ್ರಗತಿಯಾಗುತ್ತಿದ್ದೇನೆಂದು ತಿಳಿದಿರುವೆನಾದ್ದರಿಂದ ಅದನ್ನು ಮತ್ತಷ್ಟು ಹೇಗೆ ಸುಧಾರಿಸಬಹುದು?
- ಇನ್ನೇನನ್ನು ನಾನು ಕಲಿಯಬಹುದು?

**ಶಿಕ್ಷಕರ ಸ್ವಯಂ – ಮೌಲ್ಯಮಾಪನಕ್ಕಾಗಿ:**

- ವಿದ್ಯಾರ್ಥಿಗಳಿಗೆ ಯಾವುದು ಸಹಾಯಕವಾಗುತ್ತದೆ?
- ವಿದ್ಯಾರ್ಥಿಗಳಿಗೆ ಇನ್ನಷ್ಟು ನೆರವಾಗುವ ಬಗೆ ಯಾವುದು?
- ಇನ್ನು ಮುಂದೆ ಯಾವ ದಿಕ್ಕಿನಲ್ಲಿ ಸಾಗಬೇಕು?

**ಮಾಪನದ ನಿಯಮಗಳು**

ಎಲ್ಲಾ ಮಾಪನಗಳು ಈ ಕೆಳಗಿನ ಲಕ್ಷಣಗಳನ್ನುಳ್ಳ ಫಲಿತಗಳನ್ನು ಕೊಡಬೇಕು:

- **ಸಿಂಧುತ್ವ:** ಮಾಪನದ ಪುರಾವೆಗಳು ಮಾಪನದ ಮಾನದಂಡಗಳನ್ನು ಮತ್ತು‌ ್ಲ ಕಲಿಕಾ ಫಲಿತಗಳನ್ನು ಒಳಗೊಳ್ಳಬೇಕು.
- **ಅಧಿಕೃತ:** ಎಲ್ಲ ಕಾರ್ಯಗಳು ಕಲಿಕಾರ್ಥಿಯ ಸ್ವಂತದ್ದು.
- **ವಿಶ್ವಾಸಾರ್ಹ:** ಮಾಪನದ ಸಾಕ್ಷ್ಯಾಧಾರಗಳು ಸಮಂಜಸವಾಗಿರಬೇಕು ಮತ್ತು ಮಾಪನವನ್ನು ಪುನರಾವರ್ತಿಸಿದರೆ ಅದೇ ಫಲಿತಗಳು ಪುನಃ ಸಿಗಬೇಕು.
- **ಪ್ರಚಲಿತತೆ:** ಮಾಪನದ ಸಾಕ್ಷ್ಯಾಧಾರಗಳು ಇತ್ತೀಚಿನದಾಗಿರಬೇಕು.
- **ಪರ್ಯಾಪ್ತತೆ:** ಕ್ರೆಡಿಟ್ ಮೌಲ್ಯವನ್ನು ಸಮರ್ಥಿಸಲು ಮತ್ತು ಕಲಿಕಾರ್ಥಿಯ ಸಾಧನೆಯ ಬಗ್ಗೆ ಸಮಂಜಸವೂ ವಿಶ್ವಾಸಾರ್ಹವೂ ಆದ ನಿರ್ಧಾರ ತೆಗೆದುಕೊಳ್ಳಲು ಸಾಕಷ್ಟು ಕಾರ್ಯಗಳು ಲಭ್ಯವಿರಬೇಕು.
- **ಹೋಲಿಕೆ ಸಾಧ್ಯವಿರಬೇಕು:** ಎಲ್ಲಾ ಸಾಕ್ಷ್ಯಾಧಾರಗಳು ಒಂದು ಘಟಕ / ಅರ್ಹತೆಯೊಳಗೆ ಮಾಪನಗಳ ಮಾನದಂಡಗಳಿಗೆ ಹೋಲಿಸುವಂತಿರಬೇಕು ಮತ್ತು ಒಂದೇ ಮಟ್ಟದ ಕಲಿಕಾರ್ಥಿಯ ನಡುವೆ ಹೋಲಿಸುವಂತಿರಬೇಕು.
- **ನಿರ್ವಹಣೆ ಸಾಧ್ಯವಾಗುವಂತಿರಬೇಕು:** ಎಲ್ಲ ಮಾಪನಗಳು ಕಲಿಕಾರ್ಥಿಯಿಂದ ನ್ಯಾಯಯುತ ಬೇಡಿಕೆಗಳನ್ನಿಡುತ್ತವೆ.
- **ನ್ಯಾಯಯುತ ಮತ್ತು ಕನಿಷ್ಟ ಪಕ್ಷಪಾತ:** ವಿದ್ಯಾರ್ಥಿಗಳ ಗುಣಲಕ್ಷಣಗಳನ್ನು ಗಣನೆಗೆ ತಾರದೆ (ಉದಾ ವಯಸ್ಸು, ಲಿಂಗ ಇತ್ಯಾದಿ) ಮಾಪನಗಳು ಎಲ್ಲ ಕಲಿಕಾರ್ಥಿಗಳಿಗೂ ನ್ಯಾಯ ಸಮ್ಮತವಾಗಿರಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಮಾಪನ ಎಂಬ ಪದದ ಅರ್ಥವನ್ನು ವಿವರಿಸಿ. ಅದರ ಎರಡು ಮುಖ್ಯ ವಿಧಗಳು ಯಾವುವು?
2. ಸಾಂಪ್ರದಾಯಿಕ ಮಾಪನದ ಅನಾನುಕೂಲತೆಗಳೇನು?
3. ಅಧಿಕೃತ ಮಾಪನ ಎಂದರೇನು? ಸಾಂಪ್ರದಾಯಿಕ ಮಾಪನಕ್ಕೆ ಹೋಲಿಸಿದಾಗ ಇದರ ಅನುಕೂಲತೆಗಳೇನು?
4. ಸಾಂಪ್ರದಾಯಿಕ ಮತ್ತು ಅಧಿಕೃತ ಮಾಪನಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸಿ.

**4.4.3.2. ಮಾಪನದ ಉಪಕರಣಗಳು**

ಎಲ್ಲ ಮಾಪನಗಳು ಅಂತಿಮವಾಗಿ ಒಂದಲ್ಲ ಒಂದು ರೂಪದಲ್ಲಿರುವ ದತ್ತಾಂಶಗಳನ್ನು ಅವಲಂಬಿಸಿರುತ್ತವೆ.

ಈ ದತ್ತಾಂಶಗಳನ್ನು ಸಂಗ್ರಹಿಸಲು ವ್ಯವಸ್ಥಿತವಾದ ಮತ್ತು ವೃತ್ತಿಪರ ಮಾರ್ಗವೊಂದಿರಬೇಕು. ಈ ದತ್ತಾಂಶಗಳನ್ನು ಔಪಚಾರಿಕವಾಗಿ ಅಥವಾ ಅನೌಪಚಾರಿಕವಾಗಿ ಯಾರಾದರೊಬ್ಬರು ಸಂಗ್ರಹಿಸಬಹುದು. ಈ ದತ್ತಾಂಶವನ್ನು ಸಂಗ್ರಹಿಸಲು ಬಳಸಿದ ಮಾಧ್ಯಮವೇ ಮಾಪನ ಉಪಕರಣವಾಗುತ್ತದೆ. ಮಾಪನ ಉಪಕರಣವು ಮಾಪನಕ್ಕೆ ಅಗತ್ಯವಾದ ದತ್ತಾಂಶವನ್ನು ಸಂಗ್ರಹಿಸುವುದಕ್ಕೆ ಆಧಾರವಾಗುತ್ತದೆ. ಇದು ಈ ಕೆಳಗಿನ ಘಟಕಗಳನ್ನು ಒಳಗೊಳ್ಳುತ್ತದೆ

- ಮಾಪನದ ಸಂದರ್ಭ ಮತ್ತು ಗೊತ್ತುಪಾಡುಗಳು
- ವಿದ್ಯಾರ್ಥಿಗೆ ವಹಿಸಬೇಕಾದ ಕಾರ್ಯಭಾರಗಳು
- ಅಭ್ಯರ್ಥಿಗಳಿಂದ ಸಂಗ್ರಹಿಸಬೇಕಾದ ಸಾಕ್ಷ್ಯಾಧಾರಗಳ ರೂಪುರೇಖೆ

- ಕಾರ್ಯ ನಿರ್ವಹಣೆಯ ಗುಣಾತ್ಮಕತೆಯನ್ನು ನಿರ್ಣಯಿಸಲು ಬಳಸಲಾಗುವ ಸಾಕ್ಷ್ಯಾಧಾರಗಳ ಮಾನದಂಡ
- ಕೊಡುವಿಕೆ, ದಾಖಲಿಸುವಿಕೆ ಮತ್ತು ವರದಿಸಲ್ಲಿಸುವಿಕೆಯ ಆವಶ್ಯಕತೆಗಳು ಮತ್ತು ಸಮಗ್ರ ಮಾಪನಕ್ಕೆ ಅನ್ವಯಿಸುವಂತೆ ದಕ್ಷತೆಗಳ ಸಮೂಹವನ್ನು ಒಳಗೊಳ್ಳಬಹುದು.

**ಮಾಪನ ಉಪಕರಣದ ಯೋಜನೆಗೆ ಮಾನದಂಡಗಳು**

ಮಾಪನ ಉಪಕರಣದ ಯೋಜನೆ ಮತ್ತು ಆಯ್ಕೆ ಹಲವಾರು ಅಂಶಗಳನ್ನು ಅವಲಂಬಿಸಿದೆ. ಅವುಗಳಲ್ಲಿ ಮುಖ್ಯವಾದುವುಗಳು ಈ ಕೆಳಗಿನಂತಿವೆ:

- **ಏನನ್ನು ಮಾಪನ ಮಾಡಬೇಕು:** ಮೇಲೆ ಹೇಳಿದಂತೆ ಮಾಪನದ ಉಪಕರಣಗಳು ಸಿಂಧುವಾಗಿರಬೇಕು; ಅಂದರೆ, ಅವು ಈಗಾಗಲೇ ಮಾಪನಕ್ಕೆ ಗುರುತಿಸಿಕೊಂಡಿರುವ ವಿದ್ಯಾರ್ಥಿಯ ಜ್ಞಾನ ಅಥವಾ ಕೌಶಲ್ಯಗಳನ್ನು ಸ್ಪಷ್ಟಪಡಿಸಬೇಕು. ಮಾಪನ ಸೂಕ್ತ ವಿಧಾನಗಳನ್ನು ವಿನ್ಯಾಸಗೊಳಿಸಬೇಕಾದರೆ ಶಿಕ್ಷಕರು ತಾವು ಏನನ್ನು ಮಾಪನ ಮಾಡಬೇಕು ಮತ್ತು ತಮಗೆ ಯಾವ ಮಾಹಿತಿ ಬೇಕು ಎಂಬುದರ ಬಗ್ಗೆ ಬಹಳ ಸ್ಪಷ್ಟ ಕಲ್ಪನೆ ಇರಬೇಕು.
- **ಮಾಪನದ ಉದ್ದೇಶವೇನು?:** ಮಾಹಿತಿ ಸಂಗ್ರಹಣೆಯ ಮತ್ತು ವರದಿ ಸಲ್ಲಿಸುವಿಕೆಯ ಮಾಧ್ಯಮವು ಮಾಪನದ ಉದ್ದೇಶವೇನು ಎಂಬುದನ್ನು ಅವಲಂಬಿಸಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪ್ರಗತಿಯ ಮೇಲ್ವಿಚಾರಣೆ ಅಥವಾ ಪ್ರಗತಿಯ ಸುಧಾರಣೆಗೆ ಬಳಸಿಕೊಳ್ಳಲು ಮಾಹಿತಿಯನ್ನು ಒದಗಿಸುವಂತಹ ರೂಪಣಾತ್ಮಕತೆಯ ಉದ್ದೇಶವನ್ನು ಹೊಂದಿದೆಯೋ ಅಥವಾ ವಿದ್ಯಾರ್ಥಿಗಳಿಗೆ ಮತ್ತು /ಅಥವಾ ಆಡಳಿತಗಾರರಿಗೆ ಕೊನೆಯ ಹಂತದ ಮಾಹಿಯನ್ನು ಒದಗಿಸುವಂತಹ ಸಂಕಲನಾತ್ಮಕ ಉದ್ದೇಶವನ್ನು ಹೊಂದಿದೆಯೋ ಎಂಬುದನ್ನು ಅವಲಂಬಿಸಿರುತ್ತದೆ.
- **ನಮಗೆ ಬೇಕಾದ ಮಾಹಿತಿಯನ್ನು ಯಾವ ಮಾಪನ ಉಪಕರಣ ಉತ್ತಮವಾಗಿ ಒದಗಿಸುತ್ತದೆ?:** ಏನನ್ನು ಮಾಪನ ಮಾಡಬೇಕು ಮತ್ತು ಮಾಪನದ ಉದ್ದೇಶವೇನು ಎಂಬುವುಗಳನ್ನು ಅವಲಂಬಿಸಿ ಉಪಕರಣಗಳು ಬದಲಾಗುತ್ತವೆ. ಉದಾಹರಣೆಗೆ ಒಂದು ನಕ್ಷೆಯನ್ನು ಬಿಡಿಸುವ ಸಾಮರ್ಥ್ಯವನ್ನು ಮಾಪನ ಮಾಡಲು ಪ್ರಬಂಧ ಬರೆವಣಿಗೆ ಉತ್ತಮ ಮಾರ್ಗವಾಗಲಾರದು. ದತ್ತಾಂಶವನ್ನು ಕೊಟ್ಟು ನಕ್ಷೆ ಬಿಡಿಸಿ ತೋರಿಸಿ ಎಂಬ ಅಭ್ಯಾಸವನ್ನು ಅವರಿಗೆ ಕೊಟ್ಟರೆ ಅದು ಈ ಉದ್ದೇಶಕ್ಕೆ ಉತ್ತಮ ಮಾರ್ಗವಾಗುವುದು.
- **ದತ್ತಾಂಶ ಯಾವ ರೂಪವನ್ನು ತಾಳುತ್ತದೆ?:** ಈ ಅಂಶ ಸ್ವಾಭಾವಿಕವಾಗಿಯೇ ಹಿಂದಿನ ಪ್ರಶ್ನೆಗೆ ಸಂಬಂಧಿಸಿದೆ. ಆದರೆ ಒಂದು ಮಾಪನ ಉಪಕರಣದ ಒಳಗೆ ಕೆಲವು ವಿವಿಧತೆಗಳಿರಬಹುದು. ಮೇಲೆ ತಿಳಿಸಿದಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ನೆಪೋಲಿಯನ್ ಮತ್ತು ಹಿಟ್ಲರ್‌ನ ದಂಡಯಾತ್ರೆಗಳ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಕಂಡುಹಿಡಿದು ಅವರ ವರದಿಯನ್ನು ಲಿಖಿತ, ಮೌಖಿಕ ಅಥವಾ ಚಿತ್ರದ ರೂಪದಲ್ಲಿ ಪ್ರಸ್ತುತಪಡಿಸಲು ಹೇಳಬಹುದು. ಬರೆಯುವುದಕ್ಕೆ ವಿದ್ಯಾರ್ಥಿಗಳಿಗೆ ಕೊನೆಯ ಎರಡು ಪ್ರಸ್ತುತಿಯ ರೂಪಗಳು, ಮಾಪನ ಮಾಡುತ್ತಿರುವ ಕುಶಲತೆಯಲ್ಲಿ ಅವರ ಸಾಮರ್ಥ್ಯವೆಷ್ಟು ಎನ್ನುವುದರ ಶ್ರೇಷ್ಟ ಮಾಹಿತಿಯನ್ನು ಒದಗಿಸಬಲ್ಲವು.
- **ಯಾರು ದತ್ತಾಂಶ ಸಂಗ್ರಹಣೆ ಮಾಡುತ್ತಾರೆ?:** ಶಿಕ್ಷಕರೋ ವಿದ್ಯಾರ್ಥಿಗಳೋ ಅಥವಾ ಹೊರಗಿನ ನಿರ್ಧಾರಕವೋ – ಯಾರು ದತ್ತಾಂಶ ಸಂಗ್ರಹಣೆ ಮಾಡುತ್ತಾರೆ? ಸ್ವಯಂ ಮಾಪನ ಅಥವಾ ಸಮಾನಸ್ಕಂದರಿಂದ ಮಾಪನಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡರೆ ಅದು ಒಂದು ಬಹಳ ಪರಿಣಾಮಕಾರಿ ಬೋಧನೆ ಮತ್ತು ಮಾಪನ ತಂತ್ರವಾಗಬಲ್ಲದು. ಹಲವು ಅಂಶಗಳನ್ನು (ಪಠ್ಯವಿಷಯ ವಸ್ತು, ಪ್ರಸ್ತುತಿವಾದ ಇತ್ಯಾದಿ) ಕುರಿತು ದತ್ತಾಂಶಗಳನ್ನು ಸಂಗ್ರಹಿಸುವ ಮೂಲಕ ವಿದ್ಯಾರ್ಥಿಗಳಿಗೆ ಒಂದು ತಾಳೆಪಟ್ಟಿ (ಚೆಕ್‌ಲಿಸ್ಟ್)ಯನ್ನು ಉಪಯೋಗಿಸಿ ತಮ್ಮ ಸಹಪಾಠಿಗಳ ಕಾರ್ಯಕ್ಷಮತೆಯನ್ನು ಅಳೆಯಲು

ಹೇಳಬಹುದು. ಇವೆರಡೂ ಮಾರ್ಗಗಳು ಈ ಪ್ರಮುಖ ಮಾನದಂಡಗಳಿಗೆ (ಬೋಧನೆ) ನಿರ್ದಿಷ್ಟ ಗಮನ ಹರಿಸುವಂತೆ ವಿದ್ಯಾರ್ಥಿಗಳಿಗೆ ನಿರ್ದೇಶಿಸುತ್ತದೆಯಲ್ಲದೆ ಅವುಗಳನ್ನು ಅವರು ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಒದಗಿಸುತ್ತದೆ.

- **ಎಷ್ಟು ಸಲ ಮತ್ತು ಯಾವಾಗ ದತ್ತಾಂಶಗಳನ್ನು ಸಂಗ್ರಹಿಸಬೇಕು**? ಮೇಲೆ ಹೇಳಿದಂತೆ ಶಿಕ್ಷಕರು ಯಾವಾಗಲೂ ವಿದ್ಯಾರ್ಥಿಗಳನ್ನು ಮಾಪನ ಮಾಡುತ್ತಿರುತ್ತಾರೆ. ಮಾಪನ ಮಾಡುವಾಗ ನಿರಂತರ ಎಚ್ಚರಿಕೆ ಅಗತ್ಯ. ಹೀಗೆ ಹೇಳುವುದರೇನೋ ಸರಿ, ಆದರೆ ಮಾಪನದ ನಿರ್ದಿಷ್ಟ ವಿಧಗಳು ಮತ್ತು ಉದ್ದೇಶಗಳು ಈ ಪ್ರಶ್ನೆಗೆ ಉತ್ತರಿಸಲು ಮಾರ್ಗದರ್ಶಿಗಳಾಗಬೇಕು. ಪ್ರತಿದಿನ ವಿದ್ಯಾರ್ಥಿಗಳಿಗೆ ಔಪಚಾರಿಕ ಲಿಖಿತ ಪರೀಕ್ಷೆಗಳನ್ನು ಕೊಡುವುದು ಬಹುಶಃ ಪರಿಣಾಮಕಾರಿ ಎನಿಸಲಾರದು. ಒಂದು ಕೌಶಲ್ಯವನ್ನು ಕಲಿಯುವ ಪ್ರಾರಂಭಿಕ ಹಂತಗಳಲ್ಲಿ ಸಕಾಲಕ್ಕೆ ಆಗಾಗ ದೋಷ ಪರಿಹಾರಕ ಹಿಮ್ಮಾಹಿತಿಯನ್ನು ಒದಗಿಸುವುದು ಅತಿ ಮುಖ್ಯ ಎಂಬ ಅಂಶವನ್ನು ಬೋಧನ ಕೌಶಲ್ಯಗಳನ್ನು ಕುರಿತಾದ ಸಂಶೋಧನೆಗಳು ತೋರಿಸಿಕೊಟ್ಟಿವೆ.
- **ಮಾಪನಕ್ಕೆಂದು ಸಂಗ್ರಹಿಸಿದ ದತ್ತಾಂಶವನ್ನು ಏನು ಮಾಡಲಾಗುವುದು?**: ಮೇಲೆ ಹೇಳಿದಂತೆ ನಾವು ವಿವಿಧ ಉದ್ದೇಶಗಳಿಗಾಗಿ ಮಾಪನ ಕೈಗೊಳ್ಳುತ್ತೇವೆ ಹಾಗೂ ಉದ್ದೇಶಗಳನ್ನು ಅವಲಂಬಿಸಿ ವಿವಿಧ ರೀತಿಯಲ್ಲಿ ದತ್ತಾಂಶಗಳನ್ನು ಬಳಸಿಕೊಳ್ಳಲಾಗುವುದು. ಮಾಪನವು ರೂಪಣಾತ್ಮಕವಾದರೆ, ವಿದ್ಯಾರ್ಥಿಗಳು ತಮ್ಮ ಪ್ರಗತಿಯನ್ನು ಮೇಲ್ವಿಚಾರಣೆ ಮತ್ತು ಸುಧಾರಣೆಗಾಗಿ ಬಳಸಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಸಂಬಂಧಿತ ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ದತ್ತಾಂಶವನ್ನು ಒದಗಿಸುವ ಅಗತ್ಯವಿದೆ. ನಮ್ಮೆಲ್ಲರಿಗೂ ಶಿಕ್ಷಕರು ಕೊಡುವ ನಿಯೋಜಿತ ಕಾರ್ಯವನ್ನು ಅಥವಾ ಪರೀಕ್ಷೆಯನ್ನು ಕಳಪೆಯಾಗಿ ಉತ್ತರಿಸಿರುವ ಅನುಭವವಿದೆ. ನಮಗೆ ಸ್ವಲ್ಪವಾದರೂ ಹಿನ್ನುಣಿಕೆ ಸಿಗದಿದ್ದಲ್ಲಿ ಅಥವಾ ಯಾವ ಹಿನ್ನುಣಿಕೆಯು ಲಭ್ಯವಾಗದೇ ಇದ್ದ ಪಕ್ಷದಲ್ಲಿ ನಮಗೆ ನಾವು ಎಲ್ಲಿ ತಪ್ಪು ಮಾಡಿದ್ದೆವು ಎಂದು ತಿಳಿಯುವುದಿಲ್ಲ. ಇಂತಹ ಸನ್ನಿವೇಶವು ಇದುವರೆಗೂ ನಾವು ಹೇಗೆ ಪ್ರಗತಿಯಾಗುತ್ತಿದ್ದೆವು, ಮುಂದೆ ಸುಧಾರಣೆ ತರಲು ನಾವೇನು ಮಾಡಬಲ್ಲೆವು ಎಂಬುದನ್ನು ತಿಳಿಯಲು ಉಪಯುಕ್ತವಲ್ಲ. ಮತ್ತೊಂದೆಡೆ, ಮಾಪನ ಸಂಕಲನಾತ್ಮಕವಾಗಿದ್ದಲ್ಲಿ, ಆಯಾ ಸಂಬಂಧಿತ ವ್ಯಕ್ತಿಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯ ಬಗೆಗೆ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ದೊಡ್ಡ ಪ್ರಮಾಣದ ಅಂತರರಾಷ್ಟ್ರೀಯ ಮಾಪನಗಳಲ್ಲಿ ಸಂಗ್ರಹಿಸಲಾಗುವ ಮಾಹಿತಿಯು ಮುಂದಿನ ತರಗತಿಗಳಿಗೆ ಈಗಾಗಲೇ ಮುಂದುವರೆದ ಅಥವಾ ಮಾಪನದ ಫಲಿತಾಂಶಗಳು ದೊರಕುವ ಮುನ್ನವೇ ಸ್ನಾತಕ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಹೆಚ್ಚೇನೋ ಪ್ರಯೋಜನಕಾರಿಯಲ್ಲ. ಆದರೆ, ಈ ಮಾಹಿತಿಯು ಪಠ್ಯಕ್ರಮ ತಯಾರಿಸುವವರಿಗೆ, ಆಡಳಿತಗಾರರಿಗೆ ಮತ್ತು ನಿರ್ದಿಷ್ಟ ವಿದ್ಯಾರ್ಥಿ ಸಮೂಹಗಳು ಮಾಪನಕ್ಕೆ ಒಳಪಟ್ಟ ಉದ್ದೇಶಗಳನ್ನು ಎಷ್ಟರಮಟ್ಟಿಗೆ ಸಾಧಿಸಿವೆ ಎಂದು ತಿಳಿಯಲು ಬಯಸುವ ಶಿಕ್ಷಕರಿಗೆ ಅಮೂಲ್ಯವಾಗಿದೆ.

**ಮಾಪನ ಉಪಕರಣಗಳ ವಿಧಗಳು**

ಮಾಪನ ಉಪಕರಣಗಳು ವಿಶಾಲ ವ್ಯಾಪ್ತಿಯಲ್ಲಿ ಲಭ್ಯವಿದೆ. ಬಹು ಆಯ್ಕೆ ಪ್ರಶ್ನೆಗಳು ಸರಿ/ತಪ್ಪು ಇತ್ಯಾದಿ ಸಾಂಪ್ರದಾಯಿಕ ಮಾಪನ ಉಪಕರಣಗಳನ್ನು ಅಧಿಕೃತ ಮಾಪನ ಪರೀಕ್ಷೆಗಳು ಹಿಂದಿಕ್ಕಿವೆ. ಈಗ ನಾವು ಕೆಲವು ಅಧಿಕೃತ ಮಾಪನ ಉಪಕರಣಗಳ ಬಗ್ಗೆ ತಿಳಿದುಕೊಳ್ಳೋಣ. ಈ ಕೆಳಗೆ ಕೆಲವು ಉದಾಹರಣೆಗಳಿವೆ:

ಸಮಾಜ ವಿಜ್ಞಾನ ವಿಷಯದಲ್ಲಿ ಸಾಮಾನ್ಯವಾಗಿ ಬಳಸಲಾಗುವ ಮಾಪನ ಉಪಕರಣಗಳು ಈ ಕೆಳಗಿನಂತಿವೆ. ಪ್ರತಿಯೊಂದು ಉಪಕರಣದ ಜೊತೆಗೆ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ.

- **ಲಿಖಿತ ನಿಯೋಜಿತ ಕಾರ್ಯ:** ಭಾರತ ವಿಭಜನೆಯ ಪುನರ್ ವಿಮರ್ಶೆ, ಭಾರತದ ಸಾಮಾಜಿಕ ಪಿಡುಗುಗಳು, ಭಾರತದಲ್ಲಿ ಚುನಾವಣೆ ಇತ್ಯಾದಿ – ಲಿಖಿತ ಪ್ರಬಂಧಗಳ ಶೀರ್ಷಿಕೆಗಳಾಗಬಲ್ಲವು.
- **ಅರ್ಥೈಸುವಿಕೆ ಮತ್ತು ಮೌಲ್ಯಮಾಪನ:** ಜನಸಂಖ್ಯಾವೃದ್ಧಿ, ವಿಪತ್ತು ಪರಿಹಾರ ಕ್ರಮಗಳು ಇತ್ಯಾದಿ ವಿಷಯಗಳು ಇದರಲ್ಲಿ ಒಳಗೊಳ್ಳಬಹುದು.
- **ವ್ಯಾಖ್ಯಾನಗಳು:** ಶಿಕ್ಷಣ ಹಕ್ಕು ಕಾಯ್ದೆ (2009), ಮೀಸಲಾತಿ ನೀತಿಗಳು ಇತ್ಯಾದಿ.
- **ಸರಳವಾದ ಪ್ರಾಯೋಜನೆಗಳು (ಸಾಮೂಹಿಕ ಮತ್ತು ವೈಯಕ್ತಿಕ):** ಇದರಲ್ಲಿ ಗ್ರಾಮವೊಂದರಲ್ಲಿ ಪೋಷಕರ ಶಿಕ್ಷಣ, ವೈಯಕ್ತಿಕ ಸೇವೆಗಳು, ಸ್ವಚ್ಛತೆಯ ಬಗೆಗೆ ಜಾಗೃತಿ ಇತ್ಯಾದಿಗಳು ಒಳಗೊಳ್ಳಬಹುದು.
- **ಪ್ರಸ್ತುತಿಗಳು (ಸಾಮೂಹಿಕ ಮತ್ತು ವೈಯಕ್ತಿಕ):** ವಿದ್ಯಾರ್ಥಿಗಳು ಭಾರತದಲ್ಲಿ ನಿರುದ್ಯೋಗ ಸಮಸ್ಯೆ ಮತ್ತು ಅದರ ಪರಿಹಾರಗಳು ಎಂಬ ವಿಷಯವನ್ನು ಕುರಿತು ಪ್ರಸ್ತುತಿಯೊಂದನ್ನು ಕೈಗೊಳ್ಳಬಹುದು.
- **ಕ್ವಿಜ್‌ಗಳು ಅಥವಾ ರಸಪ್ರಶ್ನೆ:** ಪ್ರಚಲಿತ ವಿದ್ಯಮಾನಗಳು ಒಳಗೊಂಡಂತೆ ಅನೇಕ ವಿಷಯಗಳ ಬಗ್ಗೆ ಇವುಗಳನ್ನು ನಡೆಬಹುದು.
- **ಮಾದರಿಗಳು ಮತ್ತು ಛಾರ್ಟುಗಳು:** ಬೇರೆ ಬೇರೆ ಋತುಮಾನದಲ್ಲಿ ಭಾರತಲ್ಲಿನ ಹವಾಮಾನ ಪರಿಸ್ಥಿತಿ ಭಾರತದ ಭೌತಿಕ ಲಕ್ಷಣಗಳು, ಅರಣ್ಯ ಸಂಪನ್ಮೂಲಗಳು ಇತ್ಯಾದಿ – ಇವುಗಳ ಕುರಿತಾಗಿ ನಕ್ಷೆಗಳನ್ನು ಸಿದ್ಧಪಡಿಸುವಂತೆ ಮಕ್ಕಳಿಗೆ ಹೇಳಬಹುದು.
- **ಚರ್ಚೆಗಳು ವಿಚಾರಗೋಷ್ಠಿ/ವಿಚಾರ ಸಂಕಿರಣ ಮತ್ತು ಸಮ್ಮೇಳನಗಳು:** ಇವುಗಳನ್ನು ವಿದ್ಯಾರ್ಥಿಗಳಲ್ಲಿ ವೈವಿಧ್ಯಮಯ ಕೌಶಲ್ಯಗಳನ್ನು ಬೆಳಸುವ ಉದ್ದೇಶದಿಂದ ನಡೆಸಬಹುದಾಗಿದೆ.
- **ಐತಿಹಾಸಿಕ ವ್ಯಕ್ತಿಗಳ ಕಲ್ಪನಾತ್ಮಕ ಸಂದರ್ಶನ:** ಪಾತ್ರ ನಿರ್ವಹಣೆ, ಐತಿಹಾಸಿಕ ಘಟನೆಗಳ ನಾಟಕೀಕರಣ ಇತ್ಯಾದಿ. ಮಕ್ಕಳು ಸ್ವಾತಂತ್ರ ಹೋರಾಟಗಾರರು, ಅಸ್ಪೃಶ್ಯತೆ, ಅಣಕು ಪಾರ್ಲಿಮೇಟ್ ಮುಂತಾದವುಗಳ ಕುರಿತಾಗಿ ಪಾತ್ರಾಭಿನಯವನ್ನು ಪ್ರದರ್ಶಿಸಬಹುದು. ಸಮಾಜ ಸುಧಾರಕರ ಬೋಧನೆಗಳನ್ನು ಅಭಿನಯದ ಮೂಲಕ ಮನಗಾಣಿಸಬಹುದು.

ಈ ಅಧಿಕೃತ ಅಥವಾ ಪರ್ಯಾಯ ಮಾಪನ ಉಪಕರಣಗಳು ಈ ಕೆಳಗಿನ ಅನುಕೂಲತೆಗಳನ್ನು ಹೊಂದಿವೆ:

- ಪರ್ಯಾಯ ಮಾಪನವು ವಿದ್ಯಾರ್ಥಿಗಳ ಪ್ರಾವೀಣ್ಯತೆಯನ್ನು, ಅವರ ವಿಶ್ಲೇಷಣಾತ್ಮಕ ಮತ್ತು ತಾರ್ಕಿಕ(logic) ಚಿಂತನಾ ಕೌಶಲ್ಯಗಳನ್ನು ಅಳೆಯುವಲ್ಲಿ ನೆರವಾಗುತ್ತದೆ. ತಮ್ಮ ಸೈದ್ಧಾಂತಿಕ ಜ್ಞಾನವನ್ನು ಅನ್ವಯನ ಮಾಡುವುದರ ಮೂಲಕ ವಿದ್ಯಾರ್ಥಿಗಳು ಉತ್ತಮ ಅನುಭವವನ್ನು ಪಡೆಯುತ್ತಾರಲ್ಲದೆ ಸಮಸ್ಯೆಗಳನ್ನು ಪರಿಹರಿಸುವುದನ್ನು ಕಲಿಯುತ್ತಾರೆ.
- ಇದು ವಿದ್ಯಾರ್ಥಿಗಳಲ್ಲಿರುವ ಸಾಮರ್ಥ್ಯಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ವಿದ್ಯಾರ್ಥಿಯು ಯಾವ ಕ್ಷೇತ್ರದತ್ತ ಹೆಚ್ಚು ಆಕರ್ಷಿತನಾಗುತ್ತಾನೆ ಎಂದೂ ಆತ/ಆಕೆಯ ಯಶಸ್ಸಿನ ಪರ ಎಲ್ಲಿ ಜಾಸ್ತಿ ಇದೆ ಎಂದೂ ಶಿಕ್ಷಕರು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.
- ವಿದ್ಯಾರ್ಥಿಗಳ ಸಮಸ್ಯಾ ಪರಿಹಾರ ಕೌಶಲ್ಯಗಳನ್ನು ಇದು ಮೌಲ್ಯಮಾಪನ ಮಾಡುತ್ತದೆ ಹಾಗೂ ಜ್ಞಾನವನ್ನು ವಾಸ್ತವಿಕ ಜೀವನದಲ್ಲಿ ಅನ್ವಯಿಸಿಕೊಳ್ಳಲು ನೆರವಾಗುತ್ತದೆ.
- ಇದು ವಿದ್ಯಾರ್ಥಿಗಳ ತೊಡಗಿಸುಕೊಳ್ಳುವಿಕೆಗೆ ನೆರವಾಗುತ್ತದೆ ಹಾಗೂ ಅವರಿಗೆ ಬೋಧಿಸಲಾಗುತ್ತಿರುವ ವಿಷಯಗಳಿಗೆ ಹೊಸ ಅರ್ಥವನ್ನು ನಿರ್ಮಿಸಲು ಅವಕಾಶಗಳನ್ನು ಒದಗಿಸುತ್ತದೆ.
- ಇದು ವಿದ್ಯಾರ್ಥಿಗಳಲ್ಲಿ ವಿಶಾಲವಾದ ಸಂಜ್ಞಾನಾತ್ಮಕ ಕೌಶಲ್ಯಗಳನ್ನು ಬೆಳೆಸುತ್ತದೆ.

- ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಹಪಾಠಿಗಳು – ಈ ಮೂವರ ನಡುವೆ ಪ್ರಯೋಜನಕರವಾದ ಮತ್ತು ಒಮ್ಮತದಿಂದ ಕೂಡಿದ ಸೌಹಾರ್ದಯುತ ಸಂಬಂಧವು ಬೋಧನೆಯ ಪ್ರಕ್ರಿಯೆಯ ಆಧಾರ ರೂಪದಲ್ಲಿ ಒಟ್ಟುಗೂಡುತ್ತದೆ. ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವುದರಿಂದ ಮತ್ತು ಭಾಗವಹಿಸುವಿಕೆಯಿಂದ ವಿದ್ಯಾರ್ಥಿಗಳ ಸಂವಹನ ಕೌಶಲ ಮತ್ತು ಪಾರಸ್ಪರಿಕ ಕ್ರಿಯೆಯ ಕೌಶಲಗಳು ವೃದ್ಧಿಸುತ್ತವೆ.
- ವಿದ್ಯಾರ್ಥಿಗಳಿಗೆ ಕಲಿಯಲು ವಿಶಾಲ ಸಂಪನ್ಮೂಲಗಳನ್ನು ಒದಗಿಸುತ್ತದೆ. ಈ ಸನ್ನಿವೇಶದಲ್ಲಿ ಮಾಪನವು ಪಠ್ಯಕ್ರಮಕ್ಕೆ ಚಾಲಕ ಶಕ್ತಿಯಾಗುತ್ತದೆ.
- ಶಿಕ್ಷಕರಿಗೆ ವಿದ್ಯಾರ್ಥಿಗಳ ಸಾಮರ್ಥ್ಯಗಳ ಆಳವಾದ ಅರಿವು ಮತ್ತು ಅದರ ಬಲಾಬಲಗಳ ಬಗ್ಗೆ ಮಾಹಿತಿಯನ್ನು ಕೊಡುತ್ತದೆ.
- ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯೋನ್ಮುಖರಾಗಲು ಅವಕಾಶವಿರುತ್ತದೆ. ಹಾಗೂ ನಿರ್ದಿಷ್ಟಗೊಳಿಸಿದ ನಿಯಮದಂತೆ ಕಾರ್ಯಪ್ರವೃತ್ತರಾಗಲು ಒತ್ತಾಯ ಅಥವಾ ಪರಿಮಿತಿಗಳನ್ನು ಹೇರುವುದಿಲ್ಲ.

**ಘಟನಾವಳಿ ದಾಖಲೆ ಅಥವಾ ವೃತ್ತಾಂತದ ದಾಖಲೆ:** ವೃತ್ತಾಂತ ದಾಖಲೆ ಎಂದರೆ ತರಗತಿಯಲ್ಲಿ ನಡೆದ ಘಟನೆ ಅಥವಾ ಕಂಡುಬಂದ ವರ್ತನೆಯ ದಾಖಲೆ. ವೃತ್ತಾಂತ ಟಿಪ್ಪಣಿ ಎಂದರೆ ಒಂದು ಘಟನೆ ಅಥವಾ ವ್ಯಕ್ತಿಯನ್ನು ಕುರಿತ ಸಂಕ್ಷಿಪ್ತವೂ, ವಸ್ತುನಿಷ್ಠವೂ ಆದ ನಿರೂಪಣೆ ತರಗತಿಗಳಲ್ಲಿ ಶಿಕ್ಷಕರು ತಾವು ಗಮನಿಸಿದ ವಿದ್ಯಾರ್ಥಿಗಳ ವರ್ತನೆಗಳು, ಕೌಶಲ್ಯಗಳು, ಅಭಿವೃತ್ತಿಗಳು, ಕಾರ್ಯಕ್ಷಮತೆ ಮತ್ತು ತರಗತಿಯ ಘಟನೆಗಳನ್ನು ದಾಖಲಿಸಿ ವೃತ್ತಾಂತ ಟಿಪ್ಪಣಿ ಬರೆಯಬಹುದು. ವಿದ್ಯಾರ್ಥಿಗಳನ್ನು ಕುರಿತು ವೃತ್ತಾಂತವನ್ನು ಶಿಕ್ಷಕರು ಬರೆದು ಸಂಗ್ರಹಿಸಿ ಒಂದು ದಾಖಲೆಯ ರೂಪದಲ್ಲಿ ಬಳಸಬಹುದು.

ವೃತ್ತಾಂತ ಟಿಪ್ಪಣಿಯು ಮಹತ್ವಪೂರ್ಣ ಘಟನೆ, ವರ್ತನೆ ಅಥವಾ ಕಲಿಕೆಯ ಫಲಿತಗಳ ಬಗೆಗಿನ ವಾಸ್ತವಿಕ ಮಾಹಿತಿಯನ್ನು ಒಳಗೊಂಡಿರಬೇಕು. ಇದು ಈ ಕೆಳಗಿನ ಲಕ್ಷಣಗಳನ್ನು ಹೊಂದಿರಬೇಕು

- ಅದು ಅವಲೋಕನಕ್ಕೆ ಒಳಗಾಗಿರುವ ವಿದ್ಯಾರ್ಥಿಯ ಹೆಸರನ್ನು ಒಳಗೊಂಡಿರಬೇಕು.
- ವಿದ್ಯಾರ್ಥಿಯ ಬಲಗಳು ಮತ್ತು ಸಕಾರಾತ್ಮಕ ಅಂಶಗಳನ್ನು ನಿರ್ದಿಷ್ಟವಾಗಿ ಹೇಳಬೇಕು.
- ದಾಖಲಿಸುವುದಕ್ಕೆ ABC ಪ್ರರೂಪವನ್ನು ಬಳಸಬಹುದು. ಪೂರ್ವ ವೃತ್ತಾಂತ(**Anecdotal)** (ಏಕೆ ಅಥವಾ ಹೇಗೆ), ವರ್ತನೆ**(**behavior), ವರ್ತನೆಯ ಪರಿಣಾಮ ಮತ್ತು ಘಟನೆಯ ಸಂದರ್ಭ (Consequence of behavior and Context of incident).
- ಇದು ಶಿಕ್ಷಕರ ಟಿಪ್ಪಣಿ, ಕಾರ್ಯ ಯೋಜನೆ ಮತ್ತು ಮುಂದಿನ ಅವಲೋಕನಕ್ಕೆ ಶಿಫಾರಸ್ಸುಗಳನ್ನು ಒಳಗೊಂಡಿರಬಹುದು.
- ಗುರುತಿಸಲಾದ ಕಲಿಕಾ ನಮೂನೆಗಳನ್ನು ಸಾರಾಂಶೀಕರಿಸಬಹುದು.

**ಮಾನದಂಡ ನಿಶ್ಚಯಿಸುವುದು(ಬೆಂಚ್‌ಮಾರ್ಕ್ ಮಾಡುವುದು):** ಮಾನದಂಡ ನಿಶ್ಚಯ ಮಾಪನಗಳನ್ನು ಪಠ್ಯಕ್ರಮ ಅನುಕರಣೆಯ ಅವಧಿಯುದ್ದಕ್ಕೂ ನಿರ್ಧಿಷ್ಟ ಸಮಯದಲ್ಲಿ ಶಾಲಾ ವರ್ಷದಲ್ಲಿ ಕೊಡಲಾಗುತ್ತದೆ. ಇದರ ಉದ್ದೇಶ ದೀರ್ಘಕಾಲೀನ ಕಲಿಕಾ ಗುರಿಗಳ – ವಿದ್ಯಾರ್ಥಿಗಳ ಜ್ಞಾನ ಮತ್ತು ಕೌಶಲ್ಯಗಳ– ಮೌಲ್ಯಮಾಪನ ಮಾಡುವುದು. ಉದ್ದೇಶ, ಉದ್ದೇಶಿತ ಬಳಕೆದಾರರು ಮತ್ತು ಉಪಕರಣಗಳ ಬಳಕೆ – ಈ ಅಂಶಗಳು ಮಾನದಂಡ ನಿಶ್ಚಯ ಮಾಪನದ ವಿನ್ಯಾಸ ಮತ್ತು ಆಯ್ಕೆಯನ್ನು ಪ್ರಭಾವಿಸುತ್ತವೆ. ನೀತಿ ರೂಪಣೆ, ಬೋಧನಾ ಸಂಬಂಧಿ ಯೋಜನೆ ಮತ್ತು ಶಾಲೆ / ಜಿಲ್ಲಾ ಮಟ್ಟಗಳಲ್ಲಿ ಬೇಕಾದ ಬೆಂಚ್‌ಮಾರ್ಕ್ ಮಾಪನಗಳು ಮಾಹಿತಿಯನ್ನು ಒದಗಿಸುತ್ತವೆ.

**ತಾಳೆಪಟ್ಟಿ (ಚೆಕ್‌ಲಿಸ್ಟ್):** ವಿದ್ಯಾರ್ಥಿಗಳು ಕೆಲವು ನಿರ್ದಿಷ್ಟ ಕಾರ್ಯವನ್ನು ಕೈಗೊಳ್ಳುವಾಗ ಶಿಕ್ಷಕರು ತಮ್ಮ ವೀಕ್ಷಿಸಿ ದಾಖಲಿಸಲು ಮಾರ್ಗದರ್ಶನ ಕೊಡುವಂತಹ ಕೌಶಲ್ಯಗಳನ್ನು, ವರ್ತನೆಗಳನ್ನು ಅಥವಾ ಗುಣಲಕ್ಷಣಗಳನ್ನು ಪಟ್ಟಿಮಾಡುವ ಮಾಪನ ಮಾರ್ಗದರ್ಶಿಗೆ ತಾಳೆಪಟ್ಟಿ(ಚೆಕ್‌ಲಿಸ್ಟ್) ಎನ್ನುವರು. ವಿದ್ಯಾರ್ಥಿಗಳು ತಮ್ಮ ಸ್ವಯಂ–ಮಾಪನಕ್ಕೆ ಉಪಯೋಗಿಸಬಹುದಾದ ವಿದ್ಯಾರ್ಥಿ ಚೆಕ್‌ಲಿಸ್ಟ್‌ಗಳೂ ಇವೆ.

ಗುಂಪು ಚರ್ಚೆಗೆ ಬಳಸಲಾಗುವ ಅವಲೋಕನ ಚೆಕ್‌ಲಿಸ್ಟ್‌ನಲ್ಲಿರುವ ಕೆಲವು ಪ್ರಶ್ನೆಗಳು ಇಂತಿವೆ:

- ಕಲಿಕಾರ್ಥಿಗೆ ಸನ್ನಿವೇಶವನ್ನು ಕುರಿತಾದ ಸೂಕ್ತ ಜ್ಞಾನವಿದೆ? ಇದೆ/ಇಲ್ಲ
- ಕಲಿಕಾರ್ಥಿ ಅರ್ಥಮಾಡಿಕೊಳ್ಳುವ ಮತ್ತು ಸೃಜನಾತ್ಮಕ ಕೌಶಲ್ಯಗಳನ್ನು ಹೊಂದಿದ್ದಾನೆಯೆ? ಹೌದು/ಇಲ್ಲ
- ಕಲಿಕಾರ್ಥಿಯು ಸಂಬಂಧಿತ ಸಮಸ್ಯೆಗಳಿಗೆ ಮತ್ತು ಸಮಕಾಲೀನ ವಿವಾದಾಂಶಗಳಿಗೆ ಸಮರ್ಪಕ ಪರಿಹಾರಗಳನ್ನು ಒದಗಿಸುತ್ತಾನೆಯೇ? ಹೌದು/ಇಲ್ಲ
- ಕಲಿಕಾರ್ಥಿಯು ಚರ್ಚೆಯ ಸಮಯದಲ್ಲಿ ನಾಯಕತ್ವ ಕೌಶಲ್ಯಗಳನ್ನು ತೋರಿಸುತ್ತಾನೆಯೇ, ಟೀಕೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸುತ್ತಾನೆಯೇ? ಹೌದು /ಇಲ್ಲ

ಹಲವು ಚಟುವಟಿಕೆಯ ಸರಣಿಯಲ್ಲಿ ತೊಡಗಿರುವಾಗ ಅಥವಾ ವಿವಿಧ ಕಲಿಕಾ ಸನ್ನಿವೇಶಗಳಲ್ಲಿ ಸ್ನೇಹಿತರೊಂದಿಗೆ ಪಾರಸ್ಪರಿಕ ಕ್ರಿಯೆ ನಡೆಸುತ್ತಿರುವಾಗ, ಅವರು ಚಿಂತನಾಧಾಟಿಯನ್ನು ಸಮಸ್ಯಾ ಪರಿಹಾರವನ್ನು ಕೈಗೊಳ್ಳುವಾಗ ಮತ್ತು ಕೌಶಲ್ಯಗಳನ್ನು ಪ್ರದರ್ಶಿಸುವಾಗ ವಿದ್ಯಾರ್ಥಿಗಳನ್ನು ಅವಲೋಕಿಸಿದರೆ ವಿದ್ಯಾರ್ಥಿಗಳ ಕಲಿಕೆ ಮತ್ತು ಬೆಳವಣಿಗೆಯ ಬಗೆಗೆ ಅಂತದೃಷ್ಟಿ ಲಭಿಸುತ್ತದೆ. ಯಾವ ಪರಿಸ್ಥಿತಿಗಳಲ್ಲಿ ಯಶಸ್ಸು ಬಹುತೇಕ ಸಾಧ್ಯ, ಪ್ರತ್ಯಕ್ಷ ವಿದ್ಯಾರ್ಥಿ ಸಮಸ್ಯೆ ಎದುರಾದಾಗ ಏನು ಮಾಡುವನು, ಅವರು ಹೇಗೆ ಮತ್ತೊಬ್ಬರೊಂದಿಗೆ ಕೈಗೊಳ್ಳುವ ಪಾರಸ್ಪರಿಕ ಕ್ರಿಯೆ ಅವರ ಕಲಿಕೆ ಮತ್ತು ಏಕಾಗ್ರತೆಯನ್ನು ಪ್ರಭಾವಿಸುತ್ತದೆ ಇತ್ಯಾದಿ ಸಂಗತಿಗಳನ್ನು ಶಿಕ್ಷಕರು ಅರ್ಥಮಾಡಿಕೊಳ್ಳಬಹುದು. ಅಲ್ಲದೆ ಅದಕ್ಕೆ ತಕ್ಕಂತೆ ಸೂಕ್ತ ಕ್ರಮ ಕೈಗೊಳ್ಳಬಹುದು.

**ಸಮ್ಮೇಳನ (ಕಾನ್‌ಫರೆನ್ಸ್):** ವಿದ್ಯಾರ್ಥಿಯ ಪ್ರಗತಿಯನ್ನು ಚರ್ಚಿಸಲು ಶಿಕ್ಷಕ, ವಿದ್ಯಾರ್ಥಿ / ಕುಟುಂಬ ಸದಸ್ಯರು ಸೇರಿ ನಡೆಸುವ ಸಭೆ ಅಥವಾ ಸಂವಾದವೇ ಸಮ್ಮೇಳನ ಎನಿಸುವುದು. ನೇರವಾಗಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದು, ವಿದ್ಯಾರ್ಥಿಗೆ ತನ್ನನ್ನು ತಾನು ವ್ಯಕ್ತಪಡಿಸಲು ಅವಕಾಶ ಒದಗಿಸುವುದು ಇದರ ಉದ್ದೇಶ. ಪೋಷಕರ ಸಮ್ಮೇಳನದಲ್ಲಿ ಮಕ್ಕಳ ಪ್ರಗತಿಯನ್ನು ಮತ್ತು ಶಾಲೆಯಲ್ಲಿ ಅವರ ಕಾರ್ಯಕ್ಷಮತೆಯ ಬಗೆಗೆ ಅವರ ಪೋಷಕರಿಗೆ ತಿಳಿಸುವುದು ಉದ್ದೇಶವಾಗಿರುತ್ತದೆ.

**ವರ್ಷಾಂತ್ಯದ ಪರೀಕ್ಷೆ:** ವರ್ಷದುದ್ದಕ್ಕೂ ಬೋಧನೆಯ ಕೊಡಲಾದ ನಿರ್ದಿಷ್ಟ ಕೌಶಲ್ಯಗಳ ಔಪಚಾರಿಕ ಮಾಪನವೇ ಈ ವರ್ಷಾಂತ್ಯದ ಪರೀಕ್ಷೆ. ಶಾಲಾ ವರ್ಷದ ಆರಂಭದಲ್ಲಿ ನಿಗದಿಗೊಳಿಸಲಾದ ಕಲಿಕಾ ಉದ್ದೇಶಗಳು ಸಾಧಿತವಾಗಿವೆಯೇ ಅಥವಾ ಇಲ್ಲವೇ, ಎಷ್ಟರ ಮಟ್ಟಿಗೆ ಸಾಧಿತವಾಗಿವೆ ಎಂಬುದನ್ನು ಈ ವರ್ಷಾಂತ್ಯದ ಪರೀಕ್ಷೆ ಮಾಪನ ಮಾಡುತ್ತದೆ. ಕೆಲವೊಮ್ಮೆ ಹಿಂದಿನ ವರ್ಷಗಳ ಬೆಂಚ್‌ಮಾರ್ಕ್ ದತ್ತಾಂಶಗಳೊಂದಿಗೆ ಈ ಮಾಪನಗಳನ್ನು ಹೋಲಿಸಿ ನೋಡಲಾಗುತ್ತದೆ. ನಿಮ್ಮ ಶಾಲೆಯಿಂದ, ರಾಜ್ಯದಿಂದ ಅಥವಾ ವ್ಯಾಪಕ ರಾಷ್ಟ್ರೀಯ ಸರಾಸರಿ ಅಂಕಿ ಅಂಶಗಳಿಂದ ಬೆಂಚ್‌ಮಾರ್ಕ್ ದತ್ತಾಂಶ ನಿಮಗೆ ದೊರಕಬಲ್ಲದು.

ಶಿಕ್ಷಕರು ವರ್ಷಾಂತ್ಯದ ಮಾಪನವನ್ನು ತರಗತಿಯ ಬೋಧನೆಯಲ್ಲಿ ಅಥವಾ ಪಠ್ಯಕ್ರಮ ಜಾರಿಗೊಳಿಸುವಿಕೆಯಲ್ಲಿನ ಬಲಾಬಲಗಳನ್ನು ಗುರುತಿಸಿ ಅಗತ್ಯವಿದ್ದಲ್ಲಿ ಮಾರ್ಪಡುಗಳನ್ನು ತರಲು ಉಪಯೋಗಿಸಬಹುದು. ಮಾಪನದಿಂದ ಪಡೆದ ಮಾಹಿತಿ ಆಡಳಿತ ಮಟ್ಟದಲ್ಲಿಯೂ

ಮೌಲ್ಯವುಳ್ಳದ್ದಾಗಿದ್ದು ಮುಂದಿನ ಶಾಲಾ ವರ್ಷದ ಯೋಜನೆ ಕೈಗೊಳ್ಳುವಾಗ ಗಣನೆಗೆ ತೆಗೆದುಕೊಳ್ಳಬಹುದು.

**ಕಲಿಕಾ ದಿನಚರಿ:** ಕಲಿಕಾ ದಿನಚರಿಯು ವಿದ್ಯಾರ್ಥಿಗಳು ತಮ್ಮ ಕಲಿಕೆಯ ಮೇಲ್ವಿಚಾರಣೆ ಕೈಗೊಳ್ಳಲು ಮತ್ತು ಅದನ್ನು ಕುರಿತು ಪ್ರತಿಫಲನಾತ್ಮಕ ಚಿಂತನೆ ನೆಡಸಲು ಒಂದು ದಾರಿಯಾಗಿದೆ. ಈ ಒಂದು ಪಾಠ ಅಥವಾ ಈಗ ತಾನೆ ಜರುಗಿದ ಕಲಿಕಾ ಅನುಭವಗಳನ್ನು ಕುರಿತು ನಡೆಸಿದ ಪ್ರತಿಫಲನಾತ್ಮಕ ಚಿಂತನೆ ತಿಳಿವಿಗೆ ನೆರವಾಗುತ್ತದೆಯಲ್ಲದೆ ವಿಚಾರಗಳ ಅಂತರ್ದೃಷ್ಟಿಗಳ ದಾಖಲೆಯನ್ನು ಒದಗಿಸುತ್ತದೆ. ಮುಂದಿನ ಬೋಧನೆಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಈ ಕಲಿಕಾ ದಿನಚರಿಯನ್ನು ಒಂದು ಮಾಪನ ಉಪಕರಣವಾಗಿ ಶಿಕ್ಷಕರು ಬಳಸಬಹುದು. ವಿದ್ಯಾರ್ಥಿ ಸಮ್ಮೇಳನದಲ್ಲಿ ಹೊಸ ತಿಳುವಳಿಕೆಗೆ ಮತ್ತು ಭವಿಷ್ಯದ ಗುರಿಗಳಿಗೆ ಸಂಬಂಧಿಸಿದ ಚರ್ಚೆಗೆ ಈ ಕಲಿಕಾ ದಿನಚರಿ ಒಂದು ಆಧಾರವಾಗಬಲ್ಲದು. ಕಲಿಕಾ ದಿನಚರಿಯ ಪ್ರಾರೂಪವನ್ನು ಈ ಕೆಳಗೆ ನೀಡಲಾಗಿದೆ.

<table>
<tr><td colspan="3">ದಿನಾಂಕ:</td></tr>
<tr><td colspan="3">ಚಟುವಟಿಕೆ:</td></tr>
<tr><td>ನೀವು ಏನನ್ನು ಕಲಿತಿರಿ</td><td>ಈ ಅಂಶಗಳನ್ನು ಕಲಿಯಲು ನೀವು ಯಾವ ಯಾವ ಕಾರ್ಯತಂತ್ರಗಳನ್ನು ಅಭ್ಯಾಸ ಮಾಡಿದಿರಿ?</td><td>ನೀವು ಕಲಿತದ್ದರ ಕುರಿತಾದ ನಿಮ್ಮ ಪ್ರಶ್ನೆಗಳೇನು?</td></tr>
<tr><td></td><td></td><td></td></tr>
</table>

**ಸಹಪಾಠಿಗಳಿಂದ ಮಾಪನ:**
ಈ ಕುರಿತು ನೀವು 'ಕಲಿಕೆಗಾಗಿ ಮಾಪನ' ಪತ್ರಿಕೆಯಲ್ಲಿ ವಿಸ್ತಾರವಾಗಿ ಕಲಿತಿರುವಿರಿ.

ವಿದ್ಯಾರ್ಥಿಗಳು ತಮ್ಮ ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಸಹಪಾಠಿಯ ಸಾಧನೆಯ ಮಾಪನ ಕೈಗೊಳ್ಳುವುದಕ್ಕೆ ಅವರಿಗೆ ನೇರವಾಗುವ ಒಂದು ಉಪಕ್ರಮ ಇದಾಗಿದೆ. ಸಮಾನ ಸ್ತರದಲ್ಲಿರುವ ಇತರ ವಿದ್ಯಾರ್ಥಿಯಿಂದ ವಿದ್ಯಾರ್ಥಿಗಳ ಕಾರ್ಯವನ್ನು ಮಾಪನ ಮಾಡಿಸುವುದಕ್ಕೆ ಸಹಪಾಠಿಗಳಿಂದ ಮಾಪನ ಮಾಡಿಸಲಾಗುತ್ತದೆ. ಇದು ಒಂದು ರೀತಿಯ ಔಪಚಾರಿಕ ಮಾಪನವನ್ನು ಹೆಚ್ಚು ಪ್ರಮಾಣೀಕೃತಗೊಳಿಸಲೂ ಸಹಕಾರಿಯಾಗುತ್ತವೆ. ವಿದ್ಯಾರ್ಥಿಗಳು ತಮ್ಮ ಪ್ರಯತ್ನಗಳನ್ನು ಕುರಿತು ಪ್ರತಿಫಲನಾತ್ಮಕ ಚಿಂತನೆ ಮಾಡಿ ತಮ್ಮ ಹಾಗೂ ಗೆಳೆಯರ ಕಾರ್ಯಗಳನ್ನು ಹೋಲಿಸಿಕೊಂಡು ಹಿಮ್ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ತಮ್ಮ ಚಿಂತನೆಯನ್ನು ಸಮೃದ್ಧಿಗೊಳಿಸಿಕೊಂಡು ಕೌಶಲಗಳನ್ನು ಉತ್ತಮಪಡಿಸಿಕೊಳ್ಳುತ್ತಾರೆ.

ಸಹಪಾಠಿಗಳಿಂದ ಮಾಪನ ಒಂದು ಶಕ್ತಿಯುತ ಪರಸಂಜ್ಞಾನಾತ್ಮಕ (meta-cognitive) ಉಪಕರಣ. ಇದು ವಿದ್ಯಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುತ್ತದೆಯಲ್ಲದೆ ಅವರು ತಮ್ಮದೇ ಕಲಿಕೆ ಮತ್ತು ಕೌಶಲ್ಯಗಳನ್ನು ಕುರಿತ ಪ್ರತಿಫಲನಾತ್ಮಕ ಚಿಂತನೆ ನಡೆಸುವ ಮತ್ತು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುವ ಸಾಮರ್ಥ್ಯವನ್ನು ಬೆಳೆಸುತ್ತದೆ. ವಿಮರ್ಶಾತ್ಮಕ ಚಿಂತನೆ ಪಾರಸ್ಪರಿಕ ಹಾಗೂ ಇತರ ಕೌಶಲ್ಯಗಳ ಬೆಳವಣಿಗೆಗೆ ಇದು ನೆರವಾಗುವುದರ ಜೊತೆಗೆ ಒಂದು ಶಿಸ್ತಿನ ಜ್ಞಾನಕ್ಷೇತ್ರದೊಳಗಿನ ಅರಿವನ್ನು ವೃದ್ಧಿಸುತ್ತದೆ.

**ವ್ಯಕ್ತಿ ಕಾರ್ಯಸಂಚಿ(ಪೋರ್ಟ್‌ಫೋಲಿಯೋ)**: ಇದು ಅಧಿಕೃತ ಮಾಪನದ ಒಂದು ರೂಪವಾಗಿದ್ದು ಇದರಲ್ಲಿ ವಿದ್ಯಾರ್ಥಿಗಳು ಸಮಯ ಕಳೆದಂತೆ ತಮ್ಮ ಪ್ರಗತಿ ಎಷ್ಟಾಗಿದೆಯೆಂದು ದಾಖಲಿಸಲು ತಮ್ಮ ಕಾರ್ಯದ ನಮೂನೆಗಳನ್ನು ಪೋರ್ಟ್‌ಪೋಲಿಯೋ(ದಾಸ್ತಾವೇಜುಗಳನ್ನಿಡುವ ಕರಸಂಪುಟ)ದಲ್ಲಿ ಇಡುತ್ತಾರೆ. ಪೋರ್ಟ್‌ಪೋಲಿಯೋ ಮಾಪನವು ಕಲಿಕಾರ್ಥಿಗಳು ಶಿಕ್ಷಕರೊಂದಿಗೆ ಸೇರಿ ನಡೆಸುವ

ಮಾಪನದ ಒಂದು ರೂಪವಾಗಿದೆ ಹಾಗೂ ಇದು ಸಾಂಪ್ರದಾಯಿಕ ತರಗತಿಯ ಪರೀಕ್ಷೆಗೆ ಒಂದು ಪರ್ಯಾಯವಾಗಿದೆ. ಇದರಲ್ಲಿ ಮುಖ್ಯವಾದ ಅಂಶವೆಂದರೆ ಪ್ರತಿಫಲನಾತ್ಮಕ ಚಿಂತನೆ ಅಥವಾ ಪರ್ಯಾಲೋಚನೆ: ಕಲಿಕಾರ್ಥಿಗಳು ತಮ್ಮದೇ ಕಾರ್ಯವನ್ನು ಕುರಿತು ಪರ್ಯಾಲೋಚನೆ ನಡೆಸಿದಾಗ ಅವರು ತಮ್ಮ ಕಾರ್ಯದಲ್ಲಿರುವ (ಸ್ವಯಂ ಮಾಪನ) ಬಲಾಬಲಗಳನ್ನು ಗುರುತಿಸಲು ಪ್ರಾರಂಭಿಸುತ್ತಾರೆ. ಆಗ ಮಿತಿಗಳನ್ನು ಸುಧಾರಿಸಿಕೊಳ್ಳುವುದೇ ಗುರಿಗಳಾಗುತ್ತವೆ. ಪೋರ್ಟ್‌ಫೋಲಿಯೋ ಮಾಪನದಲ್ಲಿ ಗುಣಾತ್ಮಕತೆಗೆ ಪ್ರಾಧಾನ್ಯತೆಯೇ ವಿನಾ ಪರಿಮಾಣಕ್ಕಲ್ಲ. ಪೋರ್ಟ್‌ಫೋಲಿಯೋದಲ್ಲಿ ಮಾಡಿರುವ ಆಯ್ಕೆಗಳನ್ನು ಕಲಿಕಾರ್ಥಿಗಳು ಯಾವ ಕಾರಣದಿಂದ ಮಾಡಿದ್ದಾರೆ ಎಂಬುದು ಇದರಲ್ಲಿ ವ್ಯಕ್ತವಾಗುತ್ತದೆ. ಜೊತೆಗೆ ಕಲಿಕಾ ಫಲಿತಾಂಶಗಳನ್ನು ಪಡೆಯಲು ಅವರು ಬಳಸಿದ ಪ್ರಕ್ರಿಯೆಯನ್ನೂ ಇದು ವಿವರಿಸುತತ್ತದೆ. ಇಬ್ಬರು ಕಲಿಕಾರ್ಥಿಗಳು ಒಂದೇ ರೀತಿಯ ಕಾರ್ಯವನ್ನು ಮಾಪನಕ್ಕಾಗಿ ಸಲ್ಲಿಸಿದರೆ ವ್ಯಕ್ತಿಗತ ಪರ್ಯಾಲೋಚನೆಯಿಂದ ಬೇರೆ ರೀತಿಯ ಫಲಿತಾಂಶ ದೊರಕಬಹುದು. ಕಲಿಕಾರ್ಥಿಯು ಉತ್ಪಾದಿಸಿದ ಫಲಿತವು ಸ್ವಲ್ಪಮಟ್ಟಿಗೆ ತಪ್ಪಾಗಿದ್ದರೂ ಪ್ರಕ್ರಿಯೆ ಗುಣಮಟ್ಟದ್ದಾಗಿರಬಹುದು. ಇದನ್ನು ಅಧ್ಯಾಪಕರು ಗಮನಿಸಬೇಕು.

ಮೂರು ಮುಖ್ಯ ಪೋರ್ಟ್‌ಫೋಲಿಯೊಗಳು ಹೀಗಿವೆ: ಕಾರ್ಯ ಪೋರ್ಟ್‌ಫೋಲಿಯೋ, ಪ್ರದರ್ಶನ ಪೋರ್ಟ್‌ಫೋಲಿಯೋ, ಮತ್ತು ಮಾಪನ ಪೋರ್ಟ್ ಫೋಲಿಯೋ. ಕಾರ್ಯ ಪೋರ್ಟ್‌ಫೋಲಿಯೋವನ್ನು ನಿರ್ದಿಷ್ಟ ಪಠ್ಯವಿಷಯವಸ್ತುವನ್ನು ಆಧಾರವಾಗಿಟ್ಟುಕೊಂಡು ರಚಿಸಲಾಗುತ್ತದೆ, ಸಂಗ್ರಹಿಸಿದ ಮಾಹಿತಿ ಆಯಾ ಘಟಕದ ಉದ್ದೇಶಗಳಿಗೆ ಸಂಬಂಧಿಸಿದಂತಿರುತ್ತದೆ ಹಾಗೂ ಆ ಉದ್ದೇಶಗಳನ್ನು ಈಡೇರಿಸುವತ್ತ ವಿದ್ಯಾರ್ಥಿಗಳು ಹೇಗೆ ಪ್ರಗತಿ ಹೊಂದುತ್ತಿದ್ದಾರೆ ಎಂಬುದನ್ನು ದಾಖಲಿಸುತ್ತದೆ.

ಮಾಪನ ಪೋರ್ಟ್‌ಫೋಲಿಯೋಗಳು ಒಂದು ನಿರ್ದಿಷ್ಟ ಪಠ್ಯಕ್ರಮ ಕ್ಷೇತ್ರದಲ್ಲಿ ಪ್ರಭುತ್ವವನ್ನು ತೋರ್ಪಡಿಸಲು ಉಪಯೋಗಿಸಬಹುದು. ಇವು ಒಂದು ಘಟಕದಿಂದ ಮೊದಲ್ಗೊಂಡು ಸಂಪೂರ್ಣ ವರ್ಷದ ಅವಧಿಯವರೆಗೂ ಇರಬಹುದು. ಉದಾಹರಣೆಗೆ, ಶಿಕ್ಷಕರೊಬ್ಬರು ಓರ್ವ ವಿದ್ಯಾರ್ಥಿ ಮುಂದಿನ ಹಂತಕ್ಕೆ ಅಥವಾ ಶ್ರೇಣಿಗೆ ಹೋಗಲು ಪಠ್ಯವಿಷಯವಸ್ತುವಿನಲ್ಲಿ ಸಾಕಷ್ಟು ಕೌಶಲ್ಯಗಳನ್ನು ಹೊಂದಿದ್ದಾನೆ ಎಂಬುದರ ಕುರಿತು ವಿಭಿನ್ನ ಸಾಕ್ಷ್ಯಾಧಾರಗಳಗಳನ್ನು ಪಡೆಯಲು ಇಚ್ಛಿಸಬಹುದು. ಮುಂದಿನ ಹಂತಕ್ಕೆ ಹೋಗಲು ಬೇಕಾದ ಮಾನದಂಡಗಳನ್ನು ಮತ್ತು ಅವಶ್ಯಕ ಸಾಕ್ಷ್ಯಾಧಾರಗಳ ವಿಧಗಳನ್ನು ಸ್ವೀಕರಿಸಬೇಕು. ಮಾಪನ ಪೋರ್ಟ್‌ಫೋಲಿಯೋವಿನ ಮುಖ್ಯ ಕಾರ್ಯವೆಂದರೆ ವಿದ್ಯಾರ್ಥಿ ಕಲಿತಿರುವುದನ್ನು ದಾಖಲಿಸುವುದು. ಬಳಿಕ ಪಠ್ಯಕ್ರಮದ ಪಠ್ಯವಿಷಯವಸ್ತು ವಿದ್ಯಾರ್ಥಿಗಳು ತಮ್ಮ ಪೋರ್ಟ್‌ಫೋಲಿಯೋಗೆ ಆಯ್ಕೆ ಮಾಡಬೇಕಿರುವುದನ್ನು ನಿರ್ಧರಿಸುತ್ತದೆ.

ವಿದ್ಯಾರ್ಥಿಗಳು ಹೆಮ್ಮೆಪಡುವಂಥ ಅವರ ಶ್ರೇಷ್ಠ ಕಾರ್ಯಗಳ ಪ್ರದರ್ಶನವೇ ಈ ಪೋರ್ಟ್ ಫೋಲಿಯೋಗಳ ಪ್ರಮುಖ ಪ್ರಯೋಜನ ಎನ್ನಬಹುದು.. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಒಟ್ಟಾಗಿ ತಮ್ಮ ಶ್ರೇಷ್ಠ ಕಾರ್ಯಗಳ ಪ್ರದರ್ಶನ ಮತ್ತು ಅದರ ಅರ್ಥೈಸುವಿಕೆಗಳಿಂದ ಆನಂದವನ್ನು ಅನುಭವಿಸಿದಾಗ ಆ ಪ್ರಕ್ರಿಯೆಗೆ ಅವರು ಅತ್ಯಂತ ಬದ್ಧತೆಯನ್ನು ತೋರುತ್ತಾರೆ. ಪೋರ್ಟ್‌ಫೋಲಿಯೋಗಳನ್ನು ಬೇರೆ ಯಾವುದೇ ಉದ್ದೇಶಕ್ಕೆ ಬಳಸದ ಹಲವು ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಪ್ರದರ್ಶನ ಪೋರ್ಟ್‌ಫೋಲಿಯೋಗಳ ನಿರ್ಮಾಣದಲ್ಲಿ ತೊಡಗಿಸುತ್ತಾರೆ. ವಿದ್ಯಾರ್ಥಿಗಳು ಅನುಭವಿಸುವ ಹೆಮ್ಮೆ ಮತ್ತು ನಾವು ಸಾಧಿಸಿದೆವು ಎಂಬ ಭಾವ ಕೈಗೊಳ್ಳುವ ಪ್ರಯತ್ನವನ್ನು ಪ್ರತಿಫಲದಾಯಕವನ್ನಾಗಿ ಮಾಡುವುದರೊಂದಿಗೆ ತರಗತಿಯಲ್ಲಿ ಕಲಿಯುವ ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತದೆ. ವಿದ್ಯಾರ್ಥಿಯು ಸಾಧಿಸಿದ ಅತ್ಯುನ್ನತ ಮಟ್ಟದ ಸಾಧನೆಯನ್ನು ಪ್ರದರ್ಶಿಸಿ ತೋರಿಸುವುದೇ ಪ್ರದರ್ಶನ ಪೋರ್ಟ್‌ಫೋಲಿಯೋನ ಉದ್ದೇಶವಾಗಿದೆ. ಈ ಪೋರ್ಟ್‌ಫೋಲಿಯೋಗೆ ವಿವರಣಗಳನ್ನು ಸಂಗ್ರಹಿಸುವುದು ವಿದ್ಯಾರ್ಥಿಯು ಹೀಗೆ ಹೇಳಿದಂತೆ: **"**ನೋಡಿ ನಾನು ಯಾವುದರಲ್ಲಿ ಸಮರ್ಥನೆಂಬುದನ್ನು ಇಲ್ಲಿ ತೋರಿಸಿದೆ, ನಾನೇನು ಮಾಡಲು ಸಮರ್ಥನೋ ಅದು ಇಲ್ಲಿದೆ**"**.

**ರೂಬ್ರಿಕ್ (Rubric):** ರೂಬ್ರಿಕ್ ಗಳ ಕುರಿತಾಗಿ 'ಕಲಿಕೆಗಾಗಿ ಮಾಪನ' ಕೋರ್ಸಿನಲ್ಲಿ ಕೊಟ್ಟಿರುವ ವಿವರಣೆ ನೆನಪಿಸಿಕೊಳ್ಳಿ.

**ಪ್ರಮಾಣೀಕೃತ ಪರೀಕ್ಷೆ:** ಸಮಂಜಸವಾದ ರೀತಿಯಲ್ಲಿ ಅಥವಾ ನಿಗದಿತ ರೀತಿಯಲ್ಲಿ ಕೊಡಲಾಗುವ ಮತ್ತು ಅಂಕನೀಡುವ ಪರೀಕ್ಷೆಗೆ ಪ್ರಮಾಣೀಕೃತ ಪರೀಕ್ಷೆ ಎನ್ನುವರು. ಪ್ರಶ್ನೆಗಳು, ಪರೀಕ್ಷೆ ನಡೆಸಬೇಕಾದಾಗ ಇರಬೇಕಾದ ಪರಿಸ್ಥಿತಿಗಳು, ಅಂಕ ನೀಡುವ ವಿಧಾನಗಳು ಮತ್ತು ಅರ್ಥೈಸುವಿಕೆ ಇವೆಲ್ಲಾ ಅಂಶಗಳು ಸಮಂಜಸವಾಗಿರುವ ರೀತಿಯಲ್ಲಿ ಪ್ರಮಾಣೀಕೃತ ಪರೀಕ್ಷೆಯನ್ನು ವಿನ್ಯಾಸಗೊಳಿಸಲಾಗುತ್ತದೆ ಹಾಗೂ ಅವುಗಳನ್ನು ಪೂರ್ವನಿರ್ಧಾರಿತವೂ ಪ್ರಮಾಣೀಕೃತ ರೀತಿಯಲ್ಲಿಯೂ ನಡೆಸಲಾಗುತ್ತದೆ. ವರ್ಷಾಂತ್ಯದಲ್ಲಿ ನಡೆಸಲಾಗುವ ಸಂಕಲನಾತ್ಮಕ ಪರೀಕ್ಷೆಗಳು ಪ್ರಮಾಣಿಕ ಪರೀಕ್ಷೆಯ ಉದಾಹರಣೆಗಳು.

ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದಾದ ಕೆಲವು ಉಪಕರಣಗಳು ಇವಾಗಿವೆ. ಅವುಗಳಲ್ಲಿ ಕೆಲವನ್ನು ಶಿಕ್ಷಕರು ಸೃಷ್ಟಿಸಬಹುದು ಅಥವಾ ಅಭಿವೃದ್ಧಿಗೊಳಿಸಬಹುದು, ಮತ್ತೆ ಕೆಲವನ್ನು ಹೊರಗಿನಿಂದ ಖರೀದಿಸಬೇಕಾಗುವುದು. ಇದಕ್ಕೆ ಕಾರಣ ಅಂತಹ ಉಪಕರಣ ಅಥವಾ ವ್ಯಕ್ತಿಗತ ಮಟ್ಟದಲ್ಲಿ ಉಪಕರಣಗಳನ್ನು ಪ್ರಮಾಣೀಕೃತಗೊಳಿಸುವಲ್ಲಿ ಎದುರಾಗುವ ಸಮಸ್ಯೆಗಳು. ಆದಾಗ್ಯೂ ಮಾರುಕಟ್ಟೆಯಲ್ಲಿ ಲಭ್ಯವಿರುವ ಸೂಕ್ತ ಉಪಕರಣಗಳನ್ನು ಖರೀದಿಸಬಹುದಾಗಿದೆ.

ಈ ಮೂಲಗಳಲ್ಲಿ ವಿವರಿಸಲಾಗಿರುವ ಮೌಲ್ಯಮಾಪನ ಉಪಕರಣಗಳನ್ನು ಸಂಶೋಧನೆಯ ಮೊದಲ ಹೆಜ್ಜೆಗಳಲ್ಲಿ ಸೇರಿಸಿಕೊಳ್ಳಲಾಗುತ್ತವೆಯಾದರೂ ತರಗತಿಯ ಮಟ್ಟದಲ್ಲಿ ಇದರ ಬಳಕೆ ಬಹಳ ವಿರಳ. ಕಾರಣ, ಸಮಯ, ಪ್ರಯತ್ನ ಹಾಗೂ ಹಣ ಮೂರು ವಿಷಯಗಳಲ್ಲಿ ಅದು ದುಬಾರಿ. ಸಾಮಾನ್ಯವಾಗಿ ಈ ಉಪಕರಣಗಳು ಸಮಾಜ ಅಧ್ಯಯನಗಳ ಕಿರಿದಾದ ವಿಷಯ ಕ್ಷೇತ್ರವನ್ನು ಪ್ರತಿನಿಧಿಸುತ್ತದೆ ಹಾಗೂ ಸಮಾಜ ಅಧ್ಯಯನಗಳ ಒಂದು ನಿರ್ದಿಷ್ಟ ಅಂಗಕ್ಕೆ ಗಮನ ನೀಡಬೇಕಾದಲ್ಲಿ ಇದು ಅತ್ಯಂತ ಸಹಾಯಕಾರಿ. ಸಾಮಾನ್ಯವಾಗಿ, ಅವು ಶಾಲೆಯಲ್ಲಿ ಬೋಧಿಸುವ ಸಮಾಜ ಅಧ್ಯಯನಗಳ ಕಾರ್ಯಕ್ರಮದ ಆಧಾರಭೂತ ಮೌಲ್ಯಗಳನ್ನು ಪ್ರತಿಬಿಂಬಿಸುವಷ್ಟು, ವ್ಯಾಪಕವಾಗಿರುವುದಿಲ್ಲ. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಇದರಿಂದ ಲಭಿಸುವ ಫಲಿತಾಂಶಗಳನ್ನು ಬಳಸಿ ದೊಡ್ಡ ಪ್ರಮಾಣದಲ್ಲಿ ತಮ್ಮ ಸಮಾಜ ಅಧ್ಯಯನಗಳ ಪಠ್ಯಕ್ರಮಗಳಲ್ಲಿ ಬದಲಾವಣೆ ಮಾಡಲು ಸಿದ್ಧರಿರುವುದಿಲ್ಲ.

ರಾಜ್ಯವು ನಡೆಸುವ ಪರೀಕ್ಷಾ ಕಾರ್ಯಕ್ರಮಗಳು ಪ್ರೌಢಶಾಲೆಯ ಸಮಾಜ ಅಧ್ಯಯನಗಳ ಘಟಕವೊಂದನ್ನು ಒಳಗೊಂಡಿರುತ್ತವೆ. ಈ ಮಾದರಿಯು ಹೆಚ್ಚು ವಿಸ್ತಾರವಾಗುತ್ತಿರುವುದು ಕಂಡುಬರುತ್ತಿದ್ದು ಪ್ರಾರಂಭಿಕ ತರಗತಿಗಳಲ್ಲಿ ಇದನ್ನು ಜಾರಿಗೊಳಿಸಲಾಗುತ್ತಿದೆ. ಸಮಾಜ ಅಧ್ಯಯನಗಳ ಶಿಕ್ಷಕರು ಇದನ್ನು ರಾಜ್ಯದ ಪ್ರಾರಂಭಿಕ ಪ್ರಯತ್ನಗಳಲ್ಲಿ ಸೇರಿಸಿಕೊಳ್ಳಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದಾರೆ. ಏಕೆಂದರೆ, ಪ್ರಾಥಮಿಕ ಶಾಲೆಯ ಮಟ್ಟದಿಂದ ಸಮಾಜ ಅಧ್ಯಯನಗಳಿಗೆ ಪ್ರತಿನಿಧಿತ್ವ ಸಿಕ್ಕದಿದ್ದರೆ ಇದು ಒಂದು ಮೂಲಭೂತ ಪಠ್ಯವಿಷಯವೆಂಬ ಸ್ಥಾನವನ್ನು ಕಳೆದುಕೊಳ್ಳುವುದು ಎಂಬ ಭಯ ಶಿಕ್ಷಕರಲ್ಲಿದೆ. "ಸಮಾಜ ಅಧ್ಯಯನಗಳ ಬೋಧನೆ ಮತ್ತು ಕಲಿಕೆಯನ್ನು ಕುರಿತು ಸಂಶೋಧನೆಯ ಕೈಪಿಡಿ (Handbook of Research on Social Studies Teaching and Learning) ಎಂಬ ಪುಸ್ತಕದಲ್ಲಿ ಸಮಾಜ ಅಧ್ಯಯನಗಳ ಶಿಕ್ಷಕರು ಪರೀಕ್ಷೆಗೆ ಗಂಭೀರ ಗಮನ ಕೊಡಲು ಪ್ರಾರಂಭಿಸಿದ್ದಾರೆ ಎಂದು ಕುರ್ಫ್‌ಮನ್ ಪುನರುಚ್ಚರಿಸಿದ್ದಾನೆ. ಇದು ಭಾರತೇತರವಾದ ವಿಷಯ ಎಂಬುದು ಗಮನಾರ್ಹ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಮಾಪನ ಉಪಕರಣ ಎಂದರೇನು?
2. ಮಾಪನ ಉಪಕರಣದ ಐದು ಗುಣಲಕ್ಷಣಗಳನ್ನು ಬರೆಯಿರಿ.
3. ಮಾಪನ ಉಪಕರಣ ಆಯ್ಕೆ ಮಾಡುವಾಗ ಪರಿಗಣಿಸಬೇಕಾದ ಕಾರಕಾಂಶಗಳು ಯಾವುವು?
4. ಪೋರ್ಟ್‌ಫೋಲಿಯೋ ಮಾಪನ ಎಂದರೇನು? ಅವುಗಳ ವಿಧಗಳಾವುವು?
5. ಯಾವುದಾರೂ ಎರಡು ಮಾಪನ ಉಪಕರಣದ ಎರಡು ಅನುಕೂಲತೆಗಳನ್ನು ಉಲ್ಲೇಖಿಸಿ.

**4.4.4. ಸಾರಾಂಶಿಸೋಣ**

- ಮಾಪನ ಪರಿಕಲ್ಪನೆಗೆ ದೀರ್ಘ ಇತಿಹಾಸವಿದೆ. ಆದರೆ, ಕಾಲ ಕಳೆದಂತೆ ಈ ಪರಿಲ್ಪನೆಯು ತನ್ನ ಗಮನಕೇಂದ್ರವನ್ನು ಬದಲಾಯಿಸಿದೆ.
- ಇಂದು, ಮಾಪನ ಮಾಡುವುದು ಕಲಿಕಾರ್ಥಿಗೆ ಏನು ಗೊತ್ತಿದೆ ಎಂದು ತಿಳಿಯುವುದಕ್ಕಲ್ಲ. ಬದಲಾಗಿ, ಆತ ಏನನ್ನು ತಿಳಿಯಬಲ್ಲ ಎಂದು ಗೊತ್ತು ಪಡಿಸಿಕೊಳ್ಳುವುದಕ್ಕಾಗಿ.
- ಮಾಪನ ಪದ್ಧತಿಯು ದಾಖಲಿತ ನೀತಿಗಳು ಮತ್ತು ಕ್ರಮವಿಧಾನಗಳ ಒಂದು ಸಂಯೋಜಿತ ಸಂಗ್ರಹವಾಗಿದ್ದು ಮಾಪನವು ಸಮಂಜಸವಾಗಿದೆಯೆಂದು ಹಾಗೂ ಮಾಪನ ನಿಯಮಗಳನ್ನು ಮತ್ತು ಸಾಕ್ಷ್ಯಾಧಾರ ನಿಯಮಗಳನ್ನು ಆಧರಿಸಿದೆ ಎಂದು ಖಚಿತಪಡಿಸಿಕೊಳ್ಳಲು ಅಗತ್ಯವಾದ ಮಾಪನ ಸಾಮಗ್ರಿಗಳನ್ನು ಮತ್ತು ಉಪಕರಣಗಳನ್ನು ಒಳಗೊಳ್ಳುತ್ತದೆ.
- ಸಾಂಪ್ರದಾಯಿಕ ಮಾಪನ ಪದ್ಧತಿಯ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅಧಿಕೃತ ಅಥವಾ ಪರ್ಯಾಯ ಮಾಪನ ಪದ್ಧತಿಗಳು ವಿಕಾಸಗೊಂಡವು.
- ವಿದ್ಯಾರ್ಥಿಗಳು ತಾವು ಕಲಿತಿರುವುದರ ಅರ್ಥಪೂರ್ಣ ಅನ್ವಯವನ್ನು ಪ್ರದರ್ಶಿಸುವಂತಹ ವಾಸ್ತವಿಕ ಪ್ರಪಂಚದ ಕಾರ್ಯಗಳನ್ನು ಕೈಗೊಳ್ಳುವಂತೆ ಹೇಳುವ ಮಾಪನಕ್ಕೆ ಅಧಿಕೃತ ಮಾಪನ ಎನ್ನುತ್ತಾರೆ.
- ತರಗತಿಯ ಮಾಪನಕ್ಕೆ ಮೂರು ವಿಭಿನ್ನ, ಆದರೆ ಪರಸ್ಪರ ಅಂತರ್‌ಸಂಬಂಧಿತ, ಉದ್ದೇಶಗಳಿವೆ; ಕಲಿಕೆಗಾಗಿ ಮಾಪನ, ಕಲಿಕೆಯಾಗಿ ಮಾಪನ ಮತ್ತು ಕಲಿಕೆಯ ಮಾಪನ.
- ಮಾಪನವು ದತ್ತಾಂಶಗಳನ್ನು ಆಧರಿಸಿದೆ ಹಾಗೂ ಮಾಪನ ಉಪಕರಣ ಎಂಬುದು ಮಾಪನಕ್ಕೆ ಬೇಕಾದ ದತ್ತಾಂಶಗಳನ್ನು ಸಂಗ್ರಹಿಸಲು ಅವಶ್ಯಕವಾದ ಆಧಾರವಾಗಿದೆ.
- ಮಾಪನವನ್ನು ಕುರಿತು ಏನು, ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳನ್ನು ಅವಲಂಬಿಸಿ ಮಾಪನ ಉಪಕರಣವನ್ನು ಆಯ್ಕೆ ಮಾಡಬೇಕಾಗುತ್ತದೆ.
- ಈ ಉಪಕರಣಗಳು ನಿಗದಿಪಡಿಸಿದ ಮಾನದಂಡಗಳನ್ನು ಅವಲಂಬಿಸಿ ಶಿಕ್ಷಕ ನಿರ್ಮಿತವಾಗಿರಬಹುದು ಅಥವಾ ಖರೀದಿಸಿದ್ದಾಗಿರಬಹುದು.

**4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2**
**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಉತ್ತರಗಳಾಗಿ ಈ ಸ್ವಯಂ ಕಲಿಕಾ ಸಾಮಗ್ರಿಯ 4.3.3.1 ನೇ ಭಾಗ ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಉತ್ತರಗಳಿಗಾಗಿ ಈ ಸ್ವಯಂ ಕಲಿಕಾ ಸಾಮಗ್ರಿಯ 4.3.3.2 ನೇ ಭಾಗ ನೋಡಿ.

### 4.4.6. ಘಟಕಾಂತ್ಯ ಅಭ್ಯಾಸಗಳು

1. ನಿಮ್ಮ ತರಗತಿಯಲ್ಲಿ ನೀವು ಉಪಯೋಗಿಸಿರುವ ಮಾಪನ ಉಪಕರಣಗಳ ಅನುಕೂಲತೆ ಮತ್ತು ಅನಾನುಕೂಲತೆಗಳನ್ನು ಪಟ್ಟಿಮಾಡಿ.
2. ನೀವು ಈಗಾಗಲೇ ಬಳಸಿರುವ ಎರಡು ಮಾಪನ ಉಪಕರಣಗಳನ್ನು ಅವುಗಳ ಉದ್ದೇಶ, ತಯಾರಿ ಮತ್ತು ಬಳಕೆಯೊಂದಿಗೆ ವಿವರಿಸಿ.

### 4.4.7. ಪರಾಮರ್ಶನ ಸೂಚಿ


1. https://www.learnalberta.ca/content/ssass/html/pdf/assessment_and_evaluation_in_social_studies_classrooms.pdf
2. https://schools.aglasem.com/376
3. https://www.edutopia.org/assessment-guide-importance
4. https://frg.vkcsites.org/what-are-assessment-tools/
5. https://serc.carleton.edu/NAGTWorkshops/assess/types.html
6. https://www.brusheducation.ca/books/tools-for-teaching-social-studies
7. http://www.ascd.org/publications/books/197171/chapters/The-Types-of-Portfolios.aspx
8. https://theeducatorsroom.com/what-does-a-quality-social-studies-assessment-look-like/
9. https://ctl.byu.edu/using-alternative-assessments
10. https://www.google.com/search?q=what+is+the+difference+between+authentic+and+alternative+assessment&rlz=1C1CHBF_enIN838IN838&oq=what+is+the+difference+between+alternate+and+authentic&aqs=chrome.1.69i57j0.25276j1j9&sourceid=chrome&ie=UTF-8
11. https://www.teachthought.com/pedagogy/assessment-trends-in-education-for-students/

## ಬ್ಲಾಕ್ 4 : ಸಮಾಜ ವಿಜ್ಞಾನಗಳ ಪಠ್ಯಪುಸ್ತಕ ಮತ್ತು ಸಮಾಜ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಾಪನ

## ಘಟಕ 5 : ಸಮಾಜ ವಿಜ್ಞಾನಗಳಲ್ಲಿ ನಿರಂತರ ಮತ್ತು ವ್ಯಾಪಕ ಮಾಪನ

**ಘಟಕದ ರಚನೆ**


4.5.1. ಕಲಿಕಾ ಉದ್ದೇಶಗಳು
4.5.2. ಪೀಠಿಕೆ
4.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.5.3.1. ನಿರಂತರ ಮತ್ತು ವ್ಯಾಪಕ ಮಾಪನ(CCE)ದ ಪರಿಕಲ್ಪನೆ, ಗುರಿಗಳು ಮತ್ತು ಉದ್ದೇಶಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
4.5.3.2. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ(CCE) ಪ್ರಕ್ರಿಯೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.5.4. ಸಾರಾಂಶಿಸೋಣ
4.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
4.5.6. ಘಟಕಾಂತ್ಯ ಅಭ್ಯಾಸಗಳು
4.5.7. ಪರಾಮರ್ಶನ ಸೂಚಿ


### 4.5.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ನಿರಂತರ ಮತ್ತು ವ್ಯಾಪಕ ಮಾಪನದ(CCE) ಪರಿಕಲ್ಪನೆ ಮತ್ತು ಇದರ ಜಾರಿಗೊಳಿಸುವಿಕೆಯ ಹಿನ್ನೆಲೆಯನ್ನು ವಿವರಿಸುವರು;
- ನಿರಂತರ ಮತ್ತು ವ್ಯಾಪಕ ಮಾಪನ(CCE) ವಿವಿಧ ಮೂಲಗಳ ವಿಶ್ಲೇಷಣೆ ಮಾಡುವರು;
- ನಿರಂತರ ಮತ್ತು ವ್ಯಾಪಕ ಮಾಪನ ಒಳಗೊಳ್ಳುವ ಹಂತಗಳಗಳನ್ನು ವಿವರಿಸುವರು; ಮತ್ತು
- CCE ಸಂಬಂಧ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಗುವ ಪ್ರಯೋಜನಗಳನ್ನು ವಿವರಿಸುವರು.

### 4.5.2. ಪೀಠಿಕೆ

ಶಿಕ್ಷಣ, ಅದರ ಭಾಗವಾದ ಬೋಧನೆ ಒಂದು ದೀರ್ಘಕಾಲೀನ ಪ್ರಕ್ರಿಯೆ ಎಂದು ನಾವು ನೋಡಿದ್ದೇವೆ. ಹೀಗಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ನಿರಂತರವಾಗಿ ಮೌಲ್ಯಮಾಪನ ನಡೆಯುತ್ತಲೇ ಇರುತ್ತದೆ. ಪರೀಕ್ಷೆಗಳು ಶೈಕ್ಷಣಿಕ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗ. ಆದ್ದರಿಂದ ಬೋಧನೆ ಕಲಿಕಾ ಪ್ರಕ್ರಿಯೆಗಳ ಪರಿಣಾಮಕಾರಿತ್ವವನ್ನು ಮತ್ತು ಅವುಗಳನ್ನು ಕಲಿಕಾರ್ಥಿಗಳು ಸ್ವಾಂಗೀಕೃತಗೊಳಿಸಿಕೊಂಡಿರುವುರೇ ಎಂದು ನಿಶ್ಚಯಿಸಲು ಯಾವುದಾದರೊಂದು ರೂಪದ ಮಾಪನ ಅವಶ್ಯಕ. ಈ ಹಿಂದಿನ ಮಾಪನ ವ್ಯವಸ್ಥೆಯು ವ್ಯಕ್ತಿಗತ ಅವಶ್ಯಕತೆಗಳನ್ನು, ಕಲಿಕೆಯ ವೇಗವನ್ನು ಮತ್ತು ಸಾಮಾಜಿಕ – ಸಾಂಸ್ಕೃತಿಕ ಸಂದರ್ಭಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ಮಾಪನವನ್ನು ಏಕಮುಖ ಪ್ರಕ್ರಿಯೆ ಎಂದು ಪರಿಗಣಿಸಿತ್ತು. ಸ್ವಾಭಾವಿಕವಾಗಿಯೇ, ಮಗುವಿನ ಕಲಿಕೆಯಲ್ಲಿ ಶಿಕ್ಷಕರ ತೊಡಗಿಸಿಕೊಳ್ಳುವಿಕೆಯನ್ನು ಇದು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ. ಕಿರುಪರೀಕ್ಷೆಗಳನ್ನು ಮತ್ತು ಪರೀಕ್ಷೆಗಳನ್ನು ನಡೆಸುವ ಸಾಂಪ್ರದಾಯಿಕ ಪದ್ಧತಿಗಳು ಮಾಪನದ ಕಾರ್ಯನೀತಿಯಾಗಿ ಮುಂದುವರೆದು ಬಂದದ್ದು ಇದಕ್ಕೆ ಕಾರಣವಿರಬಹುದು. ಕಲಿಯುವುದನ್ನು, ಕಲಿಯಲು ನೆರವಾಗುವ ಕೌಶಲ್ಯಗಳನ್ನು ಪ್ರೋತ್ಸಾಹಿಸಿ ಬೆಳೆಸಲು ನೆರವಾಗುವ ಸಹಕಾರಿ ಕಲಿಕೆಯ ಲಕ್ಷಣದ ತರಗತಿಯ ಪಾತ್ರವನ್ನು ಗುರುತಿಸಿ, ಶಿಕ್ಷಕರಿಗೆ ಕೇವಲ ಬೋಧನಾ ಕೌಶಲ್ಯಗಳನ್ನು ಹೇಳಿಕೊಡುವುದು ಮಾತ್ರವಷ್ಟೆ ಅಲ್ಲದೆ, ಸತತ ಪರೀಕ್ಷೆ ಮತ್ತು ದಾಖಲಿಕೆ ಕಾರ್ಯಗಳಲ್ಲಿ ಅವರು ನಿಪುಣರಾಗಬೇಕೆಂದು ಕಂಡುಕೊಳ್ಳಲಾಯಿತು. ಶಿಕ್ಷಣ ಹಕ್ಕು ಕಾಯ್ದೆ 2009 (Right to Education Act, 2009)ಯನ್ನು

ಜಾರಿಗೊಳಿಸುವ ಮೂಲಕ ಈ ದಿಕ್ಕಿನಲ್ಲಿ ಬೃಹತ್ತಾದ ಬದಲಾವಣೆ ಕಂಡುಬಂತು. ಈ ಕಾಯ್ದೆಯ ಸೆಕ್ಷನ್ 29(2)ರ ಪ್ರಕಾರ ಪಠ್ಯಕ್ರಮ ಮತ್ತು ಮೌಲ್ಯಮಾಪನ ಕಾರ್ಯವಿಧಾನಗಳನ್ನು ಸೂಕ್ತ ಶೈಕ್ಷಣಿಕ ಅಧಿಕಾರಿಗಳಿಂದ ಸೂತ್ರೀಕರಣಗೊಳಿಸಬೇಕು. ಇದರ ಫಲವಾಗಿ ಸತತ ಮತ್ತು ವ್ಯಾಪಕ ಮಾಪನವನ್ನು ಸಂಬಂಧಿತ ಅಧಿಕಾರಿಗಳು ಸೂತ್ರೀಕರಣಗೊಳಿಸಿದರು. ರಾಷ್ಟ್ರಮಟ್ಟದಲ್ಲಿ ಶಾಲಾ ಶಿಕ್ಷಣದ ಶೃಂಗ ಸಂಸ್ಥೆಯಾದ ಎನ್.ಸಿ.ಇ.ಅರ್.ಟಿ(NCERT) ಈ CCEಅನ್ನು ಕುರಿತಾಗಿ ಸಂಪನ್ಮೂಲ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿತಲ್ಲದೆ ಅದನ್ನು ಎಲ್ಲೆಡೆ ಪ್ರಚಾರಮಾಡಿತು. ಸಮಾಜ ವಿಜ್ಞಾನ ಸಾಧನೆಯ ಮಾಪನದಲ್ಲಿ ಈ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಹೇಗೆ ಅನ್ವಯಿಸುವುದೆಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 4.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.5.3.1. ನಿರಂತರ ಮತ್ತು ವ್ಯಾಪಕ ಮಾಪನ (CCE)ದ ಪರಿಕಲ್ಪನೆ, ಗುರಿಗಳು ಮತ್ತು ಉದ್ದೇಶಗಳು

**1. ನಿರಂತರ ಮತ್ತು ವ್ಯಾಪಕ ಮಾಪನದ(CCE) ಹಿನ್ನೆಲೆ**

ಸತತ ಮತ್ತು ವ್ಯಾಪಕ ಮಾಪನದ ಪರಿಕಲ್ಪನೆ ಹೊಸತೇನಲ್ಲ. 1882 ರಷ್ಟು ಹಿಂದಿನ ಹಂಟರ್ ಆಯೋಗ, ಕಲ್ಕತ್ತ ವಿಶ್ವವಿದ್ಯಾನಿಲಯ ಆಯೋಗ(ಅಥವಾ ಸ್ಯಾಟ್ಲರ್ ಆಯೋಗ) (1917–1919), ಹರ್ಟಾಗ್ ಕಮಿಟಿ ವರದಿ(1929), ಕೇಂದ್ರ ಸಲಹಾ ಬೋರ್ಡ್‌ನ ವರದಿ / ಸಾರ್ಜಂಟ್ ಯೋಜನೆ (1944), ಸೆಕೆಂಡರಿ ಶಿಕ್ಷಣ ಆಯೋಗ / ಮೊದಲಿಯಾರ್ ಆಯೋಗ (1952–53) ಇತ್ಯಾದಿಗಳು ಇದನ್ನು ಶಿಫಾರಸ್ಸು ಮಾಡಿವೆ. ಇವೆಲ್ಲಾ ಆಯೋಗದ ವರದಿಗಳು ಹೊರಗಿನ ಪರೀಕ್ಷೆಗೆ ಒತ್ತು ನೀಡುವುದನ್ನು ಕಡಿಮೆ ಮಾಡಲು ಮತ್ತು ನಿರಂತರ ಮತ್ತು ವ್ಯಾಪಕ ಮಾಪನದ ಮೂಲಕ ಆಂತರಿಕ ಮಾಪನಕ್ಕೆ ಉತ್ತೇಜನ ನೀಡಲು ಕೆಲವು ಶಿಫಾರಸ್ಸುಗಳನ್ನು ಮಾಡಿವೆ. ಕಳೆದ ಕೆಲವು ದಶಕಗಳಿಂದ CCE ನ ಅವಶ್ಯಕತೆಯನ್ನು ಪುನರುಚ್ಚರಿಸಲಾಗಿದೆ.

- ಕೊಠಾರಿ ಆಯೋಗ(1966) ಹೀಗೆ ಹೇಳಿದೆ– 'ಕೋರ್ಸು ಮುಗಿದ ಬಳಿಕ' ಕಿರಿಯ ಅಥವಾ ಹಿರಿಯ ಮಾಧ್ಯಮಿಕ ಹಂತದಲ್ಲಿ ವಿದ್ಯಾರ್ಥಿಗೆ ಶಾಲೆಯು ಆತನ ಸಂಚಿತ ದಾಖಲೆ (Cumulative record) ಯಲ್ಲಿರುವಂತಹ ಆಂತರಿಕ ಮಾಪನದ ದಾಖಲೆಯನ್ನುಳ್ಳ ಪ್ರಮಾಣ ಪತ್ರವನ್ನು ಕೊಡಬೇಕು. ಈ ಪ್ರಮಾಣ ಪತ್ರವನ್ನು ಬಾಹ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷಾ ಬೋರ್ಡ್ ಕೊಡುವ ಪ್ರಮಾಣ ಪತ್ರದೊಂದಿಗೆ ಲಗತ್ತಿಸಬೇಕು ––––(9.81). ...'ಶಾಲೆಯು ಕೈಗೊಳ್ಳುವ ಈ ಆಂತರಿಕ ಮಾಪನ ಅಥವಾ ಮೌಲ್ಯಮಾಪನ ಹೆಚ್ಚು ಮಹತ್ವವುಳ್ಳದ್ದು. ಆದ್ದರಿಂದ ಇದಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು. ಬಾಹ್ಯ ಪರೀಕ್ಷೆಯು ವಿದ್ಯಾರ್ಥಿಯ ವಿಕಾಸದ ಎಲ್ಲಾ ಮುಖಗಳನ್ನು ಮೌಲ್ಯಮಾಪನ ಮಾಡುವಷ್ಟು ವ್ಯಾಪಕವಾಗಿರಬೇಕು ಹಾಗೂ ಬಾಹ್ಯ ಪರೀಕ್ಷೆಯಿಂದ ಅಳೆಯಲಾಗದಂತಹ ವ್ಯಕ್ತಿಗತ ಒಲವು ಆಸಕ್ತಿ ಮತ್ತು ಅಭಿವೃತ್ತಿಗಳನ್ನು ಆಂತರಿಕ ಮಾಪನ ಮಾಡಬೇಕು.
- ರಾಷ್ಟ್ರೀಯ ಶಿಕ್ಷಣ ನೀತಿ, 1986 ಕೂಡ ಒಟ್ಟು ಬೋಧನ ಕಾಲದ ಪರ್ಯಂತ ವ್ಯಾಪಿಸುವ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಮುಖಗಳ ಮೌಲ್ಯಮಾಪನವನ್ನು ಸತತ ಮತ್ತು ವ್ಯಾಪಕ ಮೌಲ್ಯಮಾಪನವು ಒಳಗೊಂಡಿರಬೇಕು ಎಂದು ಹೇಳುತ್ತದೆ.
- ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ನೇಮಕವಾದ ರಾಷ್ಟ್ರೀಯ ಸಲಹಾ ಮಂಡಳಿಯ "ಹೊರೆಯಿಲ್ಲದ ಕಲಿಕೆ" ಎಂಬ ವರದಿ ಕುರಿತು ಹೀಗೆ ಹೇಳಿದೆ '10ನೇ ಮತ್ತು 12ನೇ ತರಗತಿಯ ಕಡೆಯಲ್ಲಿ ತೆಗೆದುಕೊಳ್ಳುವ ಬೋರ್ಡ್ ಪರೀಕ್ಷೆಯು ಅನಮ್ಯವೂ ಅಧಿಕಾರಶಾಹಿಯೂ ಆಗಿ ಮೂಲತಃ ಅಶೈಕ್ಷಣಿಕವೂ ಆಗಿಬಿಟ್ಟಿದೆ.............'.

* ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005 ಕೂಡ ಪರೀಕ್ಷಾ ಸುಧಾರಣೆಗಳನ್ನು ಮಂಡಿಸಿದೆ. ಅದರ ಪ್ರಕಾರ –'ಶಾಲಾ ಆಧಾರಿತ CCE ವ್ಯವಸ್ಥೆಯನ್ನು ಈ ಕೆಳಗಿನ ಉದ್ದೇಶಗಳ ಈಡೇರಿಕೆಗಾಗಿ ಸೂತ್ರೀಕರಿಸಬೇಕು.
    - ✓ ಮಕ್ಕಳ ಮೇಲಿನ ಹೊರೆ ತಗ್ಗಿಸಲು
    - ✓ ಮೌಲ್ಯಮಾಪನವನ್ನು ವ್ಯಾಪಕವೂ ನಿಯಮಿತವೂ ಆಗಿ ಮಾಡಲು
    - ✓ ಸೃಜನಾತ್ಮಕ ಬೋಧನೆಗೆ ಶಿಕ್ಷಕರಿಗೆ ಅವಕಾಶ ಒದಗಿಸಲು
    - ✓ ಕಾರಣ ನಿರೂಪಣೆ ಮತ್ತು ಪರಿಹಾರೋಪಾಯಗಳಿಗೆ ಒಂದು ಉಪಕರಣವನ್ನು ಒದಗಿಸಲು
    - ✓ ಹೆಚ್ಚಿನ ಕೌಶಲ್ಯಗಳನ್ನು ಹೊಂದಿರುವ ಕಲಿಕಾರ್ಥಿಗಳನ್ನು ಹೊರತರಲು

ಈ ಹಿನ್ನೆಲೆಯೊಂದಿಗೆ, ಇಂಗ್ಲಿಷ್‌ನಲ್ಲಿ CCE ಎಂದೇ ಪ್ರಸಿದ್ಧವಾಗಿರುವ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ವ್ಯವಸ್ಥೆಯನ್ನು 2009ರ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, 2009ರ ಅನ್ವಯ ಶಾಲಾ ಆಧಾರಿತ ಮೌಲ್ಯಮಾಪನ ವ್ಯವಸ್ಥೆಯನ್ನಾಗಿ ಏಪ್ರಿಲ್, 2010 ರಿಂದ ಜಾರಿಗೊಳಿಸಲಾಯಿತು. ಈ ಕಾಯ್ದೆಯ ಅನುಸಾರ ಮಕ್ಕಳು ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರೈಸುವವರೆಗೂ ಸತತ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಕೈಗೊಳ್ಳಬೇಕು.

**2. CCEನ ಪರಿಕಲ್ಪನೆ**

ಸ್ಥೂಲವಾಗಿ, "ಸತತ ಮತ್ತು ವ್ಯಾಪಕ ಮೌಲ್ಯಮಾಪನ" ದ ಅರ್ಥವೇನೆಂದರೆ ಮೌಲ್ಯಮಾಪನವು ಬೋಧನೆ–ಕಲಿಕೆ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿರಬೇಕೇ ಹೊರತು ಪಠ್ಯಕ್ರಮದ ಪಾಠಸೂಚಿಯನ್ನು ಬೋಧಿಸಿ ಮುಗಿಸಿದ ಬಳಿಕ ಜರುಗುವ ಒಂದು ವಿದ್ಯಮಾನವಲ್ಲ. ಇದನ್ನು ಸಾಂಪ್ರದಾಯಿಕ ಮಾಪನದ ಚೌಕಟ್ಟಿನಲ್ಲಿ ನೋಡಲಾಗದು. RTE ಕಾಯ್ದೆಯು ಈ ಚಿಂತನೆಗೆ ಕಾನೂನಿನ ಮುದ್ರೆಯನ್ನೊತ್ತಿದೆ. ಈ ಕಾಯಿದೆಯು ಮಕ್ಕಳು ನಿಂತ ನೀರಿನಂತಾಗುವುದನ್ನು ನಿಷೇಧಿಸುತ್ತದೆ ಹಾಗೂ ವರ್ಷದ ಯಾವುದೇ ಸಮಯದಲ್ಲಿ ಮಗು ಶಾಲೆಗೆ ಸೇರುವುದಕ್ಕೆ ಅವಕಾಶ ಮಾಡಿಕೊಡುತ್ತದೆ.

'ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪರಿಕಲ್ಪನೆಯನ್ನು ಇದರ ಪ್ರತಿ ಪದದ ಅರ್ಥದ ಹಿನ್ನೆಲೆಯಲ್ಲಿ ಅರಿತುಕೊಳ್ಳಬಹುದು. 'ನಿರಂತರ' ಎಂಬ ಪದ ವ್ಯಕ್ತಿತ್ವದ ಕ್ಷೇತ್ರಗಳ ಮೌಲ್ಯಮಾಪನವು ಒಂದು ನಿರಂತರ 'ಪ್ರಕ್ರಿಯೆ' ಎಂಬುದನ್ನು ಸೂಚಿಸುತ್ತದೆಯೆ ಹೊರತು ಪ್ರತ್ಯೇಕತವೂ ಸಂಬಂಧರಹಿತ 'ಘಟನೆಗಳ ಸಂಯೋಜನೆಯನ್ನಲ್ಲ; ಅಲ್ಲದೆ, ಮೌಲ್ಯಮಾಪನವನ್ನು ಒಟ್ಟಾರೆ ಬೋಧನೆ – ಕಲಿಕೆಯ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗವಾಗಿ ಗುರುತಿಸಿಕೊಳ್ಳಲಾಗಿರುವುದರಿಂದ ಈ ಮಾಪನ ಪ್ರಕ್ರಿಯೆಯು ಶೈಕ್ಷಣಿಕ ಅವಧಿಯೊಂದರ ಸಂಪೂರ್ಣ ಕಾಲಾವಧಿಯುದ್ದಕ್ಕೂ ವ್ಯಾಪಿಸಿರುತ್ತದೆ. ನಿರಂತರ ಮೌಲ್ಯಮಾಪನವು ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿರುತ್ತವೆ;

* ಅವು ನಿಯಮಿತವೂ ಆಗಾಗ ಜರುಗುತ್ತಿರುವ ಲಕ್ಷಣವುಳ್ಳದ್ದೂ ಆಗಿರುತ್ತದೆ.
* ಅಲ್ಲದೆ, ಈ ಮಾಪನನವು ತೀವ್ರ ಸ್ವರೂಪದ ಉಪಕರಣ ಇಲ್ಲವೇ ಸರಾಗವೂ ಸಮರ್ಪಕವೂ ಆದ ತಂತ್ರವಾಗಿರಬಹುದು.
* ಅವು ಮುಖ್ಯವಾಗಿ ಕೋರ್ಸ್ ಮಾಡ್ಯೂಲ್‌ಗಳನ್ನು ಗಮನದಲ್ಲಿರಿಸುತ್ತದೆ ಮತ್ತು ಅವುಗಳು ನಿಯಮಿತವಾಗಿ ಹಿಮ್ಮಾಹಿತಿ ನೀಡುವುದನ್ನು ಖಚಿತಪಡಿಸಿಕೊಳ್ಳುತ್ತವೆ.
* ಮಾತ್ರವಷ್ಟೆ ಅಲ್ಲದೆ, ಅಂತಿಮ ಗುರಿಗಳೇನು ಎಂಬುದನ್ನು ಅವಲಂಬಿಸಿ ಮೌಲ್ಯಮಾಪನ ಸಾಮಾನ್ಯ ರೀತಿಯದಕ್ಕಿಂತ ಭಿನ್ನ ರೂಪದ್ದು ಆಗಿರಬಲ್ಲದು.

- ಸತತ ಮಾಪನ ತಂತ್ರವು ಸಾಮರ್ಥ್ಯಗಳನ್ನು ನಿರ್ಧರಿಸಲು, ವಿಕಾಸಗೊಳಿಸಲು ಒಂದು ಪರಿಣಾಮಕಾರಿ ಸಾಧನವಾಗಿದೆ.
- ಈ ವಿಧಾನವು ಸಮಗ್ರವೂ ಸಂಚಿತವೂ ನಿದಾನಾತ್ಮಕವೂ ರೂಪಣಾತ್ಮಕವೂ ಮಾರ್ಗದರ್ಶನ ಪೂರಕವೂ ಆದ ಸ್ವರೂಪವನ್ನು ಹೊಂದಿದೆ.

ಎರಡನೇ ಪದವಾದ 'ವ್ಯಾಪಕ' ಎಂದರೆ ಈ ಯೋಜನೆ ವಿದ್ಯಾರ್ಥಿಯ ಬೆಳವಣಿಗೆ ಮತ್ತು ವಿಕಾಸದ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಮುಖಗಳನ್ನು ಒಳಗೊಳ್ಳುವ ಪ್ರಯತ್ನವನ್ನು ಮಾಡುತ್ತದೆ. ಸಾಮರ್ಥ್ಯಗಳು, ಅಭಿವೃತ್ತಿಗಳು ಮತ್ತು ಯೋಗ್ಯತೆಗಳು ಲಿಖಿತ ಶಬ್ದಗಳ ಮೂಲಕವಾಗಿಯಲ್ಲದೆ ಬೇರೆ ರೂಪಗಳಲ್ಲಿ ಅಭಿವ್ಯಕ್ತಗೊಳ್ಳಬಲ್ಲವಾದ್ದರಿಂದ ಈ ವ್ಯಾಪಕ ಎಂಬ ಪದವು ವೈವಿಧ್ಯಮಯ ಉಪಕರಣಗಳ ಮತ್ತು ತಂತ್ರಗಳ ಬಳಕೆಯನ್ನು ಸೂಚಿಸುತ್ತದೆ. ಜೊತೆಗೆ ಜ್ಞಾನ, ಗ್ರಹಿಕೆ, ಅನ್ವಯ, ವಿಶ್ಲೇಷಣೆ, ಮೌಲ್ಯಮಾಪನ ಮತ್ತು ಸೃಜನಶೀಲ ಕಲಿಕಾ ಕ್ಷೇತ್ರಗಳಲ್ಲಿ ಕಲಿಕಾರ್ಥಿ ವಿಕಾಸವನ್ನು ಮಾಪನ ಮಾಡುವ ಗುರಿಯನ್ನು ಸೂಚಿಸುತ್ತದೆ.

ಮೂರನೇ ಪದದಿಂದ 'ಮೌಲ್ಯಮಾಪನ' ಎಂಬುದು ಮಾಪನದ ಒಟ್ಟಾರೆ ಪ್ರಯತ್ನವು ವಿದ್ಯಾರ್ಥಿಗಳ ಸಾಧನೆಯ ಮತ್ತು ದಕ್ಷತೆಯ ಮಟ್ಟವನ್ನು ಅಳೆಯುವುದು ಮಾತ್ರವಷ್ಟೇ ಆಗಿರದೆ ಕಾರಣ, ನಿರೂಪಣೆ ಮತ್ತು ಪರಿಹಾರೋಪಾಯ / ಸಮೃದ್ಧಿಗೊಳಿಸುವಿಕೆಯ ಮೂಲಕ ಅವುಗಳ ಸುಧಾರಣೆಯೂ ಸಹ ಆಗಿರುತ್ತದೆ ಎಂಬುದನ್ನು ಸೂಚಿಸುತ್ತದೆ.

ಆದ್ದರಿಂದ, ಈ ಯೋಜನೆಯು ಕೇವಲ ಪರೀಕ್ಷೆಗೆ ಬದಲಾಗಿ ಸಮಗ್ರ ಕಲಿಕೆಯತ್ತ ಗಮನವನ್ನು ಬದಲಾಯಿಸಲು ಪ್ರಯತ್ನಿಸುವ ಒಂದು ಪಠ್ಯಕ್ರಮ ಪ್ರಯತ್ನವಾಗಿದೆ. ಇದರ ಗುರಿ ಶೈಕ್ಷಣಿಕ ಶ್ರೇಷ್ಠತೆಯೊಂದಿಗೆ ಉತ್ತಮ ಆರೋಗ್ಯ, ಸೂಕ್ತ ಕೌಶಲ್ಯಗಳು ಮತ್ತು ಅಪೇಕ್ಷಿತ ಗುಣಗಳನ್ನು ಮೈಗೂಡಿಸಿಕೊಂಡ ಉತ್ತಮ ಪ್ರಜೆಗಳನ್ನು ಸೃಷ್ಟಿಸುವುದಾಗಿದೆ. ಈ ಯೋಜನೆ ಕಲಿಕಾರ್ಥಿಗಳನ್ನು ವಿಶ್ವಾಸ ಮತ್ತು ಯಶಸ್ಸಿನೊಂದಿಗೆ ಜೀವನದ ಸವಾಲುಗಳನ್ನು ಎದುರಿಸಲು ಸಮರ್ಥರನ್ನಾಗಿಸುವುದು ಎಂದು ಭಾವಿಸಲಾಗಿದೆ.

**3. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಗುಣಲಕ್ಷಣಗಳು**

- 'ನಿರಂತರ' ಎಂಬ ಆಯಾಮವು ಮೌಲ್ಯಮಾಪನದ 'ನಿರಂತರತೆ' ಮತ್ತು 'ಆವರ್ತಕತೆ'ಗಳೆಂಬ ಮುಖಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ.
- 'ನಿರಂತರ' ಎಂಬುದು ಅನೇಕ ತಂತ್ರಗಳನ್ನು ಬಳಸಿ ವಿದ್ಯಾರ್ಥಿಗಳನ್ನು ಬೋಧನೆಯ ಪ್ರಾರಂಭದಲ್ಲಿ (ನಿಯೋಜನ ಮೌಲ್ಯಮಾಪನ) ಮತ್ತು ಬೋಧನೆಯ ಪ್ರಕ್ರಿಯೆ ನಡೆಸುವ ಕಾಲದಲ್ಲಿ (ರೂಪಣಾತ್ಮಕ ಮೌಲ್ಯಮಾಪನ) ಅನೌಪಚಾರಿಕವಾಗಿ ಮಾಪನ ಮಾಡುವುದನ್ನು ಸೂಚಿಸುತ್ತದೆ.
- ಆವರ್ತಕತೆ (ಅಥವಾ ನಿಯತಕಾಲಿಕತೆ) ಎಂದರೆ ಕಾರ್ಯಕ್ಷಮತೆಯ ಮಾಪನವು ಘಟಕದ / ಅವಧಿಯ ಅಂತ್ಯದಲ್ಲಿ (ಸಂಕಲನಾತ್ಮಕ) ಜರುಗುತ್ತದೆ ಎಂದರ್ಥ.
- CCEನ ವ್ಯಾಪಕತೆ ಎಂಬ ಅಂಗವು ಮಗುವಿನ ಸಮಗ್ರ ವ್ಯಕ್ತಿತ್ವದ ವಿಕಾಸದತ್ತ ಗಮನಹರಿಸುತ್ತದೆ.
- ಇದರಲ್ಲಿ ವಿದ್ಯಾರ್ಥಿಯ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಮುಖಗಳು ಒಳಗೊಳ್ಳುತ್ತವೆ.
- ಶೈಕ್ಷಣಿಕ ಮುಖಗಳಲ್ಲಿ ಪಠ್ಯಕ್ರಮ ಕ್ಷೇತ್ರಗಳು ಅಥವಾ ಪಠ್ಯವಿಷಯಕ್ಕೆ ನಿರ್ದಿಷ್ಟವಾದ ಕ್ಷೇತ್ರಗಳು ಒಳಗೊಂಡರೆ ಶೈಕ್ಷಣಿಕೇತರ ಮುಖಗಳಲ್ಲಿ ಜೀವನ ಕೌಶಲ್ಯಗಳು, ಸಹಪಠ್ಯಕ್ರಮ ಚಟುಚಟಿಕೆಗಳು, ಅಭಿವೃತ್ತಿಗಳು ಮತ್ತು ಮೌಲ್ಯಗಳು ಒಳಗೊಳ್ಳುತ್ತವೆ.

- ಶೈಕ್ಷಣಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾಪನವನ್ನು ಅನೌಪಚಾರಿಕವಾಗಿ ಮತ್ತು ಔಪಚಾರಿಕವಾಗಿ ಅನೇಕ ತಂತ್ರಗಳನ್ನು ಉಪಯೋಗಿಸಿ ನಿರಂತರವಾಗಿ ಮತ್ತು ನಿಯತಕಾಲದಲ್ಲಿ ಕೈಗೊಳ್ಳಲಾಗುತ್ತದೆ.
- ಸಹ ಶೈಕ್ಷಣಿಕ ಕ್ಷೇತ್ರದಲ್ಲಿ ಮಾಪನವನ್ನು, ಗುರುತಿಸಿದ ಮಾನದಂಡಗಳನ್ನು ಆದರಿಸಿ ಒಂದಕ್ಕಿಂತ ಹೆಚ್ಚು ತಂತ್ರಗಳನ್ನು ಬಳಸಿ ಕೈಗೊಳ್ಳಲಾಗುತ್ತದೆ; ಜೀವನ ಕೌಶಲ್ಯಗಳಲ್ಲಿನ ಮಾಪನವನ್ನು ಸೂಚಕಗಳನ್ನು ಆಧರಿಸಿ ನಡೆಸಲಾಗುತ್ತದೆ.
- ಈ ವ್ಯವಸ್ಥೆಯ ಒಂದು ಭಾಗವಾಗಿ, ವಿದ್ಯಾರ್ಥಿಗಳ ಅಂಕಗಳಿಗೆ ಬದಲಾಗಿ ಶೈಕ್ಷಣಿಕ ಅಧ್ಯಯನದ ಜೊತೆಗೆ ಪಠ್ಯಕ್ರಮ ಮತ್ತು ಪಠ್ಯಕ್ರಮೇತರ ಮೌಲ್ಯಮಾಪನಗಳ ಸರಣಿಯ ಮೂಲಕ ಮೌಲ್ಯಮಾಪನ ಮಾಡಿ ಬಂದ ಶ್ರೇಣಿಗಳನ್ನು(Grades) ಗುರುತಿಸಿಕೊಳ್ಳಲಾಗುತ್ತದೆ. ಶೈಕ್ಷಣಿಕ ವರ್ಷದ ಕೊನೆಯಲ್ಲಿ ಒಂದು ಪರೀಕ್ಷೆಯ ಬದಲು ವರ್ಷಪರ್ಯಂತ ಹಲವಾರು ಕಿರುಪರೀಕ್ಷೆಗಳನ್ನು ನಡೆಸುವ ಮೂಲಕ ನಿರಂತರ ಮೌಲ್ಯಮಾಪನದ ನೆರವಿನಿಂದ ವಿದ್ಯಾರ್ಥಿಗಳ ಕಾರ್ಯಭಾರವನ್ನು ತಗ್ಗಿಸುವುದು ಇದರ ಗುರಿ. ವಿದ್ಯಾರ್ಥಿಯ ಒಟ್ಟಾರೆ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿ ಪ್ರಸ್ತುತ ಪಡೆಸುವ ಉದ್ದೇಶದಿಂದ ಕಾರ್ಯಾನುಭವ ಕೌಶಲ್ಯಗಳು, ಕುಶಲತೆ, ಆವಿಷ್ಕಾರ, ಸ್ಥಿರತೆ, ತಂಡಕಾರ್ಯ, ಸಾರ್ವಜನಿಕ ಭಾಷಣ, ವರ್ತನೆ ಇತ್ಯಾದಿ ಅಂಶಗಳನ್ನು ಆಧರಿಸಿ ವಿದ್ಯಾರ್ಥಿಗಳಿಗೆ ಶ್ರೇಣಿಗಳನ್ನು ಕೊಡಲಾಗುವುದು.

## 4. CCEನ ಉದ್ದೇಶಗಳು

- ಸಂಜ್ಞಾನಾತ್ಮಕ, ಮನೋಗತ್ಯಾತ್ಮಕ ಮತ್ತು ಸಂವೇಗಾತ್ಮಕ ಕೌಶಲ್ಯಗಳನ್ನು ಬೆಳೆಸುವುದು;
- ಚಿಂತನ ಪ್ರಕ್ರಿಯೆಗೆ ಒತ್ತು ನೀಡುವುದು ಮತ್ತು ಕಂಠಪಾಠಕ್ಕೆ ಒತ್ತು ತಗ್ಗಿಸುವುದು;
- ಮೌಲ್ಯಮಾಪನವನ್ನು ಬೋಧನೆ ಮತ್ತು ಕಲಿಕೆಯ ಅವಿಭಾಜ್ಯ ಅಂಗವನ್ನಾಗಿಸುವುದು;
- ವಿದ್ಯಾರ್ಥಿಗಳ ಸಾಧನೆಯನ್ನು ಉತ್ತಮಪಡಿಸುವ ಸಾಧನವಾಗಿ ಮಾಪನವನ್ನು ಬಳಸುವುದು. ಪರಿಹಾರ ಕ್ರಮಗಳ ಮೂಲಕ ನಿಯತವಾಗಿ ನಿದಾನಕಾರ್ಯಕ್ರಮಗಳನ್ನು ನಡೆಸಿ ಬೋಧನಾ ಕಲಿಕಾ ತಂತ್ರಗಳನ್ನು ಉತ್ತಮಪಡಿಸಿಕೊಳ್ಳುವುದು;
- ಗುಣಾತ್ಮಕತೆಯನ್ನು ನಿಯಂತ್ರಿಸುವ ಸಾಧನವನ್ನಾಗಿ ಕಾರ್ಯಕ್ಷಮತೆಯ ಪ್ರಮಾಣದ ಮಟ್ಟವನ್ನು ಹೆಚ್ಚಿಸಲು ಮೌಲ್ಯಮಾಪನವನ್ನು ಬಳಸುವುದು.
- ಈ ಮೂಲಕ ಕಾರ್ಯಕ್ರಮವೊಂದರ ಸಾಮಾಜಿಕ ಉಪಯುಕ್ತತೆ, ಅಪೇಕ್ಷಣೀಯತೆ ಅಥವಾ ಪರಿಣಾಮಕಾರಿತ್ವವನ್ನು ನಿರ್ಧರಿಸುವುದು ಮತ್ತು ಕಲಿಕಾರ್ಥಿ ಕಲಿಕಾ ಪ್ರಕ್ರಿಯೆ ಮತ್ತು ಕಲಿಕಾ ಪರಿಕರಗಳ ಬಗ್ಗೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು.
- ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಕಲಿಕಾರ್ಥಿ ಕೇಂದ್ರಿತ ಚಟುವಟಿಕೆಯನ್ನಾಗಿಸುವುದು.

## 5. ಸತತ ಮತ್ತು ವ್ಯಾಪಕ ಮೌಲ್ಯಮಾಪನದ(CCE) ಕಾರ್ಯಗಳು

ಬೋಧನೆ – ಕಲಿಕೆಯ ಪ್ರಕ್ರಿಯೆಯಲ್ಲಿ ಮೌಲ್ಯಮಾಪನವು ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಮುಖಗಳನ್ನು ಪರಿಗಣಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಮಗುವೊಂದು ಯಾವುದಾದರೊಂದು ಕ್ಷೇತ್ರದಲ್ಲಿ ದುರ್ಬಲವಾಗಿದ್ದರೆ ಕಾರಣನಿರೂಪಣಾತ್ಮಕ ಮತ್ತು ಪರಿಹಾರೋಪಾಯ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

- ಪರಿಣಾಮಕಾರಿ ಬೋಧನಾ ತಂತ್ರಗಳನ್ನು ಸಂಘಟಿಸಲು ಶಿಕ್ಷಕರಿಗೆ ನೆರವಾಗುವುದು;
- ಕಲಿಕಾರ್ಥಿಯ ಪ್ರಗತಿಯ ವ್ಯಾಪ್ತಿ ಮತ್ತು ಮಟ್ಟಕ್ಕೆ ತಕ್ಕಂತೆ ಕಾಲಕಾಲಕ್ಕೆ ಮಾಡುವ ಮಾಪನಕ್ಕೆ ನೆರವಾಗುವುದು;

- ದೌರ್ಬಲ್ಯಗಳ ಕಾರಣವನ್ನು ರೂಪಿಸುವುದು ಮತ್ತು ಪ್ರತಿ ಕಲಿಕಾರ್ಥಿಯ ಬಲಾಬಲಗಳನ್ನು ಮತ್ತು ಅವರ ಅಗತ್ಯಗಳನ್ನು ನಿರ್ಧರಿಸಲು ಶಿಕ್ಷಕರಿಗೆ ಅನುವಾಗುವುದು;
- ಇಡೀ ತರಗತಿಯಲ್ಲಿ ಒಂದು ನಿರ್ದಿಷ್ಟ ಘಟಕ ಅಥವಾ ಪರಿಕಲ್ಪನೆಯನ್ನು ಪುನಃ ಬೋಧಿಸುವ ಅಗತ್ಯವಿದೆಯೇ ಅಥವಾ ಕೆಲವೇ ವಿದ್ಯಾರ್ಥಿಗಳಿಗೆ ಮಾತ್ರ ಪರಿಹಾರೋಪಾಯ ರೂಪದ ಬೋಧನೆಯ ಅಗತ್ಯವಿದೆಯೇ ಎಂದು ಶಿಕ್ಷಕರು ನಿರ್ಧರಿಸಲು ಸಾಧ್ಯವಾಗುವಂತೆ ತಕ್ಷಣವೇ ಹಿಮ್ಮಾಹಿತಿಯನ್ನು ಒದಗಿಸುವುದು;
- ಮಕ್ಕಳಿಗೆ ತಮ್ಮ ತಮ್ಮ ಬಲಾಬಲಗಳನ್ನು ತಿಳಿಯಲು ನೆರವಾಗುವುದು;
- ತಾನು ಹೇಗೆ ಅಧ್ಯಯನ ಮಾಡುತ್ತಿದ್ದೇನೆ ಎಂಬುದರ ಬಗ್ಗೆ ವಾಸ್ತವಿಕ ಸ್ವಯಂ ಮಾಪನವನ್ನು ಒದಗಿಸುವುದು;
- ಉತ್ತಮ ಅಧ್ಯಯನ ಅಭ್ಯಾಸಗಳನ್ನು ಬೆಳೆಸಿಕೊಳ್ಳಲು, ದೋಷಗಳನ್ನು ತಿದ್ದಿಕೊಳ್ಳಲು ಮತ್ತು ತಮ್ಮ ಚಟುವಟಿಕೆಗಳನ್ನು ಇಚ್ಛಿತ ಗುರಿಯ ಈಡೇರಿಕೆಯ ದಿಕ್ಕಿನಲ್ಲಿ ನಿರ್ದೇಶಿಸಲು ಮಕ್ಕಳಿಗೆ ಪ್ರೇರಣೆ ನೀಡುವುದು;
- ಕಲಿಕಾರ್ಥಿಯು ಹೆಚ್ಚು ಪ್ರಾಧಾನ್ಯತೆ ನೀಡಬೇಕಾದ ಬೋಧನೆಯ ಕ್ಷೇತ್ರಗಳನ್ನು ನಿರ್ಧರಿಸಲು ಸಹಾಯ ಮಾಡುವುದು. ಯೋಗ್ಯತೆಯ ಮತ್ತು ಆಸಕ್ತಿಯ ಕ್ಷೇತ್ರಗಳನ್ನು ಗುರುತಿಸುವುದು;
- ಅಭಿವೃತ್ತಿ ಮತ್ತು ಮೌಲ್ಯಮಾಪನದಲ್ಲಿನ ಬದಲಾವಣೆಯನ್ನು ಗುರುತಿಸಲು ನೆರವಾಗುವುದು;
- ಪಠ್ಯವಿಷಯ, ಕೋರ್ಸು ಮತ್ತು ಭವಿಷ್ಯದ ವೃತ್ತಿ ಜೀವನಗಳಿಗೆ ಸಂಬಂಧಿಸಿದಂತೆ ಆಯ್ಕೆಗೆ ಕೈಗೊಳ್ಳಬೇಕಾದ ನಿರ್ಧಾರಗಳನ್ನು ಮಾಡಲು ಮಕ್ಕಳಿಗೆ ನೆರವಾಗುವುದು;
- ಶೈಕ್ಷಣಿಕ ಮತ್ತು ಸಹ ಶೈಕ್ಷಣಿಕ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಮಾಹಿತಿ/ವರದಿಗಳನ್ನು ಕೊಡುವುದರ ಮೂಲಕ ಕಲಿಕಾರ್ಥಿಯ ಭವಿಷ್ಯದ ಯಶಸ್ಸುಗಳನ್ನು ಮುನ್ನುಡಿಯಲು ನೆರವಾಗುವುದು.

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಕಲಿಕಾರ್ಥಿಯ ಸಮಗ್ರ ಮಾಪನದ ಗುರಿಯನ್ನು ಹೊಂದಿದೆ ಎಂದು ನಾವು ಅರ್ಥಮಾಡಿಕೊಂಡೆವು. ಶೈಕ್ಷಣಿಕ ಮತ್ತು ಸಹ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದ ಉದ್ದೇಶಗಳನ್ನು ಸಾಧಿಸುವಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಮಾಪನ ಮಾಡುವ ಪ್ರಕ್ರಿಯೆಗೆ ವ್ಯಾಪಕ ಮೌಲ್ಯಮಾಪನ ಎನ್ನುವರು. ಸಾಧಾರಣವಾಗಿ ಮಾಪನಕ್ಕೆ ಒಳಪಡುವ ಪಠ್ಯವಿಷಯದ ಸತ್ಯಾಂಶಗಳನ್ನು, ಪರಿಕಲ್ಪನೆ, ನಿಯಮಗಳು ಇತ್ಯಾದಿಗಳ ಅರಿವು ಮತ್ತು ಗ್ರಹಿಕೆಯಂತಹ ಶೈಕ್ಷಣಿಕ ಕ್ಷೇತ್ರಗಳನ್ನು ಮಾಪನ ಮಾಡುವುದು ಗಮನಕ್ಕೆ ಬಂದಿದೆ. ಸಹ ಶೈಕ್ಷಣಿಕ ವಿಷಯಗಳನ್ನು ಸಂಪೂರ್ಣವಾಗಿ ಮೌಲ್ಯಮಾಪನದಿಂದ ಕೈಬಿಡಲಾಗುವುದು ಇಲ್ಲವೇ ಅವುಗಳಿಗೆ ಅತ್ಯಂತ ಗಮನವನ್ನು ಕೊಡಲಾಗುವುದು. ಮೌಲ್ಯಮಾಪನವನ್ನು ವ್ಯಾಪಕವಾಗಿಸಬೇಕಾದರೆ ಶೈಕ್ಷಣಿಕ ಮತ್ತು ಸಹಶೈಕ್ಷಣಿಕ ವಿಷಯಗಳೆರಡಕ್ಕೂ ಪ್ರಾಧಾನ್ಯತೆ ಕೊಡಬೇಕು. ವಿಕಾಸದ ಸಹ– ಶೈಕ್ಷಣಿಕ ಮುಖಗಳ ಮಾಪನದ ಸರಳ ಮತ್ತು ನಿರ್ವಹಿಸಬಲ್ಲ ಸಾಧನಗಳನ್ನು ವ್ಯಾಪಕ ಮೌಲ್ಯಮಾಪನ ಕಾರ್ಯಯೋಜನೆಯಲ್ಲಿ ಸೇರಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ, 1986 (NPE 1986) ದಸ್ತಾವೇಜಿನಲ್ಲಿಯೂ ಮತ್ತು 1992ರಲ್ಲಿ ಮಾರ್ಪಡಿಸಿದ ಇದರ ವರದಿಯಲ್ಲಿಯೂ ಮೌಲ್ಯಮಾಪನ ಕಾರ್ಯಯೋಜನೆಯಲ್ಲಿ ಶೈಕ್ಷಣಿಕ ಮತ್ತು ಸಹಶೈಕ್ಷಣಕ ವಿಷಯಗಳ ಕ್ಷೇತ್ರಗಳ ಕಲಿಕಾ ಅನುಭವಗಳು ಒಳಗೊಳ್ಳಬೇಕು ಎಂದು ಉಲ್ಲೇಖಿಸಲಾಗಿದೆ.

### 6. ಸತತ ಮತ್ತು ವ್ಯಾಪಕ ಮೌಲ್ಯಮಾಪನದ ಪ್ರಯೋಜನಗಳು

ಎನ್.ಸಿ.ಇ.ಅರ್.ಟಿ CCE ಯ ಈ ಕೆಳಗಿನ ಲಾಭಗಳನ್ನು ಗುರುತಿಸಿದೆ.

- **ಕಲಿಕೆಯ ಸುಧಾರಣೆ:** ಪ್ರಸ್ತುತದಲ್ಲಿ ಶಾಲೆಯಲ್ಲಿನ ಮಕ್ಕಳ ಕೆಳಮಟ್ಟದ ಕಾರ್ಯಕ್ಷಮತೆಯು ದೇಶದಲ್ಲಿ ಕಲಿಕೆಯಲ್ಲಿನ ಬೃಹತ್ ಸಮಸ್ಯೆಯಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005

(NCF 2005) ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸಲುವಾಗಿ ಕಲಿಕಾರ್ಥಿಕೇಂದ್ರಿತ ಬೋಧನಾ ಉಪಕ್ರಮಕ್ಕೆ ಒತ್ತು ನೀಡುತ್ತದೆ. ವಿದ್ಯಾರ್ಥಿಗಳು ವಿಶ್ಲೇಷಣೆ, 'ಅನ್ವಯ ಮತ್ತು ಸಮಸ್ಯಾ ಪರಿಹಾರ'ಗಳಲ್ಲಿ ಹೆಚ್ಚು ತೊಡಗಿಕೊಳ್ಳುವ ರೀತಿಯಲ್ಲಿ ತರಗತಿಯ ಅಭ್ಯಾಸಗಳು, ಪ್ರಾಯೋಜನೆ, ಕಿರುಪರೀಕ್ಷೆಗಳಂತಹ ನಿಯೋಜಿತ ಕಾರ್ಯಗಳನ್ನು ಯೋಜಿಸುವುದರ ಮುಖಾಂತರ ನಿರಂತರ ಮೌಲ್ಯಮಾಪನ ಮಾಡುವತ್ತ ಪಲ್ಲಟವಾಗಬೇಕಾದರೆ ತಮ್ಮ ಕಲಿಕೆಯಲ್ಲಿ ಅಧಿಕವಾಗಿ ತೊಡಗಿಕೊಳ್ಳುವಲ್ಲಿ ನೆರವಾಗುವಂತಹ ಪ್ರಾಯೋಜನೆಗಳನ್ನು ವಿದ್ಯಾರ್ಥಿಗಳು ಕೈಗೆತ್ತಿಕೊಳ್ಳಬೇಕಾಗುತ್ತದೆ. ವಿಶ್ಲೇಷಣಾತ್ಮಕ ಕೌಶಲ್ಯಗಳಿಗೆ ಒತ್ತು ನೀಡಲು, ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಕಲಿಕೆಯನ್ನು ಗಳಿಸಲು, ತರಗತಿಯ ಕಿರುಪರೀಕ್ಷೆಗಳನ್ನು ಮತ್ತು ಪ್ರಾಯೋಜನೆಗಳ ಪುನರ್ವಿನ್ಯಾಸ ಅಗತ್ಯ. ಹೆಚ್ಚಿನ ಮಟ್ಟದ ವಿದ್ಯಾರ್ಥಿ ಕೇಂದ್ರಿತ ಕಲಿಕೆಯಿಂದ ಒಡಗೂಡಿದ ನಿರಂತರ ಮಾಪನ ವ್ಯವಸ್ಥೆಯು ದೇಶದಲ್ಲಿ ಶೈಕ್ಷಣಿಕ ಕಾರ್ಯಕ್ಷಮತೆಯ ಸಾಧಾರಣ ಮಟ್ಟವನ್ನು ಮೇಲೆತ್ತಬಲ್ಲದು.

- **ವಿದ್ಯಾರ್ಥಿಗಳಿಗೆ ಏನು ತಿಳಿದಿದೆಯೆಂದು, ಏನು ಮಾಡಬಲ್ಲರೆಂದು ತಿಳಿಯುವುದು:** ಹೇಳಿಕೊಟ್ಟದ್ದನ್ನು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆಯೇ ಎಂದು ತಿಳಿದುಕೊಳ್ಳಲು ಎಲ್ಲ ಬಯಸುತ್ತಾರೆ. ಈ ಹಿನ್ನೆಲೆಯಲ್ಲಿ ಆಗಾಗ್ಗೆ ನಡೆಸಲಾಗುವ ಪಾರಸ್ಪರಿಕ ಕ್ರಿಯೆಗಳು ನೆರವಿಗೆ ಬರುತ್ತವೆ. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಕಲಿಕಾರ್ಥಿಗಳ ಕಾರ್ಯಕ್ಷಮತೆಯ ಪೂರ್ಣವ್ಯಾಪ್ತಿಯನ್ನು ಸೆರೆಹಿಡಿಯುವುದರ ಜೊತೆಗೆ ಉನ್ನತಮಟ್ಟದ ಪ್ರಭುತ್ವವನ್ನು ಪಡೆಯುವಂತೆ ಅವರನ್ನು ಪ್ರೇರೆಪಿಸುತ್ತದೆ. ಕಲಿಕಾರ್ಥಿಗಳು ಭಿನ್ನ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ವೈವಿಧ್ಯಮಯ ಮಾಪನ ಚಟುವಟಿಕೆಗಳು ಕಲಿತಿರುವುದನ್ನು ತೋರ್ಪಡಿಸಲು ಸರ್ವರಿಗೂ ಅವಕಾಶ ಒದಗಿಸುತ್ತವೆ.
- **ಯಾರನ್ನೂ ಹಿಂದೆ ಬಿಡುವುದಿಲ್ಲ:** ಕಲಿಕಾರ್ಥಿಗಳು ಏನು ತಿಳಿದಿರುವರು, ಏನನ್ನು ಮಾಡಲು ಸಮರ್ಥರು ಎಂದು ನೋಡಲು ನಿರಂತರ ಅವಲೋಕನ ಕೈಗೊಳ್ಳುವುದರಿಂದ ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಕಲಿಕೆಯನ್ನು ಖಚಿತಪಡಿಸಿಕೊಳ್ಳಬಹುದು. ಈ ಮೂಲಕ ಪ್ರತಿಯೊಬ್ಬರಿಗೂ ಸಫಲರಾಗಲು ಅವಕಾಶ ನೀಡಬಹುದು ಮತ್ತು ಹಿಂದೆ ಉಳಿದಿರುವ ಮಕ್ಕಳಿಗೆ ಹೆಚ್ಚಿನ ಗಮನ ಕೊಡಲಾಗುವುದು. ನಿರಂತರ ಮಾಪನವು ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆ ಸಹಕಾರವನ್ನು ಪೋಷಿಸಿ ಬೆಳೆಸುತ್ತದೆ. ವಿದ್ಯಾರ್ಥಿ ತನ್ನ ಪ್ರಾಯೋಜನೆಯ ಕಾರ್ಯಕ್ಕೆ ಸಂಬಂಧಿಸಿದಂತೆ ಶಿಕ್ಷಕರು, ಸಹಪಾಠಿಗಳು ಮತ್ತು ಇತರ ಆಕರಗಳೊಂದಿಗೆ ಸಮಾಲೋಚಿಸಲು ಕಲಿಯುತ್ತಾನೆ. ಶಿಕ್ಷಕರು ಇನ್ನಷ್ಟು ಕಲಿಕೆಯಲ್ಲಿ ಸುಧಾರಣೆ ತರಲು ಪರಿಹಾರೋಪಾಯಗಳನ್ನು ಸೂಚಿಸಲು ಸಮರ್ಥರಾಗುತ್ತಾರೆ.
- **ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಸುಧಾರಣೆ:** ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ಒದಗಿಸುವ ತರಗತಿಯ ಮಾಪನವು ಕಲಿಕೆಯಲ್ಲಿ, ಬೋಧನೆಯಲ್ಲಿ ಸುಧಾರಣೆ ತರುತ್ತದೆ. ಇದು ಬೋಧನೆಯಲ್ಲಿರುವ ಸಮಸ್ಯೆಗಳನ್ನು ಗುರುತಿಸಲು ನೆರವಾಗುತ್ತದೆಯಲ್ಲದೆ, ನಿರ್ದಿಷ್ಟ ವಿಷಯದ ಬೋಧನೆ ಪರಿಣಾಮಕಾರಿಯಾಗಿತ್ತೇ ಎಂದು ತಿಳಿಯಲು, ಅಗತ್ಯವಿದ್ದಲ್ಲಿ ಬೋಧನೆ –ಕಲಿಕೆಯ ಚಟುವಟಿಕೆಗಳನ್ನು ಮಾರ್ಪಡಿಸಲು ನೆರವಾಗುತ್ತದೆ. ಮಾಪನವನ್ನು ಬೋಧನೆಯೊಂದಿಗೆ ಪರಿಣಾಮಕಾರಿಯಾಗಿ ಬೆಸೆದಾಗ ಸಕಾಲದಲ್ಲಿ ವ್ಯಕ್ತಿಗತ ಕಲಿಕಾ ಅವಶ್ಯಕತೆಗಳನ್ನು ಪೂರೈಸಲು ಶಿಕ್ಷಕರನ್ನು ಸಮರ್ಥರನ್ನಾಗಿಸಬಹುದಾಗಿದೆ. ನಿರೀಕ್ಷಿತ ಮಟ್ಟದಲ್ಲಿ ಕಾರ್ಯಪ್ರವೃತ್ತರಾಗದಿರುವ ವಿದ್ಯಾರ್ಥಿಗಳಿಗಾಗಿ ಪರಿಹಾರೋಪಾಯ ಚಟುವಟಿಕೆಗಳು ಮತ್ತು ನಿರೀಕ್ಷಿತ ಮಟ್ಟದಲ್ಲಿ ಅಥವಾ ಇನ್ನೂ ಹೆಚ್ಚಿನ ಮಟ್ಟದಲ್ಲಿ ಕಾರ್ಯಪ್ರವೃತ್ತರಾಗಿರುವ ವಿದ್ಯಾರ್ಥಿಗಳಿಗಾಗಿ ಸಮೃದ್ಧಿಗೊಳಿಸುವ ಚಟುವಟಿಕೆಗಳನ್ನು ಒದಗಿಸುವಿಕೆ– ಇವೆರಡೂ ಬೋಧನಾಶಾಸ್ತ್ರ ಕಾರ್ಯತಂತ್ರಗಳಲ್ಲೇ ಒಳಗೊಳ್ಳುತ್ತವೆ.
- **ಪರಿಹಾರರೋಪಾಯಗಳು ಮತ್ತು ಅಭಿವರ್ಧನೆ(ಸಂವರ್ಧನೆ):** ಕಾರಣನಿರೂಪಣಾತ್ಮಕ ಸರಣಿ ರೂಪದ ನಿರಂತರ ಮಾಪನವು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಅವರು ಎಲ್ಲಿ ಮತ್ತು

ಏಕೆ ಹಿಂದೆ ಉಳಿಯುತ್ತಿದ್ದಾರೆಂದು ತಿಳಿದು ಅದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಮರ್ಥರನ್ನಾಗಿಸುತ್ತದೆ. ನಿಖರವೂ ವಿವರಣಾತ್ಮಕವೂ ಆದ ಹಿಮ್ಮಾಹಿತಿಯು ಜ್ಞಾನ ಮತ್ತು ಕೌಶಲ್ಯಗಳನ್ನು ಕಲಿಕೆಯಿಂದ ಸುಧಾರಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದರ ಮೂಲಕ ಅವರು ಶ್ರೇಷ್ಠ ಕಲಿಕಾರ್ಥಿಗಳಾಗಲು ನೆರವಾಗುತ್ತದೆ.

- **ವೈವಿಧ್ಯಮಯ ಕಲಿಕಾರ್ಥಿಗಳ ನೆರವಿಗೆ ಬರುತ್ತದೆ:** "ಸರ್ವರಿಗೂ ಶಿಕ್ಷಣ" ಎಂಬ ನೀತಿ ಜಾರಿಗೆ ಬಂದಾಗಿನಿಂದ, ಶಾಲೆಗೆ ಹೋಗುವ ವಯಸ್ಸುಳ್ಳ ಎಲ್ಲಾ ಮಕ್ಕಳು ಶಾಲೆಗೆ ಹಾಜರಾಗಲು ಅವಕಾಶ ಕೊಟ್ಟಂತಾಗಿ ತರಗತಿಯಲ್ಲಿ ಕಲಿಕಾರ್ಥಿಗಳ ಸಾಮರ್ಥ್ಯಗಳ ವ್ಯಾಪ್ತಿಯು ಹೆಚ್ಚಾಗಿದೆ, 'ನೊ ಡಿಟೆನ್ಷನ್ ಪಾಲಿಸಿ' (ವಿದ್ಯಾರ್ಥಿಗಳು ವಿಫಲರಾದಾಗ ಅದೇ ತರಗತಿಯಲ್ಲಿ ಉಳಿಸಿಕೊಳ್ಳುವುದು) ನಿಯಮವು ಶಾಲೆಯಲ್ಲಿ ಎಲ್ಲ ಮಕ್ಕಳೂ ಸಫಲರಾಗಬೇಕೆಂಬುದನ್ನು ಒತ್ತಿ ಹೇಳುತ್ತದೆ. ನಿರಂತರ ಮಾಪನವು ಶಿಕ್ಷಕ ತನ್ನ ಬೋಧನ ಕಾರ್ಯತಂತ್ರಗಳನ್ನು ಎಲ್ಲರೂ ಕಲಿತು ಸಫಲರಾಗುವಂತೆ ಅಳವಡಿಸಿಕೊಳ್ಳಲು ಸಹಾಯಮಾಡುತ್ತದೆ.
- **ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಹಿಮ್ಮಾಹಿತಿ:** ಕಲಿಕಾ ಉದ್ದೇಶಗಳ ಮತ್ತು ಯಶಸ್ಸಿನ ಮಾನದಂಡಗಳತ್ತ ಗಮನಹರಿಸುತ್ತಾ ವಿದ್ಯಾರ್ಥಿಗಳಿಗೆ ಅವರು ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದಾರೆ ಹಾಗೂ ಎಲ್ಲಿ ಅವರು ಸುಧಾರಿಸಬೇಕು ಎಂಬುದರ ಬಗ್ಗೆ ನಿರ್ದಿಷ್ಟವೂ ವಿವರಣಾತ್ಮಕವೂ ಮತ್ತು ಆದ ತಕ್ಷಣದ ಹಿಮ್ಮಾಹಿತಿಯನ್ನು ಒದಗಿಸಬೇಕು. ಪೋಷಕರಿಗೆ ಅವರ ಮಕ್ಕಳು ಏನನ್ನು ಕಲಿಯುತ್ತಿದ್ದಾರೆ, ಅವರಿಗೆ ಯಾವ ಕ್ಷೇತ್ರದಲ್ಲಿ ತೊಡಕಿದೆ ಎಂಬುದರ ಬಗ್ಗೆ ನಿರ್ದಿಷ್ಟ ತಿಳಿವು ಅಗತ್ಯ. ತಮ್ಮ ಮಕ್ಕಳ ತಿಳಿವಿನ ಮಟ್ಟ ಎಷ್ಟಿದೆ ಎಂದಷ್ಟು ಮಾತ್ರ ತಿಳಿಯುವುದಲ್ಲ, ಬದಲಾಗಿ ಶಿಕ್ಷಕರು ಮಕ್ಕಳು ಎದುರಿಸುತ್ತಿರುವ ತೊಡಕನ್ನು ನಿವಾರಿಸಿಕೊಳ್ಳಲು ಏನು ಮಾಡಬಹುದು ಎಂದು ತಿಳಿದುಕೊಂಡು ತಾವೂ ಸಹ ಇದಕ್ಕೆ ಕೊಡುಗೆ ನೀಡಲು ಸಾಧ್ಯವಾಗುತ್ತದೆ.
- **ಮೌಲ್ಯಮಾಪನ:** ಆಗಾಗ ನಡೆಸಲಾಗುವ ನಿರಂತರ ಮಾಪನದ ಫಲಿತಗಳನ್ನು ನೋಡಿದ ಬಳಿಕ ಶೈಕ್ಷಣಿಕ ವರ್ಷದ ಕಡೆಯಲ್ಲಿ ಶಿಕ್ಷಕರು ಕಲಿಕಾರ್ಥಿಯ ಒಟ್ಟಾರೆ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ. ಒಂದೇ ತರದ ಮಾಪನ ರೂಪದಲ್ಲಿ (ಪೇಪರ್ – ಪೆನ್ಸಿಲ್ ಪರೀಕ್ಷೆ), ಒಂದೇ ಸಮಯದಲ್ಲಿ ನಡೆಸಲಾಗುವ ಪರೀಕ್ಷೆಯನ್ನು ಅವಲಂಬಿಸದೆ, ಬೇರೆ ಬೇರೆ ಸಮಯದಲ್ಲಿ ಗುಂಪಿನಲ್ಲಿ ಮತ್ತು ವೈಯಕ್ತಿಕವಾಗಿ ವಿದ್ಯಾರ್ಥಿಗಳ ಮಾಪನ ಮಾಡಬಹುದಾಗಿದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಗುಣಲಕ್ಷಣಗಳನ್ನು ಹೇಳಿರಿ.
2. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಮುಖ್ಯ ಉದ್ದೇಶಗಳನ್ನು ಬರೆಯಿರಿ.
3. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಕಾರ್ಯಗಳೇನು?

### 4.4.3.2. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ(CCE) ಪ್ರಕಿಯೆ

ಮಾಪನ ಮತ್ತು ಬೋಧನೆ ಹಾಗೂ ಕಲಿಕೆ–ಇವೆರಡೂ ಪರಸ್ಪರ ಪೂರಕವಾಗಿದ್ದು ಅವೆರಡನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ, ಆದ್ದರಿಂದ ಮಾಪನ ಪ್ರಕ್ರಿಯೆ ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದರತ್ತ ಗಮನವಿಟ್ಟಿರುತ್ತದೆ. ಈ ಮಾಪನ ವ್ಯವಸ್ಥೆಯ ಪ್ರಕ್ರಿಯೆಯು CCEಯನ್ನು ಪಾಠಸೂಚಿಯ ಪ್ರಮಾಣವನ್ನು ತೋರಿಸುವ, ಪರೀಕ್ಷೆಯ ಆವರ್ತನವನ್ನು ಹೇಳುವ, ಉಪಕರಣಗಳ ಪಟ್ಟಿಯನ್ನು ನೀಡುವ, ಮಕ್ಕಳಿಗೆ ಅಂಕ ಶ್ರೇಣಿಗಳನ್ನು ಕೊಟ್ಟು ಅವರಿಗೆ ಒಂದು ಹಣೆಪಟ್ಟಿ ಅಂಟಿಸಲು ಬೇರೆ ಬೇರೆ ಪರೀಕ್ಷೆಗಳಿಗೆ ಬೇರೆ ಬೇರೆ ಮೌಲ್ಯಗಳನ್ನು ಕೊಟ್ಟಿರುವುದನ್ನು ತೋರ್ಪಡಿಸುವ ಮೌಲ್ಯಮಾಪನ ವ್ಯವಸ್ಥೆಯಂತೆ ಪರಿಗಣಿಸುವುದಿಲ್ಲ. ಈ ಮಾಪನ

ವ್ಯವಸ್ಥೆಯು ಬೋಧನೆ–ಕಲಿಕೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರಿಬ್ಬರಿಂದಲೂ ಕ್ರಿಯಾಶೀಲತೆ, ಪರ್ಯಾಲೋಚನೆ ಮತ್ತು ಮಾರ್ಪಾಡುಗಳನ್ನು ಒಳಗೊಳ್ಳುವ ನಿರಂತರ ಪ್ರಕ್ರಿಯೆಯಾಗಿ ಕಲಿಕೆಯನ್ನು ಗುರುತಿಸುತ್ತದೆ.

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಅಡಿಯಲ್ಲಿ ಬೋಧನೆ–ಕಲಿಕೆಯ ಮತ್ತು ಮಾಪನಗಳ ಸಮಯದಲ್ಲಿ ಕೆಲವು ಸೂಚಕಗಳನ್ನು ಅನುಸರಿಸಬೇಕಾದ ಅಗತ್ಯವಿದೆ.

**ಶಿಶುಸ್ನೇಹಿ ಪರಿಸರವನ್ನು ಖಚಿತಪಡಿಸುವುದು:** CCE ವ್ಯವಸ್ಥೆಯಡಿಯಲ್ಲಿನ ಶಿಶುಕೇಂದ್ರಿತ ಬೋಧನೆ – ಕಲಿಕೆ ಮತ್ತು ಮಾಪನಗಳು ಬಹುಮಟ್ಟಿಗೆ ಶಾಲೆ ಮತ್ತು ತರಗತಿಗಳ ಪರಿಸರವನ್ನು ಅವಲಂಬಿಸಿರುತ್ತವೆ. ಆದ್ದರಿಂದ ಆ ಪರಿಸರಗಳು ಶಿಶುಸ್ನೇಹಿಯಾಗಿರಬೇಕು ಮತ್ತು ಯಾವುದೇ ರೀತಿಯಲ್ಲಿ ಮಕ್ಕಳಲ್ಲಿ ಭಯ, ಉದ್ವೇಗ ಅಥವಾ ಆಘಾತಗಳಿಗೆ ಎಡೆಮಾಡುವ ಅಂಶಗಳಿಂದ ಮುಕ್ತವಾಗಿರಬೇಕು.

- **ಶಿಶು–ಕೇಂದ್ರಿತ ಬೋಧನೆ–ಕಲಿಕೆ ಮತ್ತು ಮಾಪನ:** ಶಿಶು–ಸ್ನೇಹಿ ಪರಿಸರವು ಶಿಶುಕೇಂದ್ರಿತ ಬೋಧನೆ–ಕಲಿಕೆ ಮತ್ತು ಮಾಪನ ಪ್ರಕ್ರಿಯೆಗಳಿಗೆ ಪೂರಕವಾಗಿ ಪರಿಣಮಿಸುತ್ತದೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಮಾಪನ ಉದ್ದೇಶಗಳಡಿಯಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು (ಅಂದರೆ ಕಲಿಕೆಗಾಗಿ, ಕಲಿಕೆಗೆ ಮತ್ತು ಕಲಿಕೆಯಾಗಿ ಮಾಪನ) ಏಕೀಕೃತಗೊಳಿಸಿದಾಗ ಸತತ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಜಾರಿಗೊಳಿಸುವಿಕೆಗೆ ಕುರಿತಾದ ಕೆಲವು ಮುಖ್ಯ ಅಂಶಗಳು ಕಂಡುಬರುತ್ತವೆ. ಅವು ಈ ಕೆಳಗಿನಂತಿವೆ:
- **ದಾಖಲಿಕೆ ಮತ್ತು ವರದಿಸಲ್ಲಿಸುವಿಕೆ:** ಪ್ರತ್ಯೇಕ ಪಠ್ಯಕ್ರಮ ವಿಷಯದ ಅಡಿಯಲ್ಲಿ ಗುರುತಿಸಿಕೊಂಡ ತರಗತಿವಾರು ಕಲಿಕೆಯ ಫಲಿತಗಳು ವಿದ್ಯಾರ್ಥಿಗಳ ಕಲಿಕೆ ಮತ್ತು ವಿಕಾಸದ ವ್ಯಾಪಕ ಚಿತ್ರಣವನ್ನು ಕೊಡುತ್ತದೆ.
- **ಮಕ್ಕಳ ಕಲಿಕೆಯಲ್ಲಿನ ಪ್ರಗತಿಗೆ ಸಾಕ್ಷ್ಯಾಧಾರಗಳ ಸಂಗ್ರಹಣೆ:** ಮಕ್ಕಳ ಕಲಿಕೆಗೆ ಸಂಬಂಧಿಸಿದ ಮಾಹಿತಿ ಅಥವಾ ದತ್ತಾಂಶಗಳೇ ಸಾಕ್ಷ್ಯಾಧಾರಗಳಾಗಿದ್ದು ಅವುಗಳನ್ನು ವ್ಯವಸ್ಥಿತವಾಗಿ ದಾಖಲಿಸಬೇಕು. ಹೀಗೆ ಮಾಡುವುದರಿಂದ ವರ್ಷದ ಯಾವುದೇ ಸಮಯದಲ್ಲಿ ಇವುಗಳನ್ನು ಪರಾಮರ್ಶಿಸಬಹುದಾಗಿದೆ.
- **ಪ್ರಗತಿ ವರದಿಯನ್ನು ಸಿದ್ಧಪಡಿಸುವಿಕೆ:** ಈ ವರದಿಯನ್ನು ವರ್ಷದಲ್ಲಿ ಮೂರು ತಿಂಗಳಿಗೊಮ್ಮೆ ಸಿದ್ಧಪಡಿಸಬಹುದು. ಅದರೆ, ಈ ಸಂಗತಿಯ ಬಗ್ಗೆ ಸಂಬಂಧಿತ ಅಧಿಕಾರಿಗಳು ಅಂತಿಮ ನಿರ್ಣಯ ಕೈಗೊಳ್ಳಬಹುದು.
- **ಪ್ರಗತಿ ವರದಿಯ ಹಂಚಿಕೆ:** ಪ್ರತ್ಯೇಕ ಶಿಶುವಿನ ಪ್ರಗತಿಯನ್ನು ವಿವಿಧ ಪಾಲುದಾರರೊಂದಿಗೆ ನಿಯಮಿತವಾಗಿ ಹಂಚಿಕೊಳ್ಳಬೇಕಾದ ಅಗತ್ಯವಿದೆ. ವಿಶೇಷವಾಗಿ, ಪೋಷಕರು / ಪಾಲಕರೊಂದಿಗೆ ಮತ್ತು ಮಕ್ಕಳೊಂದಿಗೆ ಹಂಚಿಕೊಳ್ಳಲೇಬೇಕು.

CCE ಮಾಪನ ವ್ಯವಸ್ಥೆ ಮೂರು ಮುಖ್ಯ ಪ್ರಶ್ನೆಗಳಿಗೆ ಉತ್ತರಿಸುತ್ತದೆ

- ಏನನ್ನು ಮಾಪನ ಮಾಡಬೇಕು?
- ಯಾವಾಗ ಮಾಪನ ಮಾಡಬೇಕು?
- ಹೇಗೆ ಮಾಪನ ಮಾಡಬೇಕು?

**1. ಏನನ್ನು ಮಾಪನ ಮಾಡಬೇಕು?**

CCE ವ್ಯವಸ್ಥೆಯು ಶಿಶುವಿನ ಒಟ್ಟಾರೆ ವಿಕಾಸದತ್ತ ಗಮನಹರಿಸುವುದರಿಂದ ಶಿಶುವಿನ ವಿಕಾಸದ ಎಲ್ಲ ಮುಖಗಳನ್ನು ಮಾಪನ ಮಾಡುವ ಅಗತ್ಯವಿದೆ. ಈ ಪ್ರಕ್ರಿಯೆಯನ್ನು ವ್ಯಾಪಕ ಸ್ವರೂಪದ್ದಾಗಿ ಮಾಡಲು ಶಿಶುವಿನ ಕಲಿಕೆಯನ್ನು ತರಗತಿಯ ಒಳಗೆ ಮತ್ತು ಹೊರಗೆ ಎರಡೂ ಕಡೆಗಳಲ್ಲಿಯೂ ವಿಸ್ತೃತ ವ್ಯಾಪ್ತಿಯ ಸನ್ನಿವೇಶ ಮತ್ತು ಪರಿಸರಗಳಲ್ಲಿ ಜರುಗಿಸಲಾಗುತ್ತದೆ. ಈ ಮಾಪನ ಪ್ರಕ್ರಿಯೆಯು ಶಿಕ್ಷಣದ ನಿರೀಕ್ಷಿತ ಫಲಿತಗಳನ್ನು ಸಾಧಿಸುವಲ್ಲಿ ಶಾಲೆ ಮತ್ತು ಶಿಕ್ಷಕರು ಎಷ್ಟರ ಮಟ್ಟಿಗೆ ಸಫಲರಾಗಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಒದಗಣೆಯ ಒಂದು ಭಾಗವಾಗುವ ಅಗತ್ಯವಿದೆ.

ಶಿಶುವಿನ ಕಲಿಕೆಯ ಸಂಪೂರ್ಣ ಚಿತ್ರವನ್ನು ಪಡೆಯಲೋಸುಗ ಮಾಪನವು ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಕಲಿಕಾರ್ಥಿಯ ಸಾಮರ್ಥ್ಯವೇನು ಎಂಬುದರತ್ತ ಗಮನ ಹರಿಸಬೇಕಾಗುತ್ತದೆ.

- ವಿವಿಧ ಪಠ್ಯವಿಷಯ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೇಕ್ಷಿತ ಕೌಶಲ್ಯಗಳನ್ನು ಕಲಿಯುವುದು ಮತ್ತು ಪಡೆಯುವುದು;
- ಅಪೇಕ್ಷಿತ ಪ್ರಮಾಣದಲ್ಲಿ ವಿವಿಧ ಪಠ್ಯವಿಷಯ ಕ್ಷೇತ್ರಗಳಲ್ಲಿ ಒಂದು ಮಟ್ಟದ ಸಾಧನೆಯನ್ನು ಸಾಧಿಸುವುದು;
- ಮಗುವಿನ ವ್ಯಕ್ತಿಗತ ಕೌಶಲ್ಯಗಳನ್ನು, ಆಸಕ್ತಿಗಳನ್ನು ಮತ್ತು ಅಭಿಪ್ರೇರಣೆಗಳನ್ನು ವಿಕಾಸಗೊಳಿಸುವುದು;
- ಜೀವನವನ್ನು ಅರ್ಥಮಾಡಿಕೊಂಡು ಬಾಳಲು ಸಹಾಯಮಾಡುವುದು;
- ಸಮಯ ಕಳೆದಂತೆ ಶಿಶುವಿನ ಕಲಿಕೆಯಲ್ಲಿ, ವರ್ತನೆಯಲ್ಲಿ ಮತ್ತು ಪ್ರಗತಿಯಲ್ಲಿ ಆಗುವ ಬದಲಾವಣೆಯನ್ನು ನಿರ್ವಹಣೆ ಮಾಡುವುದು;
- ಶಾಲೆಯ ಹೊರಗೆ ಮತ್ತು ಒಳಗೆ ವಿವಿಧ ಸನ್ನಿವೇಶಗಳಿಗೆ ಮತ್ತು ಅವಕಾಶಗಳಿಗೆ ಪ್ರತಿಕ್ರಿಯೆಯನ್ನು ತೋರುವುದು;
- ಕಲಿತಿರುವುದನ್ನು ವೈವಿಧ್ಯಮಯ ಪರಿಸರಗಳಲ್ಲಿ, ಪರಿಸ್ಥಿತಿಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಅನ್ವಯಿಸುವುದು.
- ಸ್ವತಂತ್ರವಾಗಿ, ಸಹಯೋಗದಿಂದ, ಸಾಮರಸ್ಯದೊಂದಿಗೆ ಕಾರ್ಯನಿರ್ವಹಿಸುವುದು;
- ಸಾಮಾಜಿಕ ಮತ್ತು ಪರಿಸರ ಸಂಬಂಧಿ ವಿವಾದಾಂಶಗಳ ಬಗ್ಗೆ ಅರಿವು ಹೊಂದುವುದು ಮತ್ತು ಭಾಗವಹಿಸುವುದು.
- ಕಾಲಾಂತರದಲ್ಲಿ ಕಲಿತದ್ದನ್ನು ತನ್ನಲ್ಲಿ ಉಳಿಸಿಕೊಳ್ಳುವುದು.

CCE ವ್ಯವಸ್ಥೆಯ ಉದ್ದೇಶಗಳನ್ನು ಸಾಕಾರಗೊಳಿಸಲು ಶಿಕ್ಷಕರು ಈ ಕೆಳಗಿನ ಮಾನದಂಡ (ಪ್ರಮಿತಿ)ಗಳನ್ನು ಗಮನದಲ್ಲಿರಿಸಬೇಕು:

- ಕಲಿಕಾರ್ಥಿಯನ್ನು ಮಾಪನ ಮಾಡಿ.
- ಪಠ್ಯವಿಷಯಗಳಲ್ಲಿ ಮತ್ತು ಅಡ್ಡ–ಪಠ್ಯಕ್ರಮ ಎಲ್ಲೆಗಳಲ್ಲಿ – ಕಲಿಕಾರ್ಥಿಯ ಕಲಿಕೆ ಮತ್ತು ಪ್ರಗತಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ವಿವಿಧ ಮಾರ್ಗಗಳನ್ನು ಉಪಯೋಗಿಸಿ.
- ನಿರಂತರವಾಗಿ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ದಾಖಲಿಸಿ.
- ಪ್ರತಿಯೊಬ್ಬ ಕಲಿಕಾರ್ಥಿಯ ಪ್ರತಿಕ್ರಿಯಿಸುವ ರೀತಿಗೆ, ಕಲಿಯುವ ಬಗೆಗೆ ಮತ್ತು ಆತ/ಆಕೆ ತೆಗೆದುಕೊಳ್ಳುವ ಸಮಯಕ್ಕೆ ಪ್ರಾಧಾನ್ಯತೆಯನ್ನು ಕೊಡಿ.

- ನಿರಂತರವಾಗಿ ವರದಿಯನ್ನು ಒಪ್ಪಿಸಿ ಮತ್ತು ಪ್ರತ್ಯೇಕ ಕಲಿಕಾರ್ಥಿಯ ಪ್ರತಿಕ್ರಿಯೆಗಳಿಗೆ ಸಂವೇದನಾಶೀಲರಾಗಿರಿ.
- ಸಕಾರಾತ್ಮಕ ಕಾರ್ಯಕ್ಕೆ ಎಡೆಮಾಡಿ ಮಾಡುವ ಮತ್ತು ಕಲಿಕಾರ್ಥಿ ಉತ್ತಮವಾಗಿ ಕಾರ್ಯ ಮಾಡುವುದಕ್ಕೆ ನೆರವಾಗುವ ಹಿಮ್ಮಾಹಿತಿಯನ್ನು ಒದಗಿಸಿ.
- ಮಾಪನ ಪ್ರಕ್ರಿಯೆಯಲ್ಲಿ ಈ ಕೆಳಗಿನವುಗಳನ್ನು ಮಾಡದಂತೆ ಎಚ್ಚರ ವಹಿಸಬೇಕು:
  - ಕಲಿಕಾರ್ಥಿಗಳನ್ನು ಮಂದ, ಕಳಪೆ, ಬುದ್ಧಿವಂತ ಇತ್ಯಾದಿಯಾಗಿ ಹಣೆಪಟ್ಟಿ ಹಚ್ಚುವುದು.
  - ಕಲಿಕಾರ್ಥಿಗಳ ನಡುವೆ ಹೋಲಿಕೆ ಮಾಡಿ ನೋಡುವುದು.
  - ನಕಾರಾತ್ಮಕ ಹೇಳಿಕೆಗಳನ್ನು ಕೊಡುವುದು.

**2. ಯಾವಾಗ ಮಾಪನ ಮಾಡಬೇಕು?**

ಸಮಗ್ರ ಶಿಕ್ಷಣದಲ್ಲಿ ಕಲಿಕೆಯ ಫಲಿತಗಳ ಮಾಪನವು ಬೋಧನೆ ಕಲಿಕೆಯ ಪ್ರಕ್ರಿಯೆಯ ಅವಿಭಾಜ್ಯ ಅಂಗ. ಕಲಿಕೆಯ ಪ್ರತಿಯೊಂದು ವ್ಯಾಸಾಂಗವಧಿಯು ಮೂರು ಭಾಗಗಳನ್ನು ಒಳಗೊಂಡಿರಬೇಕು: ಕಲಿಕಾ ಪ್ರಕ್ರಿಯೆ, ಕಲಿತದ್ದರ ಅನ್ವಯನ ಮತ್ತು ಕಲಿತದ್ದರ ಮಾಪನ. ಕಲಿಕೆ ಮತ್ತು ಮಾಪನವನ್ನು ಏಕೀಕೃತಗೊಳಿಸಲು ಇದೊಂದು ಮಾರ್ಗ

ನಿರಂತರ ಮತ್ತು ವ್ಯಾಪಕ ಮಾಪನವನ್ನು ಕೈಗೊಳ್ಳಬೇಕಾದರೆ ಶೈಕ್ಷಣಿಕ ಮತ್ತು ಸಹಶೈಕ್ಷಣಿಕ ಅಂಶಗಳಿಗೆ ಮಾನ್ಯತೆಯನ್ನು ನೀಡಬೇಕಾಗುತ್ತದೆ. ಅಂತಹ ಸಮಗ್ರ ಮಾಪನಕ್ಕೆ ಪ್ರತಿಯೋರ್ವ ಕಲಿಕಾರ್ಥಿಗೂ ಸಂಬಂಧಿಸಿದಂತೆ ಪ್ರಾಮಾಣಿಕವೂ ಪ್ರೋತ್ಸಾಹಕರವೂ ವಿವೇಚನಾಯುಕ್ತವೂ ಆದ ನಿರಂತರ, ಬದಲಾಗುತ್ತಿರುವ ಮತ್ತು ವ್ಯಾಪಕ ಚಿತ್ರಣ ಅಗತ್ಯವಾಗುತ್ತದೆ. ದಿನದಿನವೂ ಶಿಕ್ಷಕರು ಪರಿಹಾರೋಪಾಯ ಕಾರ್ಯತಂತ್ರಗಳ ಬಗ್ಗೆ ಪರ್ಯಾಲೋಚಿಸಿ, ಯೋಜಿಸಿ ಅವುಗಳನ್ನು ಜಾರಿಗೆ ತರುತ್ತಾರೆಯಾದರೂ ಒಂದು ನಿಶ್ಚಿತ ಕಾಲಾವಧಿಯಲ್ಲಿ ಕಲಿತದ್ದನ್ನು ಉಳಿಸಿಕೊಂಡು ಸ್ಪಷ್ಟವಾಗಿ ವ್ಯಕ್ತಪಡಿಸುವ ಶಿಶುವಿನ ಸಾಮರ್ಥ್ಯವನ್ನು ನಿಯಮಿತಾಧಿಯಲ್ಲಿ ಮಾಪನ ಮಾಡಬೇಕಾದ ಅವಶ್ಯಕತೆಯಿದೆ. ಈ ಮಾಪನವು ವಿವಿಧ ರೂಪಗಳಲ್ಲಿರಬಹುದು. ಆದರೆ, ಅವೆಲ್ಲವೂ ಸಾಧ್ಯವಾದಷ್ಟು ವಿವೇಚನಾಯುಕ್ತವೂ ವ್ಯಾಪಕವೂ ಆಗಿರಬೇಕು. ಕಲಿಕಾರ್ಥಿಗಳ ನಡುವೆ ಹೋಲಿಕೆ ಮಾಡದಂತಹ ಸಾಪ್ತಾಹಿಕ, ಪಾಕ್ಷಿಕ ಅಥವಾ ತ್ರೈಮಾಸಿಕ, ಸಕಾರಾತ್ಮಕ ಪುನರ್‌ವಿಮರ್ಶೆಗಳು (ಕಲಿಕಾ ಕ್ಷೇತ್ರವನ್ನು ಅವಲಂಬಿಸಿ) ಮತ್ತು ರಚನಾತ್ಮಕ ಅನುಭವಗಳನ್ನು ಮಕ್ಕಳಲ್ಲಿ ಕಲಿಕೆ ಮತ್ತು ಉಳಿಸಿಕೊಳ್ಳುವಿಕೆಯನ್ನು ಪ್ರೋತ್ಸಾಹಿಸಿ ಅಭಿವರ್ಧಿಸಲು ಮಾತ್ರವಷ್ಟೆ ಅಲ್ಲದೆ ಅವರ ಮೃದು ಕೌಶಲ್ಯಗಳನ್ನು ಪ್ರೋತ್ಸಾಹಿಸಿ ಸಂವರ್ಧಿಸಲು ಅಗತ್ಯವೆಂದು ಶಿಫಾರಸ್ಸು ಮಾಡಲಾಗುತ್ತದೆ. ಬೋಧನೆ – ಕಲಿಕೆ ಪ್ರಕ್ರಿಯೆಯನ್ನು ಸುಧಾರಿಸಲು ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮಾಪನಗಳೆರಡೂ ಅವಶ್ಯಕ.

**3. ಮಾಪನ ಮಾಡುವುದು ಹೇಗೆ?**

ಮಾಪನದ ಸಂದರ್ಭದಲ್ಲಿ ಪ್ರಮುಖವಾಗಿ ಎರಡು ಉಪಕ್ರಮಗಳನ್ನು ಅನುಸರಿಸಲಾಗುತ್ತದೆ. ಅವೆಂದರೆ, ರೂಪಣಾತ್ಮಕ ಮಾಪನ ಮತ್ತು ಸಂಕಲನಾತ್ಮಕ ಮಾಪನ

- **ರೂಪಣಾತ್ಮಕ ಮಾಪನ:** ರೂಪಣಾತ್ಮಕ ಮಾಪನವು ಶಿಕ್ಷಕರು ವಿದ್ಯಾರ್ಥಿಯ ಪ್ರಗತಿಯ ಮೇಲ್ವಿಚಾರಣೆಯನ್ನು ಭಯಮುಕ್ತ, ಪ್ರೋತ್ಸಾಹಕರ ಪರಿಸರದಲ್ಲಿ ಕೈಗೊಳ್ಳಲು ಬಳಸುವ ಒಂದು ಉಪಕ್ರಮವಾಗಿದೆ. ವಿವರಣಾತ್ಮಕ ಹಿಮ್ಮಾಹಿತಿ, ತನ್ನ ಕಾರ್ಯಕ್ಷಮತೆಯ ಬಗೆಗೆ ಪರ್ಯಾಲೋಚಿಸಲು ವಿದ್ಯಾರ್ಥಿಗೆ ಅವಕಾಶ ಒದಗಿಸುವಿಕೆ, ಸಲಹೆಯನ್ನು ಪಡೆದು ಸುಧಾರಿಸಿಕೊಳ್ಳಲು ಅವಕಾಶ – ಇವೆಲ್ಲವೂ ಇದರಲ್ಲಿ ಒಳಗೊಂಡಿರುತ್ತವೆ. ಮಾನದಂಡಗಳನ್ನು ವಿನ್ಯಾಸಗೊಳಿಸುವುದರಿಂದ ಹಿಡಿದು ತನ್ನನ್ನು ಅಥವಾ ಸಹಪಾಠಿಗಳನ್ನು ಮಾಪನ ಮಾಡುವವರೆಗೂ ವಿದ್ಯಾರ್ಥಿಯು ಇದರ ಅತಿಮುಖ್ಯ ಭಾಗವಾಗಿರುತ್ತಾನೆ. ಪರಿಣಾಮಕಾರಿಯಾಗಿ ಉಪಯೋಗಿಸಿದಲ್ಲಿ ಇದು ವಿದ್ಯಾರ್ಥಿಯ ಕಾರ್ಯಕ್ಷಮತೆಯನ್ನು

ಅಗಾಧವಾಗಿ ಹೆಚ್ಚಿಸುವುದಲ್ಲದೆ ಶಿಶುವಿನ ಆತ್ಮಾಭಿಮಾನವನ್ನು ಹೆಚ್ಚಿಸಿ ಶಿಕ್ಷಕರ ಕಾರ್ಯಭಾರವನ್ನು ತಗ್ಗಿಸಬಲ್ಲದಾಗಿರುತ್ತದೆ. ಈ ಪ್ರಕ್ರಿಯೆಯು ಶೈಕ್ಷಣಿಕ ಪಠ್ಯವಿಷಯಗಳಲ್ಲಿ ಮತ್ತು ಜೀವನ ಕೌಶಲ್ಯಗಳು, ಅಭಿವೃತ್ತಿಗಳು ಮತ್ತು ಮೌಲ್ಯಗಳು ಹಾಗೂ ಪಠ್ಯೇತರ ಚಟುವಟಿಕೆಗಳಂತಹ ಸಹಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರತ್ಯೇಕವಾಗಿ ವಿದ್ಯಾರ್ಥಿಯ ಪ್ರಗತಿಯನ್ನು ದಾಖಲಿಸಲು ಶಿಕ್ಷಕರಿಗೆ ಸಹಾಯ ನೀಡುತ್ತದೆ. ರೂಪಣಾತ್ಮಕ ಮಾಪನವನ್ನು ಕೇವಲ ಪೇಪರ್ ಮತ್ತು ಪೆನ್ಸಿಲ್ ಪರೀಕ್ಷೆಗೆ ಮಾತ್ರ ಸೀಮಿತಗೊಳಿಸದೆ ಕ್ವಿಜ್‌ಗಳು, ಬಿಡಿಸಲು ಬುದ್ಧಿಚಾತುರ್ಯ ಮತ್ತು ತಾಳ್ಮೆಗಳು ಅಗತ್ಯವಾದ ಸಮಸ್ಯೆಗಳು, ಪ್ರಾಯೋಜನೆಯ ಕಾರ್ಯ, ಪ್ರಾಯೋಗಿಕ ಕಾರ್ಯ ಮತ್ತು ನಿಯೋಜಿತ ಕಾರ್ಯಗಳಂತಹ ಇತರ ಪರೀಕ್ಷೆಯ ಸಾಧನಗಳನ್ನು ಬಳಸಬೇಕೆಂದು ಶಿಕ್ಷಕರಿಗೆ ನಿರ್ದೇಶನ ಮಾಡಲಾಗುತ್ತದೆ. ರೂಪಣಾತ್ಮಕ ಮಾಪನಕ್ಕೆ ಅಂಕ ಕೊಡಲಾಗುವ ಅಂತಿಮ ಗ್ರೇಡಿಗೆ ಶೇ.40ರಷ್ಟು ಮಹತ್ವ ಪೂರ್ಣತೆಯನ್ನು ನಿಗದಿಪಡಿಸಲಾಗುತ್ತದೆ. ವಿದ್ಯಾರ್ಥಿಯು ಶೈಕ್ಷಣಿಕೇತರ ಚಟುವಟಿಕೆಗಳಲ್ಲಿ ಉತ್ತಮವಾಗಿ ಕಾರ್ಯಕ್ಷಮತೆಯನ್ನು ತೋರಿದಲ್ಲಿ ಶಿಕ್ಷಕರು ತಮ್ಮ ವಿವೇಚನೆ ಉಪಯೋಗಿಸಿ ಆ ವಿದ್ಯಾರ್ಥಿಯ ಶೈಕ್ಷಣಿಕ ಗ್ರೇಡು (ಗರಿಷ್ಟ ಎರಡು ಪಠ್ಯ ವಿಷಯಗಳಲ್ಲಿ ಒಂದು ಗ್ರೇಡ್‌ನಷ್ಟು)ಗಳನ್ನು ಹೆಚ್ಚಿಸಬಹುದು.

ರೂಪಣಾತ್ಮಕ ಮಾಪನದ ಪ್ರಮುಖ ಗುಣಲಕ್ಷಣಗಳು ಇಂತಿವೆ:

- ಇದು ಕಾರಣ ನಿರೂಪಣಾತ್ಮಕ ಮತ್ತು ಪರಿಹಾರೋಪಾಯ ಸೂಚಕ.
- ಇದು ಪರಿಣಾಮಕಾರಿ ಹಿಮ್ಮಾಹಿತಿಯನ್ನು ಒದಗಿಸುತ್ತದೆ.
- ಇದು ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ವೇದಿಕೆಯನ್ನು ಒದಗಿಸುತ್ತದೆ.
- ಮಾಪನದ ಫಲಿತಾಂಶಗಳನ್ನು ಗಣನೆಗೆ ತೆಗೆದುಕೊಂಡು ಬೋಧನೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಶಿಕ್ಷಕರನ್ನು ಸಮರ್ಥರನ್ನಾಗಿಸುತ್ತದೆ.
- ಕಲಿಕೆಯ ಮೇಲೆ ನಿರ್ಣಾಯಕ ಪ್ರಭಾವ ಬೀರುವ ಅಭಿಪ್ರೇರಣೆ ಮತ್ತು ಆತ್ಮಾಭಿಮಾನಗಳ ಮೇಲೆ ಮಾಪನವು ಗಾಢವಾಗಿ ಪ್ರಭಾವಿಸುತ್ತದೆ ಎಂಬ ಸಂಗತಿಯನ್ನು ಮಾನ್ಯ ಮಾಡುತ್ತದೆ.
- ವಿದ್ಯಾರ್ಥಿಗಳು ತಮ್ಮನ್ನು ತಾವು ಮಾಪನ ಮಾಡಿಕೊಳ್ಳಲು ಶಕ್ತರಾಗಬೇಕು ಎಂಬ ಅಗತ್ಯಕ್ಕೆ ಮನ್ನಣೆ ನೀಡುತ್ತದೆ.
- ಬೋಧಿಸಿದ್ದನ್ನು ವಿನ್ಯಾಸಗೊಳಿಸುವಲ್ಲಿ ವಿದ್ಯಾರ್ಥಿಗಳಿಗೆ ಈಗಾಗಲೇ ಇರುವ ಜ್ಞಾನ ಮತ್ತು ಅನುಭವಗಳನ್ನು ಬಳಸಿಕೊಳ್ಳುತ್ತದೆ.
- ಏನನ್ನು ಹೇಗೆ ಬೋಧಿಸಬೇಕು ಎಂಬುದನ್ನು ಕುರಿತ ನಿರ್ಧಾರದಲ್ಲಿ ವಿವಿಧ ರೀತಿಯ ಕಲಿಕಾ ಶೈಲಿಗಳನ್ನು ಪರಿಗಣಿಸುತ್ತದೆ.
- ವಿದ್ಯಾರ್ಥಿಗಳನ್ನು ಅವರ ಕಾರ್ಯವನ್ನು ತೂಗಿ ನೋಡಲು ಬಳಸಲಾಗುವ ಮಾನದಂಡಗಳನ್ನು ಅರ್ಥಮಾಡಿಕೊಳ್ಳುವಂತೆ ಪ್ರೋತ್ಸಾಹಿಸುತ್ತದೆ.
- ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ಹಿಮ್ಮಾಹಿತಿ ದೊರೆತ ಬಳಿಕ, ಸುಧಾರಿಸಿಕೊಳ್ಳಲು ಅವಕಾಶ ಒದಗಿಸುತ್ತದೆ.
- ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳಿಗೆ ಬೆಂಬಲ ನೀಡುವಲ್ಲಿ ಅವರಿಗೆ ಸಹಾಯ ಮಾಡುತ್ತದೆ ಹಾಗೂ ಅವರು ಇತರ ವಿದ್ಯಾರ್ಥಿಗಳಿಗೆ ನೆರವಾಗಬೇಕೆಂದು ಅಪೇಕ್ಷಿಸುತ್ತದೆ.

ಹೀಗೆ ಬೋಧನೆಯ ಅವಧಿಯ ಉದ್ದಕ್ಕೂ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳೀರ್ವರಿಗೂ ತರಗತಿಯ ವ್ಯವಹಾರಗಳಲ್ಲಿ ಮತ್ತು ಕಲಿಕಾ ಚಟುವಟಿಕೆಗಳಲ್ಲಿ ಸೂಕ್ತ ಮಾರ್ಪಾಡುಗಳನ್ನು ನಡೆಸಲೋಸುಗ ನಿರಂತರ ಹಿನ್ನುಣಿಕೆಯನ್ನು ಒದಗಿಸುವ ಸಲುವಾಗಿ ರೂಪಣಾತ್ಮಕ ಮಾಪನವನ್ನು ನಡೆಸಲಾಗುವುದು.

ಈ ಕೆಳಗೆ ರೂಪಣಾತ್ಮಕ ಮಾಪನವನ್ನು ಪ್ರತಿನಿಧಿಸುವ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ:

- ✓ ಕಲಿಕಾ ಪ್ರಕ್ರಿಯೆಯ ಸಂದರ್ಭದಲ್ಲಿ ಯಾವ ನಿರ್ದಿಷ್ಟ ಪರಿಕಲ್ಪನೆಗಳನ್ನು ಅಥವಾ ಕೌಶಲ್ಯಗಳಲ್ಲಿ ತೊಡಕನ್ನು ಎದುರಿಸುತ್ತಿದ್ದಾರೆಂದು ನಿಶ್ಚಯಿಸಲು ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿಗಳ ಸಮೂಹಕ್ಕೆ ಶಿಕ್ಷಕರು ಕೇಳುವ ಪ್ರಶ್ನೆಗಳು. ಇನ್ನೂ ಉತ್ತಮ ಪ್ರತಿಕ್ರಿಯೆಗಳನ್ನು ಪಡೆಯಲು ಒಂದು ನಿರ್ದಿಷ್ಟ ರೀತಿಯಲ್ಲಿ ಪ್ರಶ್ನೆಗಳನ್ನು ರೂಪಿಸುವ, ಉದ್ದೇಶಪೂರ್ವಕವಾಗಿ ಪ್ರಶ್ನೆಗಳನ್ನು ಕೇಳುವ ವಿವಿಧ ರೀತಿಯ ತಂತ್ರಗಳನ್ನು ಬಳಸಬಹುದಾಗಿದೆ.
- ✓ ಜರ್ನಲ್ ನಮೂದುಗಳು, ಪ್ರಬಂಧಗಳು, ಕಾರ್ಯದಾಖಲೆ(Worksheet) ಸಂಶೋಧನಾ ಕಾರ್ಯ, ಪ್ರಾಯೋಜನೆಗಳು, ಗ್ರೇಡ್ ಇಲ್ಲದ ಕ್ವಿಜ್‌ಗಳು, ಪ್ರಯೋಗಾಲಯದ ಫಲಿತಾಂಶಗಳು ಅಥವಾ ಕಲಾತ್ಮಕ ಕೃತಿಗಳು, ವಿನ್ಯಾಸದ ಕೃತಿಗಳು, ಕಲಾತ್ಮಕ ಪ್ರದರ್ಶನಗಳು ಮುಂತಾದ ವಿದ್ಯಾರ್ಥಿಗಳು ಕೈಗೊಂಡ ಕಾರ್ಯಗಳನ್ನು ಕುರಿತಾಗಿ ಶಿಕ್ಷಕರು ಒದಗಿಸುವ ನಿರ್ದಿಷ್ಟ ವಿವರಣಾತ್ಮಕ ಮತ್ತು ರಚನಾತ್ಮಕ ಹಿಮ್ಮಾಹಿತಿ. ಉದಾಹರಣೆಗೆ, ಕಾರ್ಯವೊಂದರ ಫಲಿತಾಂಶವನ್ನು ಪರಿಷ್ಕರಿಸುವುದಕ್ಕೆ ಅಥವಾ ಸುಧಾರಿಸುವುದಕ್ಕೆ ಈ ಹಿಮ್ಮಾಹಿತಿಯನ್ನು ಉಪಯೋಗಿಸಬಹುದು.
- ✓ ಪಾಠದ ಕಡೆಯಲ್ಲಿ ಅಥವಾ ತರಗತಿಯ ಅವಧಿಯ ಕಡೆಯಲ್ಲಿ ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಶೀಘ್ರವಾಗಿ ಸಂಗ್ರಹಿಸಲು ಸಣ್ಣ ಸಣ್ಣ ಕಾಗದದಲ್ಲಿ ಪ್ರಶ್ನೆಗಳನ್ನು ಬರೆದು ಹಂಚಿ ಉತ್ತರ ಸಂಗ್ರಹಿಸಬಹುದು. ವಿದ್ಯಾರ್ಥಿಗಳ ಉತ್ತರಗಳು ಏನನ್ನು ಸೂಚಿಸುತ್ತವೆ ಎಂಬುದನ್ನಾಧರಿಸಿ ವಿದ್ಯಾರ್ಥಿಗಳು ಗ್ರಹಿಸಲು ಅಸಮರ್ಥರಾದ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಅಥವಾ ಅವರು ತೊಡಕನ್ನು ಎದುರಿಸುತ್ತಿರುವ ಕೌಶಲ್ಯಗಳನ್ನು ಕುರಿತಂತೆ ಮುಂದಿನ ಪಾಠದಲ್ಲಿ ಶಿಕ್ಷಕರು ಮಾರ್ಪಾಡುಗಳನ್ನು ತರಬಹುದು. ಇದೇ ತಂತ್ರವನ್ನು ತರಗತಿಯ ಮೊದಲಲ್ಲಿ ಬಳಸಿ, ಹಿಂದಿನ ತರಗತಿಯಲ್ಲಿ ಕಲಿತ ಅಂಶಗಳ ಪುನರಾವರ್ತನೆ ಮಾಡಬಹುದು.

- ✓ ವಿದ್ಯಾರ್ಥಿಗಳು ತಮ್ಮ ಕಲಿಕೆಯ ಪ್ರಕ್ರಿಯೆಯ ಕುರಿತಾಗಿ ಆಲೋಚಿಸಲು, ಅವರು ಏನನ್ನು ಉತ್ತಮವಾಗಿ ನಿರ್ವಹಿಸಬಲ್ಲರು ಎಂದು ತಿಳಿಯಲು, ಯಾವುದರ ಕುರಿತಾಗಿ ತೊಡಕನ್ನು ಎದುರಿಸುತ್ತಿದ್ದಾರೆ ಎಂದು ತಿಳಿಯಲು ಸ್ವಮಾಪನ ತಂತ್ರಗಳನ್ನು ಬಳಸಬಹುದು.

- ✓ ವಿದ್ಯಾರ್ಥಿಗಳನ್ನೆ ಸಂಪನ್ಮೂಲಗಳನ್ನಾಗಿ ಬಳಸಿಕೊಳ್ಳಲು ಸಾಧ್ಯವಾಗುವಂತಿರುವ ಸಹಪಾಠಿಗಳ ಮಾಪನ ಒಂದು ಉತ್ತಮ ತಂತ್ರ.

ಇದನ್ನು ನಾವು ಒಂದು ಉದಾಹರಣೆಯ ಮೂಲಕ ತಿಳಿಯೋಣ.

**ವಿಷಯ:** ಭಾರತದ ಭೌತಿಕ ಗುಣಲಕ್ಷಣಗಳು
**ಕಾರ್ಯ:** ನಾಟಕೀಕರಣ
ತರಗತಿಯನ್ನು ಸಣ್ಣ ಗುಂಪುಗಳಾಗಿ ವಿಭಜಿಸಲಾಗುತ್ತದೆ. ಪ್ರತಿಯೊಂದು ಗುಂಪು ಒಂದು ನಿರ್ದಿಷ್ಟ ಭೌತಿಕ ಗುಣಲಕ್ಷಣವನ್ನು ಪ್ರತಿನಿಧಿಸುತ್ತಿದೆ.

**ಉದ್ದೇಶಗಳು ಇಂತಿವೆ**

- ಕಲಿಕಾರ್ಥಿಗಳು ಭಾರತದಲ್ಲಿ ಲಭ್ಯವಿರುವ ಅಮೂಲ್ಯ ಸಂಪನ್ಮೂಲಗಳ ಬಗ್ಗೆ ಅಂತದೃಷ್ಟಿಯನ್ನು ಹೊಂದಲು ಅವರನ್ನು ಸಮರ್ಥರನ್ನಾಗಿಸುವುದು.
- ಕಲಿಕಾರ್ಥಿಗಳಿಗೆ ವೈವಿಧ್ಯಮಯ ಸಂಪನ್ಮೂಲಗಳು ಮತ್ತು ಅವುಗಳ ಉಪಯೋಗಗಳ ಬಗೆಗೆ ಪರ್ಯಾಲೋಚಿಸಲು ಅವಕಾಶ ಒದಗಿಸುವುದು.

**ನಿರೀಕ್ಷಿತ ಕೌಶಲ್ಯಗಳೆಂದರೆ**

- ವಿದ್ಯಾರ್ಥಿಗಳಲ್ಲಿ ಕಥಾವಸ್ತುವನ್ನು ಬರೆಯುವ ಸಾಮರ್ಥ್ಯವನ್ನು ಬೆಳೆಸುವುದು.
- ತಂಡಗಳಲ್ಲಿ ಸಂಭಾಷಣೆ, ನಟನೆ – ಈ ಕಾರ್ಯಗಳಲ್ಲಿ ಭಾಗವಹಿಸುವುದು.
- ತಂಡಗಳಲ್ಲಿ ಕೆಲಸ ಮಾಡುವುದು.

**ಮಾಪನ:** ತಂಡಗಳ ಕಾರ್ಯಕ್ಷಮತೆಯನ್ನು ವಿಷಯಜ್ಞಾನ, ಸಂಭಾಷಣಾ ಕುಶಲತೆ ಮತ್ತು ಪರಿಕಲ್ಪನೆಯ ಸ್ಪಷ್ಟತೆಗಳನ್ನು ಅವಲಂಬಿಸಿ ಮಾಪನ ಮಾಡಲಾಗುತ್ತದೆ.

**ಈ ಕೆಳಗಿನವುಗಳು ಮಾಪನದ ಪ್ರಮುಖ ಗುಣಲಕ್ಷಣಗಳಾಗಿವೆ**

- ಪ್ರಮುಖ ಉದ್ದೇಶವೇನೆಂದರೆ ಭಾರತದ ವಿವಿಧ ಭೌತಿಕ ಗುಣಲಕ್ಷಣಗಳ ಬಗ್ಗೆ ಕಲಿಕಾರ್ಥಿಗಳು ಅರಿವು ಪಡೆದುಕೊಳ್ಳಲು ಸಾಧ್ಯವಾಗುವಂತೆ ಅವರನ್ನು ಸಮರ್ಥರನ್ನಾಗಿಸುವುದು.
- ಈ ಕಾರ್ಯವು ವಿದ್ಯಾರ್ಥಿಗಳನ್ನು ಸಮೂಹ ಪಾರಸ್ಪರಿಕ ಕ್ರಿಯೆಯಲ್ಲಿ ಮತ್ತು ಪ್ರಸ್ತುತಿಯಲ್ಲಿ ತೊಡಗಿಸುತ್ತದೆ.
- ಕಾರ್ಯವು ಪೂರ್ಣವಾದ ನಂತರ ಶಿಕ್ಷಕರು ಸುಧಾರಣೆಗಾಗಿ ಹಿಮ್ಮಾಹಿತಿಯನ್ನು ಒದಗಿಸುತ್ತಾರೆ. ಅಲ್ಲದೆ ಅಗತ್ಯವಿದ್ದಲ್ಲಿ ಪಾಠವನ್ನು ಪುನರ್ ಪರಿಶೀಲಿಸಬಹುದಾಗಿದೆ.
- ಸ್ಪಷ್ಟವಾಗಿ ವ್ಯಾಖ್ಯಾನಿಸಿದ ಮಾನದಂಡಗಳನ್ನಾಧರಿಸಿ ಮಾಪನ ಮಾಡಲಾಗುತ್ತದೆ.
- ಪಾಠದ ಒಂದು ಭಾಗದಂತೆ ಮಾಪನ ಕಾರ್ಯವನ್ನು ತರಗತಿಯಲ್ಲಿ ಮಾಡಲಾಗುತ್ತದೆ. ಇದರ ಪ್ರಮುಖ ಉದ್ದೇಶ ಕಲಿಕಾರ್ಥಿಗಳ ಜ್ಞಾನವನ್ನು ಅಳೆಯುವುದು.
- ಕಾರ್ಯವು ಅನುಭವಾತ್ಮಕ ಕಲಿಕೆಯ ಮುಖಾಂತರ ಕಲಿಕಾರ್ಥಿಗಳಿಗೆ ಪರಿಕಲ್ಪನಾತ್ಮಕ ಸ್ಪಷ್ಟತೆಯನ್ನು ಒದಗಿಸುವ ಗುರಿಯನ್ನು ಹೊಂದಿರುತ್ತದೆ.
- ಇದು ಮತ್ತಷ್ಟು ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ.

- **ಸಂಕಲನಾತ್ಮಕ ಮಾಪನ**

ಕಲಿಕಾ – ಅವಧಿಯ ಕಡೆಯಲ್ಲಿ ಸಂಕಲನಾತ್ಮಕ ಮಾಪನವನ್ನು ಕೈಗೊಳ್ಳಲಾಗುತ್ತದೆ. ಹೆಸರೇ ಸೂಚಿಸುವಂತೆ ಕೋರ್ಸಿನಲ್ಲಿ ವಿದ್ಯಾರ್ಥಿಯು ಎಷ್ಟು ಕಲಿತಿದ್ದಾನೆ ಎಂಬುದನ್ನು ಇದು ಅಳೆಯುತ್ತದೆ. ಸಾಮಾನ್ಯವಾಗಿ ಇದು ಶ್ರೇಣೀಕೃತ ಪರೀಕ್ಷೆಯಾಗಿರುತ್ತದೆ ಪ್ರಧಾನವಾಗಿ ಸಂಕಲನಾತ್ಮಕ ಸ್ವರೂಪದ್ದಾಗಿರುವ ಮಾಪನವು ಮಗುವಿನ ಬೆಳವಣಿಗೆಗೆ ಮತ್ತು ವಿಕಾಸಗಳನ್ನು ಸಿಂಧುವಾಗಿಸಬಹುದಾದ ಅಳತೆಯನ್ನು ಸ್ವತಃ ಕೊಡಲು ಸಾಧ್ಯವಿಲ್ಲ. ಗರಿಷ್ಠವೆಂದರೆ ಯಾವುದಾದರೊಂದು ಇಚ್ಛಿತ ಸಮಯದಲ್ಲಿ ಶಿಶುವಿನ ಸಾಧನೆಯ ಮಟ್ಟವೇನು ಎಂಬುದನ್ನು ಮಾತ್ರ ಪ್ರಮಾಣೀಕರಿಸಬಲ್ಲದು. ಸಾಮಾನ್ಯವಾಗಿ ಪೇಪರ್, ಪೆನ್ಸಿಲ್ ಬಳಸಿ ಕೈಗೊಳ್ಳುವ ಈ ಮಾಪನವು ಒಂದು ಸಲ ಮಾಡಿ ಮುಗಿಸಿಬಿಡುವ ರೂಪದ್ದಾಗಿದ್ದು ಶಿಶುವಿನ ವಿಕಸನದ ಬಗ್ಗೆ ನಿಶ್ಚಯಿಸಲು ಸಂಪೂರ್ಣವಾಗಿ ಈ ಮಾಪನವನ್ನು ಅವಲಂಭಿಸುವುದು ನ್ಯಾಯಯುತವೂ ಅಲ್ಲ, ವೈಜ್ಞಾನಿಕವೂ ಅಲ್ಲ. ಕೇವಲ ಶೈಕ್ಷಣಿಕ ಮುಖಗಳಿಗೆ ಗಮನ ಕೇಂದ್ರೀಕರಿಸುವಂತಹ ಪರೀಕ್ಷೆಗಳಿಗೆ ಅತಿ ಪ್ರಾಧಾನ್ಯತೆ


ಕೊಡುವುದರಿಂದ ಮಕ್ಕಳ ಮಾಪನವು ಕಲಿಕೆಗಿಂತ ಭಿನ್ನ ಎಂದು ತಿಳಿಯುವಂತಾಗಿ "ಕಲಿ ಬಳಿಕ ಮರೆತು ಬಿಡಿ" ಎನ್ನುವಂತಹ ಮನೋಭಾವ ಬೆಳೆದುಬಿಡುತ್ತದೆ. ಕ್ಷೇಮಕರವಲ್ಲದ ಸ್ಪರ್ಧೆಯನ್ನು ಇದು ಉತ್ತೇಜಿಸುವುದಲ್ಲದೆ, ಸಂಕಲನಾತ್ಮಕ ಮಾಪನ ವ್ಯವಸ್ಥೆಗೆ ಅತಿಯಾದ ಒತ್ತು ನೀಡುವಿಕೆಯಿಂದಾಗಿ ಕಲಿಕಾರ್ಥಿಗಳ ಮೇಲೆ ಆಗಾಧ ಒತ್ತಡ ಮತ್ತು ಆತಂಕ ಉಂಟಾಗುತ್ತದೆ.

ಸಂಕಲನಾತ್ಮಕ ಮಾಪನವನ್ನು ಮೂರು ನಿರ್ಣಾಯಕ ಅಂಶಗಳಿಂದ ವ್ಯಾಖ್ಯಾನಿಸಬಹುದು:

- ✓ ವಿದ್ಯಾರ್ಥಿಗಳು ಏನನ್ನು ಕಲಿಯಬೇಕೆಂದು ನಿರೀಕ್ಷಿಸಲಾಗಿದೆಯೋ ಅದನ್ನು ಅವರು ಕಲಿತಿದ್ದಾರೆಯೇ ಎಂದು ನಿರ್ಧರಿಸಲು ಪರೀಕ್ಷೆಗಳು, ನಿಯೋಜಿತ ಕಾರ್ಯಗಳು ಅಥವಾ ಪ್ರಾಯೋಜನೆಗಳನ್ನು ಉಪಯೋಗಿಸಲಾಗುತ್ತದೆ.
- ✓ ಸಂಕಲನಾತ್ಮಕ ಮಾಪನವನ್ನು ಒಂದು ನಿರ್ದಿಷ್ಟ ಬೋಧನೆಯ ಅವಧಿಯ ಅಂತ್ಯದಲ್ಲಿ ಮುಕ್ತಾಯವಾಗುವ ಸಮಯದಲ್ಲಿ ಮಾಡಲಾಗುವುದರಿಂದ ಅವು ಸಾಮಾನ್ಯವಾಗಿ ಕಾರಣ ನಿರೂಪಣಾತ್ಮಕಕ್ಕಿಂತ ಮೌಲ್ಯಮಾಪನಾತ್ಮಕವಾಗಿರುತ್ತವೆ.
- ✓ ಸಂಕಲನಾತ್ಮಕ ಮಾಪನದಲ್ಲಿ ಫಲಿತಾಂಶಗಳನ್ನು ಅಂಕಗಳ ರೂಪದಲ್ಲಿ ಅಥವಾ ಶ್ರೇಣಿಗಳ ರೂಪದಲ್ಲಿ ದಾಖಲಿಸಿ, ಬಳಿಕ ಅವುಗಳನ್ನು ವಿದ್ಯಾರ್ಥಿಯ ಶೈಕ್ಷಣಿಕ ದಾಖಲೆಯಲ್ಲಿ ಪರಿಗಣಿಸಲಾಗುತ್ತದೆ. ರಿಪೋರ್ಟ್‌ಕಾರ್ಡ್‌ನಲ್ಲಿ ಇವು ಅಕ್ಷರ ಶ್ರೇಣಿಯಾಗಿ ದಾಖಲಾಗುತ್ತದೆಯೋ ಅಥವಾ ಕಾಲೇಜು ಪ್ರವೇಶ ಪ್ರಕ್ರಿಯೆಯಲ್ಲಿ ಪರೀಕ್ಷಾ ಅಂಕಗಳಾಗಿ ಬಳಸಲಾಗುತ್ತದೆಯೋ ಎಂಬುದು ನಿರ್ದಿಷ್ಟ ಸನ್ನಿವೇಶಗಳ ಮೇಲೆ ಅವಲಂಬಿತವಾಗಿರುತ್ತದೆ.. ಬಹುತೇಕ ಸಂದರ್ಭಗಳಲ್ಲಿ ಮತ್ತು ಕೋರ್ಸುಗಳಲ್ಲಿ ಶ್ರೇಣಿಗಳನ್ನು ಕೊಡುವ ಪ್ರಕ್ರಿಯೆ ಪ್ರಧಾನ ಅಂಗವಾಗಿದ್ದರೂ ಸಂಕಲನಾತ್ಮಕ ಎಂದು ಪರಿಗಣಿಸಲಾಗುವ ಎಲ್ಲ ಮಾಪನಗಳು ಶ್ರೇಣಿಬದ್ಧವಲ್ಲ.

ಮೇಲೆ ಕಾಣಿಸಿದ ಭಾರತದ ಭೌತಿಕ ಲಕ್ಷಣಗಳನ್ನು ಕುರಿತ ಉದಾಹರಣೆಯಲ್ಲಿ "ಭಾರತದ ಭೌತಿಕ ಗುಣಲಕ್ಷಣಗಳನ್ನು ವಿವರಿಸಿ" ಎಂಬ ಪ್ರಶ್ನೆಯು ಸಂಕಲನಾತ್ಮಕ ಮಾಪನ ಎನಿಸಿಕೊಳ್ಳುತ್ತದೆ.

ಸಂಕಲನಾತ್ಮಕ ಮಾಪನದ ಲಾಭಗಳನ್ನು ಈ ಕೆಳಗಿನಂತೆ ತೋರಿಸಬಹುದು.



ಕೆಲವು ವಿಧಗಳ ಸಂಕಲನಾತ್ಮಕ ಮಾಪನಗಳು ಹಾಗೂ ರೂಪಣಾತ್ಮಕ ಮಾಪನಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸುವುದು ಕಷ್ಟಕರ. ಉದಾಹರಣೆಗೆ, ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಮೇಲ್ವಿಚಾರಣೆ ನಡೆಸಲು ಬೆಂಚ್‌ಮಾರ್ಕ್ ಪರೀಕ್ಷೆಗಳನ್ನು ನಡೆಸಿ, ಬಳಿಕ ಕೋರ್ಸಿನ ಅಂತ್ಯದ ಪರೀಕ್ಷೆಗಳಲ್ಲಿ ಮೌಲ್ಯಮಾಪನ ಮಾಡಲಾಗುವ ಸಾಮಗ್ರಿಯನ್ನು ವಿದ್ಯಾರ್ಥಿಗಳು ಸ್ವಾಂಗೀಕೃತಗೊಳಿಸಿಕೊಂಡಿದ್ದಾರೆಯೇ, ಇಲ್ಲವೇ ಎಂದು ನಿಶ್ಚಯಿಸುತ್ತಾರೆ.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಗುಣಗಳು**

- ಇದು ಕಲಿಕಾರ್ಥಿಯು ತನ್ನ ವ್ಯಕ್ತಿತ್ವವನ್ನು ಸಮಗ್ರವಾಗಿ, ವಿಕಾಸಗೊಳಿಸಿಲೊಳ್ಳಲು ನೆರವಾಗುತ್ತದೆ.
- ವಿದ್ಯಾರ್ಥಿಗಳಿಗೆ ಆಸಕ್ತಿಗಳನ್ನು ಮತ್ತು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಕಷ್ಟು ಸಮಯ ದೊರೆಯುತ್ತದೆ.
- ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಪಠ್ಯವಿಷಯಗಳ ಬಗ್ಗೆ ಮಾಹಿತಿ ಬೆಂಬಲಿತ ಆಯ್ಕೆ ಮಾಡುವಲ್ಲಿ ಸಹಕಾರಿಯಾಗುತ್ತದೆ.
- ಇದು ವಿದ್ಯಾರ್ಥಿಗಳನ್ನು ಸೃಜನಾತ್ಮಕ ಮತ್ತು ವಿಮರ್ಶಾತ್ಮಕ ಚಿಂತನಾ ಕೌಶಲ್ಯಗಳಿಂದ ಸಜ್ಜುಗೊಳಿಸುತ್ತದೆ.
- ಇದು ಬಾಹ್ಯ ಪರೀಕ್ಷೆಗಳಿಗಿಂತ ಹೆಚ್ಚು ವಿಶ್ವಸನೀಯವಾಗಿರುತ್ತದೆ. ಏಕೆಂದರೆ, ಈ ಸನ್ನಿವೇಶದಲ್ಲಿ ಅನುದಿನವೂ ನಿಯತಕಾಲಗಳಲ್ಲಿ ಪಾಠಸೂಚಿಯ ಎಲ್ಲ ವಿಷಯಗಳನ್ನು ಸಮಗ್ರವಾಗಿ ಮಾಪನ ಮಾಡಲಾಗುತ್ತದೆ.
- ವಿದ್ಯಾರ್ಥಿಗಳು ಶಿಸ್ತುಗಾರರೂ ಕಾಲಪ್ರಜ್ಞೆಯುಳ್ಳವರೂ ಆಗುತ್ತಾರೆ. ಸಂಬಂಧಿತ ಎಲ್ಲ ವ್ಯಕ್ತಿಗಳಿಗೂ ತೃಪ್ತಿಯಾಗುವ ರೀತಿಯಲ್ಲಿ ತಮ್ಮ ನಿಯೋಜಿತ ಕಾರ್ಯವನ್ನು ಮತ್ತು ತರಗತಿಯ ಕೆಲಸ ಕಾರ್ಯವನ್ನು ಪೂರೈಸುತ್ತಾರೆ.
- ಪಾಠಸೂಚಿಯ ಎಲ್ಲ ವಿಷಯಗಳನ್ನು ಇದು ಮಾಪನ ಮಾಡುವುದರಿಂದ ಬಾಹ್ಯ ಪರೀಕ್ಷೆಗಿಂತ ವಿಶ್ವಾಸಾರ್ಹ.
- ವಿದ್ಯಾರ್ಥಿಗಳು ನಿಯಮಿತವಾಗಿ ಮತ್ತು ಆಮೂಲಾಗ್ರವಾಗಿ ಕಾರ್ಯನಿರತರಾಗಲು ಅವರು ಪ್ರೇರಿತರಾಗುತ್ತಾರೆ.
- ಶಿಶುವು ಏನು ತಿಳಿದಲ್ಲ, ಏನು ಮಾಡಲು ಸಮರ್ಥವಲ್ಲ ಮತ್ತು ಯಾವ ರೀತಿಯ ಬುದ್ಧಿವಂತಿಕೆಯನ್ನು ಹೊಂದಿಲ್ಲ ಎಂದೆಲ್ಲಾ ತಿಳಿಯುವ ಬದಲು ಶಿಶುವು ಏನು ತಿಳಿದಿದೆ, ಏನು ಮಾಡಬಲ್ಲದು ಮತ್ತು ಯಾವ ರೀತಿಯ ಬುದ್ಧಿವಂತಿಕೆಯನ್ನು ಹೊಂದಿದೆ ಎಂದು ಇದು ಕಂಡುಹಿಡಿಯುತ್ತದೆ.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಮಿತಿಗಳು**

- ಇದು ದೀರ್ಘ ಪ್ರಕ್ರಿಯೆ.
- ಶಿಕ್ಷಕರ ಮೇಲೆ ಹೆಚ್ಚು ಕಾರ್ಯಭಾರ ಬೀಳುತ್ತದೆ.
- ಅಲ್ಪಕಾಲೀನ ಮೌಲ್ಯಮಾಪನದಿಂದಾಗಿ ಶಿಕ್ಷಕರ ಕಾರ್ಯಭಾರ ಹೆಚ್ಚುತ್ತದೆ. ಇದಕ್ಕೆ ಶಿಕ್ಷಕರಿಗೆ ತರಬೇತಿ ನೀಡಬೇಕಾಗುತ್ತದೆಯಲ್ಲದೆ ಅವರ ಕಡೆಯಿಂದ ದಕ್ಷತೆ ಮತ್ತು ಬುದ್ಧಿವಂತಿಕೆ ಅಗತ್ಯವಾಗುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

1. ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮಾಪನಗಳ ನಡುವಣ ಯಾವುದಾದರೂ ಮೂರು ವ್ಯತ್ಯಾಸಗಳನ್ನು ಬರೆಯಿರಿ.
2. ರೂಪಣಾತ್ಮಕ ಮಾಪನದ ಗುಣಲಕ್ಷಣಗಳು ಯಾವುವು?
3. ಸಂಕಲನಾತ್ಮಕ ಮಾಪನವನ್ನು ವ್ಯಾಖ್ಯಾನಿಸುವ ಮಾನದಂಡಗಳು ಯಾವುವು?

### 4.5.4. ಸಾರಾಂಶಿಸೋಣ

- ಸತತ ಮತ್ತು ವ್ಯಾಪಕ ಮಾಪನದ ಪರಿಕಲ್ಪನೆ ಹೊಸದೇನಲ್ಲ 19ನೇ ಶತಮಾನದಿಂದಲೂ ಇದನ್ನು ಶಿಫಾರಸ್ಸು ಮಾಡುತ್ತಲೇ ಬಂದಿದ್ದಾರೆ.
- ಇದು ಶಿಕ್ಷಣ ಹಕ್ಕು ಕಾಯ್ದೆಯ ಭಾಗವಾಗಿದ್ದು ಸೆಕ್ಷನ್ 29(2) ರಲ್ಲಿ ಒಳಗೊಳ್ಳುತ್ತದೆ.
- ಇದರ ಸಂಕ್ಷಿಪ್ತ ರೂಪದ ಪ್ರತಿಯೊಂದು ಅಕ್ಷರವೂ ಮಾಪನ ಕಾರ್ಯಕ್ರಮದ ಮಹತ್ತರ ಗುಣಲಕ್ಷಣವನ್ನು ಒತ್ತಿ ಹೇಳುತ್ತದೆ ಮತ್ತು ಅದರ ಪ್ರಾಮುಖ್ಯವನ್ನು ಸಮರ್ಥಿಸುತ್ತದೆ.
- 'ನಿರಂತರ' ಎಂಬ ಪದವು ಒಟ್ಟಾರೆ ಬೋಧನೆ–ಕಲಿಕೆಯ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗವಾಗಿದ್ದು ಇದು ಶೈಕ್ಷಣಿಕ ಅವಧಿಯ ಪರ್ಯಂತ ವ್ಯಾಪಿಸಿರುತ್ತದೆ.
- 'ವ್ಯಾಪಕ' ಎಂಬ ಪದವು ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಹಶೈಕ್ಷಣಿಕ ಬೆಳವಣಿಗೆ ಮತ್ತು ವಿಕಾಸಗಳ ಮುಖಗಳನ್ನು ಮಾಪನಕ್ಕೆ ಒಳಪಡಿಸುವ ಮೂಲಕ ಪ್ರಕ್ರಿಯೆಯನ್ನು ಸಮಗ್ರ ಮಾಪನವನ್ನಾಗಿಸುತ್ತದೆ.
- ಮೌಲ್ಯಮಾಪನ ಎಂದರೆ ವಿದ್ಯಾರ್ಥಿಗಳ ಸಾಧನೆಯ ಮಟ್ಟ ಮತ್ತು ಕುಶಲತೆಗಳ ಅಳೆಯುವಿಕೆಯ ಪ್ರಯತ್ನ ಮಾತ್ರವಷ್ಟೇ ಅಲ್ಲದೆ ಕಾರಣನಿರೂಪಣೆ ಮತ್ತು ಪರಿಹಾರೋಪಾಯ / ಸಮೃದ್ಧೀಕರಣಗಳನ್ನೂ ಒಳಗೊಳ್ಳುತ್ತದೆ.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಏನನ್ನು ಮತ್ತು ಯಾವಾಗ ಮಾಪನ ಮಾಡಬೇಕು ಮತ್ತು ಹೇಗೆ ಅದನ್ನು ಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ.
- ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮಾಪನಗಳು ಮೌಲ್ಯಮಾಪನದ ಎರಡು ಪ್ರಮುಖ ಉಪಕ್ರಮಗಳಾಗಿವೆ.
- ಇವೆರಡೂ ಗುಣ ಮತ್ತು ದೋಷಗಳನ್ನು ಹೊಂದಿವೆ.

### 4.5.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ಉತ್ತರಗಳಿಗಾಗಿ ಈ ಸ್ವಯಂ ಕಲಿಕಾ ಸಾಮಗ್ರಿಯ 4.4.3.1 ನೇ ಭಾಗವನ್ನು ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಉತ್ತರಗಳಿಗಾಗಿ ಈ ಸ್ವಯಂ ಕಲಿಕಾ ಸಾಮಗ್ರಿಯ 4.4.3.2 ನೇ ಭಾಗವನ್ನು ನೋಡಿ.

### 4.5.6. ಘಟಕಾಂತ್ಯ ಅಭ್ಯಾಸಗಳು

ನಿಮ್ಮ ತರಗತಿಯ ಕಲಿಕಾರ್ಥಿಗಳ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದಲ್ಲಿ ಒಳಗೊಳ್ಳುವ ಹಂತಗಳನ್ನು ಮತ್ತು ಪ್ರಕ್ರಿಯೆಯನ್ನು ವಿವರಿಸಿ. ಈ ಉಪಕ್ರಮವನ್ನು ಕುರಿತಂತೆ ನಿಮ್ಮ ಅಭಿಪ್ರಾಯಗಳನ್ನು ಮತ್ತು ಅನುಭವಗಳನ್ನು ಹಂಚಿಕೊಳ್ಳಿ.

**4.5.7. ಪರಾಮರ್ಶನ ಸೂಚಿ**


1. https://nroer.gov.in/home/file/readDoc/598358a316b51cad8ce1d28b/understanding-cce-in-the-context-of-rte-2009.pdf
2. http://www.ncert.nic.in/announcements/pdf/CCE-Guidelines.pdf
3. https://www.teachernews.in/2016/07/10th-class-fa-1-cce-question-papers-tm-em-ssc-formative1.html
4. https://resourced.prometheanworld.com/types-of-summative-formative-assessment/
5. https://www.educationworld.in/cce-aims-and-objectives/
6. https://teachersbadi.in/objectives-and-benefits-of-continuous/
7. https://study.com/academy/lesson/formative-assessment-ideas-for-social-studies.html
8. https://www.edglossary.org/summative-assessment/
9. https://sk.sagepub.com/reference/hdbk_classroomassessment/n14.xml
10. https://gradeup.co/continuous-and-comprehensive-evaluation-cce-i

## ಬ್ಲಾಕ್ 4 : ಸಮಾಜ ವಿಜ್ಞಾನಗಳ ಪಠ್ಯಪುಸ್ತಕ ಮತ್ತು ಸಮಾಜ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಸಾಧನೆಯ ಮಾಪನ

## ಘಟಕ 6 : ಸಮಾಜ ವಿಜ್ಞಾನದಲ್ಲಿ ಸಂತುಲಿತ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವಿಕೆ

**ಘಟಕದ ರಚನೆ**


4.6.1. ಕಲಿಕೆಯ ಉದ್ದೇಶಗಳು
4.6.2. ಪೀಠಿಕೆ
4.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
4.6.3.1. ಸಂತುಲಿತ ಪ್ರಶ್ನೆಪತ್ರಿಕೆಯ ಪರಿಕಲ್ಪನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
4.6.3.2. ಸಂತುಲಿತ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವಿಕೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
4.6.4. ಸಾರಾಂಶಿಸೋಣ
4.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2
4.6.6. ಘಟಕಾಂತ್ಯ ಅಭ್ಯಾಸಗಳು
4.6.7. ಪರಾಮರ್ಶನ ಸೂಚಿ


### 4.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಸಂತುಲಿತ ಪ್ರಶ್ನೆಪತ್ರಿಕೆಯ ಅರ್ಥವನ್ನು ವಿವರಿಸುವರು;
- ಸಂತುಲಿತ ಪ್ರಶ್ನೆಪತ್ರಿಕೆಯ ವಿನ್ಯಾಸದಲ್ಲಿನ ಕಾರಕಾಂಶಗಳನ್ನು ಗುರುತಿಸುವರು;
- ದತ್ತ ಪ್ರಶ್ನೆಪತ್ರಿಕೆಯೊಂದನ್ನು ಆ ಪತ್ರಿಕೆಯ ಉದ್ದೇಶಗಳ ದೃಷ್ಟಿಯಿಂದ ವಿಶ್ಲೇಷಿಸುವರು; ಮತ್ತು
- ಒಂದು ಪ್ರಶ್ನೆಪತ್ರಿಕೆಯ ವಿನ್ಯಾಸದಲ್ಲಿ ಸಂತುಲಿತ ಪ್ರಶ್ನೆಪತ್ರಿಕೆಯ ನಿಯಮಗಳನ್ನು ಅನ್ವಯಿಸುವರು.

### 4.6.2. ಪೀಠಿಕೆ

ಒಂದು ದಿನ ನಿಮ್ಮ ಓರ್ವ ಸ್ನೇಹಿತ ಬಂದು ನೀವು ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದೀರಿ ಎಂದು ಹೇಳಿದ ಎಂದು ಊಹಿಸಿಕೊಳ್ಳಿ. ಇದರ ಅರ್ಥವೇನು? ನೀವು ಪರೀಕ್ಷೆಯನ್ನು ತೆಗೆದುಕೊಂಡಿದ್ದೀರಿ. ನಿಮ್ಮ ಉತ್ತರಗಳನ್ನು ಮೌಲ್ಯಮಾಪನ ಮಾಡಿದ್ದಾರೆ, ಪರೀಕ್ಷಾ ಫಲಿತಾಂಶವನ್ನು ಘೋಷಿಸಲಾಗಿದೆ ಮತ್ತು ನಿಮಗೆ ಸಂಬಂಧಿಸಿದಂತೆ ಪರೀಕ್ಷಾ ಫಲಿತಾಂಶವೇನು? ಫಲಿತಾಂಶ ನಿಮ್ಮ ಸ್ನೇಹಿತ ನಿಮಗೆ ಹೇಳಿದುದೇ. ಅಂದರೆ ನೀವು 'ಡಿಸ್ಟಿಂಕ್ಷನ್' ನಲ್ಲಿ ಪಾಸಾಗಿದ್ದೀರಿ. ಈ ಪರೀಕ್ಷೆ ಲಿಖಿತವಾಗಿರಬಹುದು ಅಥವಾ ಮೌಖಿಕವಾಗಿರಬಹುದು, ಅನೌಪಚಾರಿಕವಾಗಿರಬಹುದು ಅಥವಾ ಇವೆಲ್ಲದರ ಮಿಶ್ರಣವಾಗಿರಬಹುದು. ಆದರೆ, ಔಪಚಾರಿಕ ಪರೀಕ್ಷೆಯನ್ನು ಮೌಲ್ಯಮಾಪನ ಮಾಡಲು ಉಪಯೋಗಿಸುವ ಸಾಧನವೆಂದರೆ ಪ್ರಶ್ನೆಪತ್ರಿಕೆ. ಪ್ರಶ್ನೆಪತ್ರಿಕೆ ಎಂದರೇನು? ಅದು ಕೇವಲ ಪ್ರಶ್ನೆಗಳ ಪಟ್ಟಿಯಲ್ಲ. ಅತಿ ಎಚ್ಚರಿಕೆಯಿಂದ ಹಲವು ನಿಯಮಗಳಿಗನುಗುಣವಾಗಿ ತಯಾರಿಸಲಾಗುವ ಸಾಧನ ಇದು. ಈ ಘಟಕದಲ್ಲಿ ಪ್ರಶ್ನೆಪತ್ರಿಕೆಯ ಸ್ವರೂಪ, ಅದು ಸಂತುಲಿತವಾಗಿರುವಂತೆ ರೂಪಿಸುವ ರೀತಿಗಳನ್ನು ವಿಚಾರಮಾಡೋಣ.

### 4.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 4.6.3.1. ಸಂತುಲಿತ ಪ್ರಶ್ನೆಪತ್ರಿಕೆಯ ಪರಿಕಲ್ಪನೆ

ಸ್ಥೂಲವಾಗಿ ಹೇಳುವುದಾದರೆ ಯಾವುದೇ ಒಂದು ಪ್ರಶ್ನೆಗಳ ಪಟ್ಟಿ ಪ್ರಶ್ನೆಪತ್ರಿಕೆ ಎನಿಸಿಕೊಳ್ಳುತ್ತದೆ. ಆದರೆ, ಇಲ್ಲಿ ನಮ್ಮ ಗಮನ ಕೇಂದ್ರೀಕೃತವಾಗಿರುವುದು ನಿರ್ದಿಷ್ಟ ಉದ್ದೇಶಗಳು ಮತ್ತು ವ್ಯಾಪಕತೆಯ

ಆಧಾರದ ಮೇಲೆ ಸಿದ್ಧಪಡಿಸಿದ ಪ್ರಶ್ನೆಪತ್ರಿಕೆಯ ಮೇಲೆ. ನಾವು ಪರಿಗಣಿಸುತ್ತಿರುವ ಪ್ರಶ್ನೆಪತ್ರಿಕೆ ಸಂಕಲಿತ ಮೌಲ್ಯಾಂಕನಕ್ಕೆ ಸಂಬಂಧಿಸಿದೆ. ಸಂತುಲಿತ ಮೌಲ್ಯಾಂಕನದ ಲಕ್ಷಣಗಳನ್ನು ನೆನಪು ಮಾಡಿಕೊಳ್ಳೋಣ:

- ಅದು ಕಲಿಕೆಯ ಮೌಲ್ಯಾಂಕನವಾಗಿದೆ ಮತ್ತು ಅದು ಕಲಿಕೆಗಾಗಿ ಮೌಲ್ಯಾಂಕನವಲ್ಲ.
- ಅದನ್ನು ವಾರ್ಷಿಕ ಪರೀಕ್ಷೆಯಂತೆ ನಿರ್ದಿಷ್ಟ ಅವಧಿಗಳ ನಂತರ ನಡೆಸಲಾಗುತ್ತದೆ.
- ಅದು ಫಲಿತಾಂಶಗಳ ಮೇಲೆ ಅಥವಾ ಪರೀಕ್ಷೆಯ ಫಲಿತಾಂಶದ ಮೇಲೆ ಕೇಂದ್ರೀಕೃತವಾಗಿದೆ.
- ಬೋಧನೆ–ಕಲಿಕೆಯ ಚಕ್ರದ ನಂತರ ನಡೆಸುವ ಚಟುವಟಿಕೆ ಎಂದು ಅದನ್ನು ಪರಿಗಣಿಸಲಾಗುತ್ತದೆ.
- ಇದು ಶಿಕ್ಷಕ–ಕೇಂದ್ರಿತವಾದುದುದಾಗಿರುತ್ತದೆ. ಶಿಕ್ಷಕರು ವಿದ್ಯಾರ್ಥಿಗಳು ಏನನ್ನು ಮಾಡಬೇಕೆಂಬುದನ್ನು ನಿಯೋಜಿಸುತ್ತಾರೆ ಮತ್ತು ನಂತರ ಆ ನಿಯೋಜಿತ ಕಾರ್ಯವನ್ನು ವಿದ್ಯಾರ್ಥಿಗಳು ಎಷ್ಟು ಚೆನ್ನಾಗಿ ಮಾಡಿದ್ದಾರೆ ಎಂಬುದನ್ನು ಮೌಲ್ಯಮಾಪನ ಮಾಡುತ್ತಾರೆ.
- ಶಿಕ್ಷಕರು 'ಆಡಿಟರ್' ಪಾತ್ರವನ್ನು ವಹಿಸುತ್ತಾರೆ ಮತ್ತು ವಿದ್ಯಾರ್ಥಿಗಳು 'ಆಡಿಟ್' ಆಗುವವರ ಪಾತ್ರವನ್ನು ವಹಿಸುತ್ತಾರೆ.
- ಶಿಕ್ಷಕರು ಸಾಪೇಕ್ಷವಾಗಿ ರೂಪಿಸಿಕೊಂಡ ಬೋಧನಾ ಚಟುವಟಿಕೆಗಳು 'ಸಫಲವೆ' 'ವಿಫಲವೆ' ಎನ್ನುವುದನ್ನು ನಿರ್ಣಯಿಸಲು ಮೌಲ್ಯಮಾಪನದ ಫಲಿತಾಂಶವನ್ನು ಉಪಯೋಗಿಸುತ್ತಾರೆ

ಒಂದು ಸಂತುಲಿತ ಪ್ರಶ್ನೆಪತ್ರಿಕೆಯನ್ನು ಬೇರೊಂದು ದೃಷ್ಟಿಕೋನದಿಂದಲೂ ನೋಡಬೇಕಾಗುತ್ತದೆ. ಅದು ಉದ್ದೇಶಗಳ ಮತ್ತು ಅನುಕೂಲತೆಗಳ ದೃಷ್ಟಿಯಿಂದ ಸಿಂಧುತ್ವ ಉಳ್ಳದ್ದಾಗಿರಬೇಕು ಮತ್ತು ಸುಸಂಗತವಾಗಿರಬೇಕು. ಒಂದು ಸಮತೋಲಿತ ಪ್ರಶ್ನೆಪತ್ರಿಕೆಯನ್ನು ವಿನ್ಯಾಸಗೊಳಿಸುವಾಗ ಪರಿಗಣಿಸಬೇಕಾದ ಮುಖ್ಯ ಅಂಶಗಳು ಈ ಕೆಳಗಿನಂತಿವೆ:

- ಕೋರ್ಸಿನ ವಿಷಯವಸ್ತು ಮತ್ತು ಪ್ರಶ್ನೆಪತ್ರಿಕೆಯ ಉದ್ದೇಶಗಳು
- ಕೋರ್ಸಿನ ವಿಷಯ ವಸ್ತುವಿನ ವ್ಯಾಪಕತೆ
- ಕಲಿಕೆಯ ವಿವಿಧ ಆಯಾಮಗಳು
- ಪ್ರಶ್ನೆಗಳ ವಿಧಗಳು
- ಪ್ರಶ್ನೆಗಳ ಕಠಿಣತೆಯ ಮಟ್ಟ
- ಪ್ರಶ್ನೆಗಳನ್ನು ಉತ್ತರಿಸಲು ಬೇಕಾಗುವ ಸಮಯ

**ಕೋರ್ಸಿನ ವಿಷಯ ವಸ್ತು ಮತ್ತು ಪ್ರಶ್ನೆಪತ್ರಿಕೆಯ ಉದ್ದೇಶಗಳು**

ಒಂದು ಕೋರ್ಸಿನ ವಿಷಯ ವಸ್ತುವನ್ನು (ಪಠ್ಯವಸ್ತುವನ್ನು) ಬೋಧಿಸಿದ ಬಳಿಕ, ಇದರ ಭಾಗವಾಗಿ ವಿವರಿಸಿದ ವಿಷಯವಸ್ತುವಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಯಿಂದ ಯಾವ ನಿರ್ದಿಷ್ಟ ಫಲಿತಗಳನ್ನು ನಿರೀಕ್ಷಿಸಲಾಗುತ್ತದೆ ಎನ್ನುವುದನ್ನು ಸ್ಪಷ್ಟಗೊಳಿಸಬೇಕು.

ಸಮಾಜ ವಿಜ್ಞಾನವನ್ನು ಸೆಕೆಂಡರಿ ಶಾಲಾ ಮಟ್ಟದಲ್ಲಿ ಬೋಧಿಸುವುದರ ಕೆಲವು ಮೂಲಭೂತ ಉದ್ದೇಶಗಳು ಈ ಕೆಳಗಿನಂತಿವೆ–

- ಜ್ಞಾನವನ್ನು ಪಡೆಯುವುದು;
- ತಾರ್ಕಿಕ (ವಿವೇಚನೆ) ಮತ್ತು ವಿಮರ್ಶಾತ್ಮಕವಾಗಿ ನಿರ್ಣಯಗಳ ಸಾಮರ್ಥ್ಯ ವಿಕಾಸ;
- ಅಭ್ಯಾಸಗಳು ಮತ್ತು ಕುಶಲತೆಗಳನ್ನು ರೂಪಿಸುವುದು;
- ರಾಷ್ಟ್ರೀಯ ಮತ್ತು ದೇಶಭಕ್ತಿಯ ವಿಕಾಸ;
- ಅಂತರರಾಷ್ಟ್ರೀಯ ತಿಳುವಳಿಕೆ;
- ಸಾಮಾಜಿಕ, ವೈಯಕ್ತಿಕ ಮತ್ತು ಸಂವಿಧಾನಾತ್ಮಕ ಮೌಲ್ಯಗಳನ್ನು ವಿಕಾಸಗೊಳಿಸುವಿಕೆ;

- ಪೌರತ್ವ ತರಬೇತಿ;
- ಸಾಮಾಜೀಕರಣ;
- ಸಾಮಾಜಿಕ ಜವಾಬ್ದಾರಿಗಳನ್ನು ಗುರುತಿಸುವುದು; ಮತ್ತು
- ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ ಮತ್ತು ವರ್ಗಾವಣೆ.

ಪ್ರಶ್ನೆಪತ್ರಿಕೆಗಳ ಉದ್ದೇಶಗಳು ಮತ್ತು ನಿರೀಕ್ಷೆಗಳು ಅವುಗಳ ಅಭಿವ್ಯಕ್ತಿಯಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸಗೊಳ್ಳುತ್ತವೆ. ಆದರೆ, ಅವುಗಳ ಅಂತಿಮ ಉದ್ದೇಶ ಒಂದೇ ಆಗಿರುತ್ತದೆ. ಈಗ ನಾವು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಿರೂಪಿಸಿರುವ ಪ್ರಶ್ನೆಪತ್ರಿಕೆಯ ಉದ್ದೇಶಗಳನ್ನು ಪರಿಗಣಿಸೋಣ. ಅದರ ಮುಖ್ಯ ಉದ್ದೇಶ ಬೇರೆ ಬೇರೆ ದೃಷ್ಟಿಗಳಲ್ಲಿ ವಿದ್ಯಾರ್ಥಿಯ ಕಾರ್ಯಕ್ಷಮತೆಯನ್ನು (ಕಲಿಕೆಯನ್ನು) ಮೌಲ್ಯಮಾಪನ ಮಾಡುವುದಾಗಿದೆ. ಮುಂದಿನ ಪುಟಗಳಲ್ಲಿ ನಾವು ಇದರ ಬಗ್ಗೆ ತಿಳಿದುಕೊಳ್ಳೋಣ.

**ಕೋರ್ಸ್ ವಿಷಯ ವಸ್ತುವಿನ ವ್ಯಾಪಕತೆ:** ಒಬ್ಬ ವಿದ್ಯಾರ್ಥಿ ಒಂದು ಕೋರ್ಸಿನ ವಿಷಯ ವಸ್ತುವನ್ನು ಸಂಪೂರ್ಣವಾಗಿ ಕಲಿತುಕೊಳ್ಳಬೇಕು. ಆದ್ದರಿಂದ, ಆ ಕೋರ್ಸಿನ ಪ್ರಶ್ನೆಪತ್ರಿಕೆ ಪಠ್ಯವಸ್ತುವಿನ ಎಲ್ಲ ಘಟಕಗಳಿಂದ/ಅಧ್ಯಾಯಗಳಿಂದ ಪ್ರಶ್ನೆಗಳನ್ನು ಹೊಂದಿರಬೇಕು. ಸಾಮಾನ್ಯವಾಗಿ ನಾವು ಅಧ್ಯಯನ ಮಾಡುತ್ತಿರುವ ಸೆಕೆಂಡರಿ ಮಂಡಳಿ ವಿಷಯ ವಸ್ತುವಿನ ಬೇರೆ ಬೇರೆ ಭಾಗಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು (ವೆಯಿಟೇಜ್) ಕೊಡಬೇಕೆಂಬುದನ್ನು ವಿಶ್ಲೇಷಣೆ ಮಾಡುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಬೇರೆ ಬೇರೆ ಭಾಗಗಳಿಗೆ ಅಂಕಗಳನ್ನು ನಿಗದಿಪಡಿಸುತ್ತದೆ. ಇದರ ಬಗ್ಗೆ ಸೂಕ್ತ ಸೂಚನೆಗಳನ್ನು ಕೊಡಲಾಗುತ್ತದೆ. ಈ ವಿಶ್ಲೇಷಣೆಗೆ ಅನುಗುಣವಾಗಿ ಪ್ರಶ್ನೆಪತ್ರಿಕೆಯನ್ನು ವಿನ್ಯಾಸಗೊಳಿಸಲಾಗುತ್ತದೆ. ಉದಾಹರಣೆಗೆ, ಸಮಾಜ ವಿಜ್ಞಾನ ವಿಷಯ ಅಂತರ–ಸಂಬಂಧಿತ ವಿಷಯವೆಂಬುದನ್ನು ಈ ಮೊದಲೇ ಅರ್ಥ ಮಾಡಿಕೊಂಡಿದ್ದೇವೆ. ಇದು ಇತಿಹಾಸ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ ಮತ್ತು ವಾಣಿಜ್ಯ ಶಾಸ್ತ್ರ ವಿಷಯಗಳನ್ನು ಒಳಗೊಂಡಿದೆ. ಸಂಬಂಧಪಟ್ಟ ಮಂಡಳಿ ಈ ಪ್ರತಿಯೊಂದು ವಿಷಯಕ್ಕೆ ಎಷ್ಟು ಅಂಕಗಳನ್ನು ಕೊಡಬೇಕು ಎಂಬುದನ್ನೂ ತೀರ್ಮಾನಿಸುತ್ತದೆ ಮತ್ತು ಈ ತೀರ್ಮಾನಕ್ಕೆ ಅನುಗುಣವಾಗಿ ಪ್ರಶ್ನೆಗಳನ್ನು ರೂಪಿಸಲಾಗುತ್ತದೆ. ಉದಾಹರಣೆಗೆ, ಕರ್ನಾಟಕದ ಸೆಕೆಂಡರಿ ಬೋರ್ಡ್ ನೀಡಿರುವ ಅಂಕ ವಿತರಣೆಯನ್ನು ಈ ಕೆಳಗೆ ಕೊಡಲಾಗಿದೆ;

| ಕ್ರ. ಸಂ. | ವಿಷಯ ಶೀರ್ಷಿಕೆ | ನಿಗದಿಪಡಿಸಿರುವ ಅಂಕಗಳು 80 ಅಂಕಗಳ ಪೈಕಿ |
|---|---|---|
| 1 | ಇತಿಹಾಸ (ಚರಿತ್ರೆ) | 25 |
| 2 | ರಾಜ್ಯಶಾಸ್ತ್ರ | 11 |
| 3 | ಸಮಾಜ ಶಾಸ್ತ್ರ | 08 |
| 4 | ಭೂಗೋಳ ಶಾಸ್ತ್ರ | 22 |
| 5 | ಅರ್ಥಶಾಸ್ತ್ರ | 07 |
| 6 | ವಾಣಿಜ್ಯ ಅಧ್ಯಯನ | 07 |
| | **ಒಟ್ಟು ಅಂಕಗಳು** | **80** |

**ಕಲಿಕಾ ಉದ್ದೇಶಗಳ ವಿಧಗಳು:** ಸಮಾಜ ವಿಜ್ಞಾನ ಬೋಧನೆ–ಕಲಿಕೆಯಲ್ಲಿ ಸಾಮಾನ್ಯವಾಗಿ, 4 ವಿಧಗಳ ಕಲಿಕಾ ಉದ್ದೇಶಗಳನ್ನು ಗುರುತಿಸಲಾಗಿದೆ. ಅವೆಂದರೆ, ಜ್ಞಾನ, ತಿಳುವಳಿಕೆ, ಅನ್ವಯಿಸುವಿಕೆ ಮತ್ತು ಕೌಶಲ. ಈ ಪ್ರತಿಯೊಂದರ ಬಗ್ಗೆಯೂ ಸ್ವಲ್ಪ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳೋಣ;

**ಜ್ಞಾನಾಂಶಗಳು:** ಒಂದು ಶೈಕ್ಷಣಿಕ ವ್ಯವಸ್ಥೆಯಲ್ಲಿ ಜ್ಞಾನ ಎಂಬುದು ತಥ್ಯಾಂಶಗಳು, ವಾಸ್ತವಿಕತೆಗಳು, ನಿಯಮಗಳು/ತತ್ವಗಳು ಯಾವುದೇ ವಿಷಯದ ಅಧ್ಯಯನಕ್ಕೆ ಅಥವಾ ಅನ್ವೇಷಣೆಗೆ ಸಂಬಂಧಿಸಿರುತ್ತದೆ.

ಜ್ಞಾನಾಂಶಗಳ ಕಲಿಕೆ ಮುಖ್ಯವಾಗಿ ಪುನಃಸ್ಮರಣೆ ಮತ್ತು ಗುರುತಿಸುವಿಕೆಯನ್ನು ಒಳಗೊಳ್ಳುತ್ತದೆ. ಜ್ಞಾನ ಕಲಿಕೆಯ ಸ್ವರೂಪವನ್ನು ಹೀಗೂ ಗುರುತಿಸಬಹುದು;

- ನೋಡಿದ (ಪ್ರತ್ಯಾಕ್ಷಾನುಭವದ), ಕಂಡುಹಿಡಿದ ಅಥವಾ ಕಲಿತುಕೊಂಡ ಅಂಶಗಳ ಒಟ್ಟು ಮೊತ್ತ.
- ಒಂದು ನಿರ್ದಿಷ್ಟ ವಿಷಯದ ಬಗ್ಗೆ ಅಥವಾ ಕಲಿಕೆಯ ಶಾಖೆಯ ಬಗ್ಗೆ ಪಡೆದಿರುವ ಪರಿಚಯ ಅಥವಾ ತಿಳುವಳಿಕೆ
- ನೋಟ, ಅನುಭವ ಅಥವಾ ವರದಿಯಿಂದ ಪಡೆದುಕೊಳ್ಳುವಿಕೆ ಅಥವಾ ಪರಿಚಯ ಹೊಂದುವಿಕೆ
- ತಥ್ಯಾಂಶ ತಿಳಿದುಕೊಳ್ಳುವ ಸ್ಥಿತಿ
- ತಥ್ಯಾಂಶಗಳ ಅಥವಾ ವಾಸ್ತವಿಕತೆಗಳ ಪ್ರತ್ಯಾಕ್ಷಾನುಭವ
- ಸ್ಪಷ್ಟವಾದ  ಮತ್ತು ಖಚಿತವಾದ ಮಾನಸಿಕ ಗ್ರಹಿಕೆ
- ಒಂದು ತಥ್ಯಾಂಶದ ಅಥವಾ ಪರಿಸ್ಥಿತಿಯ ಬಗ್ಗೆ ಹೊಂದುವ ಅರಿವು
- ಅಸ್ತಿತ್ವದಲ್ಲಿರುವ ಘಟನೆ/ವಿಷಯಗಳನ್ನು ತಿಳಿದುಕೊಳ್ಳುವುದು
- ಕಾಲ ಕಾಲಕ್ಕೆ ದಾಖಲಾಗುವ/ದಾಖಲಾಗಿರುವ ವಾಸ್ತವಾಂಶಗಳು ಅಥವಾ ತಥ್ಯಾಂಶಗಳ(fact) ಗ್ರಹಿಕೆ

ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳು ಈ ಮೇಲಿನ ಕಲಿಕಾ ಉದ್ದೇಶಗಳಿಗೆ ಸಂಬಂಧಿಸಿದಂತೆ 'ಬಿಟ್ಟ ಸ್ಥಳ ತುಂಬಿಸಿ'. ಬಹುಆಯ್ಕೆಯ ಪ್ರಶ್ನೆಗಳು, ಸರಿ/ತಪ್ಪು ಮಾದರಿಯ ಪ್ರಶ್ನೆಗಳನ್ನು ಹೊಂದಿರಬಹುದು. ಶೀರ್ಷಿಕೆ ಬರೆಯುವುದು, ಚಿತ್ರಗಳು/ರೇಖಾಚಿತ್ರಗಳು, ನೆನೆಪಿಸಿಕೊಂಡು ಮೌಖಿಕವಾಗಿ ಉತ್ತರಿಸುವುದು ಇತ್ಯಾದಿ ಮಾದರಿಯ ಪ್ರಶ್ನೆಗಳನ್ನು ಹೊಂದಿರಬಹುದು.

ಉದಾಹರಣೆಗಾಗಿ, ಜ್ಞಾನ ಆಧಾರಿತ ಪ್ರಶ್ನೆಗಳು ಈ ಪ್ರಶ್ನೆಗಳನ್ನು ಒಳಗೊಂಡಿರಬಹುದು;

- ಭಾರತದ ಪ್ರಥಮ ಪ್ರಧಾನ ಮಂತ್ರಿ ಯಾರು?
- ಸಾಮಾನ್ಯವಾಗಿ ಅತ್ಯಂತ ಹೆಚ್ಚಿನ ಮಳೆ ಸುರಿಯುವ ಸ್ಥಳ
  ಎ) ಚಿರಾಪುಂಜಿ  ಬಿ) ಮಂಗಳೂರು  ಸಿ) ಮಡಿಕೇರಿ  ಡಿ) ಮೈಸೂರು
- ಪ್ರಥಮ ವಿಶ್ವಯುದ್ಧ ಪ್ಯಾರಿಸ್ ಒಪ್ಪಂದೊಂದಿಗೆ ಕೊನೆಗೊಂಡಿತು –ಸರಿ/ತಪ್ಪು

**ಗ್ರಹಿಕೆ/ತಿಳುವಳಿಕೆ: ವಿಗ್ಗಿನ್ಸ್ ಮತ್ತು ಜೆಯ್‌ಮೆಕ್‌ಟಿಗೆ**(Wiggins and Jay McTighe) **ಓರ್ವ ವ್ಯಕ್ತಿ ನಿಜವಾಗಿಯೂ ಬೋಧಿಸಿದ್ದನ್ನು (ಹೇಳಿದ್ದನ್ನು) ಅರ್ಥ ಮಾಡಿಕೊಂಡಿದ್ದಾನೆ/ಳೆ ಅಥವಾ ಗ್ರಹಿಕೆ (ತಿಳುವಳಿಕೆ) ಅವನಿಗೆ ಉಂಟಾಗಿದೆ ಎಂದರೆ ಅವನು/ಳು ಈ ಕೆಳಗಿನವುಗಳಲ್ಲಿ ಸಮರ್ಥನಾಗಿರಬೇಕು/ಸಮರ್ಥಳಾಗಿರಬೇಕು ಎಂದು ಹೇಳಿದ್ದಾರೆ:**

- ಪರಿಕಲ್ಪನೆಗಳು, ನಿಯಮಗಳು (ತತ್ವಗಳು) ಮತ್ತು ಪ್ರಕ್ರಿಯೆಗಳನ್ನು ತಮ್ಮ ಮಾತುಗಳಲ್ಲಿ **ವಿವರಿಸಬೇಕು,** ತಮ್ಮ ಉತ್ತರಗಳನ್ನು ತರ್ಕಬದ್ಧವಾಗಿ ಸಮರ್ಥಿಸಬೇಕು.
- ದತ್ತಾಂಶಗಳನ್ನು, ಪಠ್ಯ (ಟೆಕ್ಸ್ಟ್) ಮತ್ತು ಅನುಭವಗಳನ್ನು ಮಾತುಗಳಲ್ಲಿ, ಬಿಂಬಗಳಲ್ಲಿ, ಸಾದೃಶ್ಯಗಳಲ್ಲಿ, ಕಥೆಗಳಲ್ಲಿ ಮತ್ತು ಮಾದರಿಗಳಲ್ಲಿ ವ್ಯಾಖ್ಯಾನಿಸಬೇಕು ಅಥವಾ ಅರ್ಥೈಸಬೇಕು.
- ತಮಗೆ ತಿಳಿದಿರುವುದನ್ನು / ತಾವು ಕಲಿತ ಕೌಶಲಗಳನ್ನು ಬೇರೊಂದು ಹೊಸ ಸಂದರ್ಭದಲ್ಲಿ ಅಥವಾ ಪರಿಸ್ಥಿತಿಯಲ್ಲಿ ಉಪಯೋಗಿಸಬೇಕು
- ದೊಡ್ಡ/ವಿಸ್ತೃತ ಚಿತ್ರವನ್ನು ನೋಡಿ, ವಿವಿಧ ದೃಷ್ಟಿಕೋನಗಳನ್ನು ಗುರ್ತಿಸಿ ತಮ್ಮ **ದೃಷ್ಟಿಕೋನವನ್ನು** ತೋರಿಸಬೇಕು.
- ಸಂವೇದನಾಶೀಲತೆಯಿಂದ ಪ್ರಾತ್ಯಕ್ಷೀಕರಿಸಿ ಬೇರೊಬ್ಬರ ನಿಲುವನ್ನು ತಿಳಿದುಕೊಂಡು ಅವರ ನಿಲುವುಗಳನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು.

- ಪರಾಸಂಜ್ಞಾನಾತ್ಮಕ ಅರಿವನ್ನು ಸೂಚಿಸುವ ಮತ್ತು ಕಲಿಕಾ ಅನುಭವಗಳ ಅರ್ಥದ ಬಗ್ಗೆ ಪುನರಾಲೋಚಿಸುವ ಸ್ವಯಂ–ಜ್ಞಾನವನ್ನು ಹೊಂದಬೇಕು.

ಇದರಿಂದ ವಿದ್ಯಾರ್ಥಿಗಳು ವ್ಯಾಖ್ಯಾನಿಸಲು, ಉದಾಹರಣೆ ಕೊಡಲು, ವಿವರಿಸಲು ಅಥವಾ ವರ್ಣಿಸಲು, ವರ್ಗೀಕರಣ ಮಾಡಲು, ಸಾರಾಂಶೀಕರಿಸಲು, ನಿಗಮನಗಳನ್ನು, ಪರಾಮರ್ಶನೆಗಳನ್ನು ಮಾಡಲು, ಪರಿಕಲ್ಪನೆಗಳನ್ನು, ಪರಿಸ್ಥಿತಿಗಳನ್ನು ಮತ್ತು ಚಟುವಟಿಕೆಗಳನ್ನು ತುಲನೆ ಮಾಡಲು ಮತ್ತು ವಿವರಿಸಲು ಸಮರ್ಥರಾಗುತ್ತಾರೆ ಎಂದ ಸೂಚಿತವಾಗುತ್ತದೆ. ಆದ್ದರಿಂದ, ಸಂಬಂಧಿಸಿದ ಪ್ರಶ್ನೆಗಳು ಈ ಕೆಳಕಂಡ ರೀತಿಯಲ್ಲಿ ಇರಬೇಕಾಗುತ್ತದೆ.

- ಕಥನಗಳನ್ನು / ವಿವರಣೆಗಳನ್ನು(Readings) ಚಲನಚಿತ್ರಗಳನ್ನು, ಭಾಷಣಗಳನ್ನು ಸಾರಾಂಶೀಕರಿಸುವುದು, ಎರಡು ಅಥವಾ ಹೆಚ್ಚಿನ ಸಂಖ್ಯೆಯ ಸಿದ್ಧಾಂತಗಳನ್ನು, ಘಟನೆಗಳನ್ನು, ಪ್ರಕ್ರಿಯೆ ಮುಂತಾದುವುಗಳನ್ನು ಹೋಲಿಸುವುದು ಅಥವಾ ಅವುಗಳ ನಡುವಣ ವ್ಯತ್ಯಾಸಗಳನ್ನು ತೋರಿಸುವುದು.
- ಘಟನೆಗಳನ್ನು, ಮೂಲಾಂಶಗಳನ್ನು, ಪರಿಸ್ಥಿತಿಗಳನ್ನು, ಸ್ಥಾಪಿತ ನಿರ್ಣಯಾಂಶಗಳನ್ನು ಉಪಯೋಗಿಸಿ ವರ್ಗೀಕರಿಸುವುದು ಅಥವಾ ಗುಂಪು ಮಾಡುವುದು.
- ದಾಖಲೆಗಳನ್ನು ಸಂಕ್ಷೇಪಿಸುವುದು.
- ಪರಿಕಲ್ಪನೆ, ಪ್ರಕ್ರಿಯೆ ಮುಂತಾದುವುಗಳಿಗೆ ಉದಾಹರಣೆಗಳನ್ನು ಅಥವಾ ದೃಷ್ಟಾಂತಗಳನ್ನು ಹುಡುಕುವುದು ಅಥವಾ ಗುರುತಿಸುವುದು.

ಇದರಲ್ಲಿ ಈ ರೀತಿಯ ಪ್ರಶ್ನೆಗಳಿರಬೇಕು

- ರೈತವಾರಿ ವ್ಯವಸ್ಥೆಯನ್ನು ಉದಾಹರಣೆಗಳೊಂದಿಗೆ ವಿವರಿಸಿ.
- ಒಂದು ರಾಷ್ಟ್ರದ ಆರ್ಥಿಕ ವಿಕಾಸದಲ್ಲಿ ರಸ್ತೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ– ಈ ಹೇಳಿಕೆಯನ್ನು ಸಮರ್ಥಿಸಿ.

**ಅನ್ವಯಿಸುವಿಕೆ ಅಥವಾ ಜಾರಿಗೊಳಿಸುವಿಕೆ:** ಇದು ಏನನ್ನಾದರೂ (ಕಾನೂನು, ಆಜ್ಞೆ ಇತ್ಯಾದಿ) ಜಾರಿಗೊಳಿಸುವುದು ಅಥವಾ ಕಾರ್ಯಗತಗೊಳಿಸುವುದಾಗಿದೆ. ವಿದ್ಯಾರ್ಥಿಗಳು ಇದಕ್ಕಾಗಿ ಸಮಸ್ಯೆಯನ್ನು ಪರಿಹರಿಸುವ ಅಥವಾ ಪರಿಚಿತ ಅಥವಾ ಅಪರಿಚಿತ ಕಾರ್ಯಗಳನ್ನು ಪರಿಹರಿಸಲು ಅಥವಾ ಪೂರ್ಣಗೊಳಿಸಲು ಬೇಕಾದ ಕ್ರಮಗಳನ್ನು ಉಪಯೋಗಿಸಬೇಕಾಗುತ್ತದೆ. ಸೂಚಿಸಿದ ಒಂದು ಕಾರ್ಯಕ್ಕೆ ಯಾವ ಕ್ರಮ(ಗಳು) ಅತ್ಯಂತ ಮುಖ್ಯವಾಗುತ್ತವೆ ಎಂಬುದನ್ನು ಕೂಡ ವಿದ್ಯಾರ್ಥಿಗಳಿಂದ ನಿರೀಕ್ಷಿಸಲಾಗುತ್ತದೆ. ಈ ರೀತಿಯ ಚಟುವಟಿಕೆ ಸಮಸ್ಯಾ ಪರಿಹಾರ, ಮೂಲ ಪ್ರಾರೂಪವನ್ನು ಅನುಸರಿಸುವುದು ಮುಂತಾದ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ಈ ರೀತಿಯ ಪ್ರಶ್ನೆಗಳು ಹೀಗಿರಬೇಕಾಗುತ್ತದೆ–

- ನಿಮ್ಮ ಸ್ಥಳದಲ್ಲಿ ನೀರು ಪೋಲಾಗುವುದನ್ನು ತಡೆಯಲು ಐದು ಕ್ರಮಗಳನ್ನು ವಿವರಿಸಿ.
- ನಿಮ್ಮ ಬಿಡುವಿನ ಸಮಯದಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಜನರನ್ನು ಶಿಕ್ಷಿತರನ್ನಾಗಿ ಮಾಡಲು ಒಂದು ಕ್ರಿಯಾಯೋಜನೆಯನ್ನು ತಯಾರಿಸಿ.

**ಕೌಶಲಗಳು:** ಕೌಶಲಗಳು ಪ್ರತಿಯೊಂದು ಕಲಿಕೆಯ ಉದ್ದೇಶದಲ್ಲಿ ಮುಖ್ಯವಾದ ಭಾಗವಾಗುತ್ತದೆ.ಕೌಶಲಗಳ ವಿಧಗಳನ್ನು ಈ ರೀತಿ ಗುರ್ತಿಸಬಹುದು–

- ಅವಲೋಕನಾತ್ಮಕ (ವೀಕ್ಷಣಾತ್ಮಕ) ಕೌಶಲಗಳು.
- ಸಂವಹನಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಕೌಶಲಗಳು.

- ಚಿತ್ರ (ನಕ್ಷೆ) ಬರೆಯುವುದು, ತಾಲಿಕೆಗಳನ್ನು, ಭೂಪಟಗಳನ್ನು ಮತ್ತು ಚಾರ್ಟ್‌ಗಳು ಮುಂತಾದುವುಗಳನ್ನು ಓದುವುದು/ಅರ್ಥೈಸಿಕೊಳ್ಳುವುದು.

ಈ ಕೌಶಲಗಳ ಕುರಿತು ಇನ್ನೂ ಸ್ವಲ್ಪ ಹೆಚ್ಚಾಗಿ ತಿಳಿದುಕೊಳ್ಳೋಣ

**ಅವಲೋಕನಾತ್ಮಕ(ವೀಕ್ಷಣಾತ್ಮಕ) ಕೌಶಲಗಳು:** ಯಾವುದೇ ಪ್ರವೃತ್ತಿಯನ್ನು ಮತ್ತು ಮಾನವನ ವರ್ತನೆಯ ವಿನ್ಯಾಸಗಳನ್ನು ಪೂರ್ವಾನುಮಾನಿಸಲು ವ್ಯಕ್ತಿಗಳು ವೀಕ್ಷಣಾಶೀಲರಾಗಿರಬೇಕಾಗುತ್ತದೆ. ವಿದ್ಯಾರ್ಥಿಗಳು ಚೆನ್ನಾಗಿ ಕಲಿತುಕೊಳ್ಳಬೇಕಾದ ಸಾಮಾಜಿಕ ಕೌಶಲ್ಯಗಳಲ್ಲಿ ಇದು ಒಂದಾಗಿದೆ. ವಿದ್ಯಾರ್ಥಿಗಳು ಮಾನವ ವರ್ತನೆಯ ಪ್ರವೃತ್ತಿಗಳನ್ನು ಮತ್ತು ವಿನ್ಯಾಸಗಳನ್ನು ಪೂರ್ವಾನುಮಾನಿಸುವ ಸೂಕ್ಷ್ಮ ವೀಕ್ಷಕರಾಗಿರಬೇಕಾಗುತ್ತದೆ. ಇದರಿಂದ ಅಂಥ ವರ್ತನೆಗಳಿಗೆ ಪ್ರತಿಕ್ರಿಯಿಸಲು ನಿಯಮಗಳನ್ನು ಮತ್ತು ನಿಯಂತ್ರಣಗಳನ್ನು ರೂಪಿಸಲು ಅವರಿಗೆ ಸಾಧ್ಯವಾಗುತ್ತದೆ.

**ಸಂವಹನಾತ್ಮಕ ಮತ್ತು ಅಂತರ–ವ್ಯಕ್ತಿ ಕೌಶಲಗಳು:** ವಿದ್ಯಾರ್ಥಿಗಳು ಎಂದಾದರೂ ಕಲಿಯಲೇಬೇಕಾದ ಸಮಾಜ ವಿಜ್ಞಾನದ ಅತ್ಯಂತ ಮುಖ್ಯವಾದ ಮೂಲಭೂತವಾದ ಸಾಮಾಜಿಕ ಕೌಶಲಗಳಲ್ಲಿ ಇವು ಒಂದಾಗಿವೆ. ಏಕೆಂದರೆ, ಎಲ್ಲಾ ತರಹದ ಜನಗಳೊಂದಿಗೆ ಯಾವಾಗಲೂ ವ್ಯವಹರಿಸಬೇಕಾಗುವುದರಿಂದ ಸಂವಹನ ಬಹು ಮುಖ್ಯವಾಗುತ್ತದೆ. ತಮ್ಮ ಅಧ್ಯಯನಕ್ಕೆ ಬೇಕಾಗುವ ಎಲ್ಲ ಆವಶ್ಯಕ ಮಾಹಿತಿಗಳನ್ನು ಜನರಿಂದ ಪಡೆಯಬೇಕಾಗುವುದರಿಂದ ವಿದ್ಯಾರ್ಥಿಗಳು ಜನರೊಂದಿಗೆ ಚೆನ್ನಾಗಿ ಸಂಭಾಷಿಸಲು ಸಮರ್ಥರಾಗಬೇಕಾಗುತ್ತದೆ.

**ತಾಲಿಕೆಗಳು(Tables), ಚಾರ್ಟುಗಳು ಮತ್ತು ನಕ್ಷೆಗಳನ್ನು ಓದುವುದು ಅಥವಾ ಅರ್ಥೈಸಿಕೊಳ್ಳುವುದು:** ಇದು ಪ್ರತಿಯೊಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಯೂ ಕಲಿಯಬೇಕಾದ ಮೂಲಭೂತ ಸಮಾಜ ವಿಜ್ಞಾನದ ಕೌಶಲವಾಗಿದೆ. ಭೂಪಟ ರಚಿಸುವುದು ಮತ್ತು ಮಾನವನ ವರ್ತನಾ ವಿನ್ಯಾಸಗಳನ್ನು ಪೂರ್ವಾನುಮಾನ ಮಾಡುವುದಕ್ಕೆ ಮತ್ತು ತೀರ್ಮಾನಗಳನ್ನು ಕೈಗೊಳ್ಳುವುದಕ್ಕೆ ಬಹಳಷ್ಟು ಚಾರ್ಟ್‌ಗಳನ್ನು ಮತ್ತು ನಕ್ಷೆಗಳನ್ನು ರಚಿಸಬೇಕಾಗುತ್ತದೆ. ಈ ಸಾಧನಗಳು ಮಾನವನ ವರ್ತನೆಯನ್ನು ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಐತಿಹಾಸಿಕ ಘಟನೆಗಳಿಂದ ಆರಂಭಿಸಿ ಅವುಗಳ ಭವಿಷ್ಯತ್ತಿನ ಪ್ರವೃತ್ತಿಯನ್ನು ಗುರುತಿಸಲು ಮತ್ತು ಅವುಗಳಲ್ಲಿ ಕೆಲವು ವಿನ್ಯಾಸಗಳನ್ನು ಹುಡುಕಲು ಮತ್ತು ಪ್ರವೃತ್ತಿಗಳನ್ನು ತಿಳಿಯಲು ಮತ್ತು ಅವುಗಳ ಬಗ್ಗೆ ಕೊನೆಗೆ ಒಂದು ತೀರ್ಮಾನಕ್ಕೆ ಬರಲು ಕೂಡ ಇವುಗಳು ಅವಶ್ಯಕ. ಸಮಾಜ ವಿಜ್ಞಾನದ ಅಧ್ಯಯನದ ಸಂದರ್ಭದಲ್ಲಿ ಪರಿಮಾಣತ್ಮಕ ಮತ್ತು ಗುಣಾತ್ಮಕ ದತ್ತ ಸಾಮಗ್ರಿಯನ್ನು ಅರ್ಥೈಸಲು ಮತ್ತು ವ್ಯಾಖ್ಯಾನಿಸಲು ಈ ಕೌಶಲಗಳು ಮುಖ್ಯವಾಗುತ್ತವೆ. ಸಮಾಜ ವಿಜ್ಞಾನದ ಅಧ್ಯಯನದ ಮೂಲಕ ಒಂದು ಜೀವನೋಪಾಯವನ್ನು (Carreer)ವನ್ನು ಅನುಸರಿಸಲು ಮಾತ್ರವೇ ಅಲ್ಲದೆ ಪ್ರತಿದಿನದ ಪರಿಸ್ಥಿತಿಗಳಲ್ಲಿಯೂ ಈ ಕೌಶಲಗಳು ಮುಖ್ಯವಾಗುತ್ತವೆ. ಬೇರೆ ವ್ಯಕ್ತಿಗಳೊಂದಿಗೆ ಸಾಮರಸ್ಯಪೂರ್ಣ ಸಂಬಂಧವನ್ನು ಬೆಸೆಯಲು, ಸಂವಹನಾತ್ಮಕ ಮತ್ತು ಅಂತರ–ವ್ಯಕ್ತ್ಯಾತ್ಮಕ ಕೌಶಲಗಳು ಕೀಲಿಕೈಗಳಾಗುತ್ತವೆ. ಮಾಹಿತಿಗಳನ್ನು ಸಂಗ್ರಹಿಸಲು ಮತ್ತು ಸಂಕೀರ್ಣವಾದ ವಿಷಯಗಳನ್ನು ಕುರಿತ ತೀರ್ಮಾನಗಳನ್ನು ಮಾಡಲು ಸೂಕ್ಷ್ಮ ಅವಲೋಕನಕಾರರಾಗಿರುವುದು ಅಗತ್ಯವಾಗುತ್ತದೆ.

ಈ ವರ್ಗದಲ್ಲಿ ಇರಬಹುದಾದ ಪ್ರಶ್ನೆಗಳು ಹೀಗಿರುತ್ತವೆ;

- ಭಾರತ 1900 ರಿಂದ 1950ರ ನಡುವೆ ನೋಡಿದ ಐತಿಹಾಸಿಕ ಘಟನೆಗಳನ್ನು ಸೂಚಿಸುವ ಕಾಲನಕ್ಷೆಯನ್ನು ಬಿಡಿಸಿ.
- ಭಾರತದ ನಕ್ಷೆಯ ರೂಪುರೇಖೆಯನ್ನು ಬಿಡಿಸಿ ಅದರಲ್ಲಿ ಕೆಳಗಿನವುಗಳನ್ನು ಗುರುತಿಸಿ.

ಎ) ಕರ್ಕಾಟಕ ಸಂಕ್ರಾತಿ ವೃತ್ತ    ಬಿ) ಮಲಬಾರ್ ತೀರ    ಸಿ)ಕೃಷ್ಣಾ ನದಿ

ವಿವಿಧ ಕಲಿಕಾ ಉದ್ದೇಶಗಳು, ಅವುಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆಯಲ್ಲಿ ಸೇರಿಸಬೇಕಾದ ಪ್ರಶ್ನೆಗಳ ವಿಧಗಳನ್ನು ತೀರ್ಮಾನಿಸಿದ್ದಾಯಿತು. ಮೊದಲೇ ಹೇಳಿದಂತೆ ಕರ್ನಾಟಕ ಪರೀಕ್ಷಾ ಮಂಡಳಿ ಕಲಿಕಾ ಉದ್ದೇಶಗಳ ಆಧಾರದ ಮೇಲೆ ಮಾಡಿರುವ ಪ್ರಶ್ನೆಗಳ ವಿತರಣೆಯನ್ನು ನಾವು ಈಗ ನೋಡಬಹುದು.

| ಕ್ರ. ಸಂ. | ಕಲಿಕಾ ಉದ್ದೇಶಗಳು | ಜ್ಞಾನ | ತಿಳುವಳಿಕೆ | ಅನ್ವಯ | ಕೌಶಲ | ಒಟ್ಟು ಅಂಕಗಳು |
|---|---|---|---|---|---|---|
| 1 | ಅಂಕಗಳು | 17 | 50 | 28 | 5 | 100 |
| 2 | ಪ್ರತಿಶತ | 17% | 50% | 28% | 5% | 100% |

**ಪ್ರಶ್ನೆಗಳ ವಿಧಗಳು:** ಮೌಲ್ಯಮಾಪನ ಮಾಡಬೇಕಾದ ವಿವಿಧ ಕಲಿಕಾ ಉದ್ದೇಶಗಳ ವಿಶ್ಲೇಷಣೆಯಿಂದ ಪ್ರಶ್ನೆಪತ್ರಿಕೆಯಲ್ಲಿ ವಿವಿಧ ರೀತಿಯ ಪ್ರಶ್ನೆಗಳು ಇರಬೇಕಾಗುತ್ತದೆ ಎಂದು ತಿಳಿಯುತ್ತದೆ. ಈ ಪ್ರಶ್ನೆಗಳು ಬಹು ಆಯ್ಕೆ ಪ್ರಶ್ನೆಗಳು, ಪದಪೂರಣ ಪ್ರಶ್ನೆಗಳು, ಸಂಬಂಧ ಕಲ್ಪಕ ಪ್ರಶ್ನೆಗಳು, ಸರಿ–ತಪ್ಪು, ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು, ಅತಿ ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು ಮತ್ತು ಪ್ರಬಂಧ ಮಾದರಿ ಪ್ರಶ್ನೆಗಳು– ಇವುಗಳನ್ನು ಮೌಲ್ಯಮಾಪನ ಮಾಡಬೇಕಾದ ನಿರ್ದಿಷ್ಟ ಕಲಿಕಾ ಉದ್ದೇಶಗಳಿಗೆ ಅನುಗುಣವಾಗಿ ರೂಪಿಸಬೇಕಾಗುತ್ತದೆ. ಇಲ್ಲಿ ನಾವು ಪುನಃ ಕರ್ನಾಟಕ ಪರೀಕ್ಷಾ ಮಂಡಳಿ ತೀರ್ಮಾನಿಸಿರುವ ವಿವಿಧ ರೀತಿಯ ಪ್ರಶ್ನೆಗಳ ವಿತರಣೆಯನ್ನೂ ನೋಡಬಹುದು:

| ಕ್ರಮ ಸಂಖ್ಯೆ | ಮುಖ್ಯ ವಿಷಯ | ಬಹುಆಯ್ಕೆ ಪ್ರಶ್ನೆಗಳು | ಬಹು ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು 1 ಅಂಕ | ಬಹು ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು 2 ಅಂಕ | ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು 3 ಅಂಕ | ದೀರ್ಘ ಉತ್ತರದ ಪ್ರಶ್ನೆಗಳು 4 ಅಂಕ | ದೀರ್ಘ ಉತ್ತರದ ಪ್ರಶ್ನೆಗಳು 5 ಅಂಕ | ಒಟ್ಟು |
|---|---|---|---|---|---|---|---|---|
| 1 | ಇತಿಹಾಸ | 1 (2) | 1 (2) | 2 (2) | 3 (3) | 4(2) | – | 25(11) |
| 2 | ರಾಜ್ಯಶಾಸ್ತ್ರ | 1 (1) | 1 (1) | 2 (1) | 3 (1) | 4(1) | – | 11(5) |
| 3 | ಸಮಾಜಶಾಸ್ತ್ರ | 1 (2) | 1 (1) | 2 (1) | 3 (1) | – | – | 8 (5) |
| 4 | ಭೂಗೋಳಶಾಸ್ತ್ರ | 1 (1) | 1 (2) | 2 (2) | 3 (2) | 4 (1) | 5(1) | 22(9) |
| 5 | ಅರ್ಥಶಾಸ್ತ್ರ | 1 (1) | 1 (1) | 2 (1) | 3 (1) | – | – | 7(4) |
| 6 | ವಾಣಿಜ್ಯ ಅಧ್ಯಯ | 1 (1) | 1 (1) | 2 (1) | 3 (1) | – | – | 7(4) |
|  | ಒಟ್ಟು | 8 (8) | 8(8) | 16(8) | 27(9) | 16(4) | 5(1) | 80(38) |

**ಸೂಚನೆ: ಬ್ರಾಕೆಟ್ ಒಳಗಿನ ಸಂಖ್ಯೆ ಪ್ರಶ್ನೆಗಳ ಸಂಖ್ಯೆಯನ್ನು ಮತ್ತು ಬ್ರಾಕೆಟ್ ಹೊರಗಿನ ಸಂಖ್ಯೆ ಅಂಕಗಳನ್ನು ಸೂಚಿಸುತ್ತದೆ.**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಒಂದು ಸಂತುಲಿತ ಪ್ರಶ್ನೆಪತ್ರಿಕೆಯಲ್ಲಿ ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಅಂಶಗಳು ಯಾವುವು?
2. ಒಂದು ಸಂತುಲಿತ ಪ್ರಶ್ನೆಪತ್ರಿಕೆಲ್ಲಿ ಸೇರಿಸಬೇಕಾದ ವಿವಿಧ ರೀತಿಯ ಪ್ರಶ್ನೆಗಳ ವಿಧಗಳನ್ನು ಪಟ್ಟಿಮಾಡಿ.

**4.6.3.2. ಸಂತುಲಿತ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವಿಕೆ**

ಈ ಕೆಳಗೆ ಕರ್ನಾಟಕ ಪರೀಕ್ಷಾ ಮಂಡಳಿ ಸಿದ್ಧಪಡಿಸಿರುವ ಸಮಾಜ ವಿಜ್ಞಾನದ ಒಂದು ಪ್ರಶ್ನೆಪತ್ರಿಕೆಯನ್ನು ನಿಮ್ಮ ತಿಳುವಳಿಕೆಗಾಗಿ ಕೊಟ್ಟಿದೆ:

**ಮಾದರಿ ಪ್ರಶ್ನೆಪತ್ರಿಕೆ– ಸಮಾಜ ವಿಜ್ಞಾನ**

**I. ಕೆಳಗಿನ ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಟ್ಟಿದೆ. ಅವುಗಳಲ್ಲಿ ಒಂದು ಉತ್ತರ ಮಾತ್ರ ಅತ್ಯಂತ ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಮತ್ತು ಪೂರ್ಣಗೊಳಿಸಿದ ಉತ್ತರವನ್ನು ಉತ್ತರ ಪುಸ್ತಕದಲ್ಲಿ ಬರೆಯಿರಿ. (8 X 1)**

1. ಮೂರನೆ ಕರ್ನಾಟಕ ಯುದ್ಧ ಪೂರ್ಣಗೊಂಡ ಹಿನ್ನೆಲೆ__________
   ಎ) ಪಾಂಡಿಚೆರಿ ಒಪ್ಪಂದ
   ಬಿ) ಮದ್ರಾಸ್ ಒಪ್ಪಂದ
   ಸಿ) ಪ್ಯಾರಿಸ್ ಒಪ್ಪಂದ
   ಡಿ ) ಆಕ್ಸಿ–ಲಾ– ಚಾಪಿಲ್ಲೆ ಒಪ್ಪಂದ

2. ಗೋರ್ಬಚೋಫ್‌ರವರ ಪೆರಿಸ್ತ್ರೋಯಿಕ ಮತ್ತು ಗ್ಲಾಸ್‌ನಾಟ್ ಸುಧಾರಣೆಗಳ ಪರಿಣಾಮ ________
   ಎ) ಪ್ರಪಂಚದ ಶಾಂತಿಯುಗ ಮತ್ತು ಸೋವಿಯತ್ ಸಮೃದ್ಧಿ
   ಬಿ) ಸೋವಿಯತ್ ಒಕ್ಕೂಟವನ್ನು ಮುರಿದು ಹೋಗಲು ಕಾರಣವಾದ ಪರಿಸ್ಥಿತಿಗಳು
   ಸಿ) ರಷ್ಯಾದಲ್ಲಿ ಆರ್ಥಿಕತೆಯ ನಿಯಂತ್ರಣಕ್ಕೆ ಯಶಸ್ವಿ ಸ್ಥಿತ್ಯಂತರ
   ಡಿ ) ರಷ್ಯಾದಲ್ಲಿ ಸಮಾಚಾರಗಳ ಸೆನ್ಸಾರ್ ವ್ಯವಸ್ಥೆ

3. ಯು.ಎನ್.ಒ ಮತ್ತು ಅಂತರರಾಷ್ಟ್ರೀಯ ಕಾರ್ಯಗಳನ್ನು ನೋಡಿಕೊಳ್ಳುವ ಅಂಗ ___________.
   ಎ) ಸಾಮಾನ್ಯ ಸಂಸತ್ ಬಿ) ಸೆಕ್ಯುರಿಟಿ ಕೌನ್ಸಿಲ್ ಸಿ) ಸೆಕ್ರೆಟೇರಿಯಟ್ ಡಿ) ಸಾಮಾನ್ಯ ಕಾರ್ಯದರ್ಶಿ

4. ಕುಟುಂಬಕ್ಕೆ ತಾಯಿಯ ಕೆಲಸ (ಸೇವೆ) _________
   ಎ) ವೇತನದೊಂದಿಗೆ ಶ್ರಮ ಬಿ) ವೇತನವಿಲ್ಲದೆ ಶ್ರಮ ಸಿ) ಅಸಂಘಟಿತ ಶ್ರಮ ಡಿ) ಸಂಘಟಿತ ಶ್ರಮ

5. ದೇಶದ ಆರ್ಥಿಕ ಸೇವೆಗಳನ್ನು ಒದಗಿಸುವ ಸೇವಾ ವಿಭಾಗ ___________
   ಎ) ಪ್ರಾಥಮಿಕ ವಿಭಾಗ ಬಿ) ಆನುಷಂಗಿಕ ವಿಭಾಗ ಸಿ)ತೃತೀಯ ವಿಭಾಗ ಡಿ) ಅಸಂಘಟಿತ ವಿಭಾಗ

6. ಈ ಕೆಳಗಿನವುಗಳಲ್ಲಿ ಯಾವುದು ಪರಿಮಾಣಾತ್ಮಕ ಸಾಲದ ನಿಯಂತ್ರಣ ಕ್ರಮಗಳನ್ನು ಒಳಗೊಳ್ಳುತ್ತದೆ?
   ಎ) ಸಾಲ ನೀಡಿಕೆ ಮಿತಿಯ ಬದಲಾವಣೆ ಬಿ) ನೈತಿಕ ಉತ್ತೇಜನ ಸಿ) ನೇರ ಕ್ರಮ ಡಿ) ಬ್ಯಾಂಕ್‌ದರ ನೀತಿ

7. ಕೆಂಪುಮಣ್ಣು ರೂಪುಗೊಳ್ಳಲು ಕಾರಣ____________
   ಎ) ಅಧಿಕ ಉಷ್ಣಾಂಶ ಮತ್ತು ಮಳೆ ಬಿ) ಜೈವಿಕ ಪದಾರ್ಥಗಳು ವಿಘಟಿತಗೊಳ್ಳುವಿಕೆ ಸಿ) ಗ್ರಾನೈಟ್ ಮತ್ತು ಇತರ ಹರಳು ರೂಪದ ಲವಣಗಳ ಶಿಥಿಲಗೊಳ್ಳುವುದರಿಂದ ಡಿ) ನದಿಗಳಿಂದ ಶೇಖರಗೊಳ್ಳುವ ಉದುರಾದ ಮಣ್ಣಿನಿಂದ

8. ವಿಕಸಿತ ದೇಶಗಳಲ್ಲಿ ನಿರುದ್ಯೋಗ ಮುಖ್ಯವಾಗಿ ಉಂಟಾಗುವುದಕ್ಕೆ ಕಾರಣಾ_____________
   ಎ) ವಿಕಾಸಶೀಲ ದೇಶಗಳಿಂದ ಅಗ್ಗ ವಸ್ತುಗಳ ಆಮದು ಬಿ) 'ಬಿಳಿ ಕಾಲರ್' ಕೆಲಸಗಳನ್ನು ಬೇರೆ ದೇಶಗಳಿಗೆ ಕೊಡುವುದರಿಂದ ಸಿ) ನೌಕರರಿಗೆ ಹೆಚ್ಚಿನ ವೇತನ ನೀಡುವುದರಿಂದ ಡಿ) ಆರ್ಥಿಕತೆ ಕುಸಿತಗೊಳ್ಳುವುದರಿಂದ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **(8 X 1)**

9. ವೆಲ್ಲೆಸ್ಲಿ ಆಳ್ವಿಕೆ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ವಿಸ್ತಾರ ಸುಲಭವಾಗಿತ್ತು. ಏಕೆ?
10. ವರ್ನಾಕ್ಯುಲರ್ ಪ್ರೆಸ್ ಕಾನೂನು ಭಾರತದ ಪತ್ರಿಕೋದ್ಯಮದ ವಿಸ್ತರಣೆಗೆ ಒಂದು ಪ್ರಮುಖ ಅಡಚಣೆಯಾಗಿತ್ತು. ಏಕೆ?
11. ಒಂದು ದೇಶದ ಸಂಬಂಧವನ್ನು ಬೇರೆ ದೇಶಗಳೊಂದಿಗೆ ನಿಯಂತ್ರಿಸಲು ಒಂದು ದೇಶ ಅನುಸರಿಸುವ ತಂತ್ರವನ್ನು ನೀವು ಏನೆಂದು ಕರೆಯುವಿರಿ?
12. ಒಂದು ಭಾರತೀಯ ಕುಟುಂಬ ಓರ್ವ ಅಪ್ರಾಪ್ತ ವಯಸ್ಸಿನ (ಮೈನರ್) ಬಾಲಕಿಯನ್ನು ಮನೆ ಕೆಲಸದವಳನ್ನಾಗಿ ಇಟ್ಟುಕೊಂಡಿದೆ. ಭಾರತೀಯ ಸಂವಿಧಾನದ ಯಾವ ಕಾನೂನಿನ ಪ್ರಕಾರ ಕುಟುಂಬದ ಮುಖ್ಯಸ್ಥನನ್ನು ಬಂಧಿಸಬಹುದಾಗಿದೆ?
13. ಒಂದು ಕ್ಷೇತ್ರದ ಭೌತಿಕ ಲಕ್ಷಣಗಳು ಜನಸಂಖ್ಯೆ ವಿತರಣೆಗಳನ್ನು ಹೇಗೆ ಪ್ರಭಾವಗೊಳಿಸುತ್ತವೆ?
14. ಯಾವ ಕೈಗಾರಿಕೆ (ಉದ್ಯಮ) ಪ್ರಮುಖವಾಗಿ ಕೃಷಿ ಆಧಾರಿತವಾದುದಾಗಿದೆ?
15. ಒಂದು ದೇಶದ ಸಾರ್ವತ್ರಿಕ ಖರ್ಚು ಸಾರ್ವತ್ರಿಕ ವರಮಾನಕ್ಕಿಂತ ಹೆಚ್ಚಾದಾಗ ಏನಾಗುತ್ತದೆ?
16. ಉಪಭೋಕ್ತ (ಬಳಕೆದಾರ) ಸಂರಕ್ಷಣ ಆಂದೋಳನದ ಮುಖ್ಯ ಆಶಯ (ಉದ್ದೇಶ) ಏನು?

**III. ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ.** **(8 X 2)**

17. ಬ್ರಿಟಿಷರು 1857 ನೇ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ 'ಸಂಘನೀತಿ' ಯನ್ನು ಏಕೆ ಜಾರಿಗೊಳಿಸಿದರು?
18. ಗಾಂಧೀಜಿ 1942 ರಲ್ಲಿ 'ಭಾರತದ ಬಿಟ್ಟು ತೊಲಗಿ' ಆಂದೋಳನಕ್ಕೆ ಏಕೆ ಕರೆಕೊಟ್ಟರು?
19. ಭಾರತ ಮತ್ತು ಪಾಕೀಸ್ತಾನದ ನಡುವೆ ಉಂಟಾಗುವ ಬಿಕ್ಕಟ್ಟಿಗೆ ಕಾರಣಗಳೇನು?
20. ಅಸಂಘಟಿತ ವಲಯದ ಕೆಲಸಗಾರರು ಎದುರಿಸುತ್ತಿರುವ ಸವಾಲುಗಳನ್ನು ತಿಳಿಸಿ.

ಅಥವಾ

21. ಭಾರತದಲ್ಲಿ ಕಲ್ಲಿದ್ದಿಲಿನ ಮಹತ್ವವೇನು?
22. ಭಾರತದಲ್ಲಿ ರಸ್ತೆಗಳನ್ನು ಹೇಗೆ ವರ್ಗೀಕರಿಸಲಾಗಿದೆ?
23. ಸಾರ್ವಜನಿಕ ಖರ್ಚಿನ ಗುರಿಗಳಾವುವು?
24. ಬೇರೆ ದೇಶಗಳಿಗೆ ಆಹಾರವನ್ನು ವಿತರಿಸಲು ಜಾಗತೀಕರಣ ಹೇಗೆ ಸಹಾಯ ಮಾಡುತ್ತದೆ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 6 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **(9 X 3)**

25. ಬಿಟಿಷರನ್ನು ಸೋಲಿಸಲು ರಾಯಣ್ಣ ಅನುಸರಿಸಿದ ವಿಧಾನವೇನು?

ಅಥವಾ

ಈಸ್ಟ್ ಇಂಡಿಯಾ ಕಂಪೆನಿಯಿಂದ ರೂಪಿತಗೊಂಡ ನ್ಯಾಯವ್ಯವಸ್ಥೆಯನ್ನು ಚಿತ್ರಿಸಿ

26. ವೇದಗಳಲ್ಲಿ ಆರ್ಯ ಸಮಾಜದ ನಂಬಿಕೆಯನ್ನು ಹೇಗೆ ಸಮರ್ಥಿಸುವಿರಿ?
27. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಮಹತ್ವವನ್ನು ವಿವರಿಸಿ.
28. ಭಾರತ ಮತ್ತು ರಷ್ಯಾ ನಡುವಣ ಸಂಬಂಧವನ್ನು ವಿವರಿಸಿ.
29. ಭಾರತ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಸಮರ್ಥಿಸಿ
30. ಒಂದು ದೇಶದ ವಿಕಾಸಕ್ಕೆ ಸಂಪರ್ಕ ಮುಖ್ಯವಾಗುತ್ತದೆ;ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.

ಅಥವಾ

ಭಾರತದಲ್ಲಿನ ಪ್ರಮುಖ ಭೂಕಂಪ ವಲಯಗಳನ್ನು ವಿವರಿಸಿ.

31. ಭಾರತದಲ್ಲಿ ಕಬ್ಬು ಒಂದು ಮುಖ್ಯ ವಾಣಿಜ್ಯ ಪೈರು– ಸಮರ್ಥಿಸಿ.
32. ಜಾಗತೀಕರಣದ ಪ್ರಧಾನ ಅನನುಕೂಲತೆಗಳನ್ನು ವಿವರಿಸಿ

ಅಥವಾ

ಉಪಭೋಕ್ತ (ಬಳಕೆದಾರ) ಕಾಯ್ದೆಯ ಮುಖ್ಯ ಉದ್ದೇಶಗಳಾವುವು?

33. ಸರಕು ಮತ್ತು ಸೇವೆಗಳ ಕಾನೂನನ್ನು ವಿವರಿಸಿ.

ಅಥವಾ

ಲಿಂಗ ಸಮಾನತೆಯನ್ನು ಸಾಧಿಸುವುದು ಹೇಗೆ?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ 7 ರಿಂದ 8 ವಾಕ್ಯಗಳಲ್ಲಿ ಉತ್ತರಿಸಿ. (4 X 4)**

34. ಜಮ್ಮು ಮತ್ತು ಕಾಶ್ಮೀರವನ್ನು ವಶಪಡಿಸಿಕೊಂಡಿದ್ದು ಬೇರೆ ಪ್ರದೇಶಗಳನ್ನು ವಶಪಡಿಸಿಕೊಂಡದ್ದಕ್ಕಿಂತ ಭಿನ್ನವಾಗಿತ್ತು. ಈ ಹೇಳಿಕೆಯನ್ನು ಸಮರ್ಥಿಸಿ.
35. ಶಸ್ತ್ರಗಳನ್ನು ಸಂಗ್ರಹಿಸಿ ರಾಶಿ ಹಾಕಿಕೊಳ್ಳುವ ಸ್ಪರ್ಧೆಯಲ್ಲಿ ಯು.ಎಸ್.ಎ ಹೇಗೆ ಮೇಲುಗೈ ಸಾಧಿಸಿದೆ?
36. ನಿರುದ್ಯೋಗವನ್ನು ನಿವಾರಿಸಲು ಯಾವ ಕ್ರಮಗಳು ಅಗತ್ಯವಾಗುತ್ತವೆ?
37. ಅರಣ್ಯಗಳನ್ನು ಹೇಗೆ ಸಂರಕ್ಷಿಸಬಹುದು?
38. ಭಾರತದ ನಕ್ಷೆಯ ರೂಪುರೇಖೆಯನ್ನು ಬರೆದು ಅದರಲ್ಲಿ + + + + + ಸ್ಥಳಗಳನ್ನು ಗುರುತಿಸಿ. (1 + 4)

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ಮೇಲೆ ಕೊಟ್ಟಿರುವ ಪ್ರಶ್ನೆಪತ್ರಿಕೆಯನ್ನು ವಿಭಾಗ 4.6.5.1 ರಲ್ಲಿ ಕೊಟ್ಟಿರುವ ಸಮತೋಲಿತ ಪ್ರಶ್ನೆಪತ್ರಿಕೆಯ ಲಕ್ಷಣಗಳಿಗೆ ಸಂಬಂಧಿಸಿದಂತೆ ತಾಳೆ ನೋಡಿ.
2. ನಿಮ್ಮ ತೀರ್ಮಾನವನ್ನು ನಿಮ್ಮ ಸಹೋದ್ಯೋಗಿಯೊಂದಿಗೆ ಚರ್ಚಿಸಿ.

**4.6.4. ಸಾರಾಂಶಿಸೋಣ**

- ಯಾವುದೇ ಪ್ರಶ್ನೆಯ ಪಟ್ಟಿ ಪ್ರಶ್ನೆಪತ್ರಿಕೆಯಾಗುತ್ತದೆ.
- ಒಂದು ಸಮತೋಲಿತ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಮುಖ್ಯ ಅಂಶಗಳು ಹೀಗಿವೆ–

✓ ಕೋರ್ಸ್ ವಿಷಯವಸ್ತುವಿನ ವ್ಯಾಪಕತೆ

✓ ಕಲಿಕೆಯ ವಿವಿಧ ಮುಖಗಳು

✓ ಪ್ರಶ್ನೆಗಳ ವಿಧಗಳು

✓ ಪ್ರಶ್ನೆಗಳ ಕಠಿಣತೆಯ ಮಟ್ಟ

✓ ಪ್ರಶ್ನೆಗಳನ್ನು ಉತ್ತರಿಸಲು ಬೇಕಾಗುವ ಕಾಲ

**4.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು - 1 ಮತ್ತು 2**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಉತ್ತರಗಳಿಗೆ ಈ ಘಟಕದ ಭಾಗ 4.6.3.1 ನೋಡಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

2. ಉತ್ತರಗಳಿಗೆ ಈ ಘಟಕದ ಭಾಗ 4.6.3.1 ನೋಡಿ.

**4.6.6. ಘಟಕಾಂತ್ಯ ಅಭ್ಯಾಸಗಳು**

1. ಈ ಘಟಕದಲ್ಲಿ ವಿವರಿಸಿದ ಅಂಶಗಳ ಆಧಾರದ ಮೇಲೆ 9 ಮತ್ತು 10 ನೇ ತರಗತಿಗಳಿಗೆ ಒಂದು ಸಮತೋಲಿತ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಿ.

### 4.6.7. ಪರಾಮರ್ಶನ ಸೂಚಿ


1. https://www.education.vic.gov.au/school/teachers/teachingresources/practice/improve/Pages/eitassessknowledge.aspx
2. https://www.deccanherald.com/content/570385/attributes-good-question-paper.html
3. https://elearningindustry.com/characteristics-of-a-good-question-7
4. https://blog.ei-india.com/2016/07/02/reflections-workshop-on-importance-of-good-questions-and-balanced-question-paper/
5. https://www.researchgate.net/post/What_are_the_qualities_of_a_good_exam
6. https://www.indiastudychannel.com/resources/130446-Setting-up-good-examination-paper.aspx
7. https://slideplayer.com/slide/6089792/
8. https://www.researchgate.net/publication/327079975_Mechanics_of_Question_Paper_Setting